ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭೂಮಿಕಾ
ಕೋವಿಡ್ ಶುರುವಾದ ಬಳಿಕ ಚಿಕ್ಕ ವಯಸ್ಸಿನಲ್ಲೇ ಋತುಮತಿಯಾಗುತ್ತಿರುವ ಬಾಲಕಿಯರ ಸಂಖ್ಯೆ ಜಾಸ್ತಿಯಾಗಿದೆ. ಇದಕ್ಕೆ ಕೆಲವು ದೈಹಿಕ ಸಮಸ್ಯೆಗಳು ಹಾಗೂ ಮಾನಸಿಕ ತಲ್ಲಣಗಳು ಕಾರಣ ಎನ್ನುತ್ತಾರೆ ತಜ್ಞರು.

ಚರ್ಚೆ
2011ರ ಗೆಜೆಟೆಡ್ ಪ್ರೊಬೆಷನರಿ ಹುದ್ದೆಗಳ ನೇಮಕಾತಿಯಲ್ಲಿ ಅಕ್ರಮ ಪ್ರಕರಣ: ತನಿಖೆಗೆ ಅನುಮತಿ ನೀಡಬೇಕೇ? 9
ಲಕ್ಷದ್ವೀಪ ನಟಿಯ ವಿರುದ್ಧ ದೇಶದ್ರೋಹ ಪ್ರಕರಣ 11
'ಬಚ್ಚೇಗೌಡ ಕುಟುಂಬದಿಂದ ಭೂಕಬಳಿಕೆ' 6

ಸೆನ್ಸೆಕ್ಸ್	ನಿಫ್ಟಿ	₹/$
52,474 ▲	15,799 ▲	73.07 ▼

ಲಾಕ್‌ಡೌನ್ ಸಡಿಲಿಕೆಗೂ ಮೊದಲೇ ಬೀದಿಗಿಳಿದ ಜನರು: ಎಲ್ಲೆಡೆ ವಾಹನ ದಟ್ಟಣೆ

ಅಪಾಯ ಆಹ್ವಾನಿಸುವ ಉತ್ಸಾಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲಾಕ್‌ಡೌನ್ ಸಡಿಲಿಕೆ ಘೋಷಣೆಗೆ ಕಾಯುತ್ತಾ ಕುಳಿತಂತಿದ್ದ ಜನರು ನಿರ್ಬಂಧ ತೆರವು ಅಧಿಕೃತವಾಗಿ ಜಾರಿಯಾಗುವ ಮುನ್ನವೇ ತಂಡೋಪತಂಡವಾಗಿ ರಸ್ತೆಗೆ ಇಳಿದಿದ್ದು ಶುಕ್ರವಾರ ರಾಜ್ಯದ ಹಲವು ಕಡೆಗಳಲ್ಲಿ ಕಂಡು ಬಂತು. ಎಲ್ಲ ದಿಕ್ಕುಗಳಲ್ಲಿ ವಾಹನಗಳ ದಟ್ಟಣೆ ಕಾಣಿಸಿದ್ದು ಜನರು ಪೈಪೋಟಿಗೆ ಬಿದ್ದವರಂತೆ ಓಡಾಟ ಆರಂಭಿಸಿದ್ದು, ಕೋವಿಡ್ ನಿಯಂತ್ರಣಕ್ಕೆ ಹಿನ್ನಡೆಯಾಗುವ ಆತಂಕಕ್ಕೆ ಕಾರಣವಾಗಿದೆ.

ಹೆಚ್ಚಿನ ಸಂಖ್ಯೆಯ ಸೋಂಕಿತರಿರುವ 11 ಜಿಲ್ಲೆಗಳಲ್ಲಿ ಇದೇ 21ರವರೆಗೆ ಲಾಕ್‌ಡೌನ್ ವಿಸ್ತರಿಸಿ, 20 ಜಿಲ್ಲೆಗಳಲ್ಲಿ ಇದೇ 14ರಿಂದ ಲಾಕ್‌ಡೌನ್ ಸಡಿಲಿಸುವ ತೀರ್ಮಾನವನ್ನು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಗುರುವಾರ ಪ್ರಕಟಿಸಿದ್ದರು. ಈ ಸಂಬಂಧ ಪರಿಷ್ಕೃತ ಮಾರ್ಗಸೂಚಿ ಬಿಡುಗಡೆಯಾಗಿದೆ. ಆದರೆ, ಪ್ರಮುಖ ನಗರಗಳೂ ಸೇರಿದಂತೆ ಹಲವು ಕಡೆ ಶುಕ್ರವಾರವೇ ಲಾಕ್‌ಡೌನ್ ಸಡಿಲಿಕೆಯ ವಾತಾವರಣ ಕಂಡುಬಂತು.

ಹೊಸ ಮಾರ್ಗಸೂಚಿ ಜಾರಿಗೆ ಇನ್ನೂ ಎರಡು ದಿನ ಬಾಕಿ ಇದೆ. ಅದಕ್ಕೆ ಮುನ್ನವೇ ಹಲವು ಜಿಲ್ಲೆಗಳಲ್ಲಿ ಮಧ್ಯಾಹ್ನದವರೆಗೂ ವ್ಯಾಪಾರ ವಹಿವಾಟು ನಡೆದಿದೆ. ಲಾಕ್‌ಡೌನ್ ನಿರ್ಬಂಧಗಳನ್ನು ಲೆಕ್ಕಿಸದೆ ಜನರು ಸಂಚರಿಸಿದ್ದಾರೆ. ಜನರ ಸಹವಾಸವೇ ಬೇಡ ಎಂಬ ನಿರ್ಧಾರಕ್ಕೆ ಬಂದಂತಿದ್ದ ಪೊಲೀಸರು, ಜನರನ್ನು ನಿರ್ಬಂಧಿಸುವುದಕ್ಕೆ ಮುಂದಾಗಲಿಲ್ಲ. ಎಲ್ಲಿಯೂ ತಪಾಸಣೆ ಕಂಡುಬರಲಿಲ್ಲ. ಕೆಲವು ಮೇಲ್ಸೇತುವೆಗಳಲ್ಲಿ ಹಾಕಲಾಗಿದ್ದ ಬ್ಯಾರಿಕೇಡ್ ಗಳನ್ನು ತೆರವು ಮಾಡಿ, ವಾಹನ ಸಂಚಾರಕ್ಕೆ ಅನುವು ಮಾಡಿಕೊಟ್ಟಿದ್ದು ಕಂಡುಬಂತು. ಇವೆಲ್ಲವೂ ರಾಜ್ಯದಲ್ಲಿ ಮತ್ತೆ ಕೋವಿಡ್ ಪ್ರಕರಣಗಳ ಏರಿಕೆಗೆ ಕಾರಣವಾಗಬಹುದು ಎಂಬ ಭೀತಿ ಹುಟ್ಟಿಸಿವೆ.

ಬೆಂಗಳೂರಿನಲ್ಲಿ ಶುಕ್ರವಾರ ಬೆಳಿಗ್ಗೆಯಿಂದಲೂ ಜನಸಂಚಾರ ಹೆಚ್ಚಾಗಿತ್ತು. ಪೀಣ್ಯ, ಟಿ. ದಾಸರಹಳ್ಳಿ, ಮೆಜೆಸ್ಟಿಕ್, ಚಾಮರಾಜಪೇಟೆ, ಶಿವಾಜಿನಗರ, ಕೋರಮಂಗಲ ಸೇರಿದಂತೆ ಹಲವು ಪ್ರದೇಶಗಳಲ್ಲಿ ಮಧ್ಯಾಹ್ನದವರೆಗೂ ಸಂಚಾರ ದಟ್ಟಣೆ ಕಂಡುಬಂತು.

7ನೇ ಪುಟ ನೋಡಿ

ಸೋಮವಾರದಿಂದ ಕೆಲ ಜಿಲ್ಲೆಗಳಲ್ಲಿ ಲಾಕ್‌ಡೌನ್ ನಿರ್ಬಂಧಗಳನ್ನು ಸಡಿಲಿಸಲಾಗುವುದು ಎಂದು ಸರ್ಕಾರ ಪ್ರಕಟಿಸಿದ ಕಾರಣ ಊರಿಗೆ ತೆರಳಿದ್ದ ಕುಟುಂಬವೊಂದು ವಾಹನವೊಂದರಲ್ಲಿ ಬೆಂಗಳೂರಿಗೆ ಮರಳಿ ಬರುತ್ತಿರುವುದು ಮೈಸೂರು ರಸ್ತೆಯಲ್ಲಿ ಶುಕ್ರವಾರ ಕಂಡು ಬಂತು ಪ್ರಜಾವಾಣಿ ಚಿತ್ರ/ ರಂಜು ಪಿ.

'ಎಚ್ಚರಿಕೆ ಅಗತ್ಯ'

'ಲಾಕ್‌ಡೌನ್ ಸಡಿಲಿಕೆ ಆದ ಮಾತ್ರಕ್ಕೆ ಕೊರೊನಾ ವೈರಾಣು ಸೋಂಕು ರಾಜ್ಯದಲ್ಲಿ ಸಂಪೂರ್ಣ ಹತೋಟಿಗೆ ಬಂದಿದೆ ಎಂದು ಭಾವಿಸಿ ಜನರು ಮೈಮರೆಯಬಾರದು. ಎರಡು ಡೋಸ್ ಲಸಿಕೆ ಪಡೆದವರು ಕೂಡ ಎಚ್ಚರಿಕೆಯಿಂದ ಇರಲೇಬೇಕು. ರಾಜ್ಯದ ಶೇಕಡ 70ರಷ್ಟು ಜನರು ಲಸಿಕೆ ಪಡೆಯುವವರೆಗೂ ತೀವ್ರ ಎಚ್ಚರಿಕೆ ಅಗತ್ಯ'

ಡಾ.ಕೆ. ಸುಧಾಕರ್, ಆರೋಗ್ಯ ಸಚಿವ

'ಈಗ ಮೈಮರೆತರೆ ಮತ್ತೆ ಅಪಾಯ'

'ಕೋವಿಡ್ ಮೊದಲನೇ ಅಲೆಯ ಬಳಿಕ ಜನತೆ ಮಾರ್ಗಸೂಚಿಗಳನ್ನು ಗಾಳಿಗೆ ತೂರಿ, ಸಭೆ–ಸಮಾರಂಭಗಳನ್ನು ನಡೆಸಿದರು. ಆಗ ಮಾಡಿದ ತಪ್ಪುಗಳು, ನಿರ್ಲಕ್ಷ್ಯದಿಂದ ಏನಾಯಿತು ಎಂಬುದನ್ನು ನೋಡಿದ್ದೇವೆ. ಮೂರನೇ ಅಲೆ ನವೆಂಬರ್–ಡಿಸೆಂಬರ್‌ನಲ್ಲಿ ಬರುವ ಸಾಧ್ಯತೆಯಿದೆ. ಈಗ ಲಾಕ್‌ಡೌನ್ ಸಡಿಲಗೊಳಿಸುತ್ತಿರುವ ಕಾರಣ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು. ಅನಗತ್ಯವಾಗಿ ಗುಂಪು ಸೇರುವುದು, ಓಡಾಡುವುದು ಮಾಡಬಾರದು. ಜ್ವರ, ಕೆಮ್ಮು ಸೇರಿದಂತೆ ವಿವಿಧ ಲಕ್ಷಣಗಳು ಕಾಣಿಸಿಕೊಂಡಾಗ ಹಾಗೂ ಊರುಗಳಿಂದ ನಗರ ಪ್ರದೇಶಕ್ಕೆ ಮರಳಿದವರು ಕೋವಿಡ್ ಪರೀಕ್ಷೆ ಮಾಡಿಸಿಕೊಳ್ಳಬೇಕು. 18 ವರ್ಷ ಮೇಲ್ಪಟ್ಟ ಎಲ್ಲರೂ ಲಸಿಕೆ ಪಡೆದುಕೊಳ್ಳಬೇಕು.'

ಡಾ.ಸಿ.ಎನ್. ಮಂಜುನಾಥ್, ಜಯದೇವ ಹೃದ್ರೋಗ ಸಂಸ್ಥೆ ನಿರ್ದೇಶಕ ಹಾಗೂ ಕೋವಿಡ್ ತಾಂತ್ರಿಕ ಸಲಹಾ ಸಮಿತಿ ಸದಸ್ಯ

'ಎಚ್ಚರ ತಪ್ಪಿದಲ್ಲಿ ಮತ್ತೆ ಆಮಂತ್ರಣ'

'ಕೋವಿಡ್ ಮೊದಲ ಅಲೆಯಲ್ಲಿ ಮಾಡಿದ ತಪ್ಪಿನಿಂದ ಎರಡನೇ ಅಲೆಯಲ್ಲಿ ಗಂಡಾಂತರ ಎದುರಿಸಬೇಕಾಯಿತು. ಜನರ ನಿರ್ಲಕ್ಷ್ಯದಿಂದಲೇ ಎರಡನೇ ಅಲೆಯಲ್ಲಿ ಸೋಂಕು ವ್ಯಾಪಕವಾಗಿ ಹರಡಿತು. ಈ ಮೊದಲು ಮಾಡಿದ ತಪ್ಪುಗಳು ಮರುಕಳಿಸದಂತೆ ನೋಡಿಕೊಳ್ಳಬೇಕು. ಅನಗತ್ಯವಾಗಿ ಹೊರಗಡೆ ಸಂಚರಿಸಬಾರದು. ಗುಂಪಾಗಿ ಸೇರದಿರುವುದು, ಮುಖಗವುಸನ್ನು ಸರಿಯಾದ ಕ್ರಮದಲ್ಲಿ ಧರಿಸುವುದು, ಸೋಂಕುನಿವಾರಕ ದ್ರಾವಣದಿಂದ ಕೈಗಳನ್ನು ಸ್ವಚ್ಛಪಡಿಸಿಕೊಳ್ಳುವುದು ಸೇರಿದಂತೆ ಮುನ್ನೆಚ್ಚರಿಕೆ ಕ್ರಮಗಳನ್ನು ಪಾಲಿಸಬೇಕು. ಈ ವೇಳೆ ಎಚ್ಚರ ತಪ್ಪಿದರೆ ಮತ್ತೆ ಕೋವಿಡ್‌ಗೆ ಆಮಂತ್ರಣ ನೀಡಿದಂತಾಗುತ್ತದೆ. ಸಭೆ–ಸಮಾರಂಭಗಳನ್ನು ಸದ್ಯ ನಡೆಸಬಾರದು.'

ಡಾ. ಸುದರ್ಶನ್ ಬಲ್ಲಾಳ್, ಮಣಿಪಾಲ್ ಆಸ್ಪತ್ರೆಗಳ ಸಮೂಹದ ಅಧ್ಯಕ್ಷ

ಕಾವ್ಯದ ದಿಕ್ಕನ್ನೇ ತಿರುಗಿಸಿದ ಕವಿ

• ಡಾ. ಅರವಿಂದ ಮಾಲಗತ್ತಿ

ಸಾಮಾಜಿಕ ಜಾಲತಾಣದಲ್ಲಿ 'ಸಿದ್ಧಲಿಂಗಯ್ಯನವರು ನಮ್ಮನ್ನಗಲಿದ್ದಾರೆ' ಎನ್ನುವ ಸಾಲುಗಳನ್ನು ಓದಿದಾಗ ನಂಬಲಾಗಲಿಲ್ಲ. ಆದರೆ ಒಂದರ ಮೇಲೊಂದರಂತೆ ಅವೇ ಪೋಸ್ಟ್‌ಗಳು ಹರಿದು ಬಂದಾಗ ಯಾರನ್ನು ಕೇಳಿ ಖಚಿತಪಡಿಸಿಕೊಳ್ಳಬೇಕು ಎನ್ನುವಷ್ಟರಲ್ಲಿ ಪ್ರಜಾವಾಣಿಯ ಸ್ನೇಹಿತರಿಂದ ಕರೆ ಬಂತು. ಕಹಿಸತ್ಯ ಕಿವಿಗೆ ಸೀಸವಾಯಿತು. ಇನ್ನೂ ಮನಸ್ಸು ವಿಷಯವನ್ನು ನಂಬಲು ಹಿಂದೇಟು ಹಾಕುತ್ತಿದೆ. ಕೊರೊನಾ ಹೀಗೆ ಬದುಕನ್ನು, ಸ್ನೇಹಿತರನ್ನು, ಬಂಧುಗಳನ್ನು ಹಿಸುಕುತ್ತೆ ಅಂತ ನಾನಂದುಕೊಂಡಿರಲಿಲ್ಲ. ಆತ್ಮೀಯರು ಅಗಲಿದಾಗಲೆಲ್ಲ ಸರ್ಕಾರದ ನಿರ್ಲಕ್ಷ್ಯದ ಬಗ್ಗೆ ಬೇಸರವಾಗುತ್ತದೆ.

ಡಾ. ಸಿದ್ಧಲಿಂಗಯ್ಯನವರು ಮತ್ತು ನಾನು ಮೊದಲು ಭೇಟಿಯಾದಾಗ ಅವರು ಕೇಳಿದ ಪ್ರಶ್ನೆ, 'ನಾನು ನಿಮ್ಮನ್ನು ಏನಂತ ಕರೆಯಬೇಕು?' ಎಂಬುದಾಗಿತ್ತು. 'ನಿಮಗೆ ಹೇಗೆ ಕರೆಯಬೇಕು ಅನಿಸುತ್ತೋ ಹಾಗೆ ಕರೆಯಿರಿ, ಅದರಲ್ಲೇನಿದೆ?' ಎಂದಿದ್ದೆ. ಸ್ವಲ್ಪ ಹೊತ್ತಿನ ನಂತರ 'ಪ್ರೊಫೆಸರ್' ಅಂತ ಕರೀತೀನಿ ಅಂದರು. 'ಆಯ್ತು' ಅಂದೆ. ಅದೇ ಹೆಸರನ್ನೇ ಭೇಟಿಯಾದಾಗಲೆಲ್ಲ ಬಳಸುತ್ತಿದ್ದರು. ಯಾರ ಮನಸ್ಸಿಗೂ ನೋವಾಗದ ಹಾಗೆ ನಡೆದುಕೊಳ್ಳುವ ಧೋರಣೆ ಅವರದು. ಅವರ ಮಾತಿನಲ್ಲಿರುವ ಈ ಮೃದುತ್ವಕ್ಕೂ, ಅವರ ಕಾವ್ಯಕ್ಕಿರುವ ಗಡಸುತನಕ್ಕೂ ಬಹಳ ಅಂತರವಿದೆ ಎನಿಸುತ್ತಿತ್ತು. ಬಹುಶಃ ಅದು ಸಮಾನಮನಸ್ಕರಿಗೂ ಶೋಷಕರಿಗೂ ಇರುವ ಅಂತರವನ್ನು ಪ್ರತಿಬಿಂಬಿಸುವಂತಹದ್ದಾಗಿತ್ತು.

ನಾನು ಬೆಂಗಳೂರು ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಹುದ್ದೆಗೆ ಸಂದರ್ಶನಕ್ಕೆ ಹೋಗಿದ್ದೆ. ಸಿದ್ಧಲಿಂಗಯ್ಯನವರು ಅದೇ ವಿಶ್ವವಿದ್ಯಾಲಯದಲ್ಲಿ ಕೆಲಸ ಮಾಡುತ್ತಿದ್ದರು. ನಾನಾಗ ಮಂಗಳೂರು ವಿಶ್ವವಿದ್ಯಾಲಯದಲ್ಲಿ ಪ್ರವಾಚಕನಾಗಿದ್ದೆ. ಅವರ ಆಯ್ಕೆಯಾಗಿತ್ತು. ಇದರ ಬಗ್ಗೆ ಅವರು ಮಾತನಾಡಿದ್ದರು.

7ನೇ ಪುಟ ನೋಡಿ

'ಮೆರವಣಿಗೆ' ಮುಗಿಸಿದ ಸಿದ್ಧಲಿಂಗಯ್ಯ



03.02.1954 - 11.06.2021

ಬೆಂಗಳೂರು: 12ನೇ ಶತಮಾನದ ಬಳಿಕ ಕನ್ನಡ ಪ್ರತಿಭಟನಾ ಕಾವ್ಯಕ್ಕೆ ತಳ ಸಮುದಾಯದ ರಾಗ–ಸಿಟ್ಟು–ಸೆಡುವುಗಳನ್ನು ಆಡುಭಾಷೆಯಲ್ಲಿ ನೇಯ್ದಂತಹ 'ಹಾಡು'ಗಳ ಮೂಲಕವೇ ಒಂದೆರೆಡು ತಲೆಮಾರನ್ನು ಪ್ರಭಾವಿಸಿ, ಹೋರಾಟದ ಸಾಗರಕ್ಕೆ 'ಸಾವಿರಾರು ನದಿ'ಗಳನ್ನು ಹರಿಯಿಸಿ ಪರಿವರ್ತನೆಯ ಮುನ್ನುಡಿ ಬರೆದ ಕವಿ ಡಾ. ಸಿದ್ಧಲಿಂಗಯ್ಯ ಅವರು (67) ಶುಕ್ರವಾರ ಹೃದಯಾಘಾತದಿಂದ ನಿಧನರಾಗಿದ್ದಾರೆ.

ಕಾವ್ಯ, ನಾಟಕ, ಪ್ರಬಂಧ, ವಿಮರ್ಶೆ, ಸಂಶೋಧನೆ, ಆತ್ಮಕಥನ ಮುಂತಾದ ಪ್ರಕಾರಗಳಲ್ಲಿ ಸಾಹಿತ್ಯ ರಚನೆ ಮಾಡಿದ ಸಿದ್ಧಲಿಂಗಯ್ಯ 'ಕವಿಗಳು' ಎಂದೇ ಕರೆಯಿಸಿಕೊಂಡವರು.

ತುಳಿತಕ್ಕೊಳಗಾದ ಸಮುದಾಯದವರಲ್ಲಿ ಸ್ವಾಭಿಮಾನದ ಕಿಡಿಯನ್ನು ಹಚ್ಚುವ ಜತೆಗೆ ಕಾವ್ಯವನ್ನೇ ಖಡ್ಗದಂತೆ ಬಳಸಿದವರು.

7ನೇ ಪುಟ ನೋಡಿ
ಇನ್ನಷ್ಟು ಸುದ್ದಿಗಳು 7

ಪೆಟ್ರೋಲ್, ಡೀಸೆಲ್ ಬೆಲೆ ಏರಿಕೆ ವಿರೋಧಿಸಿ ಬೆಂಗಳೂರಿನ ಶಿವಾನಂದ ವೃತ್ತದ ಬಳಿಯ ಪೆಟ್ರೋಲ್ ಬಂಕ್ ಮುಂದೆ ಶುಕ್ರವಾರ ಕಾಂಗ್ರೆಸ್ ಹಮ್ಮಿಕೊಂಡಿದ್ದ ಪ್ರತಿಭಟನೆಯಲ್ಲಿ ಮಾಜಿ ಶಾಸಕ ಅಶೋಕ್ ಪಟ್ಟಣ, ಶಾಸಕ ದಿನೇಶ್ ಗುಂಡೂರಾವ್, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಶಾಸಕ ಆರ್.ವಿ. ದೇಶಪಾಂಡೆ ಮತ್ತಿತರರು ಇದ್ದರು –ಪ್ರಜಾವಾಣಿ ಚಿತ್ರ

'ಪೆಟ್ರೋಲ್ 100 ನಾಟೌಟ್': ಕಾಂಗ್ರೆಸ್ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರತಿ ಲೀಟರ್ ಪೆಟ್ರೋಲ್ ಬೆಲೆ ₹ 100ರ ಗಡಿ ದಾಟಿರುವುದನ್ನು ವಿರೋಧಿಸಿ ಕಾಂಗ್ರೆಸ್ ನಾಯಕರು ಮತ್ತು ಕಾರ್ಯಕರ್ತರು ಶುಕ್ರವಾರ ರಾಜ್ಯದ ವಿವಿಧೆಡೆ ಪೆಟ್ರೋಲ್ ಬಂಕ್‌ಗಳ ಎದುರು 'ಪೆಟ್ರೋಲ್ 100 ನಾಟೌಟ್' ಪ್ರತಿಭಟನಾ ಪ್ರದರ್ಶನ ನಡೆಸಿದರು.

ಎಐಸಿಸಿ ಸೂಚನೆಯಂತೆ ರಾಜ್ಯದ ಬಹುತೇಕ ಜಿಲ್ಲಾ ಕೇಂದ್ರಗಳಲ್ಲಿ ಪೆಟ್ರೋಲ್ ಬಂಕ್‌ಗಳ ಎದುರು ಕಾಂಗ್ರೆಸ್ ಕಾರ್ಯಕರ್ತರು ಪ್ರತಿಭಟನಾ ಪ್ರದರ್ಶನ ನಡೆಸಿದರು. 'ಪೆಟ್ರೋಲ್ 100 ನಾಟೌಟ್' ಎಂಬ ಬರಹವುಳ್ಳ ಭಿತ್ತಿಪತ್ರಗಳನ್ನು ಹಿಡಿದಿದ್ದ ಪ್ರತಿಭಟನಕಾರರು, 'ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಪೆಟ್ರೋಲಿಯಂ ಉತ್ಪನ್ನಗಳ ದರ ನಿಯಂತ್ರಿಸುವಲ್ಲಿ ವಿಫಲವಾಗಿದೆ' ಎಂದು ಟೀಕಿಸಿದರು.

ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಮತ್ತು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ನೇತೃತ್ವದಲ್ಲಿ ನಗರದ ಶಿವಾನಂದ ವೃತ್ತದ ಬಳಿಕ ರೆಡ್ಡಿ ಪೆಟ್ರೋಲ್ ಬಂಕ್ ಎದುರು ಪ್ರತಿಭಟನಾ ಪ್ರದರ್ಶನ ನಡೆಸಲಾಯಿತು.

ಪ್ರತಿಭಟನಾ ಸಭೆಯಲ್ಲಿ ಮಾತನಾಡಿದ ಸಿದ್ದರಾಮಯ್ಯ, 'ಕೊರೊನಾ ಸೋಂಕಿನ ಸಂಕಷ್ಟದ ಕಾಲದಲ್ಲಿ ಕೇಂದ್ರ ಸರ್ಕಾರ ನಿರಂತರವಾಗಿ ಪೆಟ್ರೋಲ್, ಡೀಸೆಲ್ ಮತ್ತು ಎಲ್‌ಪಿಜಿ ದರ ಏರಿಕೆ ಮಾಡುತ್ತಿದೆ. ಇದರಿಂದ ಸಾಮಾನ್ಯ ಜನರು ಜೀವನ ನಿರ್ವಹಣೆ ಮಾಡಲಾಗದ ಸ್ಥಿತಿ ನಿರ್ಮಾಣವಾಗಿದೆ. ಕೇಂದ್ರ ಸರ್ಕಾರದ ಈ ನಿಲುವನ್ನು ವಿರೋಧಿಸಿ ರಾಜ್ಯದಲ್ಲಿ ಐದು ದಿನಗಳ ಕಾಲ 5,000 ಪೆಟ್ರೋಲ್ ಬಂಕ್‌ಗಳ ಎದುರು ಪ್ರತಿಭಟನೆ ನಡೆಸಲಾಗುವುದು' ಎಂದರು.

ವಿವಿಧ ಜಿಲ್ಲೆಗಳಲ್ಲಿ ಪ್ರತಿಭಟನೆ ನಡೆಸುತ್ತಿದ್ದ ಕಾಂಗ್ರೆಸ್ ಕಾರ್ಯಕರ್ತರನ್ನುದ್ದೇಶಿಸಿ ವಿಡಿಯೊ ಮೂಲಕ ಮಾತನಾಡಿದ ಡಿ.ಕೆ. ಶಿವಕುಮಾರ್, 'ಶನಿವಾರ ಎಲ್ಲ ತಾಲ್ಲೂಕು ಕೇಂದ್ರಗಳಲ್ಲಿ ಪ್ರತಿಭಟನೆ ನಡೆಸಬೇಕು. ರಾಜ್ಯ ಸರ್ಕಾರ ಪೊಲೀಸ್ ಬಲ ಪ್ರಯೋಗಿಸಿ ಹೋರಾಟ ಹತ್ತಿಕ್ಕಲು ಯತ್ನಿಸಬಹುದು. ಆದರೆ, ಪಕ್ಷದ ಕಾರ್ಯಕರ್ತರು ಅದಕ್ಕೆ ಮಣಿಯಬಾರದು' ಎಂದು ಸೂಚಿಸಿದರು.

ಒಳ ಪುಟಗಳು

ಶ್ರೀಲಂಕಾದ 38 ಜನರ ಬಂಧನ 4
ಕನಿಷ್ಠ ಮೊತ್ತ ಇಳಿಕೆ: ಹೆಚ್ಚು ಜನರಿಂದ ದೇಣಿಗೆ 4
ವಲಸೆ ಕಾರ್ಮಿಕರ ನೋಂದಣಿ ವಿಳಂಬಕ್ಕೆ ಅತೃಪ್ತಿ 11

ರಾಜ್ಯ ಕೋವಿಡ್ ಅಂಕಿ–ಅಂಶ

27,47,539 ▲	ಒಟ್ಟು ಸೋಂಕಿತರು (27,39,290 ನಿನ್ನೆಯ ವಿವರ)
2,03,769 ▼	ಸಕ್ರಿಯ ಪ್ರಕರಣಗಳು
25,11,105 ▼	ಗುಣಮುಖರಾದವರು
32,644 ▲	ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	8,249	▼
ಗುಣಮುಖ	14,975	▼
ಸಾವು	159	▼

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಜವಾಬ್ದಾರಿ ಹೆಚ್ಚಾಗಿದೆ ಎಂದ ಮುಖ್ಯಮಂತ್ರಿ ಯಡಿಯೂರಪ್ಪ

'ಮುಂದಿನ 2 ವರ್ಷ ನಾನೇ ಸಿ.ಎಂ'

ಪ್ರಜಾವಾಣಿ ವಾರ್ತೆ

ಹಾಸನ: ಮುಖ್ಯಮಂತ್ರಿಯಾಗಿ ಮುಂದಿನ ಎರಡು ವರ್ಷ ತಾವೇ ಮುಂದುವರಿಯುವುದಾಗಿ ಬಿ.ಎಸ್. ಯಡಿಯೂರಪ್ಪ ಶುಕ್ರವಾರ ಇಲ್ಲಿ ತಿಳಿಸಿದರು.

'ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿರುವ ಯಡಿಯೂರಪ್ಪ ಅವರನ್ನು ಬದಲಾಯಿಸುವ ಪ್ರಶ್ನೆಯೇ ಇಲ್ಲ ಎಂದು ರಾಜ್ಯ ಬಿಜೆಪಿ ಉಸ್ತುವಾರಿ ಅರುಣ್ ಸಿಂಗ್ ಸ್ಪಷ್ಟಪಡಿದ್ದಾರೆ. ಅವರ ಹೇಳಿಕೆಯಿಂದ ನನ್ನ ಜವಾಬ್ದಾರಿ ಹೆಚ್ಚಾಗಿದೆ. ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ನನ್ನ ಮೇಲೆ ಇಟ್ಟಿರುವ ವಿಶ್ವಾಸ ಉಳಿಸಿಕೊಳ್ಳಲು ರಾಜ್ಯದಾದ್ಯಂತ ಪ್ರವಾಸ ಮಾಡಿ, ಅಭಿವೃದ್ಧಿಗೆ ಶ್ರಮವಹಿಸಲಾಗುವುದು' ಎಂದು ಸುದ್ದಿಗೋಷ್ಠಿಯಲ್ಲಿ ಹೇಳಿದರು.

ಹೇಮಾವತಿ ಜಲಾಶಯ ಯೋಜನೆ ಮುಳುಗಡೆ ಸಂತ್ರಸ್ತರ (ಎಚ್‌ಆರ್‌ಪಿ) ಹೆಸರಿನಲ್ಲಿ ನಡೆದಿರುವ ಅಕ್ರಮಗಳ ಬಗ್ಗೆ ತನಿಖೆ ನಡೆಸಿ, ವರದಿ ಸಲ್ಲಿಸುವಂತೆ ಸೂಚನೆ ನೀಡಲಾಗಿದೆ. ಯಾರೇ ತಪ್ಪು ಮಾಡಿದ್ದರೂ, ಎಷ್ಟೇ ದೊಡ್ಡವರಾಗಿದ್ದರೂ ಅಂಥವರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದು ಸ್ಪಷ್ಟಪಡಿಸಿದರು.

ಕೋವಿಡ್ 19 ರಾಷ್ಟ್ರೀಯ ವಿಪತ್ತು ಎಂದು ಘೋಷಿಸಿರುವುದರಿಂದ, ಹಣಕಾಸಿನ ಸ್ಥಿತಿ ನೋಡಿಕೊಂಡು ಕೋವಿಡ್‌ನಿಂದ ಮೃತಪಟ್ಟ ಕುಟುಂಬದವರಿಗೆ ಪರಿಹಾರ ನೀಡುವ ಕುರಿತು ಚಿಂತನೆ ನಡೆಸಲಾಗಿದೆ. ಲಾಕ್‌ಡೌನ್‌ನಿಂದಾಗಿ ರಾಜ್ಯದಲ್ಲಿ ಹಣಕಾಸು ಸ್ಥಿತಿ ಹದಗೆಟ್ಟಿದ್ದರೂ ಬಡವರ ಅನುಕೂಲಕ್ಕೆ ಪ್ಯಾಕೇಜ್ ಘೋಷಣೆ ಮಾಡಲಾಗಿದೆ ಎಂದು ಯಡಿಯೂರಪ್ಪ ತಿಳಿಸಿದರು.

'ರಮೇಶ್ ಜಾರಕಿಹೊಳಿ ಪ್ರಕರಣದಲ್ಲಿ, ಕಾನೂನು ಅದರದೇ ಆದ ಕ್ರಮ ಕೈಗೊಳ್ಳುತ್ತದೆ. ಯಾರನ್ನೂ ರಕ್ಷಿಸುವ ಪ್ರಶ್ನೆ ಇಲ್ಲ' ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ರೋಷನ್ ಬೇಗ್ ಆಸ್ತಿ ಮುಟ್ಟುಗೋಲಿಗೆ ಹಿಂದೇಟು: ಹೈಕೋರ್ಟ್ ಆಶ್ಚರ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಐ ಮಾನಿಟರಿ ಅಡ್ವೈಸರಿ (ಐಎಂಎ) ಹಗರಣದಲ್ಲಿ ಮಾಜಿ ಸಚಿವ ರೋಷನ್ ಬೇಗ್ ಅವರ ಆಸ್ತಿ ಮುಟ್ಟುಗೋಲು ಹಾಕಿಕೊಳ್ಳುವ ವಿಷಯದಲ್ಲಿ ಪ್ರತಿಕ್ರಿಯೆ ಸಲ್ಲಿಸಲು ರಾಜ್ಯ ಸರ್ಕಾರ ಸಮಯಾವಕಾಶ ಕೋರಿದೆ. ನಿರ್ಧಾರ ಕೈಗೊಳ್ಳಲು ಸರ್ಕಾರದ ಹಿಂಜರಿಕೆ ಬಗ್ಗೆ ಹೈಕೋರ್ಟ್ ಆಶ್ಚರ್ಯ ವ್ಯಕ್ತಪಡಿಸಿದೆ.

'ಹಗರಣಕ್ಕೆ ಸಂಬಂಧಿಸಿದಂತೆ ಎಲ್ಲಾ ಪ್ರಕರಣಗಳ ತನಿಖೆ ನಡೆಸುತ್ತಿರುವ ಸಿಬಿಐ ಅಂತಿಮ ವರದಿ ಆಧರಿಸಿ ಈ ವಿಷಯದಲ್ಲಿ ಮುಂದುವರಿಯಲಾಗುವುದು' ಎಂದು ಸರ್ಕಾರ ಈ ಹಿಂದೆ ತಿಳಿಸಿತ್ತು.

'ಸರ್ಕಾರ ತನ್ನ ನಿಲುವು ಮರು ಪರಿಶೀಲಿಸಿ ಐಎಂಎ ನಿರ್ದೇಶಕರ ಆಸ್ತಿ ಮತ್ತು ಠೇವಣಿದಾರರ ಹಣದಿಂದ ಸಂಪಾದಿಸಿರುವ ಆಸ್ತಿ ಮುಟ್ಟುಗೋಲು ಹಾಕಿ ಕೊಳ್ಳಲು ಠೇವಣಿದಾರರ ಹಿತಾಸಕ್ತಿ ಸಂರಕ್ಷಣೆ (ಕೆಪಿಐಡಿ) ಕಾಯ್ದೆಯ ಸೆಕ್ಷನ್ 3ರ ಅಡಿಯಲ್ಲಿ ಕ್ರಮ ಕೈಗೊಳ್ಳಬೇಕು' ಎಂದು ನ್ಯಾಯಾಲಯ ನಿರ್ದೇಶನ ನೀಡಿತ್ತು.

'ನಮ್ಮ ಅಧಿಕಾರಿಗಳಿಗೆ ಇಂತಹ ವಿಷಯಗಳಲ್ಲಿ ಪರಿಣತಿ ಇಲ್ಲ. ವಿಶೇಷವಾಗಿ ಆಸ್ತಿಗಳು ಕಂಪನಿಯ ಆಡಳಿತದೊಂದಿಗೆ ಸಂಬಂಧವಿಲ್ಲದ ಜನರದ್ದಾಗಿದೆ' ಎಂದು ಸರ್ಕಾರದ ಪರ ವಕೀಲರು ಮಾಹಿತಿ ನೀಡಿದರು.

'ಸರ್ಕಾರ ತನ್ನ ನಿರ್ಧಾರ ಮರುಪರಿಶೀಲನೆ ನಡೆಸಬೇಕು ಎಂದು ಏ.17ರಂದೇ ಆದೇಶ ನೀಡಲಾಗಿದೆ. ಸುಮಾರು ಎರಡು ತಿಂಗಳಾದರೂ ಸುಮ್ಮನಿದೆ. ಸರ್ಕಾರ ನಿರ್ಧಾರ ಕೈಗೊಳ್ಳುವ ಹೊತ್ತಿಗೆ ಆಸ್ತಿ ಬೇರೆಯವರಿಗೆ ವರ್ಗಾವಣೆ ಆಗುವ ಸಾಧ್ಯತೆ ಇದೆ. ಸಿಬಿಐ ಅಂತಿಮ ವರದಿಗಾಗಿ ಕಾಯುವಷ್ಟು ಅಸಹಾಯಕ ಸ್ಥಿತಿಯಲ್ಲಿ ರಾಜ್ಯ ಸರ್ಕಾರ ಇಲ್ಲ' ಎಂದು ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ ಹೇಳಿತು.

ಏತನ್ಮಧ್ಯೆ, ಐಎಂಎಗೆ ಸಂಬಂಧಿಸಿದ ಎಲ್ಲಾ ಪ್ರಕರಣಗಳ ತನಿಖೆ ಪೂರ್ಣಗೊಂಡಿದೆ ಎಂದು ಸಿಬಿಐ ಅಧಿಕಾರಿಗಳು ವಿವರಣೆ ನೀಡಿದರು. ಐಪಿಎಸ್ ಅಧಿಕಾರಿ ಅಜಯ್ ಹಿಲೋರಿ ವಿರುದ್ಧ ವಿಚಾರಣೆಗೆ ಅನುಮತಿ ಕೋರಿ ಶೀಘ್ರವೇ ರಾಜ್ಯ ಸರ್ಕಾರಕ್ಕೆ ಅರ್ಜಿ ಸಲ್ಲಿಸಲಾಗುವುದು ಎಂದು ತಿಳಿಸಿದರು.

ಕೋವಿಶೀಲ್ಡ್‌ನಿಂದ ಹೆಚ್ಚಿನ ರಕ್ಷಣೆ: ಅಧ್ಯಯನ ವರದಿ

ಪ್ರಜಾವಾಣಿ ವಾರ್ತೆ

ನವದೆಹಲಿ: 'ಕೋವಿಶೀಲ್ಡ್ ಲಸಿಕೆಯ ಎರಡು ಡೋಸ್‌ಗಳು, ವ್ಯಕ್ತಿಯು ಕೋವಿಡ್‌ನಿಂದ ತೀವ್ರನಿಗಾ ಘಟಕಕ್ಕೆ ದಾಖಲಾಗುವುದರಿಂದ ಶೇ 94ರಷ್ಟು ಹಾಗೂ ಆಸ್ಪತ್ರೆಗೆ ದಾಖಲಾಗುವುದರಿಂದ ಶೇ 77ರಷ್ಟು ರಕ್ಷಣೆ ನೀಡುತ್ತವೆ' ಎಂದು ವೆಲ್ಲೂರಿನ ಕ್ರಿಶ್ಚಿಯನ್ ಮೆಡಿಕಲ್ ಕಾಲೇಜು ನಡೆಸಿದ ಅಧ್ಯಯನದಲ್ಲಿ ದೃಢಪಟ್ಟಿದೆ.

ಆರೋಗ್ಯ ಕ್ಷೇತ್ರದಲ್ಲಿರುವ 10 ಸಾವಿರ ಕಾರ್ಯಕರ್ತರ ಮೇಲೆ ಅಧ್ಯಯನ ನಡೆಸಲಾಗಿದೆ.

ಲಸಿಕೆಯ ಎರಡೂ ಡೋಸ್‌ಗಳನ್ನು ಪಡೆದ 7,080 ಆರೋಗ್ಯ ಕಾರ್ಯಕರ್ತರಿಗೆ ಆಸ್ಪತ್ರೆಗೆ ದಾಖಲಾಗುವುದರಿಂದ ಶೇ 77ರಷ್ಟು, ಆಮ್ಲಜನಕ ಅವಲಂಬನೆಯಿಂದ ಶೇ 92ರಷ್ಟು ಹಾಗೂ ತೀವ್ರನಿಗಾ ಘಟಕಕ್ಕೆ ದಾಖಲಾಗುವುದರಿಂದ ಶೇ 94ರಷ್ಟು ರಕ್ಷಣೆ ಲಭಿಸಿದೆ.

ಒಂದೇ ಡೋಸ್ ಪಡೆದಿದ್ದರೂ ಆಸ್ಪತ್ರೆಗೆ ದಾಖಲಾಗುವುದರಿಂದ ಶೇ 70, ಆಮ್ಲಜನಕದ ಅವಲಂಬನೆಯಿಂದ ಶೇ 94, ಐಸಿಯುಗೆ ದಾಖಲಾಗುವುದರಿಂದ ಶೇ 95ರಷ್ಟು ಹಾಗೂ ಸೋಂಕಿಗೆ ಒಳಗಾಗುವುದರಿಂದ ಶೇ 60ರಷ್ಟು ರಕ್ಷಣೆ ಲಭಿಸಿದೆ ಎಂದು ವರದಿ ಹೇಳಿದೆ.

ಕೋವ್ಯಾಕ್ಸಿನ್ ಅಮೆರಿಕ ಪ್ರವೇಶ ವಿಳಂಬ

ಹೈದರಾಬಾದ್‌ನ ಭಾರತ್ ಬಯೊಟೆಕ್‌ನ ಕೋವಿಡ್ ಲಸಿಕೆ ಕೋವ್ಯಾಕ್ಸಿನ್ ಅಮೆರಿಕದ ಮಾರುಕಟ್ಟೆ ಪ್ರವೇಶಿಸುವುದು ವಿಳಂಬವಾಗಲಿದೆ. ಒಕ್ಯುಜೆನ್ ಎಂಬ ಕಂಪನಿಯು ಅಮೆರಿಕ ಮತ್ತು ಕೆನಡಾದಲ್ಲಿ ಭಾರತ್ ಬಯೊಟೆಕ್‌ನ ಪಾಲುದಾರನಾಗಿದೆ. ಕೋವ್ಯಾಕ್ಸಿನ್‌ನ ತುರ್ತು ಬಳಕೆ ಪರವಾನಗಿಯ (ಇಯುಎ) ಬದಲಿಗೆ ಬಯೊಲಾಜಿಕ್ಸ್ ಲೈಸೆನ್ಸ್ ಅಪ್ಲಿಕೇಷನ್ಸ್‌ಗೆ (ಬಿಎಲ್‌ಎ) ಅರ್ಜಿ ಸಲ್ಲಿಸುವಂತೆ ಒಕ್ಯುಜೆನ್‌ಗೆ ಅಮೆರಿಕದ ಆಹಾರ ಮತ್ತು ಔಷಧ ನಿಯಂತ್ರಣ ಸಂಸ್ಥೆ ಸೂಚಿಸಿದೆ. ಬಿಎಲ್‌ಎ ಅಡಿ ಅನುಮತಿ ಪಡೆಯಬೇಕಿದ್ದರೆ ಹೆಚ್ಚುವರಿ ಪ್ರಯೋಗದ ದತ್ತಾಂಶವನ್ನೂ ಸಲ್ಲಿಸಬೇಕಾಗುತ್ತದೆ. ಇದಕ್ಕೆ ಹೆಚ್ಚು ಸಮಯ ಬೇಕಾಗುತ್ತದೆ.

ಟಿಎಂಸಿಗೆ ಮರಳಿದ ಮುಕುಲ್ ರಾಯ್

ಕೋಲ್ಕತ್ತ (ಪಿಟಿಐ): ಬಿಜೆಪಿಯ ರಾಷ್ಟ್ರೀಯ ಉಪಾಧ್ಯಕ್ಷ ಮುಕುಲ್ ರಾಯ್ ಅವರು ತಮ್ಮ ಪುತ್ರ ಶುಭ್ರಾಂಶು ಜೊತೆಗೆ ಪಕ್ಷ ತ್ಯಜಿಸಿ, ತೃಣಮೂಲ ಕಾಂಗ್ರೆಸ್‌ಗೆ (ಟಿಎಂಸಿ) ಮರಳಿದ್ದಾರೆ.

ಮುಕುಲ್ ರಾಯ್

ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಹಾಗೂ ಟಿಎಂಸಿಯ ಇತರ ಮುಖಂಡರು ರಾಯ್ ಅವರನ್ನು ಶುಕ್ರವಾರ ಪಕ್ಷಕ್ಕೆ ಬರಮಾಡಿಕೊಂಡಿದ್ದಾರೆ. ರಾಯ್ ಅವರ ನಿರ್ಗಮನದಿಂದ ಬಿಜೆಪಿಯ ವರ್ಚಸ್ಸಿಗೆ ಚ್ಯುತಿಯಾಗಿದೆ ಎಂದು ವಿಶ್ಲೇಷಿಸಲಾಗಿದೆ.

ನಾರದ ಮಾರುವೇಷದ ಕಾರ್ಯಾಚರಣೆಯಲ್ಲಿ ಆರೋಪಿಯಾಗಿದ್ದ ರಾಯ್ ಅವರು 2017ರಲ್ಲಿ ಟಿಎಂಸಿ ತ್ಯಜಿಸಿ, ಬಿಜೆಪಿ ಸೇರಿದ್ದರು. ಅವರು ಟಿಎಂಸಿಗೆ ಮರಳಲಿದ್ದಾರೆ ಎಂಬ ವದಂತಿ ಕಳೆದ ಕೆಲವು ದಿನಗಳಿಂದ ಹರಿದಾಡುತ್ತಿತ್ತು.

ಇನ್ನೊಂದು ಸುದ್ದಿ 11

ಕೋವಿಡ್‌ನಿಂದ ಅಪ್ಪ–ಅಮ್ಮನ ಕಳೆದುಕೊಂಡ ಕಂದಮ್ಮಗಳ ವ್ಯಥೆ

'ದೇವರು ಕ್ರೂರಿ, ಅಮ್ಮನನ್ನು ದೂರ ಮಾಡಿಬಿಟ್ಟ'

• ಜಿ.ಶಿವಕುಮಾರ

ಬೆಂಗಳೂರು: 'ಅಮ್ಮ ಗಟ್ಟಿಗಿತ್ತಿ. ಯಾವುದಕ್ಕೂ ಅಂಜಿದವಳಲ್ಲ. ನಿತ್ಯವೂ ಕೂಲಿ ಕೆಲಸಕ್ಕೆ ಹೋಗುತ್ತಿದ್ದಳು. ಮನೆಗೆ ಮರಳಿದ ಬಳಿಕ ಅಡುಗೆ ಮಾಡಿ ನಮಗೆಲ್ಲಾ ಬಡಿಸುತ್ತಿದ್ದಳು. ಈಗ ಅಮ್ಮ ಜತೆಯಲ್ಲಿಲ್ಲ. ದೇವರು ಬಹಳ ಕ್ರೂರಿ. ಮೂರೇ ದಿನಗಳಲ್ಲಿ ಆಕೆಯನ್ನು ನಮ್ಮಿಂದ ದೂರ ಮಾಡಿಬಿಟ್ಟ'...

ಕೋವಿಡ್‌ನಿಂದಾಗಿ ತಾಯಿಯನ್ನು ಕಳೆದುಕೊಂಡ ಹಾರೋಗದ್ದೆಯ ವೈಷ್ಣವಿ ಅವರ ಭಾವುಕ ನುಡಿಗಳಿವು.

ಹೋದ ವರ್ಷ ತಂದೆಯನ್ನು ಕಳೆದುಕೊಂಡಿದ್ದ ವೈಷ್ಣವಿ ಕುಟುಂಬಕ್ಕೆ ತಾಯಿಯೇ ಆಧಾರವಾಗಿದ್ದರು. ಆಕೆ ಕೂಲಿ ಮಾಡಿ ತಂದ ಹಣದಲ್ಲೇ ಜೀವನ ಸಾಗುತ್ತಿತ್ತು. ಆಕೆಯ ಅಕಾಲಿಕ ನಿಧನದಿಂದ ಮಕ್ಕಳು ಈಗ ತಬ್ಬಲಿಗಳಾಗಿದ್ದಾರೆ. ಅವರ ಭವಿಷ್ಯವೂ ಡೋಲಾಯಮಾನವಾಗಿದೆ.

ವೈಷ್ಣವಿಗೆ ಈಗ 15ರ ಹರೆಯ. ಅವಳಿಗೆ ಕಿರಿಯ ಸಹೋದರಿ ವರ್ಷಿಣಿ ಹಾಗೂ ಸಹೋದರ ವೈಶಾಖ್ ಇದ್ದಾರೆ. ಇವರು ಕ್ರಮವಾಗಿ 7 ಹಾಗೂ 3ನೇ ತರಗತಿಗಳಲ್ಲಿ ಓದುತ್ತಿದ್ದು, ಸದ್ಯ ಅತ್ತೆಯ (ಅಪ್ಪನ ತಂಗಿ) ಮನೆಯಲ್ಲಿ ಆಶ್ರಯ ಪಡೆದಿದ್ದಾರೆ. ಇವರ ತಾಯಿಯ ಹೆಸರು ಆಶಾ. ಅವರಿಗೆ ಸುಮಾರು 30 ವರ್ಷ ವಯಸ್ಸಾಗಿತ್ತು.

'ಏಪ್ರಿಲ್ 30ರಂದು ಅಮ್ಮ ಎಂದಿನಂತೆ ಕೆಲಸಕ್ಕೆ ಹೋಗಿದ್ದಳು. ಸಂಜೆ ಮನೆಗೆ ಮರಳಿದ ಮೇಲೆ ಕೆಮ್ಮು ಕಾಣಿಸಿಕೊಂಡಿತು. ಹೀಗಾಗಿ ಮಾತ್ರೆ ನುಂಗಿ ಮಲಗಿದ್ದಳು. ಭಾನುವಾರ (ಮೇ 2) ಇದ್ದಕ್ಕಿದ್ದಂತೆ ಜ್ವರ ಶುರುವಾಯಿತು. ಚಿಕಿತ್ಸೆಗೆ ವಿನಾಯಕ ಆಸ್ಪತ್ರೆಗೆ ಹೋಗಿದ್ದಳು. ಆಸ್ಪತ್ರೆಯವರು ಚಿಕಿತ್ಸೆಗೆ ದಾಖಲಾಗುವಂತೆ ಹೇಳಿದ್ದರು. ಅಲ್ಲಿ ಸೇರಿದರೆ ಲಕ್ಷಾಂತರ ಹಣ ಕಟ್ಟಬೇಕು. ಅಷ್ಟೊಂದು ದುಡ್ಡು ಹೊಂದಿಸುವುದು ಕಷ್ಟ ಎಂಬುದನ್ನು ಮನಗಂಡು ಕೇವಲ ಚುಚ್ಚುಮದ್ದು ಪಡೆದು ಮನೆಗೆ ವಾಪಸ್ಸಾಗಿದ್ದಳು' ಎನ್ನುತ್ತಾಳೆ ವೈಷ್ಣವಿ.

7ನೇ ಪುಟ ನೋಡಿ

ಮೃತ ಆಶಾ ಅವರ ಕುಟುಂಬ

'ನಮ್ಮ ಕಣ್ಣ ಮುಂದೆ ಇರಲಿ ಬಿಡಿ'

'ಹಾರೋಗದ್ದೆಯಲ್ಲಿ ಮಕ್ಕಳನ್ನು ನೋಡಿಕೊಳ್ಳುವವರು ಯಾರೂ ಇಲ್ಲ. ಹೀಗಾಗಿ ನನ್ನ ಮನೆಗೆ ಕರೆದುಕೊಂಡು ಬಂದಿದ್ದೇನೆ. ಒಂದು ತಿಂಗಳಿಂದ ಇಲ್ಲೇ ಇದ್ದಾರೆ. ನಮ್ಮೂರಿನಲ್ಲೇ ಸರ್ಕಾರಿ ಶಾಲೆಗೆ ಸೇರಿಸಿ ಓದಿಸುತ್ತೇವೆ' ಎಂದು ವೈಷ್ಣವಿ ಅವರ ಮಾವ ಕೃಷ್ಣಪ್ಪ ತಿಳಿಸಿದರು. ಕೃಷ್ಣಪ್ಪ ಅವರು ಸರ್ಜಾಪುರ ಸಮೀಪದ ಕೋಟಿಗಾನಹಳ್ಳಿ ನಿವಾಸಿ.

'ನಾನು ಪೇಂಟಿಂಗ್ ಕೆಲಸ ಮಾಡುತ್ತೇನೆ. ಕೋವಿಡ್‌ನಿಂದಾಗಿ ಎಲ್ಲಿಯೂ ಕೆಲಸ ಸಿಗುತ್ತಿಲ್ಲ. ಹೀಗಾಗಿ ಜೀವನ ನಿರ್ವಹಣೆ ಕಷ್ಟವಾಗಿದೆ. ವೈಷ್ಣವಿ, ವೈಶಾಖ್ ಹಾಗೂ ವರ್ಷಿಣಿ ಅವರನ್ನು ಹಾಸ್ಟೆಲ್‌ಗೆ ಸೇರಿಸುವ ಆಲೋಚನೆ ಇತ್ತು. ಅದಕ್ಕೆ ನನ್ನ ಪತ್ನಿ ಒಪ್ಪಲಿಲ್ಲ. ತನ್ನ ಅಣ್ಣನ ಮಕ್ಕಳು ಇನ್ನೂ ಚಿಕ್ಕವರು. ಏನೂ ಅರಿಯದವರು. ಕಣ್ಣ ಮುಂದೆಯೇ ಇರಲಿ ಎಂಬುದು ಆಕೆಯ ಬಯಕೆ. ಹೆಂಡತಿಯ ಆಸೆಯಂತೆಯೇ ಮೂವರು ಮಕ್ಕಳನ್ನೂ ನಮ್ಮ ಮನೆಯಲ್ಲಿ ಇಟ್ಟುಕೊಂಡು ಸಾಕುತ್ತೇವೆ. ಸ್ವಲ್ಪ ಕಷ್ಟ ಆಗುತ್ತದೆ. ಹಾಗಂತ ಈ ಸಮಯದಲ್ಲಿ ಅವರನ್ನು ದೂರ ಮಾಡಲು ಆಗುವುದಿಲ್ಲ' ಎಂದರು.

ನೀನು ಡಾಕ್ಟರ್ ಆಗಬೇಕು ಮಗ. ಚೆನ್ನಾಗಿ ಓದು ಅಂತ ಅಮ್ಮ ಹೇಳುತ್ತಿದ್ದಳು. ಅವಳ ಆಸೆಯನ್ನು ಖಂಡಿತವಾಗಿಯೂ ಈಡೇರಿಸುತ್ತೇನೆ

ವೈಶಾಖ್, ಮೃತ ಆಶಾ ಅವರ ಮಗ

ಇಂದಿನ ಪಾಡ್‌ಕಾಸ್ಟ್ ವಿಶೇಷ
ವಚನವಾಣಿ
ಪ್ರಜಾವಾಣಿ ಕನ್ನಡ ಧ್ವನಿ
ಪ್ರತೀ ದಿನ: ದಿನದ ಸೂಕ್ತಿ, ಸಂಪಾದಕೀಯ, ಪ್ರಚಲಿತ
Prajavani.net/podcast

ಚಿನಕುರಳಿ
ಪ್ರಕಾಶ್ ಶೆಟ್ಟಿ

ಶನಿವಾರದ ಉಷ್ಣಾಂಶ 29° ಗರಿಷ್ಠ 19° ಕನಿಷ್ಠ

ಹವಾಮಾನ ಮುನ್ಸೂಚನೆ
ನಗರದಲ್ಲಿ ಬೆಳಿಗ್ಗೆ ಭಾಗಶಃ ಮೋಡ ಕವಿದ ವಾತಾವರಣ. ಬೆಂಗಳೂರು–ಮಂಗಳೂರು ಹೆದ್ದಾರಿಯಲ್ಲಿ ಅಲ್ಲಲ್ಲಿ ಮಳೆ ಸಾಧ್ಯತೆ.

ಮುನ್ಸೂಚನೆ: ಭಾನುವಾರ 29° 19° | ಸೋಮವಾರ 28° 19° | ಮಂಗಳವಾರ 28° 19°

ಸೂರ್ಯೋದಯ: 5:53 ಸೂರ್ಯಾಸ್ತ: 6:46 ಚಂದ್ರೋದಯ: ಬೆ. 7:13 ಚಂದ್ರಾಸ್ತ: ರಾ. 8:30

ಶುಕ್ರವಾರದ ಹವಾಮಾನ : ಗರಿಷ್ಠ 29° ಕನಿಷ್ಠ 19°

ಪ್ರಜಾವಾಣಿ

ಹಾಲು ವಿತರಕರಿಗೆ ಉಚಿತ ಲಸಿಕೆ ನೀಡಲು ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಲಾಕ್‌ಡೌನ್ ಅವಧಿಯಲ್ಲೂ ಅಗತ್ಯ ಸೇವೆಯಡಿ ಕಾರ್ಯನಿರ್ವಹಿಸುತ್ತಿರುವ ಹಾಲು ವಿತರಕರಿಗೆ ಸರ್ಕಾರ ಉಚಿತವಾಗಿ ಕೋವಿಡ್ ಲಸಿಕೆ ನೀಡಬೇಕು' ಎಂದು ಬೆಂಗಳೂರು ಡೈರಿ ಏಜೆಂಟರ ಸಂಘದ ಅಧ್ಯಕ್ಷ ಎಚ್.ಎಸ್.ರಂಗಸ್ವಾಮಿ ಮನವಿ ಮಾಡಿದ್ದಾರೆ.

'ಹಾಲು ವಿತರಕರನ್ನು ಕೋವಿಡ್ ನೆರವಿನ ಪ್ಯಾಕೇಜ್‌ಗೆ ಒಳಪಡಿಸದೆ, ಸರ್ಕಾರ ಕಡೆಗಣಿಸಿದೆ. ವಿತರಕರಿಗೂ ಸೋಂಕು ಹರಡುವ ಸಾಧ್ಯತೆ ಇರುವುದರಿಂದ ಎಲ್ಲ ಹಾಲಿನ ಬೂತ್‌ಗಳ ಬಳಿಯೇ ಕೋವಿಡ್ ಲಸಿಕೆ ನೀಡುವ ವ್ಯವಸ್ಥೆ ಮಾಡಬೇಕು' ಎಂದೂ ಒತ್ತಾಯಿಸಿದ್ದಾರೆ.

ರಕ್ಷಾ ಫೌಂಡೇಷನ್ ವತಿಯಿಂದ ಕೋವಿಡ್ ರೋಗಿಗಳ ಬಳಕೆಗೆ ಉಚಿತವಾಗಿ ನೀಡಿರುವ ಆಮ್ಲಜನಕ ಪೂರೈಸುವ ವಾಹನಕ್ಕೆ ಜಯನಗರದ ಪಟ್ಟಾಭಿರಾಮನಗರ ವಾರ್ಡ್‌ನ ಹಂಡೆ ಹಾಲ್ ಬಳಿ ಕಂದಾಯ ಸಚಿವ ಆರ್.ಅಶೋಕ ಶುಕ್ರವಾರ ಚಾಲನೆ ನೀಡಿದರು. ಬೆಂಗಳೂರು ದಕ್ಷಿಣ ಬಿಜೆಪಿ ಅಧ್ಯಕ್ಷ ಎನ್.ಆರ್.ರಮೇಶ್, ರಕ್ಷಾ ಫೌಂಡೇಷನ್ ಅಧ್ಯಕ್ಷ ಸಿ.ಕೆ.ರಾಮಮೂರ್ತಿ, ನಾಗರತ್ನ ಹಾಗೂ ಇತರರು ಇದ್ದರು

ಲಾಕ್‌ಡೌನ್: ಪರಿಷ್ಕೃತ ಮಾರ್ಗಸೂಚಿ ಬಿಡುಗಡೆ
ಅಗತ್ಯ ವಸ್ತುಗಳ ಹೋಂ ಡೆಲಿವರಿಗೆ ಆದ್ಯತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇದೇ 14 ರಿಂದ ಲಾಕ್‌ಡೌನ್ ನಿರ್ಬಂಧವನ್ನು ತುಸು ಸಡಿಲ ಮಾಡಲಾಗುವ ಜಿಲ್ಲೆಗಳಲ್ಲಿ ಜನರು ಹೊರಬರುವುದನ್ನು ತಪ್ಪಿಸಲು ದಿನದ 24 ಗಂಟೆಯೂ ಎಲ್ಲ ಬಗೆಯ ವಸ್ತುಗಳನ್ನು ಮನೆಗಳಿಗೆ ಪೂರೈಕೆ ಮಾಡುವ (ಹೋಂ ಡೆಲಿವರಿ) ಅವಕಾಶ ನೀಡಲಾಗಿದೆ.

ರಾಜ್ಯ ಸರ್ಕಾರ ಲಾಕ್‌ಡೌನ್ ಭಾಗಶಃ ತೆರವುಗೊಳಿಸಿರುವ ಸಂಬಂಧ ಪರಿಷ್ಕೃತ ಮಾರ್ಗಸೂಚಿಯನ್ನು ಹೊರಡಿಸಿದೆ. ಈ ಹಿಂದೆ ಹೋಂ ಡೆಲಿವರಿಗೆ ಕೆಲವು ನಿರ್ಬಂಧಗಳು ಇದ್ದವು. ಈಗ ಅದನ್ನು ತೆರವುಗೊಳಿಸಲಾಗಿದೆ. ದಿನಸಿ, ಔಷಧಿ ಸೇರಿ ಕೆಲವು ಅಗತ್ಯ ವಸ್ತುಗಳ ಪೂರೈಕೆಗೆ ಅವಕಾಶವಿತ್ತು. ಎಲೆಕ್ಟ್ರಾನಿಕ್ಸ್ ವಸ್ತುಗಳ ಪೂರೈಕೆಯನ್ನು ನಿರ್ಬಂಧಿಸಲಾಗಿತ್ತು.

ಆಹಾರ, ದಿನಸಿ, ಹಣ್ಣು–ತರಕಾರಿ, ಮಾಂಸ, ಮೀನು, ಡೇರಿ ಉತ್ಪನ್ನಗಳು, ಹಾಲಿನ ಬೂತ್, ಪ್ರಾಣಿಗಳ ಆಹಾರ ಮಳಿಗೆ, ಬೀದಿ ಬದಿ ವ್ಯಾಪಾರ, ಪಡಿತರ ಅಂಗಡಿಗಳನ್ನು ಬೆಳಿಗ್ಗೆ 6 ರಿಂದ ಮಧ್ಯಾಹ್ನ 2 ರವರೆಗೆ ತೆರೆಯಬಹುದು. ಕನ್ನಡಕದ ಅಂಗಡಿಗಳಿಗೂ ಬೆಳಿಗ್ಗೆ 6 ರಿಂದ ಮಧ್ಯಾಹ್ನ 2 ಗಂಟೆವರೆಗೆ ತೆರೆಯಲು ಅವಕಾಶ ನೀಡಲಾಗಿದೆ.

ಮಧ್ಯಾಹ್ನ 2 ರ ಬಳಿಕ ಅನಗತ್ಯವಾಗಿ ಯಾರೂ ರಸ್ತೆಗಿಳಿಯುವಂತಿಲ್ಲ. ಅಂಗಡಿ ಮುಂಗಟ್ಟುಗಳನ್ನು 2 ಗಂಟೆಗೆ ಸರಿಯಾಗಿ ಮುಚ್ಚಬೇಕು.

ಕಟ್ಟಡ ನಿರ್ಮಾಣ ಚಟುವಟಿಕೆಗೆ ಅವಕಾಶ ನೀಡಿರುವುದರಿಂದ ನಿರ್ಬಂಧಿತ ವಲಯವನ್ನು ಹೊರತುಪಡಿಸಿ ಉಳಿದ ಕಡೆಗಳಲ್ಲಿ ನಿರ್ಮಾಣ ಸಾಮಗ್ರಿಗಳ ಮಾರಾಟದ ಅಂಗಡಿಗಳನ್ನು ತೆರೆಯಲು ಅನುಮತಿ ನೀಡಲಾಗಿದೆ.

ಕೃಷಿ ಇಲಾಖೆ ಮತ್ತು ಸಂಬಂಧಿತ ಕಚೇರಿಗಳು, ಲೋಕೋಪಯೋಗಿ ಇಲಾಖೆ, ವಸತಿ, ಸಹಕಾರ, ಕಂದಾಯ, ನಬಾರ್ಡ್ ಮತ್ತು ಕೇಂದ್ರ ಸರ್ಕಾರದ ಕಚೇರಿಗಳು ಶೇ 50 ರಷ್ಟು ಸಿಬ್ಬಂದಿಯನ್ನು ಇಟ್ಟುಕೊಂಡು ಕಾರ್ಯನಿರ್ವಹಿಸಬೇಕು ಎಂದು ಸೂಚಿಸಲಾಗಿದೆ.

ಮದುವೆ ಮತ್ತು ಶವಸಂಸ್ಕಾರಗಳಿಗೆ ಈ ಹಿಂದೆ ಹೊರಡಿಸಿರುವ ಆದೇಶವೇ ಅನ್ವಯವಾಗಲಿದೆ. ಮದುವೆಯನ್ನು ಮನೆಗಳಲ್ಲೇ ಕನಿಷ್ಠ ಜನರ ಸಮ್ಮುಖದಲ್ಲಿ ನಡೆಸಬಹುದು.

ವಾಹನ ವ್ಯವಸ್ಥೆ ಉದ್ಯಮಗಳ ಜವಾಬ್ದಾರಿ

ಎಲ್ಲ ಉದ್ಯಮಗಳಿಗೆ ಉತ್ಪಾದನಾ ಚಟುವಟಿಕೆ ಆರಂಭಿಸಲು ಅವಕಾಶ ನೀಡಲಾಗಿದ್ದು, ಆದರೆ ಶೇ 50 ರಷ್ಟು ಸಿಬ್ಬಂದಿಯನ್ನು ಕರೆದುಕೊಂಡು ಬಂದು ಮನೆಗೆ ಬಿಡಲು ವಾಹನ ವ್ಯವಸ್ಥೆಯನ್ನು ಉದ್ಯಮಗಳೇ ಮಾಡಬೇಕು ಎಂದು ಗೃಹ ಸಚಿವ ಬಸವರಾಜ ಬೊಮ್ಮಾಯಿ ತಿಳಿಸಿದರು.

ಆರೋಗ್ಯ ವಿ.ವಿ: ಡಾ.ಜಯಕರ ಹಂಗಾಮಿ ಕುಲಪತಿ

ಬೆಂಗಳೂರು: ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಹಂಗಾಮಿ ಕುಲಪತಿಯನ್ನಾಗಿ ಡಾ. ಎಸ್.ಎಂ. ಜಯಕರ ಅವರನ್ನು ನೇಮಿಸಲಾಗಿದೆ.

ಬೆಂಗಳೂರಿನ ಎಐಸಿಎಸ್ ಮಾರುತಿ ಡೆಂಟಲ್ ಸೈನ್ಸಸ್‌ನ ಪ್ರಾಂಶುಪಾಲರಾಗಿರುವ ಜಯಕರ್ ಅವರು ಇದೇ 15 ರಿಂದ ಹಂಗಾಮಿ ಕುಲಪತಿಯಾಗಿ ಅಧಿಕಾರ ವಹಿಸಿಕೊಳ್ಳಲಿದ್ದಾರೆ. ಕಾಯಂ ಕುಲಪತಿ ನೇಮಕವಾಗುವವರೆಗೆ ಆ ಹುದ್ದೆ ನಿಭಾಯಿಸುವಂತೆ ರಾಜ್ಯಪಾಲ ವಜುಭಾಯಿ ವಾಲಾ ಆದೇಶ ಹೊರಡಿಸಿದ್ದಾರೆ. ಹಾಲಿ ಕುಲಪತಿ ಡಾ.ಸಚ್ಚಿದಾನಂದ ಅವರ ಅವಧಿ ಇದೇ 14 ರಂದು ಮುಗಿಯಲಿದೆ.

ಜಿಲ್ಲಾಧಿಕಾರಿಗಳ ಕಾರ್ಯಾಲಯ, ಕೋಲಾರ ಜಿಲ್ಲೆ, ಕೋಲಾರ
ಜಿಲ್ಲಾ ನಗರಾಭಿವೃದ್ಧಿ ಕೋಶ, ಕೋಲಾರ
ದೂರವಾಣಿ & ಫ್ಯಾಕ್ಸ್: 08152-243555,
ಇ-ಮೇಲ್: pdkolar@gmail.com

ಸಂಖ್ಯೆ: ಜಿನಕೋ/ತಾಂತ್ರಿಕ/ಎಇಇ/ಸಿಆರ್/25/2021-22 ದಿನಾಂಕ: 09.06.2021

ಟೆಂಡರ್ ಪ್ರಕಟಣೆ

ಕೋಲಾರ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಕೈಗೊಳ್ಳುವ ವಿವಿಧ ಅಭಿವೃದ್ಧಿ ಕಾಮಗಾರಿಗಳು ಹಾಗೂ ತಾಂತ್ರಿಕ ಕೆಲಸ ಕಾರ್ಯಗಳ ಮೇಲುಸ್ತುವಾರಿಗಾಗಿ ಜಿಲ್ಲಾ ನಗರಾಭಿವೃದ್ಧಿ ಕೋಶ ಕೋಲಾರ ಕಛೇರಿಯ ಯೋಜನಾ ನಿರ್ದೇಶಕರು ಮತ್ತು ಸಹಾಯಕ ಕಾರ್ಯಪಾಲಕ ಅಭಿಯಂತರರ ರವರ ಉಪಯೋಗಕ್ಕಾಗಿ 2021–22ನೇ ಸಾಲಿಗೆ ಮಾಹೆಯಾನ ಬಾಡಿಗೆ ಆಧಾರದ ಮೇರೆಗೆ ಇಂಧನ ಮತ್ತು ಚಾಲಕರ ಸಮೇತ ಖಾಸಗಿ ವಾಹನವನ್ನು ಒದಗಿಸಲು ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಂದ ಅಧಿಕೃತವಾಗಿ ಪರವಾನಗಿ ಪಡೆದಿರುವ/ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಗುತ್ತಿಗೆದಾರರಿಂದ, ವಾಹನ ಮಾಲೀಕ/ಏಜೆನ್ಸಿರವರು ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳಿಗಾಗಿ http://eproc.karnataka.gov.in ನಲ್ಲಿ ವೀಕ್ಷಿಸುವುದು. ಟೆಂಡರ್‌ಗಳನ್ನು ಆನ್‌ಲೈನ್ ಮೂಲಕ ಮಾತ್ರ ಸಲ್ಲಿಸುವುದು. ಈ ಕಛೇರಿಯಲ್ಲಿ ಯಾವುದೇ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ. **(1) ಕಾಮಗಾರಿಯ ಇಂಡೆಂಟ್ ನಂಬರ್:** DUDC/TECH/AEE/CR/25/2021-22, ಅಂದಾಜು ಮೊತ್ತ: **ರೂ.3.60 ಲಕ್ಷಗಳು. (2) ಕಾಮಗಾರಿಯ ಇಂಡೆಂಟ್ ನಂಬರ್:** DUDC/TECH/AEE/CR/26/2021-22, ಅಂದಾಜು ಮೊತ್ತ: **ರೂ.3.60 ಲಕ್ಷಗಳು. (1)** ಖಾಲಿ ಟೆಂಡರ್ ಫಾರಂಗಳಿಗೆ http://eproc.karnataka.gov.in ನಲ್ಲಿ ವೀಕ್ಷಿಸಿ. ಷೆಡ್ಯೂಲ್–ಬಿ ಗಳನ್ನು ವೆಬ್‌ಸೈಟ್‌ನಲ್ಲಿ ಭರ್ತಿ ಮಾಡಿ ಸಲ್ಲಿಸುವ ಕೊನೆಯ ದಿನಾಂಕ: **30.06.2021ರ ಸಮಯ: 17.00 ಗಂಟೆಯವರೆಗೆ. (2)** ಬಿಡ್‌ಗಳನ್ನು ತೆರೆಯುವ ದಿನಾಂಕ: **01.07.2021ರ ಸಮಯ: 17.30 ಗಂಟೆಗೆ.**

ಸಹಿ/– ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಕೋಲಾರ
ವಾ.ಸಾ.ಸಂ.ಇ./ಕೋಲಾರ/ಆರ್.ಓ.ಸಂಖ್ಯೆ 81/ಎಂಸಿಎ/2021-22

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಭಾವಪೂರ್ಣ ಶ್ರದ್ಧಾಂಜಲಿ

ಡಾ. ಸಿದ್ದಲಿಂಗಯ್ಯ

ಸಾಮಾಜಿಕ ಸಮಾನತೆಗಾಗಿ ಕಾವ್ಯ, ಸಾಹಿತ್ಯಗಳನ್ನು ರಚಿಸಿ ಪ್ರೇರಣೆ ನೀಡಿದ ಖ್ಯಾತ ಲೇಖಕ, ಕವಿ ಡಾ. ಸಿದ್ದಲಿಂಗಯ್ಯ ಅವರ ಅಗಲಿಕೆಯಿಂದ ಸಾಹಿತ್ಯ ಕ್ಷೇತ್ರಕ್ಕೆ ಹಾಗೂ ಇಡೀ ರಾಜ್ಯಕ್ಕೆ ಭರಿಸಲಾರದ ನಷ್ಟ ಉಂಟಾಗಿದೆ.
ಡಾ. ಸಿದ್ದಲಿಂಗಯ್ಯ ಅವರ ಸಿದ್ದಾಂತ ಮತ್ತು ಆದರ್ಶಗಳು ಸದಾ ಅನುಕರಣೀಯ

ಸಂತಾಪ ಕೋರುವವರು

ಬಿ. ಶ್ರೀರಾಮುಲು
ಸಮಾಜ ಕಲ್ಯಾಣ ಇಲಾಖೆ ಸಚಿವರು
ಕರ್ನಾಟಕ ಸರ್ಕಾರ

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಯಾರೊಂದಿಗೂ ಹಸ್ತಲಾಘವ ಮಾಡಬೇಡಿ

ಪೌಷ್ಟಿಕ ಆಹಾರ ಸೇವಿಸಿ

ನಗರದಲ್ಲಿ ಇಂದು

ಬಡವರಿಗೆ ಉಚಿತ ತರಕಾರಿ ವಿತರಣೆ: ಕೇಂದ್ರ ಸಚಿವ ಡಿ.ವಿ. ಸದಾನಂದಗೌಡ, ಅಬಕಾರಿ ಸಚಿವ ಕೆ.ಗೋಪಾಲಯ್ಯ, ಆಯೋಜನೆ– ಶ್ರೀಮಂಜುನಾಥ ಟ್ರಸ್ಟ್, ಸ್ಥಳ– ಸಿದ್ದಲಿಂಗೇಶ್ವರ ಕಲ್ಯಾಣ ಮಂಟಪ, ಜೆ.ಸಿ.ನಗರ, ಕುರುಬರಹಳ್ಳಿ, ಬೆಳಿಗ್ಗೆ 8.30

ಅಸಂಘಟಿತರಿಗೆ ಅನ್ನಪೂರ್ಣ ಅಭಿಯಾನ: ಆನ್‌ಲೈನ್ ಉದ್ಘಾಟನೆ– ಸಿಐಟಿಯು ರಾಷ್ಟ್ರೀಯ ಉಪಾಧ್ಯಕ್ಷ ಎ.ಕೆ. ಪದ್ಮನಾಭನ್, ಅಧ್ಯಕ್ಷತೆ–ಕೆ.ಪ್ರಕಾಶ್, ಭಾಗವಹಿಸುವವರು–ಎಸ್.ವರಲಕ್ಷ್ಮಿ, ಎಚ್.ಎನ್.ಗೋಪಾಲಗೌಡ, ಮೀನಾಕ್ಷಿ ಸುಂದರಂ, ಕೆ.ಎನ್. ಉಮೇಶ್, ಜ್ಯೋತಿಬಸು ಭವನದ ಆಮ್ಲಜನಕ ಕೇಂದ್ರಕ್ಕೆ ಆಮ್ಲಜನಕ ಸಾಂದ್ರಕಗಳ ಸೇರ್ಪಡೆ–ಪಾಲಿಕೆ ವಿಶೇಷ ಆಯುಕ್ತ ಕೆ.ಎ.ದಯಾನಂದ, ಆಯೋಜನೆ– ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್ (ಸಿಐಟಿಯು), ಬೆಳಿಗ್ಗೆ 10.30 (ಆನ್‌ಲೈನ್ ಕಾರ್ಯಕ್ರಮ)

ಕಾಂಗ್ರೆಸ್ ಕಾರ್ಯಕರ್ತರು, ಕೋವಿಡ್ ಸೇನಾನಿಗಳು, ಕೂಲಿ ಕಾರ್ಮಿಕರು ಹಾಗೂ ನಿರಾಶ್ರಿತರಿಗೆ ದಿನಸಿ ಕಿಟ್ ವಿತರಣೆ: ನೇತೃತ್ವ–ವಿಧಾನ ಪರಿಷತ್ ಸದಸ್ಯ ಯು.ಬಿ.ವೆಂಕಟೇಶ್, ಭಾಗವಹಿಸುವವರು–ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಎಐಸಿಸಿ ಕಾರ್ಯದರ್ಶಿ ದಿನೇಶ ಗುಂಡೂರಾವ್, ಕೆಪಿಸಿಸಿ ಕಾರ್ಯಾಧ್ಯಕ್ಷರಾದ ರಾಮಲಿಂಗಾ ರೆಡ್ಡಿ, ಈಶ್ವರ್ ಖಂಡ್ರೆ, ಆಯೋಜನೆ–ಬಸವನಗುಡಿ ವಿಧಾನ ಸಭಾ ಕ್ಷೇತ್ರದ ಕಾಂಗ್ರೆಸ್ ಘಟಕ, ಸ್ಥಳ–ವಿದ್ಯಾಪೀಠ ವೃತ್ತ, ಬೆಳಿಗ್ಗೆ 11

'ಭಾರತದಲ್ಲಿ ಬಾಲಕಾರ್ಮಿಕ ಪದ್ಧತಿ ನಿರ್ಮೂಲನೆಯ ಸಮಸ್ಯೆಗಳು ಮತ್ತು ಸವಾಲುಗಳು' ಕುರಿತು ರಾಷ್ಟ್ರೀಯ ಸಮಾಲೋಚನೆ ಹಾಗೂ ಸರ್ಕಾರಕ್ಕೆ ಮಕ್ಕಳ ಬೇಡಿಕೆ: ಆಯೋಜನೆ–ಬಾಲಕಾರ್ಮಿಕ ಪದ್ಧತಿ ವಿರೋಧಿ ಆಂದೋಲನ, ಬೆಳಿಗ್ಗೆ 11 (ಆನ್‌ಲೈನ್ ಕಾರ್ಯಕ್ರಮ)

ಏಣಗಿ ಬಾಳಪ್ಪ ಸ್ಮರಣೆ: ಭಾಗವಹಿಸುವವರು–ಗೊ.ರು. ಚನ್ನಬಸಪ್ಪ, ಬಸವರಾಜ ಜಗಜಂಪಿ, ಶಿರಿಷ್ ಜೋಷಿ, ರವೀಂದ್ರ ಸೊರಗಾವಿ, ಮುದ್ದು ಮೋಹನ್, ಬಸವರಾಜ್ ಏಣಗಿ, ಸುಭಾಷ್, ಕೆ.ವಿ. ನಾಗರಾಜಮೂರ್ತಿ, ಆಯೋಜನೆ– ಶರಣ ಸಾಹಿತ್ಯ ಪರಿಷತ್, ಸಂಜೆ 4 (ಆನ್‌ಲೈನ್ ಕಾರ್ಯಕ್ರಮ)

ವಿಚಾರ ಕಲರವ: 'ದೇಶ, ಭಾಷೆ ಮತ್ತು ಅನುಭವ' ಕುರಿತು ವಿಚಾರ ಸಂಕಿರಣ, ಮಾತನಾಡುವವರು– 'ಮುಖ್ಯಮಂತ್ರಿ' ಚಂದ್ರು, ಕೆ.ಆರ್. ವೇಣುಗೋಪಾಲ್, ಆಯೋಜನೆ– ಬೆಂಗಳೂರು ವಿಶ್ವವಿದ್ಯಾಲಯದ ಎನ್‌ಎಸ್‌ಎಸ್ ಘಟಕ, ಸಂಜೆ 5.30 (ಆನ್‌ಲೈನ್ ಕಾರ್ಯಕ್ರಮ)

ಮುಖ್ಯಮಂತ್ರಿ ಚಂದ್ರು

'ಜನಗಾನ' ಜನಮನ ಸ್ಪಂದನ: ಪಿಚ್ಚಳ್ಳಿ ಶ್ರೀನಿವಾಸ ಮತ್ತು ತಂಡ, ಆಯೋಜನೆ–ಜನ ಮಾಧ್ಯಮ, ಸಂಜೆ 6 (ಆನ್‌ಲೈನ್ ಕಾರ್ಯಕ್ರಮ)

WEEKEND CORNER ಕ್ಲಾಸಿಫೈಡ್ಸ್

Nearing Completion
50:50 OFFER
PAY 50% NOW & BALANCE 50% ON POSSESSION*
PRESTIGE PARK SQUARE
STYLE MEETS SUBSTANCE
BANNERGHATTA ROAD
Exclusive 2 & 3 bed apartments on Bannerghatta Main Road
* Close to Metro Station & NICE Road
* Easy Access to Electronic City & Kanakapura Road
Price starts at ₹ 81 Lakhs*
www.prestigeconstructions.com
Call: 70263 70263
*T&C Apply

PRIME LAND FOR SALE
BBMP Limit Converted land for SALE, 22 Guntas and converted sites @ Upkar Residency, Hullalu Near Vishveshwaraya Layout and also available BMRDA / DTCP Approved sites on Hosur Road, for details
Please Call: +91-8884101166

Classifieds
Book Your Classifieds Ads
Online Log in to dhclassifieds.com
For More Details Call 9880856233 • 9886213331
Email: Santhoshkumar@deccanherald.co.in

IAS 2022
STARTS ON 20th JUNE,2021
KERALA SAMAJAM IAS ACADEMY BENGALURU
(A Social Mission of Kerala Samajam®, Bangalore)
ONLINE GUIDANCE & EVALUATION
- COMPREHENSIVE GUIDANCE FOR PRELIMS AND MAINS - SIMPLE & EFFECTIVE STRATEGY
- CLASSES ON WEEK DAYS (6PM TO 8PM) AND ON SAT, SUN
- WEEKLY AND MONTHLY TESTS, NEWSPAPER ANALYSIS, FOCUS ON ANSWER WRITING, MENTORING BY CIVIL SERVANTS
- EMINENT FACULTY FROM ALL OVER INDIA
- OPEN TO ALL, AT A BARE MINIMUM COST

Optional: HISTORY, SOCIOLOGY, PUBLIC ADMINISTRATION
RECENT WINNERS : PP Muhammad Junaid, Asish Das(IAS); Anjaney Varshney, Smilna Sudhakar, Dr.Karthikeyan Gokulachandran (IPS); Parth Gupta, R Devanathan, K Dhanya, Fariya Ejaz,Dr. Naveen(IRS), Rishupriya(IRTS), Naga Sathish(IFoS)
Register for the Orientation : Whatsapp: 8431414491
125 selections since 2011

Hyde: PRM/KA/RERA/003055 | Regent: PRM/KA/RERA/003056 visit www.rerakarnataka.gov.in

BUY THE PLAN, NOT JUST THE PRICE
1 Bed Homes start Rs.35 Lakhs* | 2 Bed Homes start Rs.53 Lakhs* | 3 Bed Homes start Rs.67 Lakhs*
PRESTIGE FINSBURY PARK BAGALUR BENGALURU NORTH
To schedule a visit, contact our sales advisor
85489 85489 | 81053 29941
www.prestigeconstructions.com *T&C Apply

ಪ್ರಜಾವಾಣಿ
ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PERSONAL

Change of Name

I, A. RASHIKA RAJESWARI, D/o Mr. N. Anguraj, doing Student, Aged about 21 years, Date of Birth: 09-05-2000 Resident of No.16, 2nd Floor, 3rd Cross, Sudhamanagar, Bangalore-560027 have changed my name to A. RASHIKA RAJESHWARI Vide Affidavit dated 11-06-2021 before L.Shankaranarayana, Notary

PRATIMA RANSINGH W/o. JC673437N, NB/SUB, SK Ranasingh, Vill/Post: Haripur, Teh: Tangi Khurda, Odisha, my name PRATIMA RANSINGH to PRATIMA RANASINGH notary KV Mani, Bangalore.

14848082H, HAV, Ajeesh Kumar R, 2ATC, mother name service record OMANA AMMA instead of OMANA AMMA S notary KV Mani, Bangalore.

MYANK B SADIA, S/o, JC-682162M, NB SUB/ASH, BUDDESH VAJSHI SADIA, VILLAGE- BALAJI NAGAR PORBANDAR, PORBANDAR, JUNAGARH, changed my name from MYANK B SADIA to MAYANK B SADIYA, 11/06/2021, Notary K.V. Mani, Bangalore

JC673437N, NB/SUB, SK Ranasingh, 2ATC, son name service record RASHMI RANJAN RANSINGH instead of RASHMI RANJAN RANASINGH notary KV Mani, Bangalore.

I, PRADEEP J, S/o GV Jayaram, aged about 34 years, Residing at No.177, 6th Cross, Kurubarahalli, Bengaluru- 560086, my son was born on 01-02-2019 my Son's name is YASHAS.P have changing of his name to BHUVAN.P Vide Affidavit dated 13-11-2019 before B.Hanumantharaya, Notary

Lost

LOST
We, the sintex industries limited(formerly known as M/s Bharat Vijay MillsLtd), have lost 2 sets of registered lease cum sale agreement dated 07.05.1986 executed by the karnataka industrial Areas Development Board in respect of Housing Tenement Nos. J-1 to J - 8 of Bommasandra Industrial Area. If anybody found it, please send it to M/s sintex industries ltd, Regd office: Kalol -382721, District Gandhinagar, Gujarat Contact No:9590969059

JOB OPPORTUNITIES

Multiple Vacancy

OPPORTUNITY FOR Retd Officials, Bankers, VRS,NRI, Teachers, Professionals, CAs. Earn Salary +Incentives. CT: 8095301555

REAL ESTATE SELLING

Flat

Vijayanagar

1500 SQFT 3 BHK flats, Chickpet Society Layout behind RNS school, 1.25 crores. 9901759955/ 9035288117.

House

R T Nagar

R.T.NAGAR- THIMMAIAH GARDEN: East 1360sft Site 'A' Katha- GF,FF,SF- Each 2BHK Building Sale 2,00,00,000/-: 9060039732 Brokers Excuse.

Industrial & Factory

Jigani

SALE 5.5 acres Industrial land with 2,75,000 sqft building. Ready to occupy in Jigani industrial area Contact 9900083763

REAL ESTATE BUYING

Sites

Vishweshwariah Layout

WANTED/ AVAILABLE SITE Vishweshwariah, BSK 6th Stage Kempegowda Layout, 20x30, 30x40, 40x60, 50x80. Genuine Sellers/ Buyer's Call: 9845488488

BUILDERS ESSENTIAL

Water Proofing Materials

LEAKAGE... LEAKAGE... Old/New- Building, Sump, Bathroom, Wallcrack, Skylight, Terrace Waterproofing done by New-Technology- 9880916988

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

EDUCATION SPECIAL
DH Classifieds | PV Classifieds
We are coming out with special offer for Admission Notice, Education Success, Congratulation Ads
For details contact: Jerry: 9731810277 Vishal: 9845114560 Tanveer: 9886213331
E-mail: dhclassifieds@deccanherald.co.in

GROCERY SHOPPING APP BMartt GET IT ON Google Play
ಬಿ ಮಾರ್ಟ್ your shoping everyday
ಲಾಕ್‌ಡೌನ್ ವಿಶೇಷ ಕೊಡುಗೆ
ಡ್ರೈಫ್ರೂಟ್ಸ್-ಮಸಾಲೆ ಪದಾರ್ಥಗಳು-ದಿನಸಿ ಪದಾರ್ಥಗಳು

California Almonds 500 gms ₹320
Cashew 500 gms ₹370
Organic Dry Grapes 500 gms ₹150
Imported Walnut 250 gms ₹290
Organic Dry Dates 500 gms ₹149
Seedless Dates 1 Kg ₹160
Imported Pista 500 gms ₹499
Fine Anjir 500 gms ₹480
Imported Pumpkin Seeds 250 gms ₹150
Weightloss Chiya Seeds 250 gms ₹99
Organic Sunflower Seeds 250 gms ₹120
Organic Watermelon Seeds 250 gms ₹70
Imported Flax Seeds 250 gms ₹50
Organic Coriander Seeds 500 gms ₹95
Original Poppy Seeds 100 gms ₹180
Guntur Chilli 250 gms ₹80
Byadagi Chilli 250 gms ₹99
Organic Jeera 250 gms ₹60
Chana Dal 1 Kg ₹91
Shivling Toor Dal 1 Kg ₹130
Organic Green Moong Dal 1Kg ₹140
Moong Dal 1 Kg ₹140
Fine Urad Dal 1 Kg. ₹136
Fine Peanuts 1 Kg ₹150
Green Cardamom 100 gms ₹240
Organic Fine Methi 500 gms ₹80
Organic Cinnamon 100 gms ₹50
Organic Clove 100 gms ₹100
Organic Fine Black Pepper 250 gms ₹150
Fine Mustard 250 gms ₹40
Fine Gatti Poha 1 Kg ₹49
Kolhapuri Jaggery 1 kg ₹60
Original Red Kalsakte 500 gms ₹90

Chamrajpet Ph: 93534 23675
J.P.Nagar Ph : 76763 98621
Sir M.Vishveswaraiah Layout Ph: 97414 23272

HOME DELIVERY 24 HOURS DOOR STEP DELIVERY
OFFER !! On Purchase of worth Rs 5000/- Get 250 gms of Walnut in Shell FREE!
Conditions apply. Offer does not include Rice, Sugar, Oil & Ghee prices.

WHATSAPP TO ORDER 93534 23675 81238 26160
ALSO BOOK ONLINE @ www.bmartt.com www.bmartt.in
ORDER @ CONTACT : 93534 23675 81238 26160

ಲಾಲ್‌ಬಾಗ್, ಕಬ್ಬನ್ ಉದ್ಯಾನ ಪ್ರವೇಶಕ್ಕೆ ಅನುವು

ಬೆಂಗಳೂರು: ಲಾಕ್‌ಡೌನ್ ಸಡಿಲಿಕೆ ಆಗಿರುವುದರಿಂದ ಸೋಮವಾರದಿಂದ (ಜೂ.14) ಲಾಲ್‌ಬಾಗ್, ಕಬ್ಬನ್ ಉದ್ಯಾನಗಳಿಗೆ ಸಾರ್ವಜನಿಕರ ಪ್ರವೇಶಕ್ಕೆ ಅವಕಾಶ ಕಲ್ಪಿಸಲಾಗಿದೆ.

'ಕೋವಿಡ್ ಕಾರಣಕ್ಕೆ ಏಪ್ರಿಲ್ ಕೊನೆಯ ವಾರದಲ್ಲಿ ಉದ್ಯಾನಗಳನ್ನು ನಿರ್ಬಂಧಿಸಲಾಗಿತ್ತು. ಈಗ ಸರ್ಕಾರದ ಸೂಚನೆ ಮೇರೆಗೆ ಬೆಳಿಗ್ಗೆ 5ರಿಂದ 10 ಗಂಟೆಯವರೆಗೆ ಮಾತ್ರ ಉದ್ಯಾನಗಳನ್ನು ತೆರೆಯಲಾಗುವುದು' ಎಂದು ತೋಟಗಾರಿಕೆ ಇಲಾಖೆ ತಿಳಿಸಿದೆ.

ಬೆಂಗಳೂರು ನಗರ ಜಿಲ್ಲಾ ಕೋವಿಡ್ ಅಂಕಿ–ಅಂಶ

11,92,886 ▲ ಒಟ್ಟು ಸೋಂಕಿತರು

91,760 ▲	10,85,862 ▲	15,263 ▲
ಸಕ್ರಿಯ ಪ್ರಕರಣ	ಗುಣಮುಖ ಆದವರು	ಒಟ್ಟು ಸಾವು

ಶುಕ್ರವಾರದ ಏರಿಕೆ

ಹೊಸ ಪ್ರಕರಣ	1,154 ▼
ಗುಣಮುಖ	4,769 ▼
ಸಾವು	48 ▲

ಆಧಾರ: ಆರೋಗ್ಯ ಇಲಾಖೆ

ಪ್ರಜಾವಾಣಿ ಗ್ರಾಫಿಕ್ಸ್

ಕೋವಿಡ್ ಅಂಕಿ–ಅಂಶ

ಆಧಾರ: ಕೋವಿಡ್19 ಇಂಡಿಯಾ, ಒಆರ್‌ಜಿ

	ವಿಶ್ವ	ಭಾರತ
ಒಟ್ಟು ಪ್ರಕರಣ	17.58 ಕೋಟಿ ▲	2.93 ಕೋಟಿ ▲
ಸಕ್ರಿಯ ಪ್ರಕರಣ	1.26 ಕೋಟಿ ▲	10.79 ಲಕ್ಷ ▼
ಗುಣಮುಖ	15.94 ಕೋಟಿ ▲	2.78 ಕೋಟಿ ▲
ಸಾವು	37.95 ಲಕ್ಷ ▲	3.67 ಲಕ್ಷ ▲

ದಿನದ ಮಾಹಿತಿ

	ವಿಶ್ವ	ಭಾರತ
ಹೊಸ ಪ್ರಕರಣ	4.35 ಲಕ್ಷ ▲	83,029 ▼
ಗುಣಮುಖ	4.89 ಲಕ್ಷ ▼	1.18 ಲಕ್ಷ ▼
ಸಾವು	11,501 ▲	3,971 ▼

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ)

14,880	89,802 ▲	11,699
ಅಮೆರಿಕ	ಬ್ರೆಜಿಲ್	ರಷ್ಯಾ

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು (ಲಕ್ಷಗಳಲ್ಲಿ)

53.83 ▼	10.62 ▲	2.70
ಅಮೆರಿಕ	ಬ್ರೆಜಿಲ್	ರಷ್ಯಾ

(*ರಾತ್ರಿ 12 ಗಂಟೆಯ ವರೆಗಿನ ಮಾಹಿತಿ)

ಎಲ್ಲಿ ಹೆಚ್ಚು ಸಾವು

1.06ಲಕ್ಷ	ಮಹಾರಾಷ್ಟ್ರ
24,772 ▲	ದೆಹಲಿ
28,906 ▲	ತಮಿಳುನಾಡು

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ)

58.87	ಮಹಾರಾಷ್ಟ್ರ
27.02 ▲	ಕೇರಳ
23.24 ▲	ತಮಿಳುನಾಡು

ಪ್ರಜಾವಾಣಿ ಗ್ರಾಫಿಕ್ಸ್

ಎಸಿಇ ಸುಹಾಸ್ ಆಸ್ಪತ್ರೆಯ ಡಾ. ಜಗದೀಶ್ ಆರೋಪ

'ಕಾರ್ಪೊರೇಟ್ ಆಸ್ಪತ್ರೆಗಳಿಗೆ ಮಾತ್ರ ಲಸಿಕೆ ಪೂರೈಕೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಾರ್ಪೊರೇಟ್ ಆಸ್ಪತ್ರೆಗಳಿಗೆ ಲಕ್ಷಾಂತರ ಡೋಸ್‌ಗಳು ಕೋವಿಡ್ ಲಸಿಕೆ ದೊರೆಯುತ್ತಿವೆ. ಆದರೆ, ಸಣ್ಣ ಆಸ್ಪತ್ರೆಗಳಿಗೆ ಒಂದು ಡೋಸ್ ಕೂಡ ಸಿಗುತ್ತಿಲ್ಲ' ಎಂದು ಎಸಿಇ ಸುಹಾಸ್ ಆಸ್ಪತ್ರೆಯ ನಿರ್ದೇಶಕ ಡಾ. ಜಗದೀಶ್ ಹಿರೇಮಠ ಆರೋಪಿಸಿದರು.

ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಕೇಂದ್ರ ಸರ್ಕಾರವು ಮೇ 1ರಿಂದ ಖಾಸಗಿ ಆಸ್ಪತ್ರೆಗಳು ಲಸಿಕೆ ತಯಾರಿಕೆ ಕಂಪನಿಗಳಿಂದ ಖರೀದಿಸಿ, ಫಲಾನುಭವಿಗಳಿಗೆ ವಿತರಿಸಲು ಅವಕಾಶ ನೀಡಿದೆ. ಆದರೆ, 50–70 ಹಾಸಿಗೆಗಳ ಸಣ್ಣ ಆಸ್ಪತ್ರೆಗಳು ಕಂಪನಿಗಳಿಗೆ ಎಷ್ಟು ಮನವಿ ಸಲ್ಲಿಸಿದರೂ ಲಸಿಕೆ ಪೂರೈಕೆಯಾಗುತ್ತಿಲ್ಲ. ಅಪೋಲೊ, ಮಣಿಪಾಲ್, ಫೋರ್ಟಿಸ್, ಆಸ್ಟರ್ ಸೇರಿದಂತೆ ವಿವಿಧ ಕಾರ್ಪೊರೇಟ್ ಆಸ್ಪತ್ರೆಗಳಿಗೆ ಮಾತ್ರ ಲಸಿಕೆ ಸಿಗುತ್ತಿದೆ. ಇದರಿಂದಾಗಿ ಮನೆಯಲ್ಲಿಯೇ ಕೆಲಸ ಮಾಡುತ್ತಿರುವ ಐಟಿ–ಬಿಟಿ ಉದ್ಯೋಗಿಗಳಿಗೆ ಲಸಿಕೆ ದೊರೆಯುತ್ತಿದೆ. ಕಾರ್ಮಿಕರು, ದಿನಗೂಲಿ ನೌಕರರು ಸೇರಿದಂತೆ ಹೊರಗಡೆ ವಿವಿಧ ಕೆಲಸ ಕಾರ್ಯಗಳಲ್ಲಿ ನಿರತರಾದವರಿಗೆ ಲಸಿಕೆ ಸಿಗುತ್ತಿಲ್ಲ' ಎಂದು ಬೇಸರ ವ್ಯಕ್ತಪಡಿಸಿದರು.

'ಕಾರ್ಪೊರೇಟ್ ಆಸ್ಪತ್ರೆಗಳ ಲಾಬಿಗೆ ಲಸಿಕೆ ಒದಗಿಸುವ ಕಂಪನಿಗಳು ಒಳಗಾಗಿವೆ. ನಾವು 15 ಸಾವಿರ ಡೋಸ್ 'ಕೋವಿಶೀಲ್ಡ್' ಹಾಗೂ 3 ಸಾವಿರ ಡೋಸ್ 'ಕೋವ್ಯಾಕ್ಸಿನ್' ಲಸಿಕೆ ಪೂರೈಸುವಂತೆ ಕಂಪನಿಗಳಿಗೆ ವಿನಂತಿಸಿಕೊಂಡಿದ್ದೆವು. ಈ ಬಗ್ಗೆ ಹಲವು ಬಾರಿ ಮನವಿ ಸಲ್ಲಿಸಿದರೂ ಲಸಿಕೆ ಪೂರೈಕೆಯಾಗಿಲ್ಲ' ಎಂದು ತಿಳಿಸಿದರು.

6 ಆಸ್ಪತ್ರೆಗಳ ವಿರುದ್ಧ ಕ್ರಮಕ್ಕೆ ಶಿಫಾರಸು

ಬೆಂಗಳೂರು: ಕೋವಿಡ್ ಸಮಯದಲ್ಲಿ ವಿವಿಧ ಪರೀಕ್ಷೆಗೆ ಸರ್ಕಾರ ನಿಗದಿಪಡಿಸಿರುವುದಕ್ಕಿಂತಲೂ ಹೆಚ್ಚು ದರ ವಸೂಲಿ ಮಾಡುತ್ತಿದ್ದ ಯಲಹಂಕ ವಲಯದ ಆರು ಆಸ್ಪತ್ರೆಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲು ಅಧಿಕಾರಿಗಳು ಶಿಫಾರಸು ಮಾಡಿದ್ದಾರೆ.

ರಾಜ್ಯ ಕ್ಷ–ಕಿರಣ ವಿಕಿರಣ ಸುರಕ್ಷತಾ ನಿರ್ದೇಶನಾಲಯ ಹಾಗೂ ಬೆಂಗಳೂರು ನಗರ ಜಿಲ್ಲೆಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧಿಕಾರಿಗಳು ಶುಕ್ರವಾರ ವಿವಿಧ ಆಸ್ಪತ್ರೆಗಳಿಗೆ ಭೇಟಿ ನೀಡಿ ಪರಿಶೀಲಿಸಿದಾಗ ರೋಗಿಗಳಿಂದ ಸುಲಿಗೆ ಮಾಡುತ್ತಿರುವುದು ಬೆಳಕಿಗೆ ಬಂದಿದೆ.

ಯಲಹಂಕದ ಅಶ್ವಿನಿ ಆಸ್ಪತ್ರೆಯು ಎ.ಇ.ಆರ್.ಬಿ.ನಿಯಮಗಳನ್ನು ಉಲ್ಲಂಘಿಸಿದೆ. ಇಲ್ಲಿ ಸಿ.ಟಿ. ಸ್ಕ್ಯಾನ್‌ಗೆ ₹400 ಪಡೆಯಲಾಗುತ್ತಿತ್ತು. ಅಪೂರ್ವ ಆಸ್ಪತ್ರೆಯವರು ಸಿ.ಟಿ.ಸ್ಕ್ಯಾನ್ ಯಂತ್ರ ಅಳವಡಿಸಲು ಪರವಾನಗಿ ಪಡೆದಿರಲಿಲ್ಲ. ಬಿಪಿಎಲ್ ಕಾರ್ಡ್ ಹೊಂದಿದ್ದವರಿಂದಲೂ ₹5 ಸಾವಿರ ಶುಲ್ಕ ವಸೂಲಿ ಮಾಡುತ್ತಿದ್ದರು. ಸೈಟ್ ಕೇರ್ ಆಸ್ಪತ್ರೆಯವರು ಎಲ್ಲ ರೋಗಿಗಳಿಂದಲೂ ₹2,500 ಶುಲ್ಕ ಪಡೆಯುತ್ತಿದ್ದರು. ನಾರ್ತ್‌ಸಿಟಿ ಮೆಡಿಕೇರ್ ಸೆಂಟರ್, ನವಚೇತನ ಹಾಗೂ ಕೆ.ಕೆ.ಆಸ್ಪತ್ರೆಯವರೂ ನಿಯಮಗಳನ್ನು ಉಲ್ಲಂಘಿಸಿದ್ದರು.

'ಹೆಚ್ಚಿನ ದರ ಪಡೆಯುತ್ತಿರುವ ಆಸ್ಪತ್ರೆಗಳ ಮೇಲೆ ಕೆಪಿಎಂಇ ಕಾಯ್ದೆ 2007 ಮತ್ತು ತಿದ್ದುಪಡಿ ಕಾಯ್ದೆ 2017ರ ಅನ್ವಯ ಹಾಗೂ ರಾಷ್ಟ್ರೀಯ ವಿಪತ್ತು ನಿಯಂತ್ರಣ ಕಾಯ್ದೆ 2005ರ ಅಡಿಯಲ್ಲಿ ಶಿಸ್ತು ಕ್ರಮ ಕೈಗೊಳ್ಳಲು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಆಯುಕ್ತರು ಮತ್ತು ಜಿಲ್ಲಾಧಿಕಾರಿಗಳಿಗೆ ಶಿಫಾರಸು ಮಾಡಲಾಗುವುದು' ಎಂದು ಜಿಲ್ಲಾ ಆರೋಗ್ಯ ಅಧಿಕಾರಿ ಡಾ. ಗುಳೂರು ಶ್ರೀನಿವಾಸ ತಿಳಿಸಿದರು.

ಕೆನರಾ ಬ್ಯಾಂಕ್ केनरा बैंक Canara Bank
ಭಾರತ ಸರ್ಕಾರದ ಒಂದು ಉದ್ಯಮ भारत सरकार का उपक्रम A Government of India Undertaking
सिंडिकेट Syndicate Together We Can

ಆಸ್ತಿ ಮತ್ತು ಭವನ ವಿಭಾಗ, ವೃತ್ತ ಕಚೇರಿ, ನಂ. 86, ಎಂ.ಜಿ. ರಸ್ತೆ, ಬೆಂಗಳೂರು-560001. ದೂ: 25310038

ಗುತ್ತಿಗೆಗಾಗಿ ಸ್ಥಳದ ಅವಶ್ಯಕತೆ

ಕೆಳಕಂಡ ಪ್ರದೇಶ/ಸ್ಥಳಗಳಲ್ಲಿ ಶಾಖೆಗಳಿಗೆ ನಮೂದಿಸಿರುವ ವಿದ್ಯುತ್ ಪ್ರಮಾಣ ಮತ್ತು ವಾಹನ ನಿಲುಗಡೆಗೆ ಸಾಕಾಗುವಷ್ಟು ಸ್ಥಳಾವಕಾಶವಿರುವ ವಾಣಿಜ್ಯ ಸ್ಥಳಕ್ಕಾಗಿ ಸ್ವತ್ತಿನ ಮಾಲೀಕರಿಂದ ಅರ್ಜಿಯನ್ನು ಆಹ್ವಾನಿಸಲಾಗಿದೆ.

ಕ್ರ. ಸಂ.	ಸ್ಥಳ, ಜಿಲ್ಲಾ	ವಿದ್ಯುತ್ ಅವಶ್ಯಕತೆ	ಕಾರ್ಪೆಟ್ ಜಾಗ ಚ. ಅಡಿಗಳಲ್ಲಿ (ಅಂದಾಜು)
1.	ಅಕ್ಕೂರು, ರಾಮನಗರ	15 KW	1500 ಚ.ಅಡಿ
2.	ಕೊತ್ತನೂರು, ಚಿಕ್ಕಬಳ್ಳಾಪುರ	15 KW	1500 ಚ.ಅಡಿ
3.	ಸೊನಗಾನಹಳ್ಳಿ ಶಾಖೆ, ಚಿಕ್ಕಬಳ್ಳಾಪುರ	15 KW	1500 ಚ.ಅಡಿ
4.	ಮಾಯಸಂದ್ರ, ಬೆಂಗಳೂರು	15 KW	1500 ಚ.ಅಡಿ
5.	ಕನ್ನಮಂಗಲ, ಬೆಂಗಳೂರು ಗ್ರಾಮಾಂತರ	15 KW	1500 ಚ.ಅಡಿ
6.	ಕಿಬ್ಬನಹಳ್ಳಿ ಕ್ರಾಸ್, ತುಮಕೂರು	15 KW	1500 ಚ.ಅಡಿ
7.	ಸೋಮನಹಳ್ಳಿ, ಮಂಡ್ಯ	15 KW	1500 ಚ.ಅಡಿ
8.	ಶೇಷಗಿರಿಹಳ್ಳಿ, ರಾಮನಗರ	15 KW	1500 ಚ.ಅಡಿ
9.	ವೈ ಎನ್ ಹೊಸಕೋಟೆ, ತುಮಕೂರು	15 KW	1900 ಚ.ಅಡಿ
10.	ಗುಬ್ಬಿ, ತುಮಕೂರು	15 KW	1900 ಚ.ಅಡಿ
11.	ಅರಸಿನಕುಂಟೆ, ಬೆಂಗಳೂರು ಗ್ರಾಮಾಂತರ	15 KW	1900 ಚ.ಅಡಿ
12.	ಶ್ರೀನಿವಾಸಪುರ, ಕೋಲಾರ	15 KW	1900 ಚ.ಅಡಿ

ವಿವರಗಳನ್ನು ಬ್ಯಾಂಕಿನ ವೆಬ್‌ಸೈಟ್: http://www.canarabank.com ನಲ್ಲಿ ಪ್ರಕಟಿಸಲಾಗಿದೆ. ಅಗತ್ಯವಿರುವ ಅರ್ಜಿ ನಮೂನೆಗಳನ್ನು ಮೇಲ್ಕಂಡ ಕಛೇರಿ ಅಥವಾ ಸಂಬಂಧಪಟ್ಟ ಶಾಖೆಗಳಿಂದ ಪಡೆಯಬಹುದು, ಇಲ್ಲವೆ ಬ್ಯಾಂಕಿನ ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಅರ್ಜಿಗಳನ್ನು ಈ ಮೇಲ್ಕಂಡ ಕಛೇರಿಯಲ್ಲಿ ಸಲ್ಲಿಸಲು ಕೊನೆಯ ದಿನಾಂಕ 29.06.2021 ಮಧ್ಯಾಹ್ನ 3.00 ಗಂಟೆಯೊಳಗೆ. ಇತರೆ ತಿದ್ದುಪಡಿಗಳಿದ್ದಲ್ಲಿ / ಮಾರ್ಪಾಡುಗಳಿದ್ದಲ್ಲಿ, ಬ್ಯಾಂಕಿನ ವೆಬ್‌ಸೈಟಿನಲ್ಲಿ ಮಾತ್ರ ಪ್ರಕಟಿಸಲಾಗುವುದು. "ಮಧ್ಯವರ್ತಿಗಳಿಗೆ ಅವಕಾಶವಿಲ್ಲ"

ಸ್ಥಳ: ಬೆಂಗಳೂರು
ತಾರೀಖು: 12/06/2020

ಸಹಿ/-
ಸಹಾಯಕ ಮಹಾ ಪ್ರಬಂಧಕರು
ಬೆಂಗಳೂರು ವೃತ್ತ

ಕಾರ್ಮಿಕ ಇಲಾಖೆ

ಅಂತರಾಷ್ಟ್ರೀಯ ಕಾರ್ಮಿಕ ಸಂಸ್ಥೆ

ಕರ್ನಾಟಕ ಸ್ಟೇಟ್ ಚೈಲ್ಡ್ ಲೇಬರ್ ಇರಾಡಿಕೇಷನ್ ಪ್ರಾಜೆಕ್ಟ್ ಸೊಸೈಟಿ

ಶ್ರೀ ಬಿ. ಎಸ್. ಯಡಿಯೂರಪ್ಪ
ಸನ್ಮಾನ್ಯ ಮುಖ್ಯಮಂತ್ರಿಗಳು

ಮಕ್ಕಳನ್ನು ಶಾಲೆಗೆ ಕಳುಹಿಸಿ, ಕೆಲಸಕ್ಕಲ್ಲ!

ಬಾಲ ಕಾರ್ಮಿಕ ಪದ್ಧತಿಯನ್ನು ವಿರೋಧಿಸಿ ಕೊನೆಗಾಣಿಸೋಣ

12ನೇ ಜೂನ್ 2021 – ವಿಶ್ವ ಬಾಲ ಕಾರ್ಮಿಕ ಪದ್ಧತಿ ವಿರೋಧಿ ದಿನ

ಅಪ್ರಾಪ್ತ ವಯಸ್ಸಿನವರನ್ನು ದುಡಿಮೆಗೆ ಹಚ್ಚುವುದು ಕಾನೂನು ಬಾಹಿರ, ಅನೈತಿಕ, ಅಮಾನವೀಯ ಮಾತ್ರವಲ್ಲ ಶಿಕ್ಷಾರ್ಹ ಅಪರಾಧ ಕೂಡಾ.

ಮುಗ್ಧ ಬಾಲಕ ಬಾಲಕಿಯರನ್ನು ಸೂಕ್ತ ಶಿಕ್ಷಣದಿಂದ ವಂಚಿಸಿ ಅಗ್ಗದ ವೇತನಕ್ಕೆ ದುಡಿಸಿಕೊಳ್ಳುವುದರಿಂದ ಅವರ ಭವಿಷ್ಯವನ್ನು ಕಸಿದುಕೊಂಡಂತಾಗುವುದು ಹಾಗೂ ಅವರ ಆರೋಗ್ಯ ಮತ್ತು ನೈತಿಕ ಬೆಳವಣಿಗೆಯ ಮೇಲೆ ದುಷ್ಪರಿಣಾಮ ಬೀರುವುದು.

ಬನ್ನಿ, ವಿಶ್ವ ಬಾಲ ಕಾರ್ಮಿಕ ಪದ್ಧತಿ ವಿರೋಧಿ ದಿನವಾದ ಇಂದು ಈ ಅಮಾನವೀಯ ಪದ್ಧತಿ ವಿರುದ್ಧ ಧ್ವನಿ ಎತ್ತೋಣ. ಈ ಅನಿಷ್ಟ ಪದ್ಧತಿಯನ್ನು ತೊಡೆದು ಹಾಕಲು ನಾವೆಲ್ಲರೂ ಪಣ ತೊಡೋಣ.

ಬಾಲ ಕಾರ್ಮಿಕ ಪದ್ಧತಿ ನಿರ್ಮೂಲನೆಗೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳು:

- ಎಲ್ಲಾ ಜಿಲ್ಲೆಗಳಲ್ಲಿ ನಿಯಮಿತವಾಗಿ ಸಂಘಟಿತ ತಪಾಸಣೆ ಕೈಗೊಳಲಾಗುತ್ತಿದೆ ಹಾಗೂ ತಪ್ಪಿತಸ್ಥ ಮಾಲೀಕರ ವಿರುದ್ಧ ಕಾನೂನು ಕ್ರಮ.
- ಸಾರ್ವಜನಿಕರಿಂದ ದೂರು ಸ್ವೀಕರಿಸಲು ಪೆನ್ಸಿಲ್ ಪೋರ್ಟಲ್ ಸ್ಥಾಪನೆ.
- ವ್ಯಾಪಕ ಕಾನೂನು ಅರಿವು–ನೆರವು ಕಾರ್ಯಕ್ರಮಗಳ ಆಯೋಜನೆ.
- ಬಾಲ ಕಾರ್ಮಿಕ ಮುಕ್ತ ಜಿಲ್ಲೆಗಳನ್ನು ಘೋಷಿಸಲು ಸ್ಟ್ಯಾಂಡರ್ಡ್ ಆಪರೇಟಿಂಗ್ ಕಾರ್ಯವಿಧಾನಗಳ ಜ್ಞಾಪಕ ಪತ್ರ (ಎಮ್‌ಎಸ್‌ಒಪಿ) ಸಿದ್ಧಪಡಿಸಲಾಗಿದೆ.

ಮಾನ್ಯ ಕಾರ್ಮಿಕ ಸಚಿವರಾದ **ಶ್ರೀ ಅರಬೈಲ್ ಶಿವರಾಮ ಹೆಬ್ಬಾರ್** ರವರು ಕೋವಿಡ್–19 ಸಂಕಷ್ಟದ ಸಮಯದಲ್ಲಿ ಮಕ್ಕಳಿಗೆ ಮಾಸ್ಕ್, ಸ್ಯಾನಿಟೈಸರ್ ಮತ್ತು ಇತರ ಅವಶ್ಯಕ ವಸ್ತುಗಳನ್ನು ವಿತರಿಸುತ್ತಿರುವುದು.

ಅಂತರ್ಜಾಲ ವ್ಯವಸ್ಥೆ : • https://pencil.gov.in • https://ncpcr.gov.in/user_complaints.php • kscleps@gmail.com

ಸಾರ್ವಜನಿಕ ದೂರು ವ್ಯವಸ್ಥೆ ಸಹಾಯವಾಣಿಗಳು

• ಮಕ್ಕಳ ಸಹಾಯವಾಣಿ: 1098 • ಬಾಲಕಾರ್ಮಿಕ ದೂರವಾಣಿ: 080-29752833 • ಪೊಲೀಸ್ ಸಹಾಯವಾಣಿ : 100

"ಕೋವಿಡ್–19ರ ಮಾರ್ಗಸೂಚಿಗಳನ್ನು ಪಾಲಿಸೋಣ, ಕೊರೋನಾ ವಿರುದ್ಧ ಜಯಗಳಿಸೋಣ"

ಮಾಸ್ಕ್ ಧರಿಸಿ | ಸೋಪಿನಿಂದ ಕೈಗಳನ್ನು ಸ್ವಚ್ಛಗೊಳಿಸಿ | ದೈಹಿಕ ಅಂತರ ಪಾಲಿಸಿ

ಡಾ. ಜಿ. ಕಲ್ಪನ, ಭಾ.ಆ.ಸೇ.,
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು
ಕಾರ್ಮಿಕ ಇಲಾಖೆ

ಅಕ್ರಂ ಪಾಷ, ಭಾ.ಆ.ಸೇ.,
ಆಯುಕ್ತರು
ಕಾರ್ಮಿಕ ಇಲಾಖೆ

EXCLUSIVE HOME SHOPPING FESTIVAL

THE FURNITURE STORE

Affordable Luxury For Everyone

* PLACE YOUR ORDER VIA PHONE CALL / WHATSAPP
+91 81971 31010
+91 81970 31010
+91 98450 15083
+91 99584 64110

ROYAL LUXURY
ASK FOR SPL PRICE

0% NO COST EMI
HDFC BANK We understand your world
BAJAJ FINSERV EMI FINANCE

KNOCKDOWN OFFERS THIS LOCKDOWN

VISIT OUR STORES

HBR Layout
(Corporate Office & Showroom)
#505, 1st Stage, 4th Block, HBR Layout,
Bengaluru - 560043.
Ph : +91 8197031010

KR Puram
#1st Floor, T.C. Palya Signal,
Old Madras Road, Thambu Chetty Palya,
Bengaluru - 560049.
Ph : +91 8073835074

Banaswadi
TMG Heights, No.7, Ground Floor,
Outer Ring Road - Service lane, Near Hormavu,
Bengaluru - 560043.
M : +91 8197131010

FREE DELIVERY | lovefurniturestore.in | FREE INSTALLATION

otp xpress
Onion, Tomato, Potato - It's simple.

ತರಕಾರಿಗಳು, ಹಣ್ಣುಗಳು ಮತ್ತು ದಿನಸಿ ಸಾಮಗ್ರಿಗಳನ್ನು ಖರೀದಿಸಿ

RS 149/-

ಮೌಲ್ಯದಲ್ಲಿ ಹಾಗೂ ಪಡೆಯಿರಿ

*T&C Apply. Shop in Multiples of INR 100. Get 50% Cashback Coupon.

50% ಕ್ಯಾಶ್ ಬ್ಯಾಕ್ + ಉಚಿತ ಹೋಮ್ ಡೆಲಿವರಿ

ಬೆಂಗಳೂರಿಗರಿಗೆ ಹಿಂದೆಂದೂ ಇಲ್ಲದ ಅನುಕೂಲ

ತರಕಾರಿಗಳು ಮತ್ತು ದಿನಸಿಗಳು @ ನಿಮ್ಮ ಬೆರಳಂಚಿನಲ್ಲೇ!

ಕೇವಲ OTP ಮಾಡಿ! ನಮಗೆ ಕರೆ ಮಾಡಿ 080-4697 1001
www.otpxpress.in

OTP ಎಕ್ಸ್‌ಪ್ರೆಸ್ ಆಪ್ ಡೌನ್‌ಲೋಡ್ ಮಾಡಿ
GET IT ON Google Play | Download on the App Store

Offer Exclusively on OTPXpress App

ರಾಜಧಾನಿಯತ್ತ ಜನ: ವಿಪರೀತ ದಟ್ಟಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲಾಕ್‌ಡೌನ್ ಸಡಿಲಿಕೆ ಬಗ್ಗೆ ರಾಜ್ಯ ಸರ್ಕಾರ ಆದೇಶ ಹೊರಡಿಸುತ್ತಿದ್ದಂತೆ ಸಾವಿರಾರು ಮಂದಿ ರಾಜಧಾನಿ ಬೆಂಗಳೂರಿನತ್ತ ವಾಪಸು ಬರುತ್ತಿದ್ದಾರೆ.

ಅಗತ್ಯ ಸೇವೆಗಳಿಗೆ ಅವಕಾಶ ನೀಡಿರುವ ಸಮಯದಲ್ಲೇ ಸಾವಿರಾರು ವಾಹನಗಳು ನಗರ ಪ್ರವೇಶಿಸುತ್ತಿವೆ. ತುಮಕೂರು ರಸ್ತೆ, ಮೈಸೂರು ರಸ್ತೆ, ಕನಕಪುರ ರಸ್ತೆ, ಹೊಸೂರು ರಸ್ತೆ ಹಾಗೂ ಮಾಗಡಿ ರಸ್ತೆ ಮೂಲಕ ಜನರು ನಗರದೊಳಗೆ ಸೇರುತ್ತಿದ್ದಾರೆ.

ದ್ವಿಚಕ್ರ ವಾಹನ, ಆಟೊ, ಗೂಡ್ಸ್ ವಾಹನ ಹಾಗೂ ಕಾರುಗಳ ಮೂಲಕ ವಸ್ತುಗಳ ಸಮೇತ ಜನ ನಗರಕ್ಕೆ ಬರುತ್ತಿರುವ ದೃಶ್ಯಗಳು ಶುಕ್ರವಾರ ಸಾಮಾನ್ಯವಾಗಿದ್ದವು. ಅಗತ್ಯ ವಸ್ತುಗಳ ಖರೀದಿಗೆ ವಾಹನದಲ್ಲಿ ಹೋಗಲು ಅವಕಾಶವಿದೆ. ಅದೇ ನೆಪದಲ್ಲಿ ಜನರು ನಗರದಲ್ಲಿ ಪ್ರಯಾಣಿಸುತ್ತಿದ್ದಾರೆ.

ನಗರದ ಹೊರವಲಯದಲ್ಲಿರುವ ಟೋಲ್‌ಗೇಟ್‌ಗಳಲ್ಲಿ ವಾಹನಗಳು ಸಾಲುಗಟ್ಟಿ ನಿಂತಿದ್ದವು. 'ಕೆಲದಿನ ವಾಹನಗಳ ಸಂಖ್ಯೆ ಕಡಿಮೆ ಇತ್ತು. ಗುರುವಾರದಿಂದ ವಾಹನಗಳ ಸಂಖ್ಯೆಯಲ್ಲಿ ಏರಿಕೆ ಕಂಡುಬಂದಿದೆ' ಎಂದು ಟೋಲ್‌ಗೇಟ್ ಸಿಬ್ಬಂದಿ ಹೇಳಿದರು.

ಕೊರೊನಾ ಸೋಂಕು ಹೆಚ್ಚಾಗಿ ಲಾಕ್‌ಡೌನ್ ಜಾರಿಯಾದ ವೇಳೆಯಲ್ಲಿ ಲಕ್ಷಾಂತರ ಮಂದಿ ಬೆಂಗಳೂರು ತೊರೆದಿದ್ದರು. ಇದೀಗ ಪ್ರಕರಣಗಳ ಸಂಖ್ಯೆ ಕಡಿಮೆ ಆಗಿದ್ದು, ನಗರಕ್ಕೆ ವಾಪಸು ಬರುವವರ ಸಂಖ್ಯೆಯಲ್ಲಿ ಹೆಚ್ಚಳವಾಗಿದೆ.

ಕೆ.ಆರ್. ವೃತ್ತದಲ್ಲಿ ಶುಕ್ರವಾರ ಸಂಚಾರ ದಟ್ಟಣೆ ಕಂಡುಬಂತು – ಪ್ರಜಾವಾಣಿ ಚಿತ್ರ

ದಟ್ಟಣೆ ಕಂಡು ಪೊಲೀಸರೂ ಮೌನ

ನಗರದ ಮೆಜೆಸ್ಟಿಕ್, ಪೀಣ್ಯ, ಟಿ-ದಾಸರಹಳ್ಳಿ, ಯಶವಂತಪುರ, ಚಾಮರಾಜಪೇಟೆ, ಶಿವಾಜಿನಗರ, ಕೋರಮಂಗಲ, ಮೆಜೆಸ್ಟಿಕ್, ಗಾಂಧಿನಗರ ಹಾಗೂ ಸುತ್ತಮುತ್ತ ಸ್ಥಳಗಳಲ್ಲಿ ಶುಕ್ರವಾರ ವಾಹನಗಳ ಓಡಾಟ ಹೆಚ್ಚಿತ್ತು.

ನಗರದ ಮೇಲ್ಸೇತುವೆಗಳನ್ನು ಬಂದ್ ಮಾಡಲಾಗಿದೆ. ಅದರ ಕೆಳಗಿನ ಹಾಗೂ ಅಕ್ಕ-ಪಕ್ಕದ ರಸ್ತೆಯಲ್ಲಿ ವಾಹನಗಳು ಸಂಚರಿಸುತ್ತಿವೆ. ರಸ್ತೆಗಳು ಚಿಕ್ಕದಾಗಿದ್ದರಿಂದ ಅಲ್ಲಲ್ಲಿ ದಟ್ಟಣೆ ಉಂಟಾಯಿತು.

ಪೊಲೀಸರು ಚೆಕ್‌ಪೋಸ್ಟ್ ನಿರ್ಮಿಸಿ ವಾಹನಗಳ ತಪಾಸಣೆ ನಡೆಸುತ್ತಿದ್ದಾರೆ. ಆದರೆ, ವಾಹನಗಳು ಹೆಚ್ಚಾದ ಸಂದರ್ಭದಲ್ಲಿ ತಪಾಸಣೆಯಿಂದ ಹಿಂದೆ ಸರಿಯುತ್ತಿದ್ದಾರೆ.

ಅಗತ್ಯ ವಸ್ತುಗಳ ಖರೀದಿ ಹಾಗೂ ಕೋವಿಡ್ ಲಸಿಕೆ ಹಾಕಿಸಿಕೊಳ್ಳಲು ವಾಹನ ಬಳಕೆಗೆ ಅವಕಾಶವಿದೆ. ಇದನ್ನೇ ನೆಪ ಮಾಡಿಕೊಂಡ ಹಲವರು ಅನಗತ್ಯವಾಗಿ ಸಂಚರಿಸುತ್ತಿದ್ದಾರೆ.

ಸುದ್ದಿ 2 ನಿಮಿಷ

ಮರಗಳ ಗಣತಿ ಚುರುಕುಗೊಳಿಸಲು ಹೈಕೋರ್ಟ್ ಸೂಚನೆ

ಬೆಂಗಳೂರು: ನಗರದಲ್ಲಿ ಮರಗಳ ಗಣತಿಯನ್ನು ಚುರುಕುಗೊಳಿಸುವಂತೆ ಬಿಬಿಎಂಪಿ ಮತ್ತು ನಗರ ಜಿಲ್ಲಾಧಿಕಾರಿಗೆ ಹೈಕೋರ್ಟ್ ನಿರ್ದೇಶನ ನೀಡಿದೆ.

ಕೋವಿಡ್ ಪ್ರಕರಣಗಳು ಕ್ಷೀಣಿಸುತ್ತಿರುವ ಕಾರಣ ಮರಗಳ ಗಣತಿ ಪೂರ್ಣಗೊಳಿಸಲು ಶ್ರಮ ವಹಿಸಬೇಕು ಎಂದು ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ ತಿಳಿಸಿತು.

ನಗರದಲ್ಲಿ 71 ಸಾವಿರ ಮರಗಳು, ಬಿಬಿಎಂಪಿ ವ್ಯಾಪ್ತಿಯಲ್ಲಿ 18 ಸಾವಿರ ಮರಗಳ ಲೆಕ್ಕ ಹಾಕಲಾಗಿದೆ ಎಂದು ಸರ್ಕಾರ ವಿವರಿಸಿತು.

ಬೆಂಗಳೂರು ಎನ್ವಿರಾನ್‌ಮೆಂಟ್ ಟ್ರಸ್ಟ್ ಮತ್ತು ದತ್ತಾತ್ರೇಯ ಟಿ. ದೇವರೆ ಎಂಬುವರು ಅರ್ಜಿ ಸಲ್ಲಿಸಿ, 'ಮರಗಳ ಸಂರಕ್ಷಣೆ ಮಾಡಬೇಕಿರುವ ಪ್ರಾಧಿಕಾರಗಳು ಸಮರ್ಪಕವಾಗಿ ಕರ್ತವ್ಯ ನಿರ್ವಹಿಸುತ್ತಿಲ್ಲ. ಮರಗಳ ಸಂರಕ್ಷಣಾ ಸಮಿತಿ ಅಥವಾ ಕಾರ್ಯಪಡೆ ರಚಿಸಬೇಕು' ಎಂದು ಕೋರಿದ್ದರು.

ಕರ್ನಾಟಕ ಮರಗಳ ಸಂರಕ್ಷಣಾ ಕಾಯ್ದೆ 1976ರಲ್ಲೇ ಜಾರಿಗೆ ಬಂದರೂ ನಾಲ್ಕು ದಶಕಗಳಲ್ಲಿ ಮರಗಳ ಜನಗಣತಿ ನಡೆದಿಲ್ಲ ಎಂದು ಪೀಠ ಹೇಳಿತು.

ಕಿಡ್ನಿ ಖರೀದಿ, ಮಾರಾಟ ಆಮಿಷ; ವಿದೇಶಿ ಪ್ರಜೆ ಬಂಧನ

ಬೆಂಗಳೂರು: ಕಿಡ್ನಿ ಖರೀದಿ ಹಾಗೂ ಮಾರಾಟದ ಬಗ್ಗೆ ಜಾಹೀರಾತು ನೀಡಿ ನೋಂದಣಿ ಹೆಸರಿನಲ್ಲಿ ಹಣ ಪಡೆದು ಜನರನ್ನು ವಂಚಿಸುತ್ತಿದ್ದ ಆರೋಪದಡಿ ವಿದೇಶಿ ಪ್ರಜೆ ಡ್ನೂಡಿಂ ಒಬಿನಾ ಕಿಂಗ್ಲೈ (30) ಎಂಬಾತನನ್ನು ಬಾಗಲೂರು ಪೊಲೀಸರು ಬಂಧಿಸಿದ್ದಾರೆ.

'ವ್ಯಾಪಾರ ವೀಸಾದಡಿ ನಗರಕ್ಕೆ ಬಂದಿದ್ದ ಆರೋಪಿ, ಬಾಗಲೂರು ಠಾಣೆ ವ್ಯಾಪ್ತಿಯಲ್ಲಿ ನೆಲೆಸಿದ್ದ. ವೀಸಾ ಅವಧಿ ಮುಗಿದರೂ ವಾಪಸು ಹೋಗದೇ ಅಕ್ರಮವಾಗಿ ನಗರದಲ್ಲಿ ಉಳಿದುಕೊಂಡಿದ್ದ. ಆತನಿಂದ ಮೊಬೈಲ್, ಲ್ಯಾಪ್‌ಟಾಪ್, ಹಾರ್ಡ್‌ಡಿಸ್ಕ್ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಸಾಮಾಜಿಕ ಜಾಲತಾಣಗಳಲ್ಲಿ ಆರೋಪಿ ಜಾಹೀರಾತು ನೀಡುತ್ತಿದ್ದ. ಇ-ಮೇಲ್ ಮೂಲಕವೂ ಸಂದೇಶ ಕಳುಹಿಸುತ್ತಿದ್ದ. ಕಿಡ್ನಿ ಮಾರುವ ಹಾಗೂ ಕಿಡ್ನಿ ಖರೀದಿಸುವ ವ್ಯಕ್ತಿಗಳು ಆರೋಪಿಯನ್ನು ಸಂಪರ್ಕಿಸುತ್ತಿದ್ದರು. ತಮ್ಮದೊಂದು ಕಂಪನಿಯೆಂದು ಹೇಳುತ್ತಿದ್ದ ಆರೋಪಿ, ನೋಂದಣಿ ಹೆಸರಿನಲ್ಲಿ ಸಾವಿರದಿಂದ ಲಕ್ಷದವರೆಗೂ ಹಣ ವಸೂಲಿ ಮಾಡುತ್ತಿದ್ದ. ಅದಾದ ನಂತರ ನಾಪತ್ತೆಯಾಗುತ್ತಿದ್ದ' ಎಂದೂ ತಿಳಿಸಿದರು.

'ಆರೋಪಿ ಕೃತ್ಯದ ಬಗ್ಗೆ ಮಾಹಿತಿ ಬರುತ್ತಿದ್ದಂತೆ ಕಾರ್ಯಾಚರಣೆ ನಡೆಸಿ ಬಂಧಿಸಲಾಗಿದೆ. ಇದುವರೆಗೂ ಆತ ಹಲವರನ್ನು ವಂಚಿಸಿರುವ ಮಾಹಿತಿ ಇದೆ' ಎಂದೂ ಹೇಳಿದರು.

ಅಮೆಜಾನ್, ಫ್ಲಿಪ್‌ಕಾರ್ಟ್ ವಿರುದ್ಧ ತನಿಖೆಯಲ್ಲಿ ಹಸ್ತಕ್ಷೇಪ ಇಲ್ಲ

ಬೆಂಗಳೂರು: ಅಮೆಜಾನ್ ಮತ್ತು ಫ್ಲಿಪ್‌ಕಾರ್ಟ್ ವಿರುದ್ಧ ಭಾರತೀಯ ಸ್ಪರ್ಧಾ ಆಯೋಗ(ಸಿಸಿಐ) ಆದೇಶಿಸಿರುವ ತನಿಖೆಯಲ್ಲಿ ಹಸ್ತಕ್ಷೇಪ ಮಾಡಲು ಸಾಧ್ಯವಿಲ್ಲ ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿದೆ. ಸ್ಪರ್ಧಾತ್ಮಕ ವಿರೋಧಿ ಒಪ್ಪಂದಗಳನ್ನು ಮಾಡಿಕೊಳ್ಳುವ ಮೂಲಕ ಸ್ಪರ್ಧಾತ್ಮಕ ಕಾಯ್ದೆ –2020 ಅನ್ನು ಉಲ್ಲಂಘಿಸಲಾಗಿದೆ ಎಂಬ ಆರೋಪದಲ್ಲಿ ಸಿಸಿಐ ತನಿಖೆಗೆ ಆದೇಶಿಸಿದೆ.

ತನಿಖೆಗೆ ಆದೇಶಿಸಿರುವುದು ತರ್ಕಬದ್ಧವಾಗಿದೆ. ತನಿಖೆಗೆ ತಡೆ ನೀಡುವುದು ಪೂರ್ವಗ್ರಹ ಆಗಲಿದೆ ಎಂದು ನ್ಯಾಯಮೂರ್ತಿ ಪಿ.ಎಸ್.ದಿನೇಶ್‌ಕುಮಾರ್ ಅವರಿದ್ದ ಪೀಠ ಅಭಿಪ್ರಾಯಪಟ್ಟಿತು. ದೆಹಲಿಯ ಸಣ್ಣ, ಅತಿಸಣ್ಣ ಮತ್ತು ಮಧ್ಯಮ ಗಾತ್ರದ ಉದ್ಯಮಗಳ ಸಂಘಟನೆಯಾದ ದೆಹಲಿ ವ್ಯಾಪಾರ ಮಹಾಸಂಘದ ಮಾಹಿತಿ ಆಧರಿಸಿ ಈ ತನಿಖೆಗೆ ಸಿಸಿಐ ಆದೇಶಿಸಿತ್ತು. ಈ ಆದೇಶ ಪ್ರಶ್ನಿಸಿ ಅಮೆಜಾನ್, ಫ್ಲಿಪ್‌ಕಾರ್ಟ್ ಸಂಸ್ಥೆ 2020 ಜ. 13ರಂದು ಅರ್ಜಿ ಸಲ್ಲಿಸಿದ್ದವು.

ಪ್ರಥಮ ಪಿಯುಗೆ ಆನ್‌ಲೈನ್ ಪರೀಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಕಾರಣ ಪ್ರಥಮ ಪಿಯುಸಿಯ ಎಲ್ಲ ವಿದ್ಯಾರ್ಥಿಗಳನ್ನು ಸಾಮೂಹಿಕವಾಗಿ ಉತ್ತೀರ್ಣ ಮಾಡಲಾಗುವುದು ಎಂದು ಘೋಷಿಸಿದ್ದ ಪದವಿಪೂರ್ವ ಶಿಕ್ಷಣ ಇಲಾಖೆಯು, ಈಗ ಆನ್‌ಲೈನ್ ಮೂಲಕ ಪರೀಕ್ಷೆ ನೀಡಿ ಮೌಲ್ಯಮಾಪನ ಮಾಡಲು ಮುಂದಾಗಿದೆ.

ಪ್ರಥಮ ಪಿಯು ವಿದ್ಯಾರ್ಥಿಗಳಿಗೆ ದ್ವಿತೀಯ ಪಿಯುಸಿಗೆ ದಾಖಲಾತಿ ನೀಡಲು ಹಾಗೂ ವಿದ್ಯಾರ್ಥಿ ವೇತನದ ಸೌಲಭ್ಯಗಳನ್ನು ಪಡೆಯಲು ವಿದ್ಯಾರ್ಥಿಗಳ ಫಲಿತಾಂಶವನ್ನು ಅಂಕಗಳ ಮಾದರಿಯಲ್ಲಿ ನೀಡುವ ಅಗತ್ಯವಿದೆ. ಹಾಗಾಗಿ ಪರೀಕ್ಷೆ ನಡೆಸಲಾಗುತ್ತಿದೆ ಎಂದು ಇಲಾಖೆ ಸಮರ್ಥನೆ ನೀಡಿದೆ.

ಸುತ್ತೋಲೆ: ಪ್ರತಿ ಮೂರು ವಿಷಯಕ್ಕೆ ಒಂದು ಪ್ರಶ್ನೆ ಪತ್ರಿಕೆಯಂತೆ ಒಟ್ಟು ಆರು ವಿಷಯಗಳಿಗೆ ಎರಡು ಪ್ರಶ್ನೆಪತ್ರಿಕೆಗಳನ್ನು ಸಿದ್ಧಪಡಿಸಿ ಇಲಾಖಾ ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಲಾಗಿದೆ. ಅದರ ಲಿಂಕ್ ಅನ್ನು ವಿದ್ಯಾರ್ಥಿಗಳ ನೋಂದಾಯಿತ ಮೊಬೈಲ್ ಸಂಖ್ಯೆಗೆ ಕಳಿಸಲಾಗಿದೆ. ವಿದ್ಯಾರ್ಥಿಗಳು ಮೊದಲ ಪ್ರಶ್ನೆಪತ್ರಿಕೆಗೆ ಜೂ. 20ರೊಳಗೆ, ಎರಡನೇ ಪ್ರಶ್ನೆ ಪತ್ರಿಕೆಗೆ ಜೂ.26ರಿಂದ ಜು.5ರೊಳಗೆ ತಮ್ಮದೇ ಹಾಳೆಯಲ್ಲಿ ಉತ್ತರ ಬರೆದು ಅದನ್ನು ಸ್ಕ್ಯಾನ್ ಮಾಡಿ ತಮ್ಮ ಕಾಲೇಜಿಗೆ ವಾಟ್ಸ್‌ಆ್ಯಪ್, ಇ-ಮೇಲ್ ಅಥವಾ ಅಂಚೆ ಮೂಲಕ ಅಥವಾ ಇನ್ಯಾವುದೇ ಮಾರ್ಗದ ಮೂಲಕ ಕಳುಹಿಸಬೇಕು ಎಂದು ಸುತ್ತೋಲೆ ಹೊರಡಿಸಿದೆ.

ಎಸ್.ಸುರೇಶ್ ಕುಮಾರ್

30 ಅಂಕದ ಪ್ರಶ್ನೆ: ಪ್ರತಿ ವಿಷಯಕ್ಕೆ 30 ಅಂಕದ ಪ್ರಶ್ನೆಯಂತೆ ಪ್ರತಿ ಪ್ರಶ್ನೆ ಪತ್ರಿಕೆಯಲ್ಲಿ ಮೂರು ವಿಷಯಗಳಿಗೆ 90 ಅಂಕಗಳ ಪ್ರಶ್ನೆಗಳನ್ನು ಕೇಳಲಾಗುತ್ತದೆ. ವಿದ್ಯಾರ್ಥಿಗಳು ಕಳುಹಿಸಿದ ಉತ್ತರ ಪತ್ರಿಕೆಗಳನ್ನು ಸಂಬಂಧಪಟ್ಟ ವಿಷಯದ ಉಪನ್ಯಾಸಕರು ಮೊದಲ ಉತ್ತರ ಪತ್ರಿಕೆಯನ್ನು ಜೂ.20ರಿಂದ 25ರೊಳಗೆ, ಎರಡನೇ ಉತ್ತರ ಪತ್ರಿಕೆಯನ್ನು ಜು.6 ರಿಂದ 10ರೊಳಗೆ ಮೌಲ್ಯಮಾಪನ ಮಾಡಿ ಮುಗಿಸಬೇಕು. ನಂತರ ವಿದ್ಯಾರ್ಥಿ ಪಡೆದ ಅಂಕಗಳ ಜತೆಗೆ ಆಂತರಿಕ ಮೌಲ್ಯಮಾಪನದ (ಇಂಟರ್ನಲ್ ಅಸೆಸ್‌ಮೆಂಟ್) ಅಂಕ ಸೇರಿಸಿ ಫಲಿತಾಂಶವನ್ನು ಇಲಾಖೆ ಸೂಚಿಸಿದ ಮಾದರಿಯಲ್ಲಿ ವಿದ್ಯಾರ್ಥಿ ಸಾಧನೆಯ ಟ್ರ್ಯಾಕಿಂಗ್ ವ್ಯವಸ್ಥೆಯ (ಎಸ್‌ಎಟಿಎಸ್) ತಂತ್ರಾಂಶದಲ್ಲಿ ಅಪ್‌ಲೋಡ್ ಮಾಡಬೇಕು ಎಂದು ನಿರ್ದೇಶನ ನೀಡಲಾಗಿದೆ.

ಪ್ರಥಮ ಪಿಯುಸಿ ವಿದ್ಯಾರ್ಥಿಗಳ ಈ ಆನ್‌ಲೈನ್ ಪರೀಕ್ಷೆಗಳನ್ನು ನಿಗದಿತ ಸಮಯದಲ್ಲಿ ಪೂರ್ಣಗೊಳಿಸಲು ಇಲಾಖೆಯ ಎಲ್ಲ ಜಿಲ್ಲೆಗಳ ಜಿಲ್ಲಾ ಉಪನಿರ್ದೇಶಕರು ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಇಲಾಖೆ ನಿರ್ದೇಶಕಿ ಸ್ನೇಹಲ್ ಸುತ್ತೋಲೆಯಲ್ಲಿ ಸೂಚನೆ ನೀಡಿದ್ದಾರೆ.

ಅಸಮಾಧಾನ: 'ಎಲ್ಲ ವಿದ್ಯಾರ್ಥಿಗಳು ಉತ್ತೀರ್ಣ ಎಂದ ಮೇಲೆ ಮೌಲ್ಯಮಾಪನ ಮಾಡುವ ಅಗತ್ಯವೇನಿದೆ? ಈಗ ಎಲ್ಲರೂ ಮನೆಯಲ್ಲಿಯೇ ಪರೀಕ್ಷೆ ಬರೆಯಬೇಕಾಗಿರುವುದರಿಂದ ಎಲ್ಲರ ಉತ್ತರವೂ ಒಂದೇ ರೀತಿಯದ್ದಾಗಿರಲಿದೆ. ಎಲ್ಲರಿಗೂ ಸಮಾನ ಅಂಕ ನೀಡಬೇಕಾಗುತ್ತದೆ. ಇದೊಂದು ವ್ಯರ್ಥ, ಅವೈಜ್ಞಾನಿಕ ಕ್ರಮ' ಎಂದು ಕೆಲವು ಉಪನ್ಯಾಸಕರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

'ಪರೀಕ್ಷೆ ಎಂದು ಪರಿಭಾವಿಸುವುದು ಬೇಡ'

'ಪ್ರಥಮ ಪಿಯುಸಿ ವಿದ್ಯಾರ್ಥಿಗಳ ಮುಂದಿನ ಶೈಕ್ಷಣಿಕ ಸೌಲಭ್ಯಗಳಿಗಾಗಿ ಅಸೈನ್‌ಮೆಂಟ್ ಮಾದರಿಯಲ್ಲಿ ಅವರ ಕಲಿಕೆಯ ಮೌಲ್ಯಮಾಪನ ನಡೆಸಲಾಗುತ್ತಿದೆ. ಇದನ್ನು ಪರೀಕ್ಷೆ ಎಂದು ಭಾವಿಸಿ ಗೊಂದಲ ಸೃಷ್ಟಿಸುವುದು ಬೇಡ' ಎಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಎಸ್.ಸುರೇಶ್ ಕುಮಾರ್ ಮನವಿ ಮಾಡಿದ್ದಾರೆ.

'ವಿದ್ಯಾರ್ಥಿ ವೇತನ ಸೌಲಭ್ಯ ಸೇರಿದಂತೆ ಹಲವು ಸವಲತ್ತು ಪಡೆಯಲು ಸಮಸ್ಯೆಯಾಗಬಾರದು ಎಂದು ಅಂಕ ಆಧಾರಿತ ಫಲಿತಾಂಶ ದಾಖಲಿಸಲು ಹಾಗೂ ಮುಂದಿನ ತರಗತಿಗೆ ದಾಖಲಾತಿ ನೀಡಲು ಮೌಲ್ಯಮಾಪನವೆಂಬ ಔಪಚಾರಿಕ ಪ್ರಕ್ರಿಯೆಯನ್ನು ಈ ಮೂಲಕ ನಡೆಸಲಾಗುತ್ತಿದೆ' ಎಂದು ಅವರು ಸ್ಪಷ್ಟಪಡಿಸಿದ್ದಾರೆ.

ಹೊಲದಲ್ಲಿ ಪತ್ನಿ ಶವ ಹೂತಿಟ್ಟು ಎಳ್ಳಿನ ಪೈರು ನಾಟಿ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಕನಕಪುರ: ಪತ್ನಿಯನ್ನು ಕೊಲೆ ಮಾಡಿ ನಾಪತ್ತೆಯಾಗಿದ್ದಾಳೆ ಎಂದು ದೂರು ನೀಡಿ ಪೊಲೀಸರಿಂದ ತಪ್ಪಿಸಿಕೊಳ್ಳಲು ಯತ್ನಿಸಿದ್ದ ಆರೋಪಿ ಪತಿಯನ್ನು ಶುಕ್ರವಾರ ಬಂಧಿಸಲಾಗಿದೆ.

ಗೀತಾ

ತಾಲ್ಲೂಕಿನ ಸಾತನೂರು ಹೋಬಳಿಯ ಯಲವಳ್ಳಿಯ ಕುಸುಮಾ ಅಲಿಯಾಸ್ ಗೀತಾ (25) ಕೊಲೆಯಾದವರು. ಕೆಎಸ್‌ಆರ್‌ಟಿಸಿಯಲ್ಲಿ ಡ್ರೈವರ್ ಕಂ ಕಂಡಕ್ಟರ್ ಆಗಿದ್ದ ಲೋಕೇಶ್ (30) ಬಂಧಿತ ಆರೋಪಿ.

ಲೋಕೇಶ್ ಕನಕಪುರನಗರದ ಗೋಪಾಲಕೃಷ್ಣ ಟೆಂಟ್ ಏರಿಯಾದ ನಿವಾಸಿ. ವಿವಾಹವಾದ ನಂತರ ಯಲವಳ್ಳಿಯ ಅಜ್ಜಿ ಮನೆಯಲ್ಲಿ ಪತ್ನಿ ಜೊತೆಗೆ ವಾಸವಾಗಿದ್ದರು. ದಂಪತಿಗೆ ಮೂರು ವರ್ಷದ ಹೆಣ್ಣು ಮಗುವಿದೆ.

ಗೀತಾ ಹಾವೇರಿ ಜಿಲ್ಲೆಯ ಹಾನಗಲ್ ತಾಲ್ಲೂಕಿನ ಹೊಂಕಣ ಗ್ರಾಮದವರು. ಆರೋಪಿಗೆ ಆಕೆಯು ನೆಲಮಂಗಲದ ಮಾದನಾಯನಹಳ್ಳಿಯ ಗಾರ್ಮೆಂಟ್ಸ್‌ವೊಂದರಲ್ಲಿ ಕೆಲಸ ಮಾಡುತ್ತಿದ್ದಾಗ ಪರಿಚಯವಾಗಿತ್ತು. ಆಕೆಯನ್ನು ಪ್ರೇಮಿಸಿ ನಾಲ್ಕು ವರ್ಷದ ಹಿಂದೆ ಅಂತರ್ಜಾತಿ ವಿವಾಹವಾಗಿದ್ದ.

ಜೂನ್ 1ರಂದು ಪತ್ನಿಯನ್ನು ಕೊಲೆ ಮಾಡಿರುವ ಲೋಕೇಶ್ ಶವವನ್ನು ಯೂರಿಯಾ ಚೀಲದಲ್ಲಿ ತುಂಬಿ ಬೈಕ್‌ನಲ್ಲಿ ಜಮೀನಿಗೆ ಸಾಗಿಸಿದ್ದಾನೆ. ಎಳ್ಳು ಬೆಳೆಯಿದ್ದ ಜಾಗದಲ್ಲಿ ಗುಂಡಿ ತೆಗೆದು ಹೂತಿದ್ದಾನೆ. ಜಮೀನನ್ನು ಮಟ್ಟ ಮಾಡಿ ಎಳ್ಳಿನ ಪೈರುಗಳನ್ನು ಶವ ಹೂತಿಟ್ಟ ಜಾಗದ ಮೇಲೆ ನಾಟಿ ಮಾಡಿದ್ದಾನೆ. ಬಳಿಕ ಮನೆಯಿಂದ ಹೊರಹೋದ ಪತ್ನಿ ವಾಪಸ್ ಬಂದಿಲ್ಲ ಎಂದು ದೂರು ಕೊಟ್ಟಿದ್ದ. ಆತನ ಮೊಬೈಲ್ ಕರೆ ವಿವರ ಪರಿಶೀಲಿಸಿ ವಿಚಾರಣೆ ನಡೆಸಿದಾಗ ಕೊಲೆ ಮಾಡಿರುವುದಾಗಿ ಆರೋಪಿ ತಪ್ಪೊಪ್ಪಿಕೊಂಡಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.

'ಇಬ್ಬರ ನಡುವೆ ಜಗಳ ನಡೆದಿದೆ. ಪತ್ನಿಯ ಕಪಾಳಕ್ಕೆ ಹೊಡೆದಾಗ ಆಕೆ ಸ್ಥಳದಲ್ಲೇ ಮೃತಪಟ್ಟಿದ್ದಾಳೆ. ಭಯದಿಂದ ಬೈಕ್‌ನಲ್ಲಿ ಶವ ಸಾಗಿಸಿ ಮುಚ್ಚಿ ಹಾಕಿ ಅನುಮಾನ ಬರಬಾರದೆಂದು ದೂರು ಕೊಟ್ಟೆ ಎಂದು ವಿಚಾರಣೆ ವೇಳೆ ತಿಳಿಸಿದ್ದಾನೆ' ಎಂದು ಪೊಲೀಸರು ತಿಳಿಸಿದ್ದಾರೆ.

ಪಿಸ್ತೂಲ್ ಮಾರಾಟ; ಕಲಬುರ್ಗಿ ರೌಡಿ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ರೌಡಿ ಕಾಡುಬಿಸನಹಳ್ಳಿ ಸೋಮು ಹತ್ಯೆಗೆ ನಾಡ ಪಿಸ್ತೂಲ್ ಹಾಗೂ ಮಾರಕಾಸ್ತ್ರ ನೀಡಿದ್ದ ಆರೋಪದಡಿ ಕಲಬುರ್ಗಿ ರೌಡಿ ಸತೀಶ್ ಅಲಿಯಾಸ್ ಮಾರ್ಕೆಟ್ ಸತೀಶ್‌ನನ್ನು (38) ನಗರದ ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

ರೌಡಿಗಳಾದ ಸೋಮು ಹಾಗೂ ರೋಹಿತ್ ಗೌಡ ನಡುವೆ ಹಲವು ವರ್ಷಗಳಿಂದ ವೈಷಮ್ಯ ಇತ್ತು. ಸೋಮು ಹತ್ಯೆ ಮಾಡಲು ರೋಹಿತ್ ಸಂಚು ರೂಪಿಸಿದ್ದ. ಈ ಬಗ್ಗೆ ಮಾಹಿತಿ ಸಿಗುತ್ತಿದ್ದಂತೆ ಕಾರ್ಯಾಚರಣೆ ನಡೆಸಿದ್ದ ಸಿಸಿಬಿ ಪೊಲೀಸರು, ರೋಹಿತ್ ಹಾಗೂ ಆತನ ಸಹಚರರನ್ನು ಬಂಧಿಸಿದ್ದರು.

ನಾಡ ಪಿಸ್ತೂಲ್, ಜೀವಂತ ಗುಂಡು, 10 ಮಚ್ಚುಗಳು ಹಾಗೂ 2 ಕಾರುಗಳನ್ನು ಜಪ್ತಿ ಮಾಡಿದ್ದರು.

'ಬಂಧಿತ ಆರೋಪಿಗಳನ್ನು ವಿಚಾರಣೆಗೆ ಒಳಪಡಿಸಿದಾಗ, ಮಾರ್ಕೆಟ್ ಸತೀಶ್‌ನ ಹೆಸರು ಬಾಯ್ಬಿಟ್ಟಿದ್ದರು. ಆತನನ್ನು ಇದೀಗ ಬಂಧಿಸಿ ನಗರಕ್ಕೆ ಕರೆತರಲಾಗಿದೆ. ಆತನ ವಿರುದ್ಧ ಕೊಲೆ, ಕೊಲೆ ಯತ್ನ ಸೇರಿದಂತೆ 30ಕ್ಕೂ ಹೆಚ್ಚು ಪ್ರಕರಣಗಳು ದಾಖಲಾಗಿವೆ' ಎಂದು ಸಿಸಿಬಿ ಅಧಿಕಾರಿಯೊಬ್ಬರು ಹೇಳಿದರು.

₹ 1 ಲಕ್ಷಕ್ಕೆ ಮಾರಾಟ: 'ಉತ್ತರ ಪ್ರದೇಶ, ಮಧ್ಯ ಪ್ರದೇಶ ಹಾಗೂ ಬಿಹಾರದ ಶಸ್ತ್ರಾಸ್ತ್ರ ಮಾರಾಟಗಾರರ ಜೊತೆ ರೌಡಿ ಸತೀಶ್ ಸಂಪರ್ಕವಿಟ್ಟುಕೊಂಡಿದ್ದ. ಅವರಿಂದ ₹ 10 ಸಾವಿರದಿಂದ ₹ 15 ಸಾವಿರಕ್ಕೆ ನಾಡ ಪಿಸ್ತೂಲ್ ಖರೀದಿಸಿ, ರಾಜ್ಯದಲ್ಲಿ ₹ 80 ಸಾವಿರದಿಂದ ₹ 1 ಲಕ್ಷಕ್ಕೆ ಮಾರುತ್ತಿದ್ದ' ಎಂದೂ ಅಧಿಕಾರಿ ತಿಳಿಸಿದರು.

'ಅಪರಾಧ ಕೃತ್ಯದಲ್ಲಿ ಭಾಗಿಯಾಗುತ್ತಿದ್ದ ಆರೋಪಿ, ಇತ್ತೀಚಿನ ದಿನಗಳಲ್ಲಿ ಶಸ್ತ್ರಾಸ್ತ್ರ ಮಾರಾಟದಲ್ಲಿ ನಿರತನಾಗಿದ್ದ. ಅದರಿಂದಲೇ ಕೋಟ್ಯಂತರ ರೂಪಾಯಿ ಗಳಿಸಿರುವ ಮಾಹಿತಿ ಇದೆ' ಎಂದರು.

ಸುಲಿಗೆ; ತಿಪ್ಪೆ, ಅಮಾವಾಸ್ಯೆ ಸೆರೆ

ದ್ವಿಚಕ್ರ ವಾಹನ ಕಳವು ಮಾಡಿ ಅದರಲ್ಲೇ ನಗರದಲ್ಲಿ ಸುತ್ತಾಡಿ ಸುಲಿಗೆ ಮಾಡುತ್ತಿದ್ದ ಇಬ್ಬರು ಆರೋಪಿಗಳನ್ನು ಗಿರಿನಗರ ಪೊಲೀಸರು ಬಂಧಿಸಿದ್ದಾರೆ.

'ಯಶವಂತ್ ಅಲಿಯಾಸ್ ತಿಪ್ಪೆ ಹಾಗೂ ಕಿರಣ್ ಅಲಿಯಾಸ್ ಅಮಾವಾಸ್ಯೆ ಬಂಧಿತರು. ಅವರಿಂದ ದ್ವಿಚಕ್ರ ವಾಹನ ಜಪ್ತಿ ಮಾಡಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಮನೆ ಮುಂದೆ ನಿಲ್ಲಿಸುತ್ತಿದ್ದ ದ್ವಿಚಕ್ರ ವಾಹನಗಳನ್ನು ಕಳವು ಮಾಡುತ್ತಿದ್ದ ಆರೋಪಿಗಳು, ಅದರಲ್ಲೇ ರಾತ್ರಿ ನಗರದಲ್ಲಿ ಸುತ್ತಾಡುತ್ತಿದ್ದರು. ಒಂಟಿಯಾಗಿ ರಸ್ತೆಯಲ್ಲಿ ನಡೆದುಕೊಂಡು ಹೋಗುವ ಸಾರ್ವಜನಿಕರು ಹಾಗೂ ಡೆಲಿವರಿ ಬಾಯ್‌ಗಳನ್ನು ಅಡ್ಡಗಟ್ಟಿ ಸುಲಿಗೆ ಮಾಡಿ ಪರಾರಿಯಾಗುತ್ತಿದ್ದರು.'

'ಗಿರಿನಗರ ಠಾಣೆ ವ್ಯಾಪ್ತಿಯಲ್ಲಿ ಆರೋಪಿಗಳು ಎಸಗಿದ್ದ ಕೃತ್ಯ ಸಿ.ಸಿ. ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿತ್ತು. ಕಾರ್ಯಾಚರಣೆ ನಡೆಸಿ ಅವರನ್ನು ಬಂಧಿಸಲಾಗಿದೆ' ಎಂದೂ ಮೂಲಗಳು ತಿಳಿಸಿವೆ.

ರೋಜ್‌ಗಾರ್ ಯೋಜನೆಯಡಿ ಸಾಲ; ವಂಚನೆ

ಬೆಂಗಳೂರು: ಪ್ರಧಾನ ಮಂತ್ರಿ ರೋಜ್‌ಗಾರ್ ಯೋಜನೆ ಅಡಿ ಸಾಲ ಕೊಡಿಸುವ ಆಮಿಷವೊಡ್ಡಿ ನಗರದ ನಿವಾಸಿಯೊಬ್ಬರಿಂದ ₹ 23,800 ಪಡೆದು ವಂಚಿಸಲಾಗಿದೆ.

ಬನಶಂಕರಿ 2ನೇ ಹಂತದ ನಿವಾಸಿಯೊಬ್ಬರು ವಂಚನೆ ಬಗ್ಗೆ ದೂರು ನೀಡಿದ್ದಾರೆ. ಅಪರಿಚಿತರ ವಿರುದ್ಧ ದಕ್ಷಿಣ ವಿಭಾಗದ ಸೈಬರ್ ಕ್ರೈಂ ಠಾಣೆಯಲ್ಲಿ ಎಫ್ಐಆರ್ ದಾಖಲಾಗಿದೆ.

'ದೂರುದಾರರ ಮೊಬೈಲ್‌ಗೆ ಕರೆ ಮಾಡಿದ್ದ ಆರೋಪಿಗಳು, ಸಾಲ ಕೊಡಿಸುವ ಆಮಿಷವೊಡ್ಡಿ ಶುಲ್ಕ ಹಾಗೂ ಇತರೆ ಖರ್ಚಿಗೆಂದು ಹಣ ಪಡೆದಿದ್ದರು. ನಂತರ ನಾಪತ್ತೆಯಾಗಿದ್ದಾರೆ' ಎಂದು ಪೊಲೀಸರು ಹೇಳಿದರು.

ರವೀಂದ್ರ ಕಲಾಕ್ಷೇತ್ರದ ಆವರಣದಲ್ಲಿ ರೂಪಾಂತರ ಮತ್ತು ರಂಗಚಂದಿರ ಟ್ರಸ್ಟ್ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ನಟಿ ಪ್ರೇಮಾ ಅವರು ಹವ್ಯಾಸಿ ರಂಗಭೂಮಿ ಕಲಾವಿದರಿಗೆ ದಿನಸಿ ಕಿಟ್ ವಿತರಿಸಿದರು. ರಂಗಚಂದಿರ ಟ್ರಸ್ಟ್ ಕಾರ್ಯದರ್ಶಿ ಜೆ.ಪಿ.ಒ ಚಂದ್ರು ಇದ್ದರು – ಪ್ರಜಾವಾಣಿ ಚಿತ್ರ

ಕರೆ ಮಾರ್ಪಾಡು: ಮಾಹಿತಿ ಸಂಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಂತರರಾಷ್ಟ್ರೀಯ ಕರೆಗಳನ್ನು (ಐಎಸ್‌ಡಿ) ಸ್ಥಳೀಯ ಕರೆಗಳನ್ನಾಗಿ ಮಾರ್ಪಾಡು ಮಾಡಿ ಕೇಂದ್ರ ಸರ್ಕಾರಕ್ಕೆ ನಷ್ಟ ಉಂಟು ಮಾಡುತ್ತಿದ್ದ ಆರೋಪದಡಿ ನಗರದ ಸಿಸಿಬಿ ಪೊಲೀಸರು ಬಂಧಿಸಿರುವ ಇಬ್ಬರು ಆರೋಪಿಗಳ ಹಿನ್ನೆಲೆ ಬಗ್ಗೆ ರಾಷ್ಟ್ರೀಯ ತನಿಖಾ ಸಂಸ್ಥೆಗಳು ಮಾಹಿತಿ ಕಲೆಹಾಕುತ್ತಿವೆ.

ಸೇನೆಯ ಗುಪ್ತಚರ ವಿಭಾಗ ನೀಡಿದ್ದ ಮಾಹಿತಿ ಆಧರಿಸಿ ತನಿಖೆ ಕೈಗೊಂಡಿದ್ದ ಸಿಸಿಬಿ ಪೊಲೀಸರು, ಬಿಟಿಎಂ ಬಡಾವಣೆಯಲ್ಲಿ ವಾಸವಿದ್ದ ಕೇರಳದ ಇಬ್ರಾಹಿಂ ಪುಲ್ಲಟ್ಟಿ (36) ಹಾಗೂ ತಮಿಳುನಾಡಿನ ಗೌತಮ್ (27) ಎಂಬುವರನ್ನು ಬಂಧಿಸಿದ್ದಾರೆ. ಅವರಿಂದ ಕರೆಗಳ ಮಾರ್ಪಾಡು ಮಾಡಲು ಬಳಸುತ್ತಿದ್ದ ಎಫ್‌ಸಿಟಿ (ಫಿಕ್ಸೆಡ್ ಸೆಲ್ಯುಲರ್ ಟರ್ಮಿನಲ್) ಬಾಕ್ಸ್ ಹಾಗೂ 900 ಸಿಮ್‌ಕಾರ್ಡ್‌ಗಳನ್ನು ಜಪ್ತಿ ಮಾಡಿದ್ದಾರೆ.

'ಬಂಧಿತ ಆರೋಪಿಗಳು ದೇಶದ ಭದ್ರತೆಗೆ ಧಕ್ಕೆ ತರುವ ಕೆಲಸದಲ್ಲಿ ನಿರತರಾಗಿದ್ದ ಸಂಗತಿ ಗೊತ್ತಾಗಿದೆ. ಅದನ್ನು ಆಧರಿಸಿ ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ಹಾಗೂ ಕೇಂದ್ರ ಗುಪ್ತದಳ ಅಧಿಕಾರಿಗಳು, ನಗರಕ್ಕೆ ಬಂದು ಆರೋಪಿಗಳ ಬಗ್ಗೆ ಮಾಹಿತಿ ಕಲೆಹಾಕುತ್ತಿದ್ದಾರೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ದೇಶದ ಆಂತರಿಕ ಶಾಂತಿ ಕದಡಲು ಸಂಚು ರೂಪಿಸುತ್ತಿದ್ದವರ ಜೊತೆಯಲ್ಲಿ ಆರೋಪಿಗಳು ಶಾಮೀಲಾಗಿರುವ ಶಂಕೆಯೂ ಇದೆ. ಹವಾಲಾ ವ್ಯವಹಾರವೂ ನಡೆದಿರುವುದರಿಂದ ರಾಜ್ಯದ ಆಂತರಿಕ ಭದ್ರತಾ ವಿಭಾಗದ (ಐಎಸ್‌ಡಿ) ಅಧಿಕಾರಿಗಳು ಸಹ ಆರೋಪಿಗಳ ಹಿನ್ನೆಲೆ ಕೆದಕುತ್ತಿದ್ದಾರೆ' ಎಂದೂ ಮೂಲಗಳು ಹೇಳಿವೆ.

'ಬಿಟಿಎಂ ಬಡಾವಣೆಯ ಆರು ಸ್ಥಳಗಳಲ್ಲಿ ಆರೋಪಿಗಳು ಎಫ್‌ಸಿಟಿ ಬಾಕ್ಸ್ ಅಳವಡಿಸಿದ್ದರು. ಕೊರಿಯರ್ ಮೂಲಕ ಸಿಮ್ ಕಾರ್ಡ್‌ಗಳನ್ನು ತರಿಸಿಕೊಂಡು ಬಳಕೆ ಮಾಡುತ್ತಿದ್ದರು. ಇವರ ಕೃತ್ಯದಲ್ಲಿ ಭಾಗಿಯಾಗಿದ್ದ ಮತ್ತಷ್ಟು ಮಂದಿ ತಲೆಮರೆಸಿಕೊಂಡಿದ್ದಾರೆ' ಎಂದೂ ಮೂಲಗಳು ತಿಳಿಸಿವೆ.

ತಮಿಳುನಾಡಿನಿಂದ ನಗರಕ್ಕೆ ಬಂದು ವಾಹನ ಕಳವು

ಬೆಂಗಳೂರು: ಮನೆ ಮುಂದೆ ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ನಿಲ್ಲಿಸುತ್ತಿದ್ದ ದ್ವಿಚಕ್ರ ವಾಹನಗಳನ್ನು ಕಳವು ಮಾಡುತ್ತಿದ್ದ ಆರೋಪದಡಿ ಇನಾಯತ್ (20) ಎಂಬಾತನನ್ನು ವಿಜಯನಗರ ಪೊಲೀಸರು ಬಂಧಿಸಿದ್ದಾರೆ.

'ತಮಿಳುನಾಡು ಹೊಸೂರಿನ ಇನಾಯತ್, ನಗರಕ್ಕೆ ಬಂದು ವಾಹನ ಕದ್ದುಕೊಂಡು ಪರಾರಿಯಾಗುತ್ತಿದ್ದ. ಆತನಿಂದ ₹ 1.80 ಲಕ್ಷ ಮೌಲ್ಯದ 7 ದ್ವಿಚಕ್ರ ವಾಹನಗಳನ್ನು ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಎಂ.ಸಿ. ಲೇಔಟ್ ಬಳಿ ಮಾ. 25ರಂದು ನಿಲ್ಲಿಸಿದ್ದ ದ್ವಿಚಕ್ರ ವಾಹನಗಳನ್ನು ಆರೋಪಿ ಕಳವು ಮಾಡಿದ್ದ. ಈ ಬಗ್ಗೆ ದೂರು ದಾಖಲಾಗಿತ್ತು. ತನಿಖೆ ಕೈಗೊಂಡಾಗ ಆತ ಸಿಕ್ಕಿಬಿದ್ದ.'

'ಕದ್ದ ವಾಹನಗಳನ್ನು ಮಾರಾಟ ಮಾಡುತ್ತಿದ್ದ ಆರೋಪಿ, ಅದರಿಂದ ಬಂದ ಹಣವನ್ನು ಐಷಾರಾಮಿ ಜೀವನಕ್ಕೆ ಖರ್ಚು ಮಾಡುತ್ತಿದ್ದ' ಎಂದೂ ಪೊಲೀಸರು ತಿಳಿಸಿದರು.

ಆದಿವಾಸಿಗಳಿಗೆ ಲಸಿಕೆ ನೀಡಲು ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಗರದಲ್ಲಿ ಅಲೆಮಾರಿ ಆದಿವಾಸಿಗಳು ನೆಲೆಸಿರುವಲ್ಲಿಗೆ ತೆರಳಿ ಅಲ್ಲಿನ ನಿವಾಸಿಗಳಿಗೆ ಕೋವಿಡ್ ಲಸಿಕೆ ನೀಡಬೇಕು' ಎಂದು ಬೆಂಗಳೂರು ನಗರ ಜಿಲ್ಲಾಧಿಕಾರಿ ಜೆ.ಮಂಜುನಾಥ್ ಅವರು ಜಿಲ್ಲಾ ಆರೋಗ್ಯಾಧಿಕಾರಿ ಹಾಗೂ ಆಹಾರ ಇಲಾಖೆ ಉಪ ನಿರ್ದೇಶಕರಿಗೆ ಸೂಚನೆ ನೀಡಿದರು.

ಜಿಲ್ಲಾಧಿಕಾರಿ ಕಚೇರಿಯಲ್ಲಿ ನಡೆದ ಎಸ್‌ಸಿ, ಎಸ್‌ಟಿ ಅಲೆಮಾರಿ ಜಿಲ್ಲಾ ಅನುಷ್ಠಾನ ಸಮಿತಿ ಸಭೆಯಲ್ಲಿ ಅವರು ಅಧಿಕಾರಿಗಳೊಂದಿಗೆ ಚರ್ಚಿಸಿದರು.

ಅಲೆಮಾರಿ, ಅರೆ ಅಲೆಮಾರಿ ಮತ್ತು ಆದಿವಾಸಿ ಬುಡಕಟ್ಟು ಜನರಿಗೆ ವಾಲ್ಮೀಕಿ ಅಭಿವೃದ್ಧಿ ನಿಗಮ ಹಾಗೂ ಅಲೆಮಾರಿ, ಆದಿವಾಸಿ ಕೋಶದ ಅಡಿಯಲ್ಲಿ 2020-21ನೇ ಸಾಲಿನಲ್ಲಿ ಸಾಲ ಸೌಲಭ್ಯ ನೀಡಲಾಗುತ್ತಿದ್ದು, ಇದಕ್ಕಾಗಿ 336 ಅರ್ಹ ಫಲಾನುಭವಿಗಳನ್ನು ಸಭೆಯಲ್ಲಿ ಆಯ್ಕೆ ಮಾಡಲಾಯಿತು.

'ಅಲೆಮಾರಿ ಬುಡಕಟ್ಟು ಮಹಾಸಭಾದ ಸಹಯೋಗದಲ್ಲಿ ಕೂಡಲೇ ಅಲೆಮಾರಿ ಸೆಟ್ಲ್‌ಮೆಂಟ್‌ಗಳಿಗೆ ತೆರಳಿ 3000 ಕುಟುಂಬಗಳಿಗೆ ಆಹಾರಧಾನ್ಯದ ಕಿಟ್ ವಿತರಣೆ ಮಾಡಬೇಕು. ಈ ನಿಟ್ಟಿನಲ್ಲಿ ಸೂಕ್ತ ಕ್ರಮ ಕೈಗೊಳ್ಳಬೇಕು' ಎಂದು ಅಧಿಕಾರಿಗಳಿಗೆ ತಾಕೀತು ಮಾಡಿದರು.

ತಾವರೆಕೆರೆ ಸಮೀಪದ ಎಲಚಗುಪ್ಪೆ (ಹಕ್ಕಿಪಿಕ್ಕಿ ಎಲ್ಲಮ್ಮ ಕಾಲೊನಿ) ನಿವಾಸಿಗಳಿಗೆ ನಿವೇಶನ ಕಲ್ಪಿಸುವ ಯೋಜನೆಯು ಮೂರು ವರ್ಷಗಳಿಂದ ನನೆಗುದಿಗೆ ಬಿದ್ದಿರುವ ಬಗ್ಗೆ ಬೆಂಗಳೂರು ನಗರ ಜಿಲ್ಲಾ ಅನುಷ್ಠಾನ ಸಮಿತಿ ಸದಸ್ಯ ವೆಂಕಟರಮಣಯ್ಯ ಗಮನ ಸೆಳೆದರು.

ಇದಕ್ಕೆ ಪ್ರತಿಕ್ರಿಯಿಸಿದ ಮಂಜುನಾಥ್, 'ಅಲೆಮಾರಿಗಳಿಗಾಗಿ ಮೀಸಲಿಟ್ಟಿರುವ 5 ಎಕರೆ ಜಾಗವನ್ನು ಸಮತಟ್ಟು ಮಾಡಿ ರಾಜೀವ್ ಗಾಂಧಿ ವಸತಿ ನಿಗಮಕ್ಕೆ ಹಸ್ತಾಂತರಿಸಬೇಕು. ಇಲ್ಲಿ ಮನೆ ನಿರ್ಮಿಸುವ ಕಾರ್ಯವನ್ನು ಶೀಘ್ರವೇ ಆರಂಭಿಸಬೇಕು' ಎಂದು ಸಮಾಜ ಕಲ್ಯಾಣ ಇಲಾಖೆ ಮತ್ತು ಕೆಆರ್‌ಐಡಿಎಲ್ ಅಧಿಕಾರಿಗಳಿಗೆ ತಿಳಿಸಿದರು.

ಅಲೆಮಾರಿ ಬುಡಕಟ್ಟು ಮಹಾಸಭಾದ ಉಪಾಧ್ಯಕ್ಷ ಆನಂದ್ ಕುಮಾರ್ ಏಕಲವ್ಯ, 'ಲಾಕ್‌ಡೌನ್ ಸಮಯದಲ್ಲಿ ವಾಹನಗಳಲ್ಲಿ ಆಹಾರದ ಕಿಟ್ ಸಾಗಿಸಲು ಪೊಲೀಸರು ಅಡ್ಡಿಪಡಿಸುತ್ತಿದ್ದು ಜಿಲ್ಲಾಡಳಿತದ ವತಿಯಿಂದ ವಾಹನಗಳ ಪಾಸ್ ಮತ್ತು ಜಿಲ್ಲಾ ಅನುಷ್ಠಾನ ಸಮಿತಿ ಸದಸ್ಯರಿಗೆ ಗುರುತಿನ ಪತ್ರ ನೀಡಬೇಕು' ಎಂದು ಕೋರಿದರು. ಇದಕ್ಕೆ ಜಿಲ್ಲಾಧಿಕಾರಿಯವರು ಸಕಾರಾತ್ಮಕವಾಗಿ ಸ್ಪಂದಿಸಿದರು.

ಮಳೆಗಾಲದ ಒಳಗೆ ಕಾಮಗಾರಿ ಪೂರ್ಣಗೊಳಿಸಿ: ರಾಕೇಶ್ ಸಿಂಗ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಿಬಿಎಂಪಿ ವ್ಯಾಪ್ತಿಯಲ್ಲಿ ಸ್ಮಾರ್ಟ್ ಸಿಟಿ ಯೋಜನೆಯಡಿ ಕೈಗೆತ್ತಿಕೊಂಡಿರುವ ಕಾಮಗಾರಿಗಳನ್ನು ತ್ವರಿತಗತಿಯಲ್ಲಿ ಅನುಷ್ಠಾನಗೊಳಿಸಬೇಕು. 27 ರಸ್ತೆ ಕಾಮಗಾರಿಗಳನ್ನು ಮಳೆಗಾಲ ಆರಂಭವಾಗುವುದಕ್ಕೆ ಮುನ್ನವೇ ಪೂರ್ಣಗೊಳಿಸಬೇಕು' ಎಂದು ಬೆಂಗಳೂರು ಸ್ಮಾರ್ಟ್ ಸಿಟಿ ಲಿಮಿಟೆಡ್‌ನ ಮುಖ್ಯಸ್ಥ ರಾಕೇಶ್ ಸಿಂಗ್ ಅವರು ಗುತ್ತಿಗೆದಾರರಿಗೆ ಸೂಚಿಸಿದರು.

ಸ್ಮಾರ್ಟ್ ಸಿಟಿ ಯೋಜನೆಯಡಿ ಕೈಗೊಂಡ ಕಾಮಗಾರಿಗಳನ್ನು ಅವರು ಶುಕ್ರವಾರ ಪರಿಶೀಲಿಸಿದರು.

'ಕಾಮಗಾರಿ ವೇಳೆ ತೆರವುಗೊಳಿಸಿದ ಮಣ್ಣು ಈಗಲೂ ಕೆಲವೆಡೆ ರಸ್ತೆ ಮೇಲೆಯೇ ಇದೆ. ಇದೇ 14ರಿಂದ ಲಾಕ್‌ಡೌನ್ ತೆರವಾಗಲಿದೆ. ಆ ಬಳಿಕ ಸಾರ್ವಜನಿಕರ ಓಡಾಟ ಮತ್ತು ವಾಹನಗಳ ಸಂಚಾರಕ್ಕೆ ಇದರಿಂದ ಅಡ್ಡಿ ಉಂಟಾಗಲಿದೆ. ರಸ್ತೆಯಲ್ಲಿರುವ ಮಣ್ಣು ತೆರವುಗೊಳಿಸಿ ಸಾರ್ವಜನಿಕರ ಸಂಚಾರಕ್ಕೆ ಅಡೆತಡೆ ಉಂಟಾಗದಂತೆ ನೋಡಿಕೊಳ್ಳಬೇಕು. ತೆರೆದಿರುವ ಮ್ಯಾನ್ ಹೋಲ್‌ಗಳನ್ನು ಮುಚ್ಚಬೇಕು' ಎಂದು ಸೂಚಿಸಿದರು.

'ಕೆಲವೆಡೆ ಕಾಮಗಾರಿಗೆ ಬಳಸಿದ ಸಾಮಗ್ರಿಗಳನ್ನು ರಸ್ತೆಯಲ್ಲಿ ಹಾಗೂ ಪಾದಚಾರಿ ಮಾರ್ಗಗಳಲ್ಲಿ ರಾಶಿ ಹಾಕಲಾಗಿದೆ. ಅವುಗಳನ್ನೂ ತೆರವುಗೊಳಿಸಬೇಕು. ಕೊಳವೆ ಅಳವಡಿಕೆಗೆ ತೋಡಿರುವ ಗುಂಡಿಗಳನ್ನು ತಕ್ಷಣವೇ ಮುಚ್ಚಬೇಕು. ಕೆಲವೆಡೆ ಸಾರ್ವಜನಿಕರಿಗೆ ಅಡ್ಡಿಯಾಗುವ ಸ್ಥಿತಿಯಲ್ಲಿರುವ ಟ್ರಾನ್ಸ್‌ಫಾರ್ಮರ್ ಸ್ಥಳಾಂತರ ಕಾರ್ಯ ಪೂರ್ಣಗೊಂಡಿಲ್ಲ. ಈ ಕಾರ್ಯವನ್ನು ಆದ್ಯತೆ ಮೇರೆಗೆ ಕೈಗೊಳ್ಳಬೇಕು' ಎಂದರು.

ಅಭಿವೃದ್ಧಿ ಆಯುಕ್ತರಾದ ವಂದಿತಾ ಶರ್ಮ ಹಾಗೂ ರಾಕೇಶ್ ಸಿಂಗ್ ಅವರು ಕಾಮಗಾರಿ ಪರಿಶೀಲನೆಗೂ ಮುನ್ನ ಸ್ಮಾರ್ಟ್ ಸಿಟಿ ಲಿಮಿಟೆಡ್ ಸಂಸ್ಥೆಯ ಅಧಿಕಾರಿಗಳು ಮತ್ತು ಗುತ್ತಿಗೆದಾರರೊಂದಿಗೆ ಅವರು ಸಭೆ ನಡೆಸಿದರು.

ಮುಖ್ಯ ಎಂಜಿನಿಯರ್ ಮಾತೃ ಇಲಾಖೆಗೆ ವಾಪಸ್

ಸ್ಮಾರ್ಟ್ ಸಿಟಿ ಯೋಜನೆಯಡಿ ಕೈಗೊಂಡ ಕಾಮಗಾರಿಗಳ ಅನುಷ್ಠಾನಗಳ ಕುರಿತು ನಡೆದ ಸಭೆಯಲ್ಲಿ ಸಂಸ್ಥೆಯ ಮುಖ್ಯ ಎಂಜಿನಿಯರ್ ರಂಗನಾಥ ನಾಯ್ಕ್ ಕಾರ್ಯವೈಖರಿ ಬಗ್ಗೆ ಹಿರಿಯ ಅಧಿಕಾರಿಗಳು ಅಸಮಾಧಾನ ವ್ಯಕ್ತಪಡಿಸಿದರು. ಕಾಮಗಾರಿಯಿಂದಾಗಿ ಮಳೆಗಾಲದಲ್ಲಿ ಅನಾಹುತ ಸಂಭವಿಸದಂತೆ ತಡೆಯಲೂ ಅವರು ಕ್ರಮಕೈಗೊಂಡಿಲ್ಲ ಎಂಬ ಆಕ್ಷೇಪವೂ ವ್ಯಕ್ತವಾಯಿತು.

'ರಂಗನಾಥ್ ನಾಯ್ಕ್ ಅವರ ಸೇವೆಯು ಸಂಸ್ಥೆಗೆ ಅಗತ್ಯವಿಲ್ಲ. ಅವರ ಸೇವೆಯನ್ನು ಹಿಂದಕ್ಕೆ ಪಡೆಯಿರಿ' ಎಂದು ರಾಕೇಶ್ ಸಿಂಗ್ ಅವರು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಕಾರ್ಯದರ್ಶಿ ಪಿ.ಹೇಮಲತಾ ಅವರಿಗೆ ಶುಕ್ರವಾರ ಪತ್ರ ಬರೆದಿದ್ದಾರೆ. ಸ್ಮಾರ್ಟ್ ಸಿಟಿ ಕಾಮಗಾರಿಗಳ ಉಸ್ತುವಾರಿಯನ್ನು ರಾಕೇಶ್ ಸಿಂಗ್ ಅವರು ಸದ್ಯಕ್ಕೆ ಬಿಬಿಎಂಪಿ ಮುಖ್ಯ ಎಂಜಿನಿಯರ್ ಬಿ.ಎಸ್. ಪ್ರಹ್ಲಾದ್ ಅವರಿಗೆ ವಹಿಸಿದ್ದಾರೆ.

ವಿಧಾನ ಪರಿಷತ್ ಸದಸ್ಯ ವಿಶ್ವನಾಥ್ ಆರೋಪ

ಒಳ ಒಪ್ಪಂದ ನಡೆದು ವರದಿ ಈಗಾಗಲೇ ಸಿದ್ಧವಾಗಿದ್ದು, ಸೋಮವಾರ ಸಲ್ಲಿಸುತ್ತಾರೆ ಅಷ್ಟೆ ಎಂದರು.

ಆರ್‌ಸಿ– ಕಳಂಕಿತರ ನಡುವೆ ಒಳ ಒಪ್ಪಂದ

ಮೈಸೂರು: 'ಭೂ ಹಗರಣದ ಆರೋಪ ಎದುರಿಸುತ್ತಿರುವ ಕಳಂಕಿತರು ಮತ್ತು ಮೈಸೂರಿನ ಪ್ರಾದೇಶಿಕ ಆಯುಕ್ತರ (ಆರ್‌ಸಿ) ನಡುವೆ ಒಳಒಪ್ಪಂದ ಆಗಿದ್ದು, ಎಲ್ಲ ಹಗರಣಗಳನ್ನೂ ಮುಚ್ಚಿಹಾಕುವ ಪ್ರಯತ್ನ ನಡೆಯುತ್ತಿದೆ' ಎಂದು ವಿಧಾನ ಪರಿಷತ್ ಸದಸ್ಯ ಎಚ್.ವಿಶ್ವನಾಥ್ ಶುಕ್ರವಾರ ಆರೋಪಿಸಿದರು.

'ಶಾಸಕ ಸಾ.ರಾ.ಮಹೇಶ್, ರಾಜಕಾಲುವೆ ಒತ್ತುವರಿ ಮಾಡಿ ಕಲ್ಯಾಣಮಂಟಪ ನಿರ್ಮಿಸಿದ್ದಾರೆ ಎಂಬ ಆರೋಪಕ್ಕೆ ಸಂಬಂಧಿಸಿದಂತೆ ಪ್ರಾದೇಶಿಕ ಆಯುಕ್ತರು ತನಿಖಾ ತಂಡ ರಚಿಸಿದ್ದಾರೆ. ಅವರು ಯಾವ ರೀತಿಯ ವರದಿ ನೀಡುವರು ಎಂಬುದು ನಮಗೆ ಗೊತ್ತಿದೆ. ಕಳಂಕಿತರಿಗೆ ಕ್ಲೀನ್‌ಚೀಟ್ ನೀಡಲಿರುವ ಆ ವರದಿಯ ಮೇಲೆ ಯಾವುದೇ ನಂಬಿಕೆಯಿಲ್ಲ' ಎಂದು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.



'ಭೂಹಗರಣಗಳ ಕುರಿತು ರೋಹಿಣಿ ಸಿಂಧೂರಿ ಮಾಡಿರುವ ನಾಲ್ಕು ಆದೇಶಗಳಲ್ಲಿ ರಾಜಕಾಲುವೆ ಒತ್ತುವರಿ ಬಗ್ಗೆ ಲಿಖಿತವಾಗಿ ಹೇಳಿಲ್ಲ. ಆದರೆ ಆರ್‌ಸಿ, ರಾಜಕಾಲುವೆ ಒತ್ತುವರಿ ವಿಚಾರ ಮಾತ್ರ ಕೈಗೆತ್ತಿಕೊಂಡಿದ್ದಾರೆ. ಅಧಿಕಾರಿಗಳು ಒಂದಷ್ಟು ದೂರ ಸರಪಳಿ ಎಳೆದು, ಸರ್ವೆ ನಡೆಸಿ ಎಲ್ಲವೂ ಸರಿಯಾಗಿದೆ ಎಂಬ ವರದಿ ನೀಡುತ್ತಾರೆ. ಹಿಂದಿನ ಜಿಲ್ಲಾಧಿಕಾರಿ ಮಾಡಿರುವ ಆರೋಪಗಳೆಲ್ಲವೂ ಸುಳ್ಳು, ನಾವು ಸತ್ಯವಂತರು ಎಂಬುದನ್ನು ಬಿಂಬಿಸುವ ಪ್ರಯತ್ನ ನಡೆಯುತ್ತಿದೆ' ಎಂದು ದೂರಿದರು.

ಸಂಕ್ಷಿಪ್ತ ಸುದ್ದಿ

ಲಸಿಕೆ ದುರ್ಬಳಕೆ: ಅಶ್ವತ್ಥನಾರಾಯಣ ವಜಾಕ್ಕೆ ಆಗ್ರಹ

ಬೆಂಗಳೂರು: 'ಲಸಿಕೆ ವಿತರಣೆಯಲ್ಲಿ ಸ್ವಜನ ಪಕ್ಷಪಾತ ನೀತಿ ಅನುಸರಿಸುತ್ತಿರುವ, ಲಸಿಕೆಯನ್ನು ದುರ್ಬಳಕೆ ಮಾಡುತ್ತಿರುವ ಕೋವಿಡ್ ಕಾರ್ಯಪಡೆ ಅಧ್ಯಕ್ಷ ಡಾ.ಸಿ.ಎನ್.ಅಶ್ವತ್ಥನಾರಾಯಣ ಅವರನ್ನು ಈ ಹುದ್ದೆಯಿಂದ ಕೂಡಲೇ ವಜಾಗೊಳಿಸಬೇಕು' ಎಂದು ಆಮ್ ಆದ್ಮಿ ಪಕ್ಷದ ಬೆಂಗಳೂರು ನಗರ ಘಟಕದ ಅಧ್ಯಕ್ಷ ಮೋಹನ್ ದಾಸರಿ ಅವರು ರಾಜ್ಯಪಾಲರನ್ನು ಆಗ್ರಹಿಸಿದ್ದಾರೆ.

ಆನ್‌ಲೈನ್ ಸುದ್ದಿಗೋಷ್ಠಿಯಲ್ಲಿ ಶುಕ್ರವಾರ ಮಾತನಾಡಿದ ಅವರು, 'ಉಪ ಮುಖ್ಯಮಂತ್ರಿಯೂ ಆಗಿರುವ ಅಶ್ವತ್ಥನಾರಾಯಣ ಅವರು ತಾವು ಪ್ರತಿನಿಧಿಸುವ ಮಲ್ಲೇಶ್ವರ ಕ್ಷೇತ್ರವನ್ನು ಗಮನದಲ್ಲಿಟ್ಟುಕೊಂಡು ಕೆಲಸ ಮಾಡುತ್ತಿದ್ದಾರೆ. ತಮ್ಮ ಬೆಂಬಲಿಗರು ಹೆಚ್ಚಿರುವ ಪ್ರದೇಶಗಳಲ್ಲಿ ಮೊದಲೇ ಟೋಕನ್‌ಗಳನ್ನು ವಿತರಿಸಿ ಲಸಿಕೆ ಹಾಕಿಸುತ್ತಿದ್ದಾರೆ' ಎಂದು ಆರೋಪಿಸಿದರು.

'ಜನರು ಲಸಿಕೆ ಪಡೆಯಲು ಆರೋಗ್ಯ ಕೇಂದ್ರಗಳ ಎದುರು ಸಾಲುಗಟ್ಟಿ ನಿಲ್ಲುತ್ತಿದ್ದಾರೆ. ಹೀಗಿದ್ದರೂ ಯಾರಿಗೂ ಲಸಿಕೆ ಸಿಗುತ್ತಿಲ್ಲ. ಲಸಿಕೆ ನೀಡುವಿಕೆಯಲ್ಲೂ ಬಿಜೆಪಿ ಮತ ಬ್ಯಾಂಕ್ ನೀತಿ ಅನುಸರಿಸುತ್ತಿದೆ. ಇದಕ್ಕೆ ಮುಖ್ಯಮಂತ್ರಿ ಹಾಗೂ ಕೋವಿಡ್ ಕಾರ್ಯಪಡೆ ಅಧ್ಯಕ್ಷರು ಬೆನ್ನೆಲುಬಾಗಿ ನಿಂತಿದ್ದಾರೆ' ಎಂದು ದೂರಿದರು.

₹ 2 ಕೋಟಿ ಕರೆನ್ಸಿ ಆಮಿಷ: ₹ 10.13 ಲಕ್ಷ ವಂಚನೆ

ಬೆಂಗಳೂರು: ಲಂಡನ್‌ನಿಂದ ₹ 2 ಕೋಟಿ ಮೊತ್ತದ ಕರೆನ್ಸಿ ತಂದಿರುವುದಾಗಿ ಹೇಳಿದ್ದ ಆನ್‌ಲೈನ್ ವರನೊಬ್ಬ, ನಗರದ ಯುವತಿಯೊಬ್ಬರಿಂದ ₹ 10.13 ಲಕ್ಷ ಪಡೆದು ವಂಚಿಸಿದ್ದಾನೆ.

ಗುರುರಾಘವೇಂದ್ರ ಲೇಔಟ್ ನಿವಾಸಿಯಾಗಿರುವ 31 ವರ್ಷದ ಯುವತಿ ದೂರು ನೀಡಿದ್ದಾರೆ. ಆರೋಪಿ ಪ್ರೇಮ್ ಬಸು ಹಾಗೂ ಇತರರ ವಿರುದ್ಧ ದಕ್ಷಿಣ ವಿಭಾಗ ಸೈಬರ್ ಕ್ರೈಂ ಠಾಣೆಯಲ್ಲಿ ಎಫ್ಐಆರ್ ದಾಖಲಾಗಿದೆ.

'ಯುವತಿ, ಜೀವನ್‌ಸಾಥಿ ಡಾಟ್ ಕಾಮ್ ಜಾಲತಾಣದಲ್ಲಿ ಖಾತೆ ತೆರೆದಿದ್ದರು. ಜಾಲತಾಣದಲ್ಲಿಯೇ ಯುವತಿಗೆ ಪ್ರೇಮ್ ಬಸು ಪರಿಚಯವಾಗಿತ್ತು' ಎಂದು ಪೊಲೀಸರು ಹೇಳಿದರು.

ಎಲ್ಲ ಭೂ ಅಕ್ರಮಗಳ ತನಿಖೆಗೆ ಬಡಗಲಪುರ ನಾಗೇಂದ್ರ ಆಗ್ರಹ

ಮೈಸೂರು: 'ಐಎಎಸ್ ಅಧಿಕಾರಿಗಳಿಬ್ಬರ ಅಪ್ರಬುದ್ಧ ವರ್ತನೆ, ಐಎಎಸ್ ಅಧಿಕಾರಿ ಹಾಗೂ ಚುನಾಯಿತ ಜನಪ್ರತಿನಿಧಿಗಳ ನಡುವಿನ ಬೀದಿ ರಂಪಾಟದಿಂದ ಮೈಸೂರಿಗೆ ಅಪಖ್ಯಾತಿ ಬಂದಿದೆ' ಎಂದು ರಾಜ್ಯ ರೈತ ಸಂಘದ ಅಧ್ಯಕ್ಷ ಬಡಗಲಪುರ ನಾಗೇಂದ್ರ ಶುಕ್ರವಾರ ಇಲ್ಲಿ ಬೇಸರ ವ್ಯಕ್ತಪಡಿಸಿದರು.

'ಭೂ ಒತ್ತುವರಿ ಅಕ್ರಮವನ್ನು ಇದೊಂದೇ ಪ್ರಕರಣಕ್ಕೆ ಸೀಮಿತಗೊಳಿಸದೆ, ಮೈಸೂರಿನಲ್ಲಿ ನಡೆದಿರುವ ಎಲ್ಲ ಅಕ್ರಮವನ್ನೂ ತನಿಖೆಗೊಳಪಡಿಸಬೇಕು' ಎಂದು ಆಗ್ರಹಿಸಿದರು.

ಶಿವಾನಂದ ವೃತ್ತದ ರೆಡ್ಡಿ ಪೆಟ್ರೋಲ್ ಬಂಕ್ ಎದುರು ಪ್ರತಿಭಟನೆ ನಡೆಸುತ್ತಿದ್ದ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಮತ್ತು ಪಕ್ಷದ ಮುಖಂಡರು, ಕಾರ್ಯಕರ್ತರನ್ನು ಪೊಲೀಸರು ವಶಕ್ಕೆ ಪಡೆದು ಕರೆದೊಯ್ಯುತ್ತಿರುವುದು (ಎಡಚಿತ್ರ), ಮಿನರ್ವ ವೃತ್ತದ ಪೆಟ್ರೋಲ್ ಬಂಕ್‌ನಲ್ಲಿ ಮಾಜಿ ಶಾಸಕ ಆರ್.ವಿ. ದೇವರಾಜ್ ನೇತೃತ್ವದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು –ಪ್ರಜಾವಾಣಿ ಚಿತ್ರಗಳು

ತೈಲ ಬೆಲೆ ಏರಿಕೆ ವಿರೋಧಿಸಿ ನಗರದ ವಿವಿಧೆಡೆ ‘ಪೆಟ್ರೋಲ್ 100 ನಾಟೌಟ್’ ಪ್ರದರ್ಶನ

ಪೆಟ್ರೋಲ್ ಬಂಕ್ ಎದುರು ಕಾಂಗ್ರೆಸ್ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೆಟ್ರೋಲಿಯಂ ಉತ್ಪನ್ನದಗಳ ದರ ಏರಿಕೆ ವಿರೋಧಿಸಿ ಕಾಂಗ್ರೆಸ್ ಶಾಸಕರು, ಮುಖಂಡರು ಮತ್ತು ಕಾರ್ಯಕರ್ತರು ನಗರದ ವಿವಿಧೆಡೆ ಪೆಟ್ರೋಲ್ ಬಂಕ್‌ಗಳ ಎದುರು ಶುಕ್ರವಾರ ‘ಪೆಟ್ರೋಲ್ 100 ನಾಟೌಟ್’ ಪ್ರತಿಭಟನಾ ಪ್ರದರ್ಶನ ನಡೆಸಿದರು.

ಪ್ರತಿ ಲೀಟರ್ ಪೆಟ್ರೋಲ್ ದರ ₹ 100 ದಾಟಿರುವ ಕಾರಣದಿಂದ ದೇಶದಾದ್ಯಂತ ಪೆಟ್ರೋಲ್ ಬಂಕ್‌ಗಳ ಎದುರು ಪ್ರತಿಭಟನಾ ಪ್ರದರ್ಶನ ನಡೆಸುವಂತೆ ಎಐಸಿಸಿ ಸೂಚನೆ ನೀಡಿತ್ತು.

ಅಭಿಯಾನದ ಭಾಗವಾಗಿ ಶಿವಾನಂದ ವೃತ್ತದ ರೆಡ್ಡಿ ಪೆಟ್ರೋಲ್ ಬಂಕ್, ಭಾರತೀಯ ರಿಸರ್ವ್ ಬ್ಯಾಂಕ್ ಪ್ರಧಾನ ಕಚೇರಿ ಮುಂಭಾಗದ ಪೆಟ್ರೋಲ್ ಬಂಕ್ ಸೇರಿದಂತೆ ಹಲವು ಕಡೆಗಳಲ್ಲಿ ಪ್ರತಿಭಟನೆ ನಡೆಸಿಸಿದರು.

ಶಿವಾನಂದ ವೃತ್ತದ ರೆಡ್ಡಿ ಪೆಟ್ರೋಲ್ ಬಂಕ್ ಬಳಿ ನಡೆದ ಪ್ರತಿಭಟನೆಯಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಶಾಸಕರಾದ ದಿನೇಶ್ ಗುಂಡೂರಾವ್, ಆರ್.ವಿ. ದೇಶಪಾಂಡೆ, ವಿಧಾನ ಪರಿಷತ್ ಸದಸ್ಯ ಪ್ರಕಾಶ್ ರಾಥೋಡ್, ಮಾಜಿ ಶಾಸಕ ಅಶೋಕ್ ಪಟ್ಟಣ, ವಿಧಾನ ಪರಿಷತ್‌ನ ಮಾಜಿ ಸದಸ್ಯ ವಿ.ಆರ್. ಸುದರ್ಶನ್ ಸೇರಿದಂತೆ ಹಲವರು ಪಾಲ್ಗೊಂಡಿದ್ದರು.

ಗೊಟ್ಟಿಗೆರೆ ಬ್ಲಾಕ್ ಕಾಂಗ್ರೆಸ್ ಹಮ್ಮಿಕೊಂಡಿದ್ದ ಪ್ರತಿಭಟನೆಯಲ್ಲಿ ಆರ್.ಕೆ.ರಮೇಶ್, ಶ್ರೀಧರ್ ಲಕ್ಷ್ಮಣ್, ಗೊಟ್ಟಿಗೆರೆ ಬ್ಲಾಕ್ ಉಪಾಧ್ಯಕ್ಷ ಚಂದ್ರು, ಶೋಭಾಗೌಡ, ಕಾಂತರಾಜು, ಲೋಕೇಶ್, ಬಾಬುರೆಡ್ಡಿ, ನವೀನ್ ಭಾಗವಹಿಸಿದರು.

‘ಪೆಟ್ರೋಲ್ 100 ನಾಟ್ ಔಟ್’ ಎಂಬ ಬರಹವುಳ್ಳ ಫಲಕಗಳನ್ನು ಹಿಡಿದಿದ್ದ ಕಾಂಗ್ರೆಸ್ ಮುಖಂಡರು ಮತ್ತು ಕಾರ್ಯಕರ್ತರು, ಕೆಲ ಕಾಲ ಪ್ರತಿಭಟನಾ ಪ್ರದರ್ಶನ ನಡೆಸಿದರು. ಕೇಂದ್ರ ಸರ್ಕಾರ ಪೆಟ್ರೋಲಿಯಂ ಉತ್ಪನ್ನಗಳ ದರ ಏರಿಕೆ ನಿಯಂತ್ರಿಸುವಲ್ಲಿ ವಿಫಲವಾಗಿದೆ ಎಂಬ ಘೋಷಣೆಗಳನ್ನು ಕೂಗಿದರು.

ಪ್ರತಿಭಟನೆ ಅಂತ್ಯಗೊಳಿಸಬೇಕೆಂಬ ಪೊಲೀಸರ ಮನವಿಯನ್ನು ಕಾಂಗ್ರೆಸ್ ನಾಯಕರು ತಿರಸ್ಕರಿಸಿದರು. ಬಳಿಕ ಎಲ್ಲರನ್ನೂ ವಶಕ್ಕೆ ಪಡೆದ ಹೈಗ್ರೌಂಡ್ಸ್ ಠಾಣೆ ಪೊಲೀಸರು ವಾಹನದಲ್ಲಿ ಕರೆದೊಯ್ದರು. ಕೆಲವು ಸಮಯದ ಬಳಿಕ ಎಲ್ಲರನ್ನೂ ಬಿಡುಗಡೆ ಮಾಡಿದರು.

₹ 100ರ ನೋಟು ಪ್ರದರ್ಶನ: ರಿಸರ್ವ್ ಬ್ಯಾಂಕ್ ಪ್ರಾದೇಶಿಕ ಕಚೇರಿ ಎದುರಿನ ಪೆಟ್ರೋಲ್ ಬಂಕ್ ಬಳಿ ನಡೆದ ಪ್ರತಿಭಟನೆಯ ನೇತೃತ್ವವನ್ನು ಕೆಪಿಸಿಸಿ ಕಾರ್ಯಾಧ್ಯಕ್ಷರಾದ ರಾಮಲಿಂಗಾ ರೆಡ್ಡಿ ಮತ್ತು ಈಶ್ವರ ಖಂಡ್ರೆ ವಹಿಸಿದ್ದರು. ₹ 100ರ ನೋಟು ಪ್ರದರ್ಶಿಸಿ ಬೈಕ್‌ಗೆ ಪೆಟ್ರೋಲ್ ತುಂಬಿಸಿಕೊಂಡ ಕಾಂಗ್ರೆಸ್ ಕಾರ್ಯಕರ್ತರು, ಕೇಂದ್ರ ಸರ್ಕಾರದ ವಿರುದ್ಧ ಘೋಷಣೆ ಕೂಗುತ್ತಾ ಸಾಗಿದರು.

ಮನೋಹರ್, ಸಲೀಂ ಅಹ್ಮದ್, ಆನಂದ, ಜನಾರ್ದನ ಸೇರಿದಂತೆ ಹಲವು ಮುಖಂಡರು, ಕಾರ್ಯಕರ್ತರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

‘ತೈಲ ದರ ಏರಿಕೆ; ಗಾಯದ ಮೇಲೆ ಬರೆ’

‘ದೇಶದ ಜನ ಕೊರೊನಾದಿಂದಾಗಿ ಉದ್ಯೋಗ ಕಳೆದುಕೊಂಡು ಆಹಾರಕ್ಕಾಗಿ ಪರದಾಡುತ್ತಿರುವಾಗ ಕೇಂದ್ರ ಹಾಗೂ ಸರ್ಕಾರಗಳು ದಿನಸಿ ಪದಾರ್ಥಗಳು ಹಾಗೂ ತೈಲ ದರಗಳನ್ನು ಏರಿಕೆ ಮಾಡಿ ಗಾಯದ ಮೇಲೆ ಬರೆ ಎಳೆದಿವೆ’ ಎಂದು ಕಾಂಗ್ರೆಸ್ ಮುಖಂಡ ಆರ್.ಕೆ. ರಮೇಶ್ ಖಂಡಿಸಿದರು.

ತೈಲ ಬೆಲೆ ಏರಿಕೆ ವಿರುದ್ಧ ಗೊಟ್ಟಿಗೆರೆ ಬ್ಲಾಕ್ ಕಾಂಗ್ರೆಸ್ ಸಮಿತಿಯು ಗೊಟ್ಟಿಗೆರೆ, ದೊಡ್ಡಕಲ್ಲಸಂದ್ರ, ಅಂಜನಾಪುರ, ಬೇಗೂರು, ತೋಟಗೂರಿನ ಪೆಟ್ರೋಲ್ ಬಂಕ್‌ಗಳ ಎದುರು ಶುಕ್ರವಾರ ಹಮ್ಮಿಕೊಂಡಿದ್ದ ‘100 ನಾಟೌಟ್’ ಪ್ರತಿಭಟನೆಯಲ್ಲಿ ಅವರು ಮಾತನಾಡಿದರು.

‘ರಾಜ್ಯದಿಂದ 25 ಸಂಸದರನ್ನು ಕಳುಹಿಸಿ ಏನೂ ಪ್ರಯೋಜನವಿಲ್ಲ. ಅಗತ್ಯ ವಸ್ತುಗಳ ಬೆಲೆ ಏರಿಕೆ ಮಾಡಿ ಜನರ ಹೊಟ್ಟೆಯ ಮೇಲೆ ಹೊಡೆಯುತ್ತಿದ್ದಾರೆ’ ಎಂದರು.

ಗೊಟ್ಟಗೆರೆ ಬ್ಲಾಕ್ ಅಧ್ಯಕ್ಷ ಶ್ರೀಧರ್ ಲಕ್ಷ್ಮಣ್, ‘ಸಾವಿನಲ್ಲೂ ಮತ ಬ್ಯಾಂಕ್ ರಾಜಕಾರಣ ಮಾಡುತ್ತಿರುವ ರಾಜ್ಯ ಸರ್ಕಾರಕ್ಕೆ ಬಡವರ ಕೂಗು ಕೇಳುತ್ತಿಲ್ಲ.ಸಾಧ್ಯವಾದರೆ ನೊಂದವರ ನೆರವಿಗೆ ಧಾವಿಸಿ. ನಿಮಗಿಂತ ಸಂಘ ಸಂಸ್ಥೆಗಳೇ ಉತ್ತಮ ಕೆಲಸ ಮಾಡುತ್ತಿವೆ. ಇಲ್ಲಿನ ನಾಯಕರು ಸಾವಿನ ಏಜೆಂಟರಾಗಿದ್ದಾರೆ’ ಎಂದು ದೂರಿದರು.

‘ಮೋದಿ ಸೆಂಚುರಿ ನಾಟ್ ಔಟ್’– ಕಾಂಗ್ರೆಸ್ ಗೇಲಿ

ಯಲಹಂಕ: ತೈಲ ಬೆಲೆಏರಿಕೆ ಖಂಡಿಸಿ ಬ್ಯಾಟರಾಯನಪುರ ಕ್ಷೇತ್ರದ 7 ವಾರ್ಡ್‌ಗಳು ಹಾಗೂ ಜಾಲಾ ಹೋಬಳಿ ವ್ಯಾಪ್ತಿಯ 14 ಕಡೆಗಳಲ್ಲಿ ಶಾಸಕ ಕೃಷ್ಣಬೈರೇಗೌಡ ನೇತೃತ್ವದಲ್ಲಿ ಕಾಂ ಗ್ರೆಸ್ ಕಾರ್ಯಕರ್ತರು, ಪ್ರತಿಭಟನೆ ನಡೆಸಿದರು.

ಚಿಕ್ಕಜಾಲದ ಪೆಟ್ರೋಲ್ ಬಂಕ್ ಬಳಿ ಪ್ರತಿಭಟನೆ ನಡೆಸಿದ ಕಾರ್ಯಕರ್ತರನ್ನು ಉದ್ದೇಶಿಸಿ ತಾಲ್ಲೂಕು ಪಂಚಾಯಿತಿ ಮಾಜಿ ಸದಸ್ಯ ಉದಯಶಂಕರ್ ಮಾತನಾಡಿದರು. ಥಣಿಸಂದ್ರದ ಪೆಟ್ರೋಲ್ ಬಂಕ್ ಬಳಿ ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡಿದ ಕಾಂಗ್ರೆಸ್ ಮುಖಂಡ ಪಳನಿ ವೆಂಕಟೇಶ್, ’ಈಗಾಗಲೆ ಕೊರೊನಾ ಸಂಕಷ್ಟಪರಿಸ್ಥಿತಿಯಲ್ಲಿ ಜೀವನನಡೆಸಲು ಪರದಾಡುತ್ತಿರುವ ಬಡವರು, ಬೆಲೆಗಳ ಏರಿಕೆಯಿಂದ ಇನ್ನಷ್ಟು ಸಂಕಷ್ಟಕ್ಕೆ ಸಿಲುಕಿದ್ದಾರೆ‘ ಎಂದರು.

ತಿರುಮೇನಹಳ್ಳಿಯ ಪೆಟ್ರೋಲ್ ಬಂಕ್ ಬಳಿ, ಕ್ರಿಕೆಟ್ ವೇಷ ಧರಿಸಿ ಹೆಲ್ಮೆಟ್ ಮತ್ತು ಬ್ಯಾಟನ್ನು ಮೇಲಕ್ಕೆ ಎತ್ತಿ ತೋರಿಸುವ ಮೂಲಕ ’ಮೋದಿ ಸೆಂಚುರಿ ನಾಟ್ ಔಟ್‘ ಎಂದು ಗೇಲಿಮಾಡಿದ ಕಾರ್ಯಕರ್ತರು, ಗ್ರಾಹಕರ ವಾಹನಗಳಿಗೆ ಉಚಿತವಾಗಿ ಪೆಟ್ರೋಲ್ ಹಾಕಿಸುವ ಮೂಲಕ ದರ ಏರಿಕೆಯನ್ನು ಖಂಡಿಸಿದರು.

ಹೆಗಡೆನಗರ, ಭುವನೇಶ್ವರಿನಗರ, ಕೊಡಿಗೇಹಳ್ಳಿ ಗೇಟ್, ಬಾಗಲೂರು, ಸಾದಹಳ್ಳಿ ಗೇಟ್, ಕಟ್ಟಿಗೇನಹಳ್ಳಿ, ಭದ್ರಪ್ಪ ಲೇಔಟ್, ನಂಜಪ್ಪ ವೃತ್ತ, ತಿಂಡ್ಲು, ಸಿಂಗಾಪುರ ಹಾಗೂ ಎಂ.ಎಸ್.ಪಾಳ್ಯದ ಪೆಟ್ರೋಲ್ ಬಂಕ್‌ಗಳ ಬಳಿ ಸರಣಿ ಪ್ರತಿಭಟನೆಗಳನ್ನು ನಡೆಸಿದರು. ಕಾಂಗ್ರೆಸ್ ಮುಖಂಡರಾದ ಎಂ.ಜಯಗೋಪಾಲಗೌಡ, ಎಚ್.ವಿ. ಶಿವಕುಮಾರ್, ಲಕ್ಷ್ಮೀಪತಿ, ಪಾಲಿಕೆ ಮಾಜಿ ಸದಸ್ಯ ವಿ.ಸಿ. ಹರಿಪ್ರಸಾದ್ ಮತ್ತಿತರರು ಪಾಲ್ಗೊಂಡಿದ್ದರು.

ತೈಲ ಬೆಲೆ ಏರಿಕೆ ವಿರುದ್ಧ ಪ್ರತಿಭಟನೆ ನಡೆಸಿ ಘೋಷಣೆ ಕೂಗಿದ ಕಾಂಗ್ರೆಸ್ ಕಾರ್ಯಕರ್ತರು.

ಪೆಟ್ರೋಲ್ ಕೊಳ್ಳಲು ‘ಸಾಲ ಯೋಜನೆ’ ಅಣಕು ಪ್ರದರ್ಶನ

ಪ್ರಜಾವಾಣಿ ವಾರ್ತೆ

ಬೊಮ್ಮನಹಳ್ಳಿ: ಪೆಟ್ರೋಲ್, ಡೀಸೆಲ್ ದರಗಳ ಏರಿಕೆ ವಿರುದ್ಧ ಕಾಂಗ್ರೆಸ್ ಕಾರ್ಯಕರ್ತರು ಬೊಮ್ಮನಹಳ್ಳಿ ಹಾಗೂ ವಿಜಯ ಬ್ಯಾಂಕ್ ಲೇಔಟ್ ಬಳಿ ಗುರುವಾರ ಪ್ರತಿಭಟನೆ ನಡೆಸಿದರು.

ಲೀಟರ್‌ಗೆ ₹100 ತಲುಪಿರುವ ಪೆಟ್ರೋಲ್ ಕೊಳ್ಳಲು ‘ಸಾಲ ಯೋಜನೆ’ ಅಣಕು ಪ್ರದರ್ಶನದ ಮೂಲಕ ಪ್ರತಿಭಟನೆ ನಡೆಸಿ ಜನರ ಗಮನ ಸೆಳೆದರು.

ಇಂಡಿಯನ್ ಆಯಿಲ್ ಪೆಟ್ರೋಲ್ ಬಂಕ್ ಎದುರು ಸೇರಿದ್ದ ಕಾರ್ಯಕರ್ತರು, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ನೀತಿಗಳ ವಿರುದ್ಧ ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

‘ಕೊರೊನಾ ಸಂದರ್ಭದಲ್ಲಿ ಎಲ್ಲ ಅಗತ್ಯ ವಸ್ತುಗಳ ಬೆಲೆಗಳು ಗಗನ ಮುಟ್ಟಿವೆ. ರಾಜ್ಯ ಸರ್ಕಾರವೂ ಎರಡನೇ ಬಾರಿ ವಿದ್ಯುತ್ ದರ ಏರಿಸಿದೆ. ಕೇಂದ್ರ ಸರ್ಕಾರ ತೈಲ ಬೆಲೆಗಳ ಏರಿಕೆಗೆ ಕಡಿವಾಣ ಹಾಕದೇ ಹಗಲು ದರೋಡೆಗೆ ನಿಂತಿದೆ’ ಎಂದು ಬೊಮ್ಮನಹಳ್ಳಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಟಿ.ವಾಸುದೇವರೆಡ್ಡಿ ಹೇಳಿದರು.

ಪ್ರತಿಭಟನೆಯಲ್ಲಿ ಬಿಳೇಕಹಳ್ಳಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಅಶ್ವತ್ಥ ನಾರಾಯಣ್, ಕಾಂಗ್ರೆಸ್ ಮುಖಂಡರಾದ ಅನಿಲ್ ರೆಡ್ಡಿ, ರವೀಂದ್ರ ಮತ್ತಿತರರು ಇದ್ದರು.

‘ಕೋವಿಡ್ ನಿಯಮ ಉಲ್ಲಂಘಿಸಿದ ಕಾಂಗ್ರೆಸ್’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಲಾಕ್‌ಡೌನ್ ಇರುವಾಗಲೂ ಮನೆಯಿಂದ ಹೊರಬಂದು ಪ್ರತಿಭಟನೆ ನಡೆಸುವ ಮೂಲಕ ಕಾಂಗ್ರೆಸ್ ಪಕ್ಷ ನಿಯಮವನ್ನು ಉಲ್ಲಂಘಿಸಿದೆ ಎಂದು ಗೃಹ ಸಚಿವ ಬಸವರಾಜ ಬೊಮ್ಮಾಯಿ ಟೀಕಿಸಿದರು.

ಅತ್ಯಂತ ತುರ್ತು ಸಂದರ್ಭದಲ್ಲಿ ಬೆಲೆ ಏರಿಕೆ ವಿಚಾರದಲ್ಲಿ ಹೋರಾಟ ಮಾಡುವ ಅಗತ್ಯವೇನಿತ್ತು. ಇದು ಕಾಂಗ್ರೆಸ್ ಪಕ್ಷದ ನಕಾರಾತ್ಮಕ ರಾಜಕಾರಣಕ್ಕೆ ಸಾಕ್ಷಿ ಎಂದು ಅವರು ಹೇಳಿದರು.

‘ಕಾಂಗ್ರೆಸ್ ಪಕ್ಷದ ನಾಯಕರು ಎಲ್ಲ ನೀತಿ–ನಿಯಮಗಳನ್ನು ಉಲ್ಲಂಘನೆ ಮಾಡುವ ಪ್ರವೃತ್ತಿಯನ್ನು ಹೊಂದಿದ್ದಾರೆ.



ಬಸವರಾಜ ಬೊಮ್ಮಾಯಿ

ಮೊದಲು ಲಸಿಕೆ ಹಾಕಿಸಿಕೊಳ್ಳಿ ಎಂದರೆ, ಯಾಕೆ ಹಾಕಿಸಿಕೊಳ್ಳಬೇಕು ಎಂದು ಪ್ರಶ್ನಿಸುತ್ತಿದ್ದರು. ಮೊದಲು ಪ್ರಧಾನಿ ನರೇಂದ್ರ ಮೋದಿ ಅವರು ಲಸಿಕೆ ಹಾಕಿಸಿಕೊಳ್ಳಲಿ ಎಂದರು. ಈಗ ಅವರ ವರಸೆಯೇ ಬದಲಾಗಿದೆ. ಲಸಿಕೆ ಏಕೆ ಕೊಡುತ್ತಿಲ್ಲ ಎಂದು ಪ್ರಶ್ನಿಸುತ್ತಿದ್ದಾರೆ’ ಎಂದು ಬಸವರಾಜ ಬೊಮ್ಮಾಯಿ ಅವರು ಲೇವಡಿ ಮಾಡಿದರು.

ಶಿಕ್ಷಣ: ಗೂಗಲ್–ಕ್ಯೂಮ್ಯಾತ್ ನಡುವೆ ಒಪ್ಪಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಾಲಾ ನಂತರದ ಶಿಕ್ಷಣದಲ್ಲಿ ಗಣಿತ ಮತ್ತು ಕೋಡಿಂಗ್ ಪ್ರೋಗ್ರಾಂ ಕೋರ್ಸ್‌ಗಳನ್ನು ಕಲಿಸುವ ‘ಕ್ಯೂಮ್ಯಾತ್’ ಸಂಸ್ಥೆಯು ಶಿಕ್ಷಣದ ಉದ್ದೇಶಕ್ಕಾಗಿ ಗೂಗಲ್‌ನೊಂದಿಗೆ ಪಾಲುದಾರಿಕೆ ಒಪ್ಪಂದ ಮಾಡಿಕೊಂಡಿದೆ.

ಪಾಲುದಾರಿಕೆಯ ಭಾಗವಾಗಿ, ಕ್ಯೂಮಾತ್ ಶಿಕ್ಷಕರು ಮತ್ತು ವಿದ್ಯಾರ್ಥಿಗಳಿಗೆ ‘ಶಿಕ್ಷಣಕ್ಕಾಗಿ ಗೂಗಲ್’ ಪ್ರಮಾಣಪತ್ರ ನೀಡಲಾಗುವುದು ಎಂದು ಸಂಸ್ಥೆ ಹೇಳಿದೆ.

ಸಾಲ ನೀಡುವ ಹಣಕಾಸು ಸಂಸ್ಥೆಗಳ ಜೊತೆ ಖಾಸಗಿ ಶಾಲೆಯ ಒಪ್ಪಂದ

ಬಡ್ಡಿಗೆ ಸಾಲ ಪಡೆದು ಶುಲ್ಕ ಕಟ್ಟಿ!

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್‌ನಿಂದ ಈಗಾಗಲೇ ಸಂಕಷ್ಟದಲ್ಲಿರುವ ಪೋಷಕರಿಗೆ ಈಗಲೇ ಬೋಧನಾ ಶುಲ್ಕ ಪಾವತಿಸಿ, ಹಣ ಇರದಿದ್ದರೆ ಬಡ್ಡಿಗೆ ಸಾಲ ತೆಗೆದಾದರೂ ಕೊಡಿ ಎಂದು ನಗರದ ಖಾಸಗಿ ಶಾಲೆಗಳು ಒತ್ತಡ ಹೇರಲು ಆರಂಭಿಸಿವೆ. ಅದರಲ್ಲಿಯೂ, ಪ್ರತಿಷ್ಠಿತ ಶಾಲೆಯೊಂದು ಪೋಷಕರಿಗೆ ಫೈನಾನ್ಸ್ ಸಂಸ್ಥೆಗಳಿಂದ ಬಡ್ಡಿಗೆ ಸಾಲ ಕೊಡಿಸಿ ಆ ಸಾಲದ ಮೊತ್ತವನ್ನು ಶುಲ್ಕಕ್ಕೆ ಜಮಾ ಮಾಡಿಕೊಳ್ಳಲು ಮುಂದಾಗಿದೆ.

ನಗರದ ಆರ್.ಟಿ. ನಗರದಲ್ಲಿರುವ ಖಾಸಗಿ ಶಾಲೆಯೊಂದು ಇಂತಹ ಕೆಲಸಕ್ಕೆ ಕೈ ಹಾಕಿದೆ. ಹೀಗೆ ಸಾಲ ಪಡೆಯುವ ಪೋಷಕರಿಗೆ 6 ತಿಂಗಳ ವರೆಗೆ ಬಡ್ಡಿ ವಿನಾಯಿತಿಯಂತಹ ಕೊಡುಗೆಗಳನ್ನೂ ನೀಡಲಾಗುತ್ತಿದೆ. ಆದರೆ, ಶುಲ್ಕ ಮೊತ್ತದಷ್ಟು ಸಾಲ ಬಿಟ್ಟು ಒಂದು ರೂಪಾಯಿ ಕೂಡ ಹೆಚ್ಚಿಗೆ ನೀಡುವುದಿಲ್ಲ!

ಆರು ತಿಂಗಳ ಬಳಿಕ 9 ತಿಂಗಳ ವರೆಗೆ ಶೇ 2ರಷ್ಟು ಬಡ್ಡಿ, 11 ತಿಂಗಳ ವರೆಗೆ ಶೇ 3.5ರಷ್ಟು ಬಡ್ಡಿದರದಲ್ಲಿ ಸಾಲ ತೀರಿಸುವಂತೆ ಒತ್ತಡ ಹೇರಲಾಗುತ್ತಿದೆ ಎಂದು ಕೆಲವು ಪೋಷಕರು ಆರೋಪಿಸಿದ್ದಾರೆ.

ಆದೇಶಕ್ಕೆ ಕಿಮ್ಮತ್ತಿಲ್ಲ: ಸಾರ್ವಜನಿಕ ಶಿಕ್ಷಣ ಇಲಾಖೆ ಪ್ರಕಟಿಸಿರುವ 2021-22ನೇ ಸಾಲಿನ ವೇಳಾಪಟ್ಟಿ ಪ್ರಕಾರ, ಜೂನ್ 15ರಿಂದ ಶಾಲಾ ದಾಖಲಾತಿಯನ್ನು, ಜುಲೈ 1 ರಿಂದ ಆನ್‌ಲೈನ್ ತರಗತಿಗಳನ್ನು ಆರಂಭಿಸಬೇಕು. ಆದರೆ, ನಿಯಮ ಉಲ್ಲಂಘಿಸಿ ಈಗಾಗಲೇ ಹಲವು ಶಾಲೆಗಳು ಶುಲ್ಕ ಪಾವತಿಸಿ ಮಕ್ಕಳ ದಾಖಲಾತಿ ಮಾಡಿಕೊಳ್ಳುವಂತೆ ಪೋಷಕರ ಮೇಲೆ ಒತ್ತಡ ಹೇರುತ್ತಿವೆ.

ಆನ್‌ಲೈನ್ ತರಗತಿಗಳನ್ನೂ ಆರಂಭಿಸಿರುವ ಕೆಲವು ಶಾಲೆಗಳು ಶುಲ್ಕ ಕಟ್ಟಿ ದಾಖಲಾತಿ ಮಾಡದಿದ್ದರೆ ಮತ್ತೆ ಆನ್‌ಲೈನ್ ತರಗತಿ ನೀಡುವುದಿಲ್ಲ ಎಂದು ಬೆದರಿಕೆ ಒಡ್ಡುತ್ತಿವೆ. ಸರ್ಕಾರದ ಕಳೆದ ವರ್ಷದ ಆದೇಶದಂತೆ ಶೇ 70 ರಷ್ಟು ಶುಲ್ಕ ಕಟ್ಟಲು ಕೂಡ ಒಪ್ಪುತ್ತಿಲ್ಲ. ಶುಲ್ಕ ವಿಚಾರ ಕೋರ್ಟ್‌ನಲ್ಲಿರುವುದರಿಂದ ನಮ್ಮ ಆಡಳಿತ ಮಂಡಳಿ ನಿರ್ಧರಿಸುವಷ್ಟು ಪೂರ್ಣ ಶುಲ್ಕ ಕಟ್ಟಬೇಕು. ಕಳೆದ ವರ್ಷದ್ದೂ ಬಾಕಿ ಶುಲ್ಕ ಪಾವತಿಸಬೇಕೆಂದು ಒತ್ತಾಯಿಸುತ್ತಿವೆ ಎಂದು ಪೋಷಕರು ದೂರಿದ್ದಾರೆ.

ವರ್ಗಾವಣೆ ಪ್ರಮಾಣಪತ್ರ ಒತ್ತೆ

ಪೋಷಕರಿಗೆ ಸಾಲ ತೀರಿಸಲಾಗದಿದ್ದರೆ ಅವರ ಮಕ್ಕಳ ವರ್ಗಾವಣೆ ಪ್ರಮಾಣ ಪತ್ರವನ್ನು (ಟಿಸಿ) ಶಾಲೆಯವರು ಅಡ ಇಟ್ಟುಕೊಳ್ಳುತ್ತಿದ್ದಾರೆ. ಸಾಲ ನೀಡುವಾಗ ಪೋಷಕರ ಬ್ಯಾಂಕ್ ಅಕೌಂಟ್‌ನ ಚೆಕ್‌ಗಳನ್ನು ಪಡೆಯಲಾಗುತ್ತಿದ್ದು, ಸಾಲ ತೀರಿಸದಿದ್ದರೆ ಚೆಕ್‌ಬೌನ್ಸ್ ಪ್ರಕರಣ ದಾಖಲಿಸುವ ಬೆದರಿಕೆ ಒಡ್ಡಲಾಗುತ್ತಿದೆ ಎಂದೂ ಕೆಲವು ಪೋಷಕರು ಆರೋಪ ಮಾಡಿದ್ದಾರೆ.

ಹಾಪ್‌ಕಾಮ್ಸ್: ಮಾವು ಮಾರಾಟಕ್ಕೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತೋಟದ ಬೆಳೆಗಾರರ ಸಹಕಾರಿ ಮಾರಾಟ ಮತ್ತು ಸಂಸ್ಕರಣಾ ಸಂಘಕ್ಕೆ (ಹಾಪ್‌ಕಾಮ್ಸ್) ಬೆಳೆಗಾರರು ಕಳುಹಿಸುವ ಮಾವನ್ನು ನೈಸರ್ಗಿಕವಾಗಿ ಮಾಗಿಸಿ, ಸಂಸ್ಥೆಯ ಬಾಕ್ಸ್‌ಗಳಲ್ಲೇ ಸುರಕ್ಷಿತವಾಗಿ ಗ್ರಾಹಕರಿಗೆ ಪೂರೈಸುವ ವ್ಯವಸ್ಥೆಗೆ ಶುಕ್ರವಾರ ಚಾಲನೆ ನೀಡಲಾಯಿತು.

ಲಾಲ್‌ಬಾಗ್ ಬಳಿಯ ಸಂಸ್ಥೆಯ ಮುಖ್ಯ ಕಚೇರಿಯಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಹಾಪ್‌ಕಾಮ್ಸ್ (ಬೆಂಗಳೂರು) ಅಧ್ಯಕ್ಷ ಎನ್. ದೇವರಾಜು ಹಾಗೂ ನಿರ್ದೇಶಕರು ಸಾಂಕೇತಿಕವಾಗಿ ಬಾಕ್ಸ್‌ಗಳಲ್ಲಿ ಮಾವು ಮಾರಾಟಕ್ಕೆ ಚಾಲನೆ ನೀಡಿದರು.

‘ಈ ಹಿಂದೆ 25 ಕೆ.ಜಿ ಸಾಮರ್ಥ್ಯದ ಕ್ರೇಟ್‌ಗಳಲ್ಲಿ ಮಾವನ್ನು ಪೂರೈಸಲಾಗುತ್ತಿತ್ತು. ಹೆಚ್ಚು ತೂಕ ಇರುತ್ತಿದ್ದರಿಂದ ಮಾವಿನ ಸಾಗಾಟ ಹಾಗೂ ಸಂಗ್ರಹದ ವೇಳೆ ಭಾರಿ ಪ್ರಮಾಣದ ಹಣ್ಣು ಹಾಳಾಗುತ್ತಿತ್ತು. ಹಾಗಾಗಿ, ಸಂಸ್ಥೆ ಹೆಸರಿನಲ್ಲೇ 3 ಕೆ.ಜಿ ತೂಕದ ಬಾಕ್ಸ್‌ಗಳನ್ನು ಹೊರತರಲಾಗಿದೆ. ಇದರಲ್ಲಿ ಕಡಿಮೆ ಪ್ರಮಾಣದ ಮಾವನ್ನು ಇಡುವುದರಿಂದ ಹೆಚ್ಚು ಹಾಳಾಗುವುದಿಲ್ಲ. ಗ್ರಾಹಕರಿಗೂ ಹಣ್ಣು ತಾಜಾಸ್ಥಿತಿಯಲ್ಲಿ ಸಿಗಲಿದೆ’ ಎಂದು.ದೇವರಾಜು ತಿಳಿಸಿದರು.

‘ಸಂಸ್ಥೆಯು ರೈತರಿಂದ ಮಾವನ್ನು ಕಾಯಿಯ ಸ್ಥಿತಿಯಲ್ಲೇ ತರಿಸಿಕೊಳ್ಳುತ್ತಿದೆ. ಬಳಿಕ ಅದನ್ನು ನೈಸರ್ಗಿಕ ವಿಧಾನಗಳಲ್ಲಿ ಹಣ್ಣು ಮಾಡಲಾಗುವುದು. ಈಗ ಬಾಕ್ಸ್‌ಗಳಲ್ಲಿ ಇಟ್ಟು ಮಾರಾಟ ಮಾಡುವುದರಿಂದ ಗ್ರಾಹಕರಿಗೆ ಹಾಗೂ ಸಂಸ್ಥೆಗೂ ಅನುಕೂಲ’ ಎಂದು ಹೇಳಿದರು.

ಬಾಕ್ಸ್‌ಗಳಲ್ಲಿ ಮಾವು ಮಾರಾಟಕ್ಕೆ ಹಾಪ್‌ಕಾಮ್ಸ್ ಅಧ್ಯಕ್ಷ ಎನ್‌.ದೇವರಾಜು ಚಾಲನೆ ನೀಡಿದರು. ವ್ಯವಸ್ಥಾಪಕ ನಿರ್ದೇಶಕ ಉಮೇಶ್ ಎಸ್‌.ಮಿರ್ಜಿ ಹಾಗೂ ಸಂಸ್ಥೆಯ ನಿರ್ದೇಶಕರು ಇದ್ದಾರೆ.

ದಕ್ಷಿಣಕ್ಕೆ ಆನ್‌ಲೈನ್ ಸೇವೆ ವಿಸ್ತರಣೆ

‘ರೈತರ ಉತ್ಪನ್ನಗಳನ್ನು ನೇರವಾಗಿ ಗ್ರಾಹಕರ ಮನೆ ಬಾಗಿಲಿಗೆ ತಲುಪಿಸಲು ಹಾಪ್‌ಕಾಮ್ಸ್ ಪ್ರಾಯೋಗಿಕವಾಗಿ ಆರಂಭಿಸಿರುವ ಆನ್‌ಲೈನ್ ಸೇವೆಗೆ ಉತ್ತಮ ಪ್ರತಿಕ್ರಿಯೆ ಸಿಕ್ಕಿದೆ. ಮೊದಲ ಹಂತದಲ್ಲಿ ಈ ಸೇವೆಯನ್ನು ಬೆಂಗಳೂರು ದಕ್ಷಿಣ ವಲಯದ ಹಾಪ್‌ಕಾಮ್ಸ್ ಮಳಿಗೆಗಳಿಗೆ ವಿಸ್ತರಿಸುವ ಚಿಂತನೆ ಇದೆ’ ಎಂದು ಎನ್. ದೇವರಾಜು ‘ಪ್ರಜಾವಾಣಿ’ಗೆ ತಿಳಿಸಿದರು.

‘ಕೋರಮಂಗಲದ ನ್ಯಾಷನಲ್ ಗೇಮ್ಸ್ ವಿಲೇಜ್ (ಎನ್‌ಜಿವಿ) ಸಮೀಪದ ಮಳಿಗೆಯಲ್ಲಿ ಆನ್‌ಲೈನ್ ಸೇವೆಯನ್ನು ಪ್ರಾಯೋಗಿಕ ಹಂತದಲ್ಲಿ ಆರಂಭಿಸಲಾಗಿತ್ತು. ಈ ಸೇವೆ ಬಳಸಿ ಉತ್ಪನ್ನಗಳ ಖರೀದಿಗೆ ಗ್ರಾಹಕರು ಹೆಚ್ಚು ಆಸಕ್ತಿ ತೋರಿದ್ದಾರೆ. ಸೇವೆಯ ವಿಸ್ತರಣೆಗಾಗಿ ಪೂರೈಕೆದಾರ ಸಂಸ್ಥೆಗಳ ಸಹಯೋಗಕ್ಕೆ ಟೆಂಡರ್ ಪ್ರಕ್ರಿಯೆ ಅಂತಿಮ ಹಂತದಲ್ಲಿದ್ದು, ಶೀಘ್ರವೇ ಸಂಸ್ಥೆಯ ವಿವಿಧ ಮಳಿಗೆಗಳಿಂದ ಗ್ರಾಹಕರು ಉತ್ಪನ್ನಗಳನ್ನು ತರಿಸಿಕೊಳ್ಳಬಹುದು’ ಎಂದರು.

ಬಿಡಿಎ ಅಧ್ಯಕ್ಷ ಮತ್ತು ಆಯುಕ್ತರಿಂದ ಬಡಾವಣೆ ಅಭಿವೃದ್ಧಿ ಕಾರ್ಯ ಪರಿಶೀಲನೆ

ನಾಡಪ್ರಭು ಕೆಂಪೇಗೌಡ ಬಡಾವಣೆಗೆ ಶೀಘ್ರ ಮೂಲಸೌಕರ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಾಡಪ್ರಭು ಕೆಂಪೇಗೌಡ ಬಡಾವಣೆಗೆ ಕುಡಿಯುವ ನೀರು, ಒಳಚರಂಡಿ, ವಿದ್ಯುತ್, ಆಪ್ಟಿಕಲ್ ಕೇಬಲ್ ಮುಂತಾದ ಮೂಲಸೌಕರ್ಯಗಳನ್ನು ನೆಲದಡಿ ಕಲ್ಪಿಸಲಾಗುತ್ತಿದೆ. ಈ ಕಾಮಗಾರಿಗಳನ್ನು ಶೀಘ್ರವೇ ಪೂರ್ಣಗೊಳಿಸಲಾಗುವುದು’ ಎಂದು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಬಿಡಿಎ) ಅಧ್ಯಕ್ಷ ಎಸ್.ಆರ್.ವಿಶ್ವನಾಥ್ ತಿಳಿಸಿದರು.

ಬಿಡಿಎ ಆಯುಕ್ತ ಎಂ.ಬಿ.ರಾಜೇಶ್ ಗೌಡ ಅವರ ಜೊತೆ ಅಧ್ಯಕ್ಷರು ಬಡಾವಣೆಯ ವಿವಿಧ ಪ್ರದೇಶಗಳಿಗೆ ಶುಕ್ರವಾರ ಭೇಟಿ ನೀಡಿ ಕಾಮಗಾರಿಗಳನ್ನು ಪರಿಶೀಲನೆ ನಡೆಸಿದರು.

ವಿಶ್ವನಾಥ್, ‘ಇಲ್ಲಿ ನಿವೇಶನ ಹಂಚಿಕೆಯಾದವರು ಸ್ವಂತ ಕೊಳವೆ ಬಾವಿ ಕೊರೆಯಿಸುವ ಅಗತ್ಯವಿಲ್ಲ. ಮನೆ ನಿರ್ಮಾಣ ಆರಂಭಕ್ಕೆ ಮುನ್ನವೇ ಇಲ್ಲಿ ಕುಡಿಯುವ ನೀರು, ವಿದ್ಯುತ್, ಒಳಚರಂಡಿ ಸೌಕರ್ಯ ಕಲ್ಪಿಸುವ ಕಾಮಗಾರಿಗಳನ್ನು ಆರಂಭಿಸಲಾಗಿದೆ. ಅಕ್ಕಪಕ್ಕದ ಎರಡು ನಿವೇಶನಗಳ ನಡುವೆ ಕೊಳವೆ ಮಾರ್ಗಕ್ಕೆ ಛೇಂಬರ್ ನಿರ್ಮಿಸಲಾಗುತ್ತದೆ. ಭವಿಷ್ಯದಲ್ಲಿ ದುರಸ್ತಿ ಅಥವಾ ಸಂಪರ್ಕ ಒದಗಿಸಲು ಇದು ನೆರವಾಗಲಿದೆ. ಭವಿಷ್ಯದಲ್ಲಿ ಇಲ್ಲಿ ಪದೇ ಪದೇ ರಸ್ತೆ ಅಗೆಯುವ ಪ್ರಮೇಯವೇ ಎದುರಾಗದು’ ಎಂದು ವಿವರಿಸಿದರು.

ಬಡಾವಣೆಗೆ ಭೂಮಿ ನೀಡಿರುವ ರೈತರೊಂದಿಗೆ ಸಭೆ ನಡೆಸಿದ ಅಧ್ಯಕ್ಷರು ಮತ್ತು ಆಯುಕ್ತರು, ‘ರೈತರ ಬಹುತೇಕ ಬೇಡಿಕೆಗಳನ್ನು ಈಡೇರಿಸಿದ್ದೇವೆ. ಇನ್ನುಳಿದ ಸಮಸ್ಯೆಗಳನ್ನು ಆದ್ಯತೆ ಮೇಲೆ ಪರಿಹರಿಸಲಿದ್ದೇವೆ’ ಎಂದರು.

‘ಭೂಸ್ವಾಧೀನ ಪ್ರಶ್ನಿಸಿ ರೈತರು ಕೋರ್ಟ್‌ನಲ್ಲಿ ಪ್ರಕರಣ ದಾಖಲಿಸಿದ್ದರಿಂದ ಬಡಾವಣೆಯ ಮೂಲಸೌಕರ್ಯ ಕಾಮಗಾರಿಗಳಿಗೆ ಹಿನ್ನಡೆಯಾಗುತ್ತಿದೆ. ಕೋರ್ಟ್ ಹೊರಗೆ ವ್ಯಾಜ್ಯ ಬಗೆಹರಿಸಿಕೊಂಡರೆ ಪ್ರಾಧಿಕಾರದ ಕಡೆಯಿಂದ ನಿಯ ಮಾನುಸಾರ ಪರಿಹಾರ ಮತ್ತು ನೆರವನ್ನು ನೀಡಲಿದ್ದೇವೆ’ ಎಂದು ಅಧ್ಯಕ್ಷರು ರೈತರಿಗೆ ಭರವಸೆ ನೀಡಿದರು.

ಮೂಲಸೌಕರ್ಯ ಅಭಿವೃದ್ಧಿ ಕಾಮಗಾರಿಯನ್ನು ಎಸ್‌.ಆರ್‌. ವಿಶ್ವನಾಥ್ ಪರಿಶೀಲಿಸಿದರು.

ದತ್ತಾಂಶ ಸಂಗ್ರಹ ವ್ಯವಸ್ಥೆ

ಬೆಂಗಳೂರಿನಲ್ಲಿ ಇದೇ ಮೊದಲ ಬಾರಿಗೆ ಕೆಂಪೇಗೌಡ ಬಡಾವಣೆಯಲ್ಲಿ ಮೇಲ್ವಿಚಾರಣೆ ನಿಯಂತ್ರಣ ಮತ್ತು ದತ್ತಾಂಶ ಸಂಗ್ರಹ ವ್ಯವಸ್ಥೆ (ಸ್ಕಾಡಾ) ಅಳವಡಿಸಲಾಗುತ್ತಿದೆ. ಬಡಾವಣೆಯಲ್ಲಿ ಯಾವುದೇ ಪ್ರದೇಶದಲ್ಲಿ ವಿದ್ಯುತ್ ಅಥವಾ ನೀರಿನ ಪೂರೈಕೆಯಲ್ಲಿ ಲೋಪ ಕಂಡು ಬಂದರೆ ಈ ವ್ಯವಸ್ಥೆ ಅದನ್ನು ಪತ್ತೆ ಹಚ್ಚುತ್ತದೆ. ಕೂಡಲೇ ಅದನ್ನು ಸರಿಪಡಿಸಲು ಕ್ರಮಕೈಗೊಳ್ಳಲಾಗುತ್ತದೆ.

‘ಬಡಾವಣೆಯ ವಿಭಾಗವಾರು ಹಾಗೂ ಬ್ಲಾಕ್ ವಾರು ಈ ವ್ಯವಸ್ಥೆಯನ್ನು ಅಳವಡಿಸಲಾಗುತ್ತದೆ. ಯಾವುದೇ ಬೀದಿಯಲ್ಲಿ ಅಥವಾ ಮನೆಗಳ ಸಾಲಿನಲ್ಲಿ ನಿರಂತರವಾಗಿ ನೀರು ಪೋಲಾಗುತ್ತಿದ್ದರೆ ಇದು ಪತ್ತೆ ಹಚ್ಚುತ್ತದೆ’ ಎಂದು ಅಧಿಕಾರಿಗಳು ಮಾಹಿತಿ ನೀಡಿದರು.

ಜನರಿದ್ದಾಗ ಮಾತ್ರ ಬೆಳಗಲಿದೆ ದೀಪ

ಬಡಾವಣೆಯಲ್ಲಿ ವಿದ್ಯುತ್ ಉಳಿತಾಯಕ್ಕೂ ವಿಶೇಷ ವ್ಯವಸ್ಥೆ ಅಳವಡಿಸಲಾಗುತ್ತಿದೆ. ನೆಲದಡಿ ವಿದ್ಯುತ್ ಪೂರೈಕೆ ಮಾರ್ಗವನ್ನು ಅಳವಡಿಸುವುದರಿಂದ ಬೀದಿ ದೀಪಗಳಿಗೆ ಮಾತ್ರ ಕಂಬದ ವ್ಯವಸ್ಥೆ ಇರಲಿದೆ. ಇದರ ವಿಶೇಷತೆಯೆಂದರೆ, ರಾತ್ರಿ ವೇಳೆ ರಸ್ತೆಗಳಲ್ಲಿ ವಾಹನಗಳು ಅಥವಾ ಜನರು ಸಂಚರಿಸಿದರೆ ಮಾತ್ರ ಬೀದಿದೀಪಗಳು ಬೆಳಗುತ್ತವೆ.

ಸಾಲುಮರದ ತಿಮ್ಮಕ್ಕ ಪುರಸ್ಕಾರಗಳ ಮ್ಯೂಸಿಯಂಗೆ ಚಿಂತನೆ

ಬೆಂಗಳೂರು: ಸಾಲುಮರದ ತಿಮ್ಮಕ್ಕ ಅವರಿಗೆ ಸಿಕ್ಕಿರುವ ಪುರಸ್ಕಾರಗಳ ವಸ್ತು ಸಂಗ್ರಹಾಲಯ (ಮ್ಯೂಸಿಯಂ) ಸ್ಥಾಪಿಸಲು ಸಾಗರೋತ್ತರ ಕನ್ನಡಿಗರ ಒಕ್ಕೂಟ ಮುಂದೆ ಬಂದಿದೆ.

ಸಾಲುಮರದ ತಿಮ್ಮಕ್ಕ

ಪರಿಸರ ದಿನಾಚರಣೆ ಅಂಗವಾಗಿ ಸಾಗರೋತ್ತರ ಕನ್ನಡಿಗರು ಆಯೋಜಿಸಿದ್ದ ಆನ್‌ಲೈನ್ ಸಂವಾದ ಕಾರ್ಯಕ್ರಮದಲ್ಲಿ ತಿಮ್ಮಕ್ಕ ಅವರ ಮನವಿ ಮೇರೆಗೆ, ಮ್ಯೂಸಿಯಂ ಸ್ಥಾಪಿಸಲು ಒಕ್ಕೂಟದ ಸದಸ್ಯರು ಮುಂದಿನ ದಿನಗಳಲ್ಲಿ ನಿರ್ಧರಿಸಲಿದ್ದಾರೆ ಎಂದು ಸೌದಿ ಅರೇಬಿಯಾದಲ್ಲಿರುವ ಒಕ್ಕೂಟದ ಕಾರ್ಯದರ್ಶಿ ರವಿ ಮಹಾದೇವ ಭರವಸೆ ನೀಡಿದರು.

ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದ ತಿಮ್ಮಕ್ಕ, ತಮ್ಮ ಪರಿಸರ ಕಾರ್ಯವನ್ನು ಬಿಚ್ಚಿಟ್ಟರು. ‘ನನಗೆ ಅನೇಕ ಪ್ರಶಸ್ತಿಗಳು ಪುರಸ್ಕಾರಗಳು ಸಿಕ್ಕಿವೆ. ಅವುಗಳನ್ನು ಇಡಲು ಜಾಗ ಇಲ್ಲ. ಸಾಗರೋತ್ತರ ಕನ್ನಡಿಗರೆಲ್ಲಾ ಸೇರಿ ಒಂದು ಮ್ಯೂಸಿಯಂ ಕಟ್ಟಿಸಿರಿ’ ಎಂದರು. ಇದಕ್ಕೆ ಬಹುತೇಕ ಸದಸ್ಯರು ಸಹಮತ ಸೂಚಿಸಿದರು ಎಂದು ಇಟಲಿಯಲ್ಲಿರುವ ಸಂಘಟನಾ ಕಾರ್ಯದರ್ಶಿ ಹೇಮೇಗೌಡ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಚಿತ್ರಾವಳಿ

ಮುಜರಾಯಿ ಇಲಾಖೆಯ ದೇವಸ್ಥಾನಗಳಲ್ಲಿ ಕಾರ್ಯನಿರ್ವಹಿಸುವ ವಾದ್ಯ ವೃಂದದವರು, ಪರಿಚಾರಕರು, ಪುರೋಹಿತರು ಹಾಗೂ ಅರ್ಚಕರಿಗೆ ಕೋವಿಡ್ ಲಸಿಕೆ ನೀಡುವ ಕಾರ್ಯಕ್ರಮಕ್ಕೆ ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷೆ ತಾರಾ ಅನೂರಾಧ ನೇತೃತ್ವದಲ್ಲಿ ಶುಕ್ರವಾರ ಚಾಲನೆ ನೀಡಲಾಯಿತು.

ಆರ್‌.ಟಿ.ನಗರದ ಎಚ್‌ಎಂಟಿ ಆಟದ ಮೈದಾನದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಶಾಸಕ ಬೈರತಿ ಸುರೇಶ್ ನೇತೃತ್ವದಲ್ಲಿ ಕೋವಿಡ್ ಮುಂಚೂಣಿ ಕಾರ್ಯಕರ್ತರು ಹಾಗೂ ಆಟೊ ಚಾಲಕರಿಗೆ ಒಟ್ಟು ₹20 ಲಕ್ಷ ಮೌಲ್ಯದ ಪಡಿತರ ಕಿಟ್‌ಗಳನ್ನು ವಿತರಿಸಲಾಯಿತು. ಕೆಪಿಸಿಸಿ ಕಾರ್ಯಾಧ್ಯಕ್ಷ ರಾಮಲಿಂಗಾ ರೆಡ್ಡಿ, ಶಾಸಕ ದಿನೇಶ್ ಗುಂಡೂರಾವ್, ಕಾಂಗ್ರೆಸ್ ಮುಖಂಡ ಅಬ್ದುಲ್ ವಾಜಿದ್ ಇದ್ದರು.

ಸಾಮಾಜಿಕ ನ್ಯಾಯಕ್ಕೆ ಸಿದ್ಧಲಿಂಗಯ್ಯ ಕೊಡುಗೆ ಅಪಾರ –ಮೋದಿ

ನವದೆಹಲಿ (ಪಿಟಿಐ): ಕವಿ ಸಿದ್ದಲಿಂಗಯ್ಯ ಅವರ ನಿಧನಕ್ಕೆ ಪ್ರಧಾನಿ ನರೇಂದ್ರ ಮೋದಿ ಅವರು ಶುಕ್ರವಾರ ಕಂಬನಿ ಮಿಡಿದಿದ್ದಾರೆ.

ಬರಹಗಳು, ಕವನಗಳ ಮೂಲಕ ಜನಪ್ರಿಯರಾದ ಸಿದ್ದಲಿಂಗಯ್ಯ ಅವರು, ಸಾಮಾಜಿಕ ನ್ಯಾಯಕ್ಕೆ ಅಪಾರ ಕೊಡುಗೆ ನೀಡಿದ್ದಾರೆ ಎಂದು ಸ್ಮರಿಸಿ ಪ್ರಧಾನಿ ಅವರು ಟ್ವೀಟ್ ಮಾಡಿದ್ದಾರೆ.

ವೈಮಾನಿಕ ಕಂಪನಿಗಳಿಂದ ಬಾಡಿಗೆ ವಸೂಲಿಗೆ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಕ್ಕೂರು ಸರ್ಕಾರಿ ವೈಮಾನಿಕ ತರಬೇತಿ ಶಾಲಾ ಆವರಣದಲ್ಲಿ ನಾಲ್ಕು ವೈಮಾನಿಕ ಕಂಪನಿಗಳಿಂದ ಬರಬೇಕಾಗಿರುವ ₹4.50 ಕೋಟಿ ಬಾಡಿಗೆಯನ್ನು ಶೇ 18ರಷ್ಟು ಬಡ್ಡಿ ಸಹಿತ ವಸೂಲಿ ಮಾಡು ವಂತೆ ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವ ನಾರಾಯಣಗೌಡ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಬೆಂಗಳೂರಿನ ಯವನಿಕಾದಲ್ಲಿ ಶುಕ್ರವಾರ ನಡೆದ ಪ್ರಗತಿ ಇಲಾಖೆಯ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಸಚಿವರು, ವೈಮಾನಿಕ ಕಂಪನಿಗಳಿಂದ ಬಾಡಿಗೆ ವಸೂಲು ಮಾಡಲಾಗಿದೆಯೆ ಎಂದು ಪ್ರಶ್ನಿಸಿದರು.

ಸಾಂದರ್ಭಿಕ ಚಿತ್ರ

ಆಗ ಅಧಿಕಾರಿ ಮೌನ ವಹಿಸಿದಾಗ ಅವರು ತರಾಟೆಗೆ ತೆಗೆದುಕೊಂಡರು.

ಮೂರು ತಿಂಗಳ ಹಿಂದೆ ಜಕ್ಕೂರು ವೈಮಾನಿಕ ತರಬೇತಿ ಶಾಲೆ ಆವರಣಕ್ಕೆ ಸಚಿವರು ಭೇಟಿ ನೀಡಿದಾಗ, ನಾಲ್ಕು ವೈಮಾನಿಕ ಕಂಪನಿಗಳು ಬಾಡಿಗೆ ಪಾವತಿಸದಿರುವುದು ಗಮನಕ್ಕೆ ಬಂದಿತು.

ತಕ್ಷಣವೇ ಬಾಡಿಗೆ ವಸೂಲಿ ಮಾಡುವಂತೆ ಸೂಚಿಸಿದ್ದರು. ಆದರೂ ಕಂಪನಿಗಳು ಬಾಡಿಗೆ ಪಾವತಿಸಿರಲಿಲ್ಲ.

‘ನಿಮ್ಮ ದಿವ್ಯ ನಿರ್ಲಕ್ಷ್ಯವೇ ಈ ವಿಳಂಬಕ್ಕೆ ಕಾರಣ. ಬಾಡಿಗೆ ವಸೂಲಿ ಇನ್ನೂ ತಡವಾದರೆ, ನಿಮ್ಮ ಮೇಲೆಯೇ ಕಠಿಣ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ’ ಎಂದು ಸಚಿವರು ಅಧಿಕಾರಿಗಳಿಗೆ ಎಚ್ಚರಿಕೆ ನೀಡಿದರು.

ಜಕ್ಕೂರು ವೈಮಾನಿಕ ಶಾಲೆಯ ಸುತ್ತಮುತ್ತ ನಿರ್ಮಾಣಗೊಂಡಿರುವ ಕಟ್ಟಡಗಳು ನಾಗರಿಕ ವಿಮಾನಯಾನ ಮಹಾ ನಿರ್ದೇಶನಾಲಯದಿಂದ ನಿರಾಕ್ಷೇಪಣಾ ಪತ್ರವನ್ನು ಪಡೆಯವುದು ಕಡ್ಡಾಯ. ಸಾಕಷ್ಟು ಕಟ್ಟಡಗಳು ನಿರಾಕ್ಷೇಪಣಾ ಪತ್ರ ಪಡೆದಿಲ್ಲ. ಈ ಬಗ್ಗೆ ಸಮೀಕ್ಷೆ ನಡೆಸುವಂತೆಯೂ ಸಚಿವರು ಸೂಚಿಸಿದರು.

ನ್ಯಾಷನಲ್ ಏರೋಸ್ಪೇಸ್ ಲ್ಯಾಬೊರೇಟರಿ, ಜ್ಯೂಪಿಟರ್ ಏವಿಯೇಷನ್, ಡೆಕ್ಕನ್ ಚಾರ್ಟರ್ ಲಿಮಿಟೆಡ್, ಅಗ್ನಿ ಏರೋಸ್ಪೇಸ್ ಅಡ್ವೆಂಚರ್ ಅಕಾಡೆಮಿ ಬಾಡಿಗೆಯನ್ನು ಬಾಕಿ ಉಳಿಸಿಕೊಂಡಿವೆ.

ಆಗಸ್ಟ್‌ನಿಂದ ವೈಮಾನಿಕ ಶಾಲೆ ಪುನರಾರಂಭ: ಮೂರು ವರ್ಷಗಳಿಂದ ಸ್ಥಗಿತವಾಗಿದ್ದ ಜಕ್ಕೂರಿನ ಸರ್ಕಾರಿ ವೈಮಾನಿಕ ತರಬೇತಿ ಶಾಲೆ ಆಗಸ್ಟ್‌ನಿಂದ ಆರಂಭವಾಗಲಿದೆ. ಆದಷ್ಟು ಶೀಘ್ರವೇ ಬೋಧಕ ಸಿಬ್ಬಂದಿ ನೇಮಕ ಮಾಡಲಾಗುವುದು ಎಂದು ನಾರಾಯಣಗೌಡ ಅವರು ತಿಳಿಸಿದರು.

ಫೇಸ್‌ಬುಕ್ ಮೂಲಕ ಪರಿಚಯ: ಮಗು ಮಾರಾಟ

ಪ್ರಜಾವಾಣಿ ವಾರ್ತೆ

ಮೈಸೂರು: ಬೆಂಗಳೂರಿನ ಮಾರತ್‌ಹಳ್ಳಿಯ 26 ವರ್ಷದ ಮಹಿಳೆಯೊಬ್ಬರು, ತಮ್ಮ 7 ತಿಂಗಳ ಗಂಡು ಮಗುವನ್ನು ಎಚ್‌.ಡಿ.ಕೋಟೆ ತಾಲ್ಲೂಕಿನ ಟೈಗರ್ ಬ್ಲಾಕ್‌ನ 36 ವರ್ಷದ ಮಹಿಳೆಯೊಬ್ಬರಿಗೆ ಮಾರಾಟ ಮಾಡಿದ್ದಾರೆ. ಈ ಕುರಿತು ಆಡಿಯೊವೊಂದು ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿದೆ.

ಈ ಕುರಿತು 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ದಿವಾಕರ್, ಫೇಸ್‌ಬುಕ್ ಮೂಲಕ ಪರಿಚಯವಾದ ಎಚ್‌.ಡಿ.ಕೋಟೆ ತಾಲ್ಲೂಕಿನ 36 ವರ್ಷ ವಯಸ್ಸಿನ ಮಹಿಳೆಯೊಬ್ಬರಿಗೆ ಬೆಂಗಳೂರಿನ ಮಹಿಳೆಯೊಬ್ಬರು ತಮ್ಮ ಗಂಡು ಮಗುವನ್ನು ₹ 1 ಲಕ್ಷಕ್ಕೆ ಮಾರಾಟ ಮಾಡಿದ್ದಾರೆ ಎಂಬ ಆರೋಪ ಕೇಳಿ ಬಂದಿದೆ. ಹಣ ಪಡೆದು ಮಗುವನ್ನು ನೀಡಿದ್ದ ಮಹಿಳೆಯು, ನಂತರ ಮತ್ತೆ ಮಗುವನ್ನು ಪಡೆದುಕೊಂಡಿದ್ದಾಳೆ. ಸ್ವಲ್ಪ ಸಮಯದ ನಂತರ ಮಗು ಬೇಡ ಹಣ ಬೇಕು ಎಂದು ಮತ್ತೆ ಮಾರಾಟ ಮಾಡಿದ್ದಾರೆ. ಪ್ರಕರಣ ಗಮನಕ್ಕೆ ಬಂದಿದ್ದು, ಇಬ್ಬರ ವಿರುದ್ಧವೂ ಪೊಲೀಸರಿಗೆ ದೂರು ನೀಡಲಾಗುವುದು. ಸದ್ಯ, ಮಗು ಮಕ್ಕಳ ರಕ್ಷಣಾ ಘಟಕದ ವಶದಲ್ಲಿದೆ' ಎಂದು ಅವರು ತಿಳಿಸಿದರು.

ಮೃಗಾಲಯಗಳಿಗೆ ಆರು ದಿನಗಳಲ್ಲೇ ₹1 ಕೋಟಿಗೂ ಹೆಚ್ಚು ನೆರವು; 3,881 ಮಂದಿಯಿಂದ ಸಹಾಯ ಹಸ್ತ

ಕನಿಷ್ಠ ಮೊತ್ತ ಇಳಿಕೆ: ಹೆಚ್ಚು ಜನರಿಂದ ದೇಣಿಗೆ

● ಶಶಿಕಾಂತ ಎಸ್. ಶೆಂಬೆಳ್ಳಿ

ಪ್ರಜಾವಾಣಿ ವಿಶೇಷ

ಹೊಸಪೇಟೆ (ವಿಜಯನಗರ): ರಾಜ್ಯದ ಮೃಗಾಲಯಗಳಿಗೆ ನೆರವು ನೀಡಲು ಇದ್ದ ಕನಿಷ್ಠ ಮೊತ್ತದ ಮಿತಿ ಇಳಿಸಿರುವುದರಿಂದ ಈ ವರ್ಷ ಹೆಚ್ಚಿನವರು ದೇಣಿಗೆ ನೀಡಿದ್ದಾರೆ.

ಈ ಹಿಂದೆ ಕನಿಷ್ಠ ₹1,000, ಗರಿಷ್ಠ ₹1.75 ಲಕ್ಷದ ವರೆಗೆ ನೆರವು ನೀಡಬಹುದಿತ್ತು. ಈ ಎರಡನ್ನೂ ಪರಿಷ್ಕರಿಸಿ, ಕನಿಷ್ಠ ₹50 ರಿಂದ ಗರಿಷ್ಠ ₹2 ಲಕ್ಷದ ವರೆಗೆ ನೆರವು ನೀಡಲು ಅವಕಾಶ ಕಲ್ಪಿಸಿರುವುದರಿಂದ ನಿರೀಕ್ಷೆಗೂ ಮೀರಿದ ಬೆಂಬಲ ದೊರೆತಿದೆ.

'ಅನೇಕರಿಗೆ ಪ್ರಾಣಿ, ಪಕ್ಷಿ ಕಂಡರೆ ಇಷ್ಟ. ಅವರಿಗೂ ಕೈಲಾದ ನೆರವು ನೀಡಬೇಕೆಂಬ ಮಹದಾಸೆ ಇರುತ್ತದೆ. ಆದರೆ, ಹೆಚ್ಚು ಹಣ ನೀಡಲು ಆಗುವುದಿಲ್ಲ. ಅಂತಹವರಿಗೂ ಸಾಧ್ಯವಾಗಲಿ ಎಂದು ದರ ಪರಿಷ್ಕರಿಸಲಾಗಿದೆ. ಪ್ರತಿಯೊಬ್ಬರೂ ಆನ್‌ಲೈನ್‌ನಲ್ಲೇ ನೆರವು ನೀಡಿ, ಅಲ್ಲಿಂದಲೇ ರಸೀದಿ, ತೆರಿಗೆ ವಿನಾಯಿತಿ ಪತ್ರ ಡೌನ್‌ಲೋಡ್ ಮಾಡಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ' ಎಂದು ರಾಜ್ಯ ಮೃಗಾಲಯ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಬಿ.ಪಿ. ರವಿ ತಿಳಿಸಿದ್ದಾರೆ.

'ದೇವಸ್ಥಾನಗಳ ಹುಂಡಿಯಲ್ಲಿ ಯಾರು, ಎಷ್ಟು ಬೇಕಾದರೂ ದೇಣಿಗೆ ಹಾಕುವ ವ್ಯವಸ್ಥೆ ಇದೆ. ಅದೇ ರೀತಿಯಲ್ಲಿ ಮೃಗಾಲಯಗಳಲ್ಲೂ ಈ ವ್ಯವಸ್ಥೆ ಕಲ್ಪಿಸಲಾಗಿದೆ.ಆದರೆ ಕನಿಷ್ಠ ₹50 ದೇಣಿಗೆ ನಿಗದಿಗೊಳಿಸಿದ್ದೇವೆ' ಎಂದು ಪ್ರತಿಕ್ರಿಯಿಸಿದ್ದಾರೆ.

₹1 ಕೋಟಿಗೂ ಅಧಿಕ ನೆರವು: ಕೋವಿಡ್ ಸಂಕಷ್ಟದಲ್ಲಿ ರಾಜ್ಯದ ಒಂಬತ್ತು ಮೃಗಾಲಯಗಳ ಪ್ರಾಣಿಗಳನ್ನು ದತ್ತು ಪಡೆದು ನೆರವಿಗೆ ಬರಬೇಕೆಂದು ವಿಶ್ವ ಪರಿಸರದ ದಿನದಂದು(ಜೂ.5ರಂದು) ನಟ ದರ್ಶನ್ ಮನವಿ ಮಾಡಿಕೊಂಡ ಆರು ದಿನಗಳಲ್ಲೇ ₹1 ಕೋಟಿಗೂ ಅಧಿಕ ಮೊತ್ತದ ನೆರವು ಹರಿದು ಬಂದಿದೆ.

ರಾಜ್ಯ ಅರಣ್ಯ ಇಲಾಖೆಯ ಪ್ರಚಾರ ರಾಯಭಾರಿಯೂ ಆಗಿರುವ ದರ್ಶನ್ ಅವರ ಮನವಿಗೆ ಓಗೊಟ್ಟು ರಾಜ್ಯದ ವಿವಿಧ ಭಾಗಗಳ 3,881 ಜನರು ಸ್ಪಂದಿಸಿದ್ದಾರೆ. ಈ ಪೈಕಿ ಕೆಲವರು ಪ್ರಾಣಿಗಳನ್ನು ದತ್ತು ತೆಗೆದುಕೊಂಡರೆ, ಕೆಲವರು ಮೃಗಾಲಯಗಳ ನಿರ್ವಹಣೆಗೆ ದೇಣಿಗೆ ನೀಡಿದ್ದಾರೆ. ಹಲವರು ಕರೆ ಮಾಡಿ, ನೆರವಿನ ಭರವಸೆ ಕೂಡ ಕೊಟ್ಟಿದ್ದಾರೆ. ಬರುವ ದಿನಗಳಲ್ಲಿ ಇನ್ನೂ ಹೆಚ್ಚಿನ ನೆರವು ಹರಿದು ಬರುವ ನಿರೀಕ್ಷೆಯಲ್ಲಿ ಪ್ರಾಧಿಕಾರ ಇದೆ.

ಮೈಸೂರು ಮೃಗಾಲಯಕ್ಕೆ 2,023 ಜನ ದೇಣಿಗೆ ನೀಡಿದ್ದು, ಒಟ್ಟು ₹51.75 ಲಕ್ಷ ಸಂಗ್ರಹವಾಗಿದೆ. ಬನ್ನೇರುಘಟ್ಟಕ್ಕೆ ₹29.83 ಲಕ್ಷ ನೆರವು ಸಿಕ್ಕಿದ್ದು, 918 ಜನ ದೇಣಿಗೆ ಕೊಟ್ಟಿದ್ದಾರೆ. ಶಿವಮೊಗ್ಗ ಮೃಗಾಲಯಕ್ಕೆ ₹7.24 ಲಕ್ಷ ನೆರವು ಹರಿದು ಬಂದಿದ್ದು, 146 ಜನ ದೇಣಿಗೆ ನೀಡಿದ್ದಾರೆ. ಗದಗ, ಹಂಪಿ, ಬೆಳಗಾವಿ, ದಾವಣಗೆರೆ, ಚಿತ್ರದುರ್ಗ, ಕಲಬುರ್ಗಿ ನಂತರದ ಸ್ಥಾನದಲ್ಲಿವೆ. ನಟರಾದ ಉಪೇಂದ್ರ, ಸೃಜನ್ ಲೋಕೇಶ್, ಚಿಕ್ಕಣ್ಣ, ಶೈಲಜಾ ನಾಗ, ದೇವರಾಜ ಪ್ರಾಣಿಗಳನ್ನು ದತ್ತು ಪಡೆದವರಲ್ಲಿ ಪ್ರಮುಖರು.

ಹೊಸಪೇಟೆ ತಾಲ್ಲೂಕಿನ ಕಮಲಾಪುರ ಸಮೀಪದ ಅಟಲ್ ಬಿಹಾರಿ ವಾಜಪೇಯಿ ಜೈವಿಕ ಉದ್ಯಾನ (ಹಂಪಿ ಮೃಗಾಲಯ)

ರಾಜ್ಯದ ಒಂಬತ್ತು ಮೃಗಾಲಯಗಳಲ್ಲಿ ಜೂ. 5ರಿಂದ 10ರ ವರೆಗೆ ಸಂಗ್ರಹವಾದ ಹಣದ ವಿವರ

ಮೃಗಾಲಯಗಳ ಹೆಸರು	ಒಟ್ಟು ದೇಣಿಗೆ ₹ಗಳಲ್ಲಿ	ದೇಣಿಗೆ ಕೊಟ್ಟವರ ಸಂಖ್ಯೆ
ಮೈಸೂರು	51,75,700	2023
ಬನ್ನೇರುಘಟ್ಟ	29,83,000	918
ಶಿವಮೊಗ್ಗ	7,24,800	146
ಗದಗ	2,66,400	183
ಹಂಪಿ	2,42,200	138
ಬೆಳಗಾವಿ	2,22,300	147
ದಾವಣಗೆರೆ	1,94,900	155
ಚಿತ್ರದುರ್ಗ	1,49,300	97
ಕಲಬುರ್ಗಿ	89,300	74
ಒಟ್ಟು ಮೊತ್ತ	1,00,47,900	ಒಟ್ಟು 3881

(ಮಾಹಿತಿ: ಕರ್ನಾಟಕ ಮೃಗಾಲಯ ಪ್ರಾಧಿಕಾರ)

ದೃಢ ಪ್ರಮಾಣ ಶೇ 4.86ಕ್ಕೆ ಇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ 24 ಗಂಟೆಗಳ ಅವಧಿಯಲ್ಲಿ 8,249 ಪ್ರಕರಣಗಳು ವರದಿಯಾಗಿದ್ದು, ಸೋಂಕು ದೃಢ ಪ್ರಮಾಣವು ಶೇ 4.86ಕ್ಕೆ ಇಳಿಕೆಯಾಗಿದೆ.

ಕಳೆದ 58 ದಿನಗಳಲ್ಲಿ ಎರಡನೇ ಬಾರಿಗೆ 24 ಗಂಟೆಗಳ ಅವಧಿಯಲ್ಲಿ 10 ಸಾವಿರಕ್ಕಿಂತ ಕಡಿಮೆ ಸಂಖ್ಯೆಯಲ್ಲಿ ಪ್ರಕರಣಗಳು ವರದಿಯಾಗಿವೆ. ಸುಮಾರು ಎರಡು ತಿಂಗಳ ಅವಧಿಯಲ್ಲಿ ವರದಿಯಾದ ಕನಿಷ್ಠ ಪ್ರಕರಣಗಳು ಇವಾಗಿವೆ. ಈ ತಿಂಗಳು 11 ದಿನಗಳಲ್ಲಿ 1.43 ಲಕ್ಷ ಮಂದಿ ಸೋಂಕಿತರಾಗಿರುವುದು ದೃಢಪಟ್ಟಿದೆ. ಈವರೆಗೆ ಕೋವಿಡ್ ಪೀಡಿತರಾದವರ ಒಟ್ಟು ಸಂಖ್ಯೆ 27.47 ಲಕ್ಷ ದಾಟಿದೆ.

ವೈದ್ಯಕೀಯ ತಜ್ಞರ ಪ್ರಕಾರ, ಸೋಂಕು ದೃಢ ಪ್ರಮಾಣವು ಶೇ 5 ಕ್ಕಿಂತ ಕಡಿಮೆ ಇದ್ದಲ್ಲಿ ಮಾತ್ರ ಕಾಯಿಲೆ ನಿಯಂತ್ರಣಕ್ಕೆ ಬಂದಿದೆ ಎಂದು ಪರಿಗಣಿಸಬಹುದಾಗಿದೆ. ಏಪ್ರಿಲ್ ಮೊದಲ ವಾರದಲ್ಲಿ ಸೋಂಕು ದೃಢ ಪ್ರಮಾಣವು ಶೇ 5ರ ಗಡಿ ದಾಟಿ, ಬಳಿಕ ಏರುಗತಿ ಪಡೆದುಕೊಂಡಿತ್ತು. ಕೊರೊನಾ ಸೋಂಕಿತರಲ್ಲಿ 159 ಮಂದಿ ಸಾವಿಗೀಡಾಗಿರುವುದು ಖಚಿತಪಟ್ಟಿದೆ. ಶೇ 1.75ಕ್ಕೆ ಇಳಿಕೆಯಾಗಿದ್ದ ಮರಣ ಪ್ರಮಾಣ ದರ, ಶೇ 1.92ಕ್ಕೆ ಏರಿಕೆಯಾಗಿದೆ.

25 ಲಕ್ಷ ಮಂದಿ ಗುಣಮುಖ: ರಾಜ್ಯದ 28 ಜಿಲ್ಲೆಗಳಲ್ಲಿ ಹೊಸದಾಗಿ ಮರಣ ಪ್ರಕರಣಗಳು ವರದಿಯಾಗಿವೆ. ಬೆಂಗಳೂರಿನಲ್ಲಿ 48 ಮಂದಿ ಮೃತಪಟ್ಟಿರುವುದು ದೃಢಪಟ್ಟಿದೆ. ಮೈಸೂರಿನಲ್ಲಿ 20 ಮಂದಿ, ಹಾವೇರಿಯಲ್ಲಿ 10 ಮಂದಿ ಸಾವಿಗೀಡಾಗಿದ್ದಾರೆ. ಉಳಿದ ಜಿಲ್ಲೆಗಳಲ್ಲಿ 10 ಕ್ಕಿಂತ ಕಡಿಮೆ ಸಂಖ್ಯೆಯಲ್ಲಿ ಮರಣ ಪ್ರಕರಣಗಳು ವರದಿಯಾಗಿವೆ. ಈವರೆಗೆ ಕೋವಿಡ್‌ನಿಂದ ಮೃತಪಟ್ಟವರ ಒಟ್ಟು ಸಂಖ್ಯೆ 32,644ಕ್ಕೆ ತಲುಪಿದೆ.

ಬೆಂಗಳೂರಿನಲ್ಲಿ 24 ಗಂಟೆಗಳ ಅವಧಿಯಲ್ಲಿ 1,154 ಮಂದಿ ಸೋಂಕಿತರಾಗಿರುವುದು ದೃಢಪಟ್ಟಿದೆ. ಉಳಿದ ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು ಸಾವಿರಕ್ಕಿಂತ ಕಡಿಮೆ ವರದಿಯಾಗಿವೆ. ಸಕ್ರಿಯ ಪ್ರಕರಣಗಳ ಸಂಖ್ಯೆ ಮತ್ತಷ್ಟು ಇಳಿಕೆ ಕಂಡಿದ್ದು, ಸದ್ಯ 2.03 ಲಕ್ಷ ಮಂದಿ ಆಸ್ಪತ್ರೆ ಸೇರಿದಂತೆ ವಿವಿಧೆಡೆ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ. ಸೋಂಕಿತರಲ್ಲಿ 14,972 ಮಂದಿಗೆ ಕಾಯಿಲೆ ವಾಸಿಯಾಗಿದೆ.

ಪ್ರಜಾವಾಣಿ facebook LIVE fb.com/prajavani.net

ಕಲಾವಿದರ ಬದುಕು ಕಸಿದ ಕೊರೊನಾ

ಚರ್ಚೆ ಭಾಗವಹಿಸುವವರು

ಮುಖ್ಯ ಮಂತ್ರಿ ಚಂದು, ರಂಗ ಭೂಮಿ ಮತ್ತು ಚಲನ ಚಿತ್ರ ನಟರು

ವೈ.ಕೆ.ಮುದ್ದುಕೃಷ್ಣ, ಗಾಯಕ ಮತ್ತು ಅಧ್ಯಕ್ಷರು, ಸುಗಮ ಸಂಗೀತ ಪರಿಷತ್

ಪ್ರವೀಣ್ ಡಿ. ರಾವ್ ಸಂಗೀತ ನಿರ್ದೇಶಕರು, ಸಂಯೋಜಕರು


ಕಾಸರಗೋಡು ಚಿನ್ನಾ ಮಾಜಿ ಅಧ್ಯಕ್ಷರು, ಕರ್ನಾಟಕ ಕೊಂಕಣಿ ಅಕಾಡೆಮಿ

ವಿದುಷಿ ವೀಣಾ ಮೂರ್ತಿ ವಿಜಯ್, ಭರತನಾಟ್ಯ, ಕೂಚುಪುಡಿ ನೃತ್ಯಗುರುಗಳು

ಶಶಿಧರ್ ಬಾರಿಘಾಟ್, ರಂಗ ನಿರ್ದೇಶಕರು ಮತ್ತು ನಾಟಕಕಾರರು

ಪಿ.ಕಿಶನ್ ಹೆಗ್ಡೆ ಸಾಲಿಗ್ರಾಮ ಸಹಿತ 5 ಮೇಳಗಳ ಮಾಲೀಕರು

ಜೋಗಿಲ ಸಿದ್ಧರಾಜು ಜನಪದ ಗಾಯಕರು ಮತ್ತು ಜಾನಪದ ಸಂಘಟಕರು

ನಿರ್ವಹಣೆ: ಶ್ರೀನಿವಾಸ್ ಜಿ ಕಪ್ಪಣ್ಣ

13 ಜೂನ್ 2021 ಭಾನುವಾರ, ಸಂಜೆ 5 ಗಂಟೆಗೆ

ಪ್ರಜಾವಾಣಿ LIVE
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರ ಪ್ರಸಾರ
ವಿದ್ಯಾರ್ಥಿಗಳ ಪ್ರಶ್ನೆ.. ತಜ್ಞರ ಉತ್ತರ!

ವಿ ಪ್ರದೀಪ್ ಕುಮಾರ್
ಲೇಖಕರು, ನಿರ್ವಹಣೆ, ತರಬೇತಿ ಮತ್ತು ವೃತ್ತಿ ಸಲಹೆಗಾರರು

ಇಂದು ಸಂಜೆ 5 ರಿಂದ 6

ದ್ವಿತೀಯ ಪಿಯುಸಿ ನಂತರ ಮುಂದೇನು?
ಕೋರ್ಸ್ ಮತ್ತು ವೃತ್ತಿಯ ಪ್ರಾಮುಖ್ಯತೆ, ಹಾಗೂ ಆಯ್ಕೆಗಳ ವಿಧಾನಗಳೊಂದಿಗೆ ನಿಮ್ಮ ಭವಿಷ್ಯವನ್ನು ರೂಪಿಸುವುದು ಹೇಗೆ? ಈ ನಿರ್ಧಾರಗಳಲ್ಲಿ ಪೋಷಕರ ಪಾತ್ರ

ಕರಾವಳಿಯಲ್ಲಿ ಇಂದಿನಿಂದ 'ಆರೆಂಜ್ ಅಲರ್ಟ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಕರಾವಳಿ ಭಾಗದಲ್ಲಿ ಇದೇ 12 ರಿಂದ 16ರವರೆಗೆ ಗುಡುಗು, ಸಿಡಿಲು ಸಹಿತ ಧಾರಾಕಾರ ಮಳೆಯಾಗುವ ಮುನ್ಸೂಚನೆ ಇದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

'ಇತ್ತೀಚೆಗಷ್ಟೇ ಮುಂಗಾರು ಆರಂಭಗೊಂಡು ಬಿಡುವು ಪಡೆದಿತ್ತು. ಈಗ ಕರಾವಳಿ ಹಾಗೂ ದಕ್ಷಿಣ ಒಳನಾಡಿನ ಜಿಲ್ಲೆಗಳಲ್ಲಿ ಮತ್ತೆ ಮಳೆ ಹೆಚ್ಚಾಗುವ ಸಾಧ್ಯತೆ ಇದೆ'.

'ಕರಾವಳಿಯ ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡ ಜಿಲ್ಲೆಗಳಲ್ಲಿ ಭಾರಿ ಮಳೆಯ ಮುನ್ಸೂಚನೆ ಇರುವುದರಿಂದ ಇದೇ 16ರವರೆಗೆ 'ಆರೆಂಜ್ ಅಲರ್ಟ್' ಘೋಷಿಸಲಾಗಿದೆ. ಕರಾವಳಿಯಲ್ಲಿ ಗಂಟೆಗೆ ಗರಿಷ್ಠ 50 ಕಿ.ಮೀ ವೇಗದಲ್ಲಿ ಗಾಳಿ ಬೀಸುತ್ತಿರುವುದರಿಂದ ಇದೇ 14ರವರೆಗೆ ಮೀನುಗಾರರು ಸಮುದ್ರಕ್ಕೆ ಇಳಿಯಬಾರದು' ಎಂದೂ ಇಲಾಖೆ ಎಚ್ಚರಿಸಿದೆ.

'ಶಿವಮೊಗ್ಗ, ಕೊಡಗು, ಹಾಸನ, ಚಿಕ್ಕಮಗಳೂರು, ಬೆಳಗಾವಿ, ಧಾರವಾಡ, ಹಾವೇರಿ ಜಿಲ್ಲೆಗಳಲ್ಲಿ ಇದೇ 14 ಮತ್ತು 15ರಂದು ಹೆಚ್ಚು ಮಳೆಯಾಗುವ ಸಾಧ್ಯತೆ ಇದೆ. ಉಳಿದ ಜಿಲ್ಲೆಗಳಲ್ಲಿ ಗುಡುಗು, ಸಿಡಿಲು ಇರಲಿದ್ದು, ಒಣಹವೆ ಮುಂದುವರಿಯಲಿದೆ. ಕೆಲವೆಡೆ ಸಾಧಾರಣ ಮಳೆಯಾಗಬಹುದು' ಎಂದು ಮಾಹಿತಿ ನೀಡಿದೆ.

ಮಳೆ–ಎಲ್ಲಿ, ಎಷ್ಟು?: ಪಣಂಬೂರು ಹಾಗೂ ಕಾರ್ಕಳದಲ್ಲಿ ತಲಾ 5 ಸೆಂ.ಮೀ ಮಳೆಯಾಗಿದೆ. ಸುಳ್ಯ 4, ಮಂಗಳೂರು, ಕುಂದಾಪುರ, ಮೂಡುಬಿದರೆ 3, ಭಟ್ಕಳ, ಸುಬ್ರಹ್ಮಣ್ಯ, ಭಾಗಮಂಡಲ 2, ಕಾರವಾರ, ಧರ್ಮಸ್ಥಳ, ಚಿಂಚೋಳಿ, ಶೃಂಗೇರಿಯಲ್ಲಿ ತಲಾ 1 ಸೆಂ.ಮೀ ಮಳೆಯಾಗಿದೆ. ರಾಯಚೂರಿನಲ್ಲಿ 34 ಡಿಗ್ರಿ ಸೆಲ್ಸಿಯಸ್ ಗರಿಷ್ಠ ತಾಪಮಾನ ದಾಖಲಾಗಿದೆ.

ತಮಿಳುನಾಡಿನ ಮೂಲಕ ಮಂಗಳೂರಿಗೆ ಬಂದು ವಾಸ್ತವ್ಯ

ಶ್ರೀಲಂಕಾದ 38 ಜನರ ಬಂಧನ

ಪ್ರಜಾವಾಣಿ ವಾರ್ತೆ

ಮಂಗಳೂರು: ತಮಿಳುನಾಡಿನ ಮೂಲಕ ಮಂಗಳೂರಿಗೆ ಬಂದು ಅಕ್ರಮವಾಗಿ ವಾಸವಾಗಿದ್ದ ಶ್ರೀಲಂಕಾದ 38 ಜನರನ್ನು ಹಾಗೂ ನಗರದಲ್ಲಿ ಅವರಿಗೆ ಆಶ್ರಯ ನೀಡಿದ್ದ ಆರು ಮಂದಿ ಸ್ಥಳೀಯರನ್ನು ಪೊಲೀಸರು ಬಂಧಿಸಿದ್ದಾರೆ.

ಶ್ರೀಲಂಕಾದ ಏಜೆಂಟರು ಕೆನಡಾದಲ್ಲಿ ಉದ್ಯೋಗದ ಒದಗಿಸುವುದಾಗಿ ಹೇಳಿ ₹6 ರಿಂದ 10 ಲಕ್ಷ ಪಡೆದಿದ್ದು, ಈ ವ್ಯಕ್ತಿಗಳನ್ನು ಖಾಸಗಿ ಬೋಟ್ ಮೂಲಕ ಮಾರ್ಚ್ 17ರಂದು ತಮಿಳುನಾಡಿನ ತೂತುಕುಡಿಗೆ ಕರೆತರಲಾಗಿತ್ತು. ಅಲ್ಲಿ ಚುನಾವಣೆಯ ಹಿನ್ನೆಲೆಯಲ್ಲಿ ಬಿಗಿ ತಪಾಸಣೆ ಆರಂಭವಾಗಿದ್ದರಿಂದ ಇವರನ್ನು ಬಸ್‌ನಲ್ಲಿ ಬೆಂಗಳೂರಿಗೆ ಕಳುಹಿಸಿ, ಅಲ್ಲಿಂದ ಮಂಗಳೂರಿಗೆ ಸಾಗಿಸಲಾಗಿತ್ತು.

ಈ ವ್ಯಕ್ತಿಗಳು ಮಂಗಳೂರಿನಲ್ಲಿ ಸುಮಾರು ಒಂದೂವರೆ ತಿಂಗಳಿನಿಂದ ವಾಸವಾಗಿರುವುದು ಪ್ರಾಥಮಿಕ ತನಿಖೆಯಿಂದ ತಿಳಿದು ಬಂದಿದೆ. ತಮಿಳುನಾಡು ಗುಪ್ತಚರ ಇಲಾಖೆಯಿಂದ ಬಂದ ಮಾಹಿತಿ ಮೇರೆಗೆ ಹಿರಿಯ ಅಧಿಕಾರಿಗಳ ಸೂಚನೆಯಂತೆ ಸತತ 78 ಗಂಟೆಗಳ ಕಾರ್ಯಾಚರಣೆ ನಡೆಸಲಾಗಿದೆ. ನಗರ ಬಂದರಿನ ಅಝೀಝುದ್ದೀನ್ ರಸ್ತೆಯ ಸೀ ಪೋರ್ಟ್, ರಾವ್ ಆಂಡ್ ರಾವ್ ಸರ್ಕಲ್ ಬಳಿಯ ಸಿಟಿ ಲಾಡ್ಜ್ ಹಾಗೂ ಕಸಬಾ ಬೆಂಗ್ರೆಯ ಮನೆಯಲ್ಲಿ ನೆಲೆಸಿದ್ದ 38 ಮಂದಿಯನ್ನು ವಶಕ್ಕೆ ಪಡೆಯಲಾಗಿದೆ.

'ಇದು ಮಾನವ ಕಳ್ಳ ಸಾಗಾಟದ ಗಂಭೀರ ಪ್ರಕರಣವಾಗಿದೆ. ವಿದೇಶಿ ಪ್ರಜೆಗಳ ಅಕ್ರಮ ಪ್ರವೇಶ ಹಾಗೂ ವಾಸದ ಅಪರಾಧವೂ ಇದಾಗಿದೆ. ವಶಕ್ಕೆ ಪಡೆದವರು ಉತ್ತರ ಶ್ರೀಲಂಕಾ ಭಾಗದ ನಿವಾಸಿಗಳೆಂದು ಹೇಳಲಾಗಿದ್ದು, ಇವರ ವಿರುದ್ಧ ಪಾಂಡೇಶ್ವರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ' ಎಂದು ನಗರ ಪೊಲೀಸ್ ಕಮಿಷನರ್ ಎನ್. ಶಶಿಕುಮಾರ್ ಮಾಹಿತಿ ನೀಡಿದರು.

ಇವರ ಕೆಲವು ಸ್ನೇಹಿತರೂ ಈ ಹಿಂದೆಯೇ ಕೆಲಸಕ್ಕಾಗಿ ಕೆನಡಾಕ್ಕೆ ಹೋಗಿದ್ದಾಗಿ ಪ್ರಾಥಮಿಕ ವಿಚಾರಣೆಯಲ್ಲಿ ತಿಳಿದುಬಂದಿದೆ. ಇವರಿಗೆ ಸಹಕರಿಸಿದವರು, ಮಂಗಳೂರು, ಬೆಂಗಳೂರಿನಲ್ಲೂ ಮಾನವ ಕಳ್ಳ ಸಾಗಾಟಕ್ಕೆ ಏಜೆಂಟರು ಕಾರ್ಯ ನಿರ್ವಹಿಸುತ್ತಿದ್ದಾರೆಯೇ ಎಂಬುದರ ಕುರಿತು ತನಿಖೆ ನಡೆಸಲಾಗುತ್ತಿದೆ ಎಂದು ಎನ್. ಶಶಿಕುಮಾರ್ ತಿಳಿಸಿದರು.

ವಶಕ್ಕೆ ಪಡೆದಿರುವ 38 ಮಂದಿಯನ್ನು ಕೋವಿಡ್ ತಪಾಸಣೆಗೊಳಪಡಿಸಿ, ತಮಿಳುನಾಡು ಪೊಲೀಸರ ಸಹಕಾರದೊಂದಿಗೆ ಮುಂದಿನ ತನಿಖೆ ನಡೆಸಲಾಗುವುದು ಎಂದು ಹೇಳಿದರು.


ಮಂಗಳೂರಿನಲ್ಲಿ ವಾಸವಾಗಿದ್ದ ಶ್ರೀಲಂಕಾದ 38 ಜನರನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

ತೆರಿಗೆ ಸಂಗ್ರಹ ಕುಸಿತ: ಸಿ.ಎಂ. ಕಳವಳ

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: 'ಎಂಟು ತಿಂಗಳಿನಿಂದ ರಾಜ್ಯದ ತೆರಿಗೆ ಸಂಗ್ರಹ ಪ್ರಮಾಣ ಗಣನೀಯವಾಗಿ ಕಡಿಮೆಯಾಗಿದೆ. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲೂ ಅಭಿವೃದ್ಧಿ ಕಾರ್ಯಗಳಿಗೆ ತೊಡಕಾಗದಂತೆ ಶಕ್ತಿಮೀರಿ ಪ್ರಯತ್ನ ನಡೆಸುತ್ತಿರುವೆ' ಎಂದು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಹೇಳಿದರು.

ಶಿಕಾರಿಪುರದಲ್ಲಿ ಶುಕ್ರವಾರ ಸುದ್ದಿಗಾರರ ಜತೆ ಅವರು ಮಾತನಾಡಿದರು.

'ಕೇಂದ್ರದಿಂದ ಹೆಚ್ಚಿನ ಅನುದಾನ ಕೋರಲಾಗಿದೆ. ಪ್ರಧಾನಿ ಮೋದಿ ಅವರು ನೆರವು ನೀಡುವ ಭರವಸೆ ಇದೆ. ನಾಲ್ಕು ತಿಂಗಳಲ್ಲಿ ಆರ್ಥಿಕ ಪರಿಸ್ಥಿತಿ ಸುಧಾರಿಸುವ ವಿಶ್ವಾಸವಿದೆ' ಎಂದು ಹೇಳಿದರು.

'ಕೊರೊನಾ ಲಾಕ್‌ಡೌನ್ ಸಂಕಷ್ಟಕ್ಕೆ ಸಿಲುಕಿರುವ ಬಡ ಜನರಿಗೆ ಈಗಾಗಲೇ ಎರಡು ಪ್ಯಾಕೇಜ್ ಘೋಷಿಸಲಾಗಿದೆ. ಅನಿವಾರ್ಯವಾದರೆ ಮತ್ತೊಂದು ಪ್ಯಾಕೇಜ್ ನೀಡಲೂ ಸರ್ಕಾರ ಸಿದ್ಧವಿದೆ. ನಾಳೆಯಿಂದ ರಾಜ್ಯಕ್ಕೆ ದೊಡ್ಡ ಪ್ರಮಾಣದಲ್ಲಿ ಲಸಿಕೆ ಬರಲಿದೆ. ಜನಸಂಖ್ಯೆಗೆ ಅನುಗುಣವಾಗಿ ಎಲ್ಲ ಜಿಲ್ಲೆಗಳಿಗೂ ಹಂಚಿಕೆ ಮಾಡಲಾಗುವುದು. ಲಸಿಕೆ ವಿಷಯದಲ್ಲಿ ಕಾಂಗ್ರೆಸ್ ನಾಯಕರು ರಾಜಕಾರಣ ಮಾಡಬಾರದು. ಶೇ 5ಕ್ಕೆ ಕೋವಿಡ್ ಪ್ರಕರಣ ತಗ್ಗಿಸಲು ಪ್ರಯತ್ನ ಮಾಡುತ್ತಿದ್ದೇವೆ' ಎಂದು ಹೇಳಿದರು.

'ಅರುಣ್ ಸಿಂಗ್ ಭೇಟಿ: ವಿಶೇಷ ಅರ್ಥ ಬೇಡ'

'ಬಿಜೆಪಿ ರಾಜ್ಯ ಉಸ್ತುವಾರಿ ಅರುಣ್ ಸಿಂಗ್ ರಾಜ್ಯಕ್ಕೆ ಬರುವ ಬಗ್ಗೆ ವಿಶೇಷ ಅರ್ಥ ಕಲ್ಪಿಸುವ ಅಗತ್ಯ ಇಲ್ಲ' ಎಂದು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಹೇಳಿದರು.

ಶಿಕಾರಿಪುರಲ್ಲಿ ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಅರುಣ್ ಸಿಂಗ್ ಸಹಜವಾಗಿ ರಾಜ್ಯಕ್ಕೆ ಬರುತ್ತಾರೆ. ರಾಜ್ಯದ ಅಭಿವೃದ್ಧಿ ಕಾರ್ಯಗಳನ್ನು ವೀಕ್ಷಿಸುತ್ತಾರೆ' ಎಂದು ಹೇಳಿದರು.

'ಜಮೀರ್ ಹೇಳಿಕೆಗೂ ಪಕ್ಷಕ್ಕೂ ಸಂಬಂಧವಿಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಾಜಿ ಮುಖ್ಯಮಂತ್ರಿ ಎಚ್‌.ಡಿ. ಕುಮಾರಸ್ವಾಮಿ ಅವರ ಕುರಿತು ಶಾಸಕ ಬಿ.ಜೆಡ್. ಜಮೀರ್ ಅಹಮ್ಮದ್ ಖಾನ್ ನೀಡಿರುವ ಹೇಳಿಕೆ ವೈಯಕ್ತಿಕವಾದುದು. ಅವರ ಹೇಳಿಕೆಗೂ ಕಾಂಗ್ರೆಸ್ ಪಕ್ಷಕ್ಕೂ ಸಂಬಂಧವಿಲ್ಲ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಸ್ಪಷ್ಟಪಡಿಸಿದ್ದಾರೆ.

ಜಮೀರ್ ಅಹಮ್ಮದ್ ಅವರ ಹೇಳಿಕೆ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಶಿವಕುಮಾರ್, 'ಜಮೀರ್ ಅಹಮ್ಮದ್ ಅವರು ಮುಂದಿನ ದಿನಗಳಲ್ಲಿ ಇಂತಹ ಹೇಳಿಕೆ ನೀಡುವ ಮೊದಲು ತಾವು ಒಂದು ಪಕ್ಷದ ಪ್ರತಿನಿಧಿ ಎಂಬುದನ್ನು ಮರೆಯಬಾರದು. ಇಂತಹ ಘಟನೆ ಪುನರಾವರ್ತನೆ ಆಗದಂತೆ ಎಚ್ಚರಿಕೆ ವಹಿಸಬೇಕು' ಎಂದು ಸೂಚಿಸಿದ್ದಾರೆ.

ವೈದ್ಯಕೀಯ ಅಧೀಕ್ಷಕರ ಕಚೇರಿ, ಸರ್ಕಾರಿ ಲೇಡಿಗೋಶನ್ ಆಸ್ಪತ್ರೆ, ಮಂಗಳೂರು

ಸಂಖ್ಯೆ: ಎನ್.ಎಚ್.ಎಮ್/57(ಡ್ರಗ್ಸ್& ಕನ್ಸೂಮೇಬಲ್ಸ್)/2020–21 ದಿನಾಂಕ: 07–06–2021

ಸಂಕ್ಷಿಪ್ತ ಅಲ್ಪಾವಧಿ ಟೆಂಡರ್ ಅಧಿಸೂಚನೆ

ಸರ್ಕಾರಿ ಲೇಡಿಗೋಶನ್ ಆಸ್ಪತ್ರೆ, ಮಂಗಳೂರು ಇಲ್ಲಿನ ಉಪಯೋಗಕ್ಕಾಗಿ ಒಂದು ವರ್ಷದ ಅವಧಿಗೆ ಬೇಕಾಗುವ ಔಷಧಿ ಮತ್ತು ಕನ್ಸೂಮೇಬಲ್‌ಗಳ ಪೂರೈಕೆಗಾಗಿ ಕೆ.ಟಿ.ಪಿ.ಪಿ. 1999–2000 ನಿಯಮದಂತೆ ದ್ವಿ–ಲಕೋಟೆ ಪದ್ಧತಿಯಲ್ಲಿ ಅಲ್ಪಾವಧಿ ಟೆಂಡರ್‌ಗಳನ್ನು e-procurement portal ಮೂಲಕ ಆಹ್ವಾನಿಸಲಾಗಿದೆ.
ಆಸಕ್ತಿಯುಳ್ಳ ಟೆಂಡರ್‌ದಾರರು ಇ–ಟೆಂಡರ್ ಪೋರ್ಟಲ್‌ನಲ್ಲಿ ನೋಂದಾಯಿಸಿಕೊಂಡು ಅನ್ವಯವಾಗುವ ಪ್ರೊಸೆಸಿಂಗ್ ಶುಲ್ಕವನ್ನು ಇ–ಪ್ರೊಕ್ಯೂರ್‌ಮೆಂಟ್ ಹೊಂದಿರುವ ಕರ್ನಾಟಕ ಸರ್ಕಾರದ ಸೆಂಟ್ರಲ್ ಪೋಲಿಂಗ್ ಅಕೌಂಟಿನಲ್ಲಿ ಸಂದಾಯ ಮಾಡುವುದು. ಹೆಚ್ಚಿನ ಮಾಹಿತಿಗಾಗಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನ ವೆಬ್‌ಸೈಟ್ www.eproc.karnataka.gov.in ನಲ್ಲಿ ವೀಕ್ಷಿಸಬಹುದು.

1. ಟೆಂಡರ್‌ಗಳನ್ನು ಅಪ್‌ಲೋಡ್ ಮಾಡಲು ಪ್ರಾರಂಭ ದಿನಾಂಕ: 14–06–2021
2. ಟೆಂಡರ್‌ಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ ಮತ್ತು ಸಮಯ: 30–06–2021 ಸಂಜೆ 4–30
3. ಟೆಂಡರ್‌ಗಳನ್ನು ತೆರೆಯುವ ದಿನಾಂಕ: 02–07–2021 ಬೆಳಿಗ್ಗೆ 11.00 ಗಂಟೆಗೆ. (ಅಥವಾ ಅಂತಿಮ ದಿನಾಂಕದಂದು ಸರ್ಕಾರಿ ರಜೆ ಘೋಷಣೆಯಾದರೆ ಮರುದಿನ ಸರ್ಕಾರಿ ಕೆಲಸದ ದಿನದಂದು ಬಿಡ್‌ಗಳನ್ನು ತೆರೆಯಲಾಗುವುದು)

ಸಹಿ/– ವೈದ್ಯಕೀಯ ಅಧೀಕ್ಷಕರು, ಸರ್ಕಾರಿ ಲೇಡಿಗೋಶನ್ ಆಸ್ಪತ್ರೆ, ಮಂಗಳೂರು.

ಜಿಲ್ಲಾ ಪಂಚಾಯತ್, ಬಳ್ಳಾರಿ

ಸಂ:ಜಿಪಂಬ/ಆಡಳಿತ/191/2017–18 ದಿನಾಂಕ: 11.06.2021

ಪ್ರಕಟಣೆ

ಸಂಗ್ರಹಣೆ ಮಾಡಬೇಕಾದ ವಿವರ: ಜಿಲ್ಲಾ ಮತ್ತು ತಾಲ್ಲೂಕು ಪಂಚಾಯತಿಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಹೊರಸಂಪನ್ಮೂಲದಿಂದ ಪಡೆಯಲು ಸಂಸ್ಥೆಯನ್ನು ಆಯ್ಕೆ ಮಾಡುವ ಕುರಿತು. ಟೆಂಡರ್ ಸಂಖ್ಯೆ: NO/ZPB/ADMIN/191/2017-18/CALL-3. ಟೆಂಡರಿಗೆ ಇಟ್ಟ ಮೊತ್ತ: ರೂ.163.00 ಲಕ್ಷ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 18.06.2021 @ 16.00 pm. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬೇಕಾದ ಇ–ಸಂಗ್ರಹಣಾವೇದಿಕೆಯ (e-procurement) ಅಧಿಕೃತ ಜಾಲತಾಣದ ವಿಳಾಸ: https://eproc.karnataka.gov.in.

ಸಹಿ/– ಉಪಕಾರ್ಯದರ್ಶಿ(ಆಡಳಿತ) ಹಾಗೂ ಟೆಂಡರ್ ಆಹ್ವಾನಿಸುವ ಪ್ರಾಧಿಕಾರ ಜಿಲ್ಲಾ ಪಂಚಾಯತಿ, ಬಳ್ಳಾರಿ.
ಡಿಐಪಿಆರ್/ಬಳ್ಳಾರಿ/95/ಎಂಸಿಎ/2021–22

ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಭದ್ರಾ ಮೇಲ್ದಂಡೆ ಯೋಜನಾ ವಿಭಾಗ ನಂ.7, ಹಿರಿಯೂರು ಕ್ಯಾಂಪ್, ಚಿತ್ರದುರ್ಗ.
Ph/Fax: 08194-220500 E-Mail: ubpee07@gmail.com
ಸಂ:ಕಾ.ಇಂ/ವಿ.ಜ.ನಿ.ನಿ/ಭಮೇಯೋ/ವಿ.ನಂ.07/ಹಿ/ಕ್ಯಾಂ.ಚಿ/2021–22/162,165,166
ದಿನಾಂಕ: 31.05.2021

ಇನ್‌ಫಾರ್‌ಮೇಟಿವ್ ಕೊಟೇಷನ್ ಅಧಿಸೂಚನೆ

ವ್ಯವಸ್ಥಾಪಕ ನಿರ್ದೇಶಕರು, ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ, ಬೆಂಗಳೂರು ಇವರ ಪರವಾಗಿ ಕೆಳಗೆ ಸಹಿ ಮಾಡಿರುವವರಿಂದ ವಿ.ವಿ. ಸಾಗರ ಜಲಾಶಯ ಯೋಜನೆಯ 03 ಕಾಮಗಾರಿಗಳು: 1) Preparation of design, drawing and estimates with DTP for Tourism infrastructure development works at Vani Vilasa Sagara Dam in Hiriyur taluk, Chitradurga District 2) Conducting Survey of VVS dam and its canal networks, its associated buildings and structures, Including preparation of land schedule and fixing of boundary stones 3) Survey, investigation detailed engineering preparation of designs, drawings, estimates, Draft tender documents including preparation of necessary land acquisition proposals for implementation of Drip irrigation under Vani Vilasa Sagar command ಕಾಮಗಾರಿಗಳ ಅಂದಾಜು ಪಟ್ಟಿಗಳನ್ನು ತಯಾರಿಸಲು ಬೇಕಾಗುವ ಐಟಂವಾರು ದರಗಳನ್ನು ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸಲು INFORMATIVE QUOTATION ಅಧಿಸೂಚನೆಯನ್ನು ಹೊರಡಿಸಲಾಗಿದೆ. ಕೊಟೇಶನ್ ನೋಟಿಫಿಕೇಶನನ್ನು ದಿನಾಂಕ: 10.06.2021ರಿಂದ ದಿನಾಂಕ: 23.06.2021ರ ವರೆಗೆ ಕಾರ್ಯಪಾಲಕ ಇಂಜಿನಿಯರ್, ವಿಜನಿನಿ, ಭಮೇಯೋ, ವಿಭಾಗ ನಂ.7, ಹಿರಿಯೂರು ಕ್ಯಾಂಪ್; ಚಿತ್ರದುರ್ಗರವರ ಕಛೇರಿಯಲ್ಲಿ ಅಥವಾ ಅಧಿಸೂಚನೆಯನ್ನು ನಿಗಮದ www.vjnl.in ವೆಬ್‌ಸೈಟ್‌ನಲ್ಲಿ ಪಡೆಯಬಹುದು ಹಾಗೂ ದಿನಾಂಕ: 23.06.2021ರ ಸಂಜೆ 4:00 ಗಂಟೆಯ ಒಳಗೆ ಮುಚ್ಚಿದ ಲಕೋಟೆಯಲ್ಲಿ ಈ ಕಛೇರಿಗೆ ಸಲ್ಲಿಸುವುದು.

RO No. 174: DIPR/CTA/MCA/2021-22 ಸಹಿ/– ಕಾರ್ಯಪಾಲಕ ಅಭಿಯಂತರರು

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ್, ಮೈಸೂರು.
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಛೇರಿ, ಮೈಸೂರು ಜಿಲ್ಲೆ, ಮೈಸೂರು,
ಥಿಯೋಬಾಲ್ಡ್ ರಸ್ತೆ, ನಜ಼ರ್‌ಬಾದ್, ಮೈಸೂರು 570010.
Ph:0821-2529205 Email:dhomysuru-hfws@karnataka.gov.in
ಸಂಖ್ಯೆ : ಸಿವಿ(2)60/2021–22 ದಿನಾಂಕ: 09.06.2021

ನೇರ ಸಂದರ್ಶನಕ್ಕೆ ಅರ್ಜಿ ಆಹ್ವಾನ

ಕೊವಿಡ್–19 ಸಂಬಂಧವಾಗಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಅಡಿ ಬರುವ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಛೇರಿ, ಮೈಸೂರು ಜಿಲ್ಲೆ, ಮೈಸೂರು ಇವರ ಅಧೀನ ಆಸ್ಪತ್ರೆಗಳಲ್ಲಿ ಕರ್ತವ್ಯ ನಿರ್ವಹಿಸಲು ಖಾಲಿ ಇರುವ ಶುಶ್ರೂಷಕರು ಹುದ್ದೆಗಳಿಗೆ ತಾತ್ಕಾಲಿಕವಾಗಿ ದಿನಾಂಕ: 30.09.2021 ರವರೆಗೆ ಅಥವಾ ನೇರ ನೇಮಕಾತಿ ಹುದ್ದೆಗಳು ಭರ್ತಿಯಾಗುವವರೆಗೆ ಗುತ್ತಿಗೆ ಆಧಾರದ ಮೇಲೆ ಮೆರಿಟ್ ಕಂ ರೋಸ್ಟರ್ ಆಧಾರದಲ್ಲಿ ನೇರ ಸಂದರ್ಶನದ (Wall-in-interview) ಮೂಲಕ ನೇಮಕಾತಿ ಪ್ರಕ್ರಿಯೆ ನಡೆಯುತ್ತಿದ್ದು, ಆಸಕ್ತರು, ದಿನಾಂಕ: 17.06.2021 ರಂದು ಬೆಳಿಗ್ಗೆ 10.00 ಗಂಟೆಯಿಂದ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಛೇರಿ, ಎನ್.ಪಿ.ಸಿ ಆಸ್ಪತ್ರೆ, ಆವರಣ, ಮೈಸೂರು ಇಲ್ಲಿಗೆ ನೇರ ಸಂದರ್ಶನಕ್ಕೆ ಹಾಜರಾಗಬಹುದು. ಈ ಹಿಂದೆ ಈ ಉದ್ದೇಶಕ್ಕಾಗಿ ದಿನಾಂಕ: 04.06.2021 ರಂದು ಸಂದರ್ಶನಕ್ಕೆ ಹಾಜರಾಗಿದ್ದ ಅಭ್ಯರ್ಥಿಗಳನ್ನು ಈ ಹುದ್ದೆಗೆ ಪರಿಗಣಿಸಲಾಗುವುದರಿಂದ ಈ ಸಂದರ್ಶನಕ್ಕೆ ಹಾಜರಾಗುವಂತಿಲ್ಲ.
Sl. No.1 NAME OF THE POST: NURSING OFFICER **EDUCATION QUALIFICATION:** B.SC/GNM/Diplamo nursing Registered in karnataka nursing council. **NO OF POSTS:** 13 **CONSOLIDATED PAY IN Rs.P.M:** Rs. 25,000/- **ELIGIBILITY CRITERIA:** Age Limit: On the last date of notification candidate shall not exceed the age of 35 Years for GENERAL, 38 Years for OBC and 40 Years for SC/ ST/CATAGORY-1
ಈ ಮೇಲ್ಕಂಡ ಪಟ್ಟಿಯಲ್ಲಿನ ಹುದ್ದೆಗಳಿಗೆ ಆಸಕ್ತಿಯುಳ್ಳವರು ನೇರ ಸಂದರ್ಶನಕ್ಕೆ ತಮ್ಮ ಮೂಲ ಅಂಕಪಟ್ಟಿಗಳು / ಎಲ್ಲಾ ಪ್ರಮಾಣ ಪತ್ರಗಳೊಂದಿಗೆ Address Proof and ID Proof ನೊಂದಿಗೆ ಹಾಗೂ ಇವುಗಳ ಒಂದು ಜೆರಾಕ್ಸ್ ಪ್ರತಿಯನ್ನು ತಿಳಿಸಿರುವ ದಿನಾಂಕಗಳಲ್ಲಿ ನಿಗಧಿತ ಸಮಯದೊಳಗೆ ಸಂದರ್ಶನಕ್ಕೆ ಹಾಜರಾಗುವುದು, ನೇರ ಸಂದರ್ಶನದ ಎಲ್ಲಾ ಹಕ್ಕುಗಳು ಹಾಗೂ ತೀರ್ಮಾನಗಳು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಛೇರಿ, ಮೈಸೂರು ಇವರನ್ನೊಳಗೊಂಡ ಸಮಿತಿಯವರದ್ದಾಗಿರುತ್ತದೆ, ಎಲ್ಲಾ ಹುದ್ದೆಗಳು ತಾತ್ಕಾಲಿಕವಾಗಿದ್ದು, ಮುಂದಿನ 06 ತಿಂಗಳ ಅವಧಿಗೆ ಅಥವಾ ನೇರ ನೇಮಕಾತಿ ಹುದ್ದೆಗಳು ಭರ್ತಿಯಾಗುವವರೆಗೆ ಮಾತ್ರ ನೇಮಕಾತಿ ಮಾಡಲಾಗುವುದು, ಇನ್ನುಳಿದ ಯಾವುದೇ ಮಾಹಿತಿಗಾಗಿ ದೂರವಾಣಿ ಸಂಖ್ಯೆ: 0821–2529205 ಗೆ ಕಛೇರಿ ಸಮಯದಲ್ಲಿ ಕರೆ ಮಾಡುವುದು.

ಸಹಿ/– ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ, ಮೈಸೂರು ಜಿಲ್ಲೆ, ಮೈಸೂರು.
DIPR/DDMYS/MCA/D-14/2021-22

ಕರ್ನಾಟಕ ಸರಕಾರ
ಕಾರ್ಯನಿರ್ವಾಹಕ ಅಭಿಯಂತರ ಕಛೇರಿ, ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ, ಹಾವೇರಿ
ನಂ.ಪಂರಾಇಂವಿ/ಹಾವೇರಿ/ಪಿಬಿ–4/ಟೆಂಡರ್/2020–21/838 ದಿನಾಂಕ:07–06–2021

ಅಲ್ಪಾವಧಿ ಟೆಂಡರ ಪ್ರಕಟಣೆ
(E.GOK ಇ–ಪ್ರಕ್ಯೂರಮೆಂಟ್ ಮುಖಾಂತರ ಮಾತ್ರ)

ಆರ್.ಎಮ್.ಎಸ್.ಎ ಲೆಕ್ಕಶೀರ್ಷಿಕೆ ಯೋಜನೆಯಡಿ ಹಾವೇರಿ ಮತ್ತು ಸವಣೂರ ತಾಲೂಕಗಳ ಕಟ್ಟಡ ಕಾಮಗಾರಿಗಳಿಗೆ ಟೆಂಡರ ಕರೆಯಲಾಗಿದೆ.
(1) ಹಾವೇರಿ ತಾ: ಆರ್.ಎಮ್.ಎಸ್.ಎ ಸರಕಾರಿ ಉರ್ದು ಪ್ರೌಢ ಶಾಲೆ ಗುತ್ತಲ ನಿರ್ಮಾಣ ಕಾಮಗಾರಿ (INDENT83985) (2) ಸವಣೂರ ತಾ: ಆರ್.ಎಮ್.ಎಸ್.ಎ ಸರಕಾರಿ ಕನ್ನಡ ಹಿರಿಯ ಪ್ರಾಥಮಿಕ ಶಾಲೆ ಚಿಲ್ಲೂರಬಡ್ನಿ ನಿರ್ಮಾಣ ಕಾಮಗಾರಿ (INDENT83986)
(1) ಇ–ಪ್ರಕ್ಯೂರಮೆಂಟ್ ಮೂಲಕ ಟೆಂಡರಗಳನ್ನು ಡೌನಲೋಡ್ ಮಾಡುವ ದಿನಾಂಕ : 11–06–2021 (2) ಟೆಂಡರ ಪೂರ್ವಭಾವಿ ಸಭೆಯನ್ನು ಕಾರ್ಯಪಾಲಕ ಅಭಿಯಂತರರವರ ಕಛೇರಿಯಲ್ಲಿ ದಿನಾಂಕ : 15–06–2021 11:00 ಗಂಟೆಗೆ (3) ಇ–ಪ್ರಕ್ಯೂರಮೆಂಟ್ ಮೂಲಕ ಭರ್ತಿಮಾಡಿದ ಟೆಂಡರಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ : 18–06–2021 ರ 16:00 ಗಂಟೆವರೆಗೆ (4) ಇ–ಪ್ರೋಕ್ಯೂರಮೆಂಟ್ ತಾಂತ್ರಿಕ ಬಿಡ್ ತೆರೆಯುವ (ಸಾಧ್ಯವಾದಲ್ಲಿ) ದಿನಾಂಕ : 19–06–2021 ರ 17:00 ಗಂಟೆಗೆ (5) ಇ–ಪ್ರೋಕ್ಯೂರಮೆಂಟ್ ಆರ್ಥಿಕ ಬಿಡ್ ತೆರೆಯುವ (ಸಾಧ್ಯವಾದಲ್ಲಿ) ದಿನಾಂಕ : 23–06–2021 ರ 10:30 ಗಂಟೆಗೆ
ಟೆಂಡರನಲ್ಲಿಯ ನಿಬಂಧನೆಗಳನ್ನು ಹಾಗೂ ಷರತ್ತುಗಳ ವಿವರಗಳನ್ನು E-GOK ಇ–ಪ್ರಕ್ಯೂರಮೆಂಟ್ ಪ್ಲಾಟ್‌ಫಾರಂನಲ್ಲಿ www.eproc.karnataka.gov.in ರಲ್ಲಿ ಪಡೆಯಬಹುದು ಹಾಗೂ ವಿಭಾಗ ಕಛೇರಿಯಲ್ಲಿ ಹೆಚ್ಚಿನ ಮಾಹಿತಿಗಳನ್ನು ಪಡೆಯತಕ್ಕದ್ದು.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು, ಪಂ.ರಾ.ಇಂ. ವಿಭಾಗ, ಹಾವೇರಿ
ವಾಸಾಸಂಇ/ಹಾವೇರಿ/ಎಂ.ಸಿ.ಎ/96/2021–22

ಲೋಕೋಪಯೋಗಿ ಇಲಾಖೆ
ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ರಾಮನಗರ ವಿಶೇಷ ವಿಭಾಗ, ರಾಮನಗರ.

ಅಲ್ಪಾವಧಿ ಟೆಂಡರ್ ಪ್ರಕಟಣೆ ಮುಂದೂಡಿಕೆ ಸಂಖ್ಯೆ: 01(1)/21–22 ದಿ: 09–06–2021

ಅಲ್ಪಾವಧಿ ಟೆಂಡರ್ ಪ್ರಕಟಣೆ ಮುಂದೂಡಿಕೆ

ರಾಮನಗರ ವಿಶೇಷ ವಿಭಾಗ ವ್ಯಾಪ್ತಿಯಲ್ಲಿ ಈಗಾಗಲೇ ಪ್ರಕಟಣೆ ಸಂ: 01/2021–22, ದಿನಾಂಕ : 26–04–2021 ರಂದು ಅಲ್ಪಾವಧಿ ಟೆಂಡರ್ ಪ್ರಕಟಣೆ ಹೊರಡಿಸಲಾಗಿದ್ದು, ಕಾಮಗಾರಿಗಳಿಗೆ ತಾಂತ್ರಿಕ ಕಾರಣಗಳಿಂದ ಈ ಕೆಳಕಂಡಂತೆ ದಿನಾಂಕಗಳನ್ನು ನಿಗಧಿಪಡಿಸಿದೆ.
1) ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ನಿಂದ ಟೆಂಡರ್ ಡಾಕ್ಯುಮೆಂಟ್ ಅನ್ನು ದಿನಾಂಕ : 11–06–2021 ರಿಂದ 12–07–2021 ರವರೆಗೆ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿರುತ್ತದೆ. 2) ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಆನ್‌ಲೈನ್ ಮುಖಾಂತರ ಟೆಂಡರ್‌ಗಳನ್ನು ದಿನಾಂಕ : 12–07–2021 ರ ವೇಳೆ 16.00 ಗಂಟೆಯೊಳಗೆ ಸಲ್ಲಿಸುವುದು. 3) ಫ್ರೀ–ಬಿಡ್ ಸಭೆಯ ದಿನಾಂಕ : 01–07–2021 ರ ವೇಳೆ 16.30 ಗಂಟೆ. 4) ಟೆಂಡರ್‌ಗಳನ್ನು ತೆರೆಯುವ ದಿನಾಂಕ : 13–07–2021 ರ ವೇಳೆ 16.30 ಗಂಟೆ. (ಸಾಧ್ಯವಾದಲ್ಲಿ) ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ನಂತರ ತಿಳಿಸಲಾಗುವುದು.
ಹೆಚ್ಚಿನ ವಿವರಗಳಿಗಾಗಿ ಈ ಕಛೇರಿಯನ್ನು ಸಂಪರ್ಕಿಸುವುದು.

ಸಹಿ/– ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ರಾಮನಗರ ವಿಶೇಷ ವಿಭಾಗ, ರಾಮನಗರ.
ಡಿಐಪಿಆರ್/ರಾಮನಗರ/40ಎ/ಮಣಿಪಾಲ್/2021–22

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರವರ ಕಛೇರಿ, ಯೋಜನಾ ವಿಭಾಗ, ರಾಜಾರಾಜೇಶ್ವರಿ ವಲಯ, ಬೆಂಗಳೂರು-560 098.
ಸಂಖ್ಯೆ:ಬೃಬೆಂಮಪಾ/ಕಾಅ/ಯೋ/ಟೆಂಡರ್/21/2/2021-22 ದಿನಾಂಕ: 11-06-2021

ಟೆಂಡರ್ ಪ್ರಕಟಣೆ : 2ನೇ ಕರೆ (ದ್ವಿ ಲಕೋಟೆ ಪದ್ಧತಿ)
(ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ)

ಕಾರ್ಯಪಾಲಕ ಅಭಿಯಂತರರು, ಯೋಜನಾ ವಿಭಾಗ, ರಾಜರಾಜೇಶ್ವರಿ ನಗರ ವಲಯ ಇವರು ಕೆಳಗೆ ತಿಳಿಸಿರುವ ಸೇವೆಗಳಿಗೆ ಸಾರ್ವಜನಿಕ ಖರೀದಿಯಲ್ಲಿ ಕರ್ನಾಟಕ ಪಾರದರ್ಶಕತೆ ಕಾಯ್ದೆ 2000 ರಂತೆ ದ್ವಿ ಲಕೋಟೆ ಪದ್ಧತಿಯಲ್ಲಿ ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ನಿಗದಿತ ಸ್ವರೂಪದಲ್ಲಿ ಐಟಿ, ಇಎಸ್‌ಐ, ಪಿಎಫ್, ಕಾರ್ಮಿಕ ಇಲಾಖೆ ಮತ್ತು ಇತರೆ ಕರ್ನಾಟಕ ಸರ್ಕಾರದ ಸಂಸ್ಥೆಗಳಲ್ಲಿ ನೋಂದಾಯಿತ ಏಜೆನ್ಸಿಗಳಿಂದ ಟೆಂಡರ್‌ನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕೆಲಸದ ಹೆಸರು	ಇಎಂಡಿ ಮೊತ್ತ (ರೂ.ಗಳಲ್ಲಿ)
1)	ರಾಜರಾಜೇಶ್ವರಿ ನಗರ ವಲಯದಲ್ಲಿ 2021–22ನೇ ಸಾಲಿಗೆ 11 ತಿಂಗಳ ಅವಧಿಗೆ ಡಾಟಾ ಎಂಟ್ರಿ ಆಪರೇಟರ್‌ಗಳ ಸೇವೆಗಳನ್ನು ಒದಗಿಸುವುದು.	1,53,000/-

ಟೆಂಡರ್ ತೆರೆಯುವ ನಿರ್ದಿಷ್ಟ ದಿನಾಂಕವನ್ನು ಉದ್ಯೋಗದಾತರಿಗೆ ರಜಾದಿನವೆಂದು ಘೋಷಿಸಿದಲ್ಲಿ, ಮುಂದಿನ ಕೆಲಸದ ದಿನದಂದು ನಿಗದಿತ ಸಮಯ ಮತ್ತು ಸ್ಥಳದಲ್ಲಿ ಟೆಂಡರ್‌ಗಳನ್ನು ತೆರೆಯಲಾಗುತ್ತದೆ.
ಟೆಂಡರ್‌ನ ಕಾರ್ಯಸೂಚಿ: 1. ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಿಂದ ದಿನಾಂಕ: 17–06–2021 ಸಂಜೆ 4:00 ಗಂಟೆಯವರೆಗೆ ಡೌನ್‌ಲೋಡ್ ಮಾಡಿಕೊಳ್ಳಬಹುದು. 2. ಟೆಂಡರ್ ವಿಚಾರಣೆ ಮಾಡುವ ಕೊನೆಯ ದಿನಾಂಕ ಮತ್ತು ಸಮಯ: 18–06–2021ರ ಸಂಜೆ 4.00 ಗಂಟೆಯವರೆಗೆ. 3. ಪೂರ್ವ ಬಿಡ್ ಸಭೆಯನ್ನು ಮುಖ್ಯ ಅಭಿಯಂತರವರ ಕಛೇರಿ, ರಾಜರಾಜೇಶ್ವರಿ ನಗರ ವಲಯ ಇಲ್ಲಿ ದಿನಾಂಕ: 19–06–2021ರ ಸಂಜೆ 4.00 ಗಂಟೆಗೆ ನಡೆಸಲಾಗುವುದು. 4. ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕ: 25–06–2021ರ ಸಂಜೆ 4:00 ಗಂಟೆಯವರೆಗೆ. 5. ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 26–06–2021ರ ಸಂಜೆ 4:00 ಗಂಟೆಗೆ. 6. ಆರ್ಥಿಕ ಬಿಡ್ ತೆರೆಯುವುದು: ತಾಂತ್ರಿಕವಾಗಿ ಅರ್ಹ ಬಿಡ್ಡ್‌ದಾರರಿಗೆ ತಿಳಿಸಲಾಗುವುದು. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಅಥವಾ https://eproc.karnataka.gov.in ಇಲ್ಲಿಗೆ ಲಾಗಿನ್ ಮಾಡಿ ಪಡೆಯಬಹುದು.

ಸಹಿ/-, ಕಾರ್ಯಪಾಲಕ ಅಭಿಯಂತರರು, ಯೋಜನಾ ವಿಭಾಗ, ರಾಜರಾಜೇಶ್ವರಿ ವಲಯ, ಬೃಬೆಂಮಪಾ.

ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕೋವಿಡ್ ಸಂದರ್ಭದಲ್ಲಿ ಹೊಸ ಸಮಸ್ಯೆ

ಬಾಲಕಿಯರ ಕಾಡುವ ಅಕಾಲಿಕ ಋತುಪ್ರಾಪ್ತಿ

ಮನಸ್ವಿ

‘ನನ್ನ ಮಗಳು ಪೂರ್ವಿಗೆ ಇನ್ನೂ 8 ವರ್ಷ ವಯಸ್ಸು. ಶಾಲೆ ಇಲ್ಲದ ಕಾರಣ ಮನೆಯಲ್ಲೇ ಆಟವಾಡಿಕೊಂಡಿದ್ದ ಅವಳು ಕಳೆದ ಹದಿನೈದು ದಿನಗಳ ಹಿಂದೆ ಇದ್ದಕ್ಕಿದಂತೆ ಕಿಬ್ಬೊಟ್ಟೆ ನೋವು ಎಂದು ಅಳುತ್ತಿದ್ದಳು. ನಾನು ಯಾಕಿರಬಹುದು ಎಂದು ತಲೆ ಕೆಡಿಸಿಕೊಂಡಿದ್ದೆ. ಅದಾಗಿ ಸ್ವಲ್ಪ ಹೊತ್ತಿಗೆ ರಕ್ತಸ್ರಾವ ಆರಂಭವಾಗಿತ್ತು. ಅವಳು ಋತುಮತಿಯಾಗಿದ್ದಳು. ನಗರದ ಹೆಣ್ಣುಮಕ್ಕಳು ಬೇಗ ಮೈ ನೆರೆಯುತ್ತಾರೆ ಎಂದು ಕೇಳಿದ್ದೆ, ಆದರೆ ನನ್ನ ಮಗಳು ಹಳ್ಳಿಯಲ್ಲೇ ಹುಟ್ಟಿ ಬೆಳೆದವಳು. ಅವಳು ಇಷ್ಟು ಬೇಗ ಋತುಮತಿಯಾಗಿದ್ದು ನಿಜಕ್ಕೂ ನನಗೆ ಗಾಬರಿ ಉಂಟು ಮಾಡಿತ್ತು’ ಎಂದು ಗೆಳತಿ ಸುಮಿತ್ರಾಳೊಂದಿಗೆ ತನ್ನ ಅನುಭವ ಹಂಚಿಕೊಂಡಿದ್ದರು ಮಂಗಳಾ ಪಾಟೀಲ್. ಮಂಗಳಾ ಮಾತು ಕೇಳಿದ ಮೇಲೆ ಸುಮಿತ್ರಾ ಅವರಿಗೂ ಚಿಂತೆ ಆರಂಭವಾಗಿತ್ತು. ಕಾರಣ ಅವರ ಮಗಳಿಗೂ ಈಗ 7 ವರ್ಷ ವಯಸ್ಸು.

ಹೌದು, ಇತ್ತೀಚೆಗೆ ಹೆಣ್ಣುಮಕ್ಕಳು ಬೇಗನೇ ಮೈ ನೆರೆಯುವ ವಿಷಯ ತಾಯಂದಿರಲ್ಲಿ ಆತಂಕ ಮೂಡಿಸಿದೆ. ಅದರಲ್ಲೂ ಕೋವಿಡ್ ಬಂದಾಗಿನಿಂದ ಬಹಳ ಚಿಕ್ಕ ವಯಸ್ಸಿಗೇ ಋತುಮತಿಯಾಗುತ್ತಿರುವ ಹೆಣ್ಣುಮಕ್ಕಳ ಸಂಖ್ಯೆ ಜಾಸ್ತಿಯಾಗಿದೆ. ಕೆಲವು ದೈಹಿಕ ಸಮಸ್ಯೆಗಳ ಜೊತೆಗೆ ಮಾನಸಿಕ ಸಮಸ್ಯೆಯೂ ಇದಕ್ಕೆ ಕಾರಣ ಎನ್ನುತ್ತಾರೆ ತಜ್ಞರು.

‘ಆನುವಂಶೀಯ ಕಾರಣಗಳಿಂದ ಕೆಲವರು ಬಹಳ ಬೇಗನೇ ಮೈನೆರೆಯುತ್ತಾರೆ. ಇದರೊಂದಿಗೆ ಬದಲಾದ ಜೀವನಶೈಲಿಯೂ ಪ್ರಮುಖ ಕಾರಣ. ಕೋವಿಡ್ ಸಂದರ್ಭದಲ್ಲಿ ಅತೀ ತೂಕ, ಬೊಜ್ಜು ಮುಂತಾದ ದೈಹಿಕ ಸಮಸ್ಯೆಯೊಂದಿಗೆ ಉದ್ವೇಗ, ಒತ್ತಡ, ಆತಂಕದಂತಹ ಸಮಸ್ಯೆಯು ಅಕಾಲಿಕ ಋತುಪ್ರಾಪ್ತಿಗೆ ಕಾರಣವಾಗುತ್ತಿದೆ’ ಎನ್ನುತ್ತಾರೆ ಭದ್ರಾವತಿಯ ಪ್ರಸೂತಿ ಹಾಗೂ ಸ್ತ್ರೀರೋಗ ತಜ್ಞೆ ಡಾ. ವೀಣಾ ಎಸ್. ಭಟ್.

ಅಕಾಲಿಕ ಋತುಪ್ರಾಪ್ತಿಗೆ ಕಾರಣ

‘8 ವರ್ಷಕ್ಕೂ ಮೊದಲೇ ಋತುಪ್ರಾಪ್ತಿಯಾದರೆ ಅದನ್ನು ಅಕಾಲಿಕ ಋತುಪ್ರಾಪ್ತಿ ಎನ್ನುತ್ತೇವೆ. ಅಸಮರ್ಪಕ ಪೌಷ್ಟಿಕ ಆಹಾರ ಸೇವನೆ, ದೈಹಿಕ ಚಟುವಟಿಕೆಯ ಕೊರತೆ, ಸಣ್ಣ ವಯಸ್ಸಿಗೇ ಹೆಚ್ಚುತ್ತಿರುವ ಬೊಜ್ಜು, ಉದ್ರೇಕಕಾರಿ ಅಂಶಗಳಿಗೆ ಹೆಚ್ಚು ಹೆಚ್ಚು ತೆರೆದುಕೊಳ್ಳುವುದು ಇದಕ್ಕೆ ಪ್ರಮುಖ ಕಾರಣ. ಈ ಎಲ್ಲಾ ಅಂಶಗಳಿಂದ ಹೆಣ್ಣುಮಕ್ಕಳಲ್ಲಿ ಹೈಪೊಥಲಾಮಸ್, ಪಿಟ್ಯೂಟರಿ, ಅಂಡಾಶಯಗಳು ಬೇಗನೇ ಪಕ್ವವಾಗುತ್ತಿವೆ. ಹೈಪೊಥೈರಾಯಿಡಿಸಂ ಪ್ರಾಥಮಿಕ ಹಂತದಲ್ಲಿದ್ದರೂ ಬೇಗನೇ ಮುಟ್ಟಾಗುವ ಸಾಧ್ಯತೆ ಇದೆ’ ಎನ್ನುತ್ತಾರೆ ವೀಣಾ ಭಟ್.

ಉದ್ವೇಗ, ಆತಂಕ, ಹಾರ್ಮೋನ್‌ಗಳನ್ನು ಅಸಮತೋಲನಗೊಳಿಸುವ ಹಾಗೂ ಪ್ರಚೋದನೆಗೊಳಿಸುವ ರಾಸಾಯನಿಕ ಅಂಶಗಳು ದೇಹವನ್ನು ಸೇರುವುದು, ಅತಿತೂಕ, ಅತಿಯಾಗಿ ಜಂಕ್ ಆಹಾರ ಸೇವಿಸುವುದು, ಪ್ರಾಣಿಜನ್ಯ ಆಹಾರ ಹಾಗೂ ಹಾಲು ಸೇವನೆಯಿಂದಲೂ ಬೇಗನೆ ಋತುಮತಿಯಾಗುತ್ತಾರೆ ಎನ್ನುತ್ತವೆ ಕೆಲವು ಅಧ್ಯಯನಗಳು.

> ಕೋವಿಡ್ ಶುರುವಾದ ಮೇಲೆ ಬಹಳ ಚಿಕ್ಕ ವಯಸ್ಸಿಗೇ ಋತುಮತಿಯಾಗುತ್ತಿರುವ ಹೆಣ್ಣುಮಕ್ಕಳ ಸಂಖ್ಯೆ ಜಾಸ್ತಿಯಾಗಿದೆ. ಇದಕ್ಕೆ ಬೊಜ್ಜಿನಂತಹ ದೈಹಿಕ ಸಮಸ್ಯೆಗಳು ಹಾಗೂ ಮಾನಸಿಕ ತಲ್ಲಣಗಳು ಕಾರಣ ಎನ್ನುತ್ತಾರೆ ತಜ್ಞರು.

ತಾಯಂದಿರಿಗೆ ಕಿವಿಮಾತು

‘ತಾಯಂದಿರು ಹೆಣ್ಣುಮಕ್ಕಳ ಆಹಾರ ಪದ್ಧತಿ ಹಾಗೂ ಜೀವನಶೈಲಿಯ ಆಧಾರದ ಮೇಲೆ ತೂಕ ನಿಯಂತ್ರಣ ಮಾಡುವುದನ್ನು ಕಲಿಯಬೇಕು. ಇದರೊಂದಿಗೆ ಋತುಮತಿಯಾದ ಮಕ್ಕಳಿಗೆ ಕನಿಷ್ಠ ಒಂದರಿಂದ ಎರಡು ಗಂಟೆ ದೈಹಿಕ ಚಟುವಟಿಕೆಗೆ ಪ್ರೋತ್ಸಾಹ ನೀಡಬೇಕು. ಪ್ರೊಟೀನ್ ಹಾಗೂ ಖನಿಜಾಂಶ ಹೆಚ್ಚಿರುವ ಆಹಾರ ಪದಾರ್ಥಗಳನ್ನು ಹೆಚ್ಚು ನೀಡಬೇಕು. ಹಸಿರು ತರಕಾರಿ, ಸೊಪ್ಪು ಸೇವನೆಗೆ ಒತ್ತು ನೀಡಬೇಕು. ಇದರೊಂದಿಗೆ ಮಾನಸಿಕವಾಗಿಯೂ ಧೈರ್ಯ ಮೂಡುವಂತೆ ಮಾಡುವುದು ಅವಶ್ಯ’ ಎನ್ನುತ್ತಾರೆ ವೀಣಾ ಭಟ್.

ಸಮಸ್ಯೆಗಳು

- ಬೇಗನೇ ಋತುಪ್ರಾಪ್ತಿಯಾದವರಲ್ಲಿ ಪಿಸಿಒಡಿಯಂತಹ ಸಮಸ್ಯೆಗಳು ಹೆಚ್ಚಾಗಿ ಕಾಣಿಸುತ್ತವೆ.
- ಬೇಗ ಮೈನೆರೆದ ಹೆಣ್ಣುಮಕ್ಕಳು ಹೆಚ್ಚು ಎತ್ತರ ಬೆಳೆಯುವುದಿಲ್ಲ. ಹಾರ್ಮೋನ್ ಪ್ರಭಾವದಿಂದ ಉದ್ದನೆಯ ಮೂಳೆಗಳು ಬೇಗನೇ ಕೂಡಿಕೊಳ್ಳುವುದರಿಂದ ಕುಬ್ಜರಾಗುವ ಸಾಧ್ಯತೆ ಹೆಚ್ಚು.
- ಲೈಂಗಿಕ ಆಸೆಗಳು ಬೇಗನೇ ಪಕ್ವವಾಗುವುದರಿಂದ ಹೆಚ್ಚು ಕುತೂಹಲ ಮೂಡಿ ಅದರಿಂದ ಹಲವು ಸಮಸ್ಯೆಗಳು ಉಂಟಾಗಬಹುದು.
- ಮುಜುಗರ, ಆತ್ಮವಿಶ್ವಾಸದ ಕೊರತೆಯಿಂದ ಖಿನ್ನತೆಯಂತಹ ಸಮಸ್ಯೆಗಳು ಕಾಣಿಸಿಕೊಳ್ಳಬಹುದು.

ಪೋಷಕರು ಹೇಗೆ ಎದುರಿಸಬೇಕು?

ನಗರಗಳಲ್ಲಾಗಲೀ ಅಥವಾ ಹಳ್ಳಿಗಳಲ್ಲಾಗಲೀ ಮಕ್ಕಳು ಮೈ ನೆರೆಯುವ ಬಗ್ಗೆ ಪೋಷಕರಲ್ಲಿ ಆತಂಕ ಹಾಗೂ ಗೊಂದಲಗಳಿರುವುದು ಸಹಜ. ಇದರೊಂದಿಗೆ ಮುಟ್ಟಿಗೆ ಸಂಬಂಧಿಸಿ ಹಲವು ರೀತಿಯ ಮೂಢನಂಬಿಕೆಗಳೂ ಇವೆ. ಹಾಗಾಗಿ ಪೋಷಕರು ಮೊದಲು ಈ ಕುರಿತು ಅರಿವು ಮೂಡಿಸಿಕೊಳ್ಳಬೇಕು. 7– 8 ವರ್ಷ ವಯಸ್ಸಿನ ಹೆಣ್ಣುಮಕ್ಕಳಿಗೆ ಋತುಸ್ರಾವ ಮತ್ತು ಅದಕ್ಕೆ ಸಂಬಂಧಿಸಿದ ವಿಷಯಗಳ ಬಗ್ಗೆ ವಿವರವಾಗಿ ತಿಳಿಸಿ ಹೇಳಬೇಕು.

- ಋತುಚಕ್ರ ನಿರ್ವಹಣೆ, ಮುಟ್ಟಿನ ಸಮಯದಲ್ಲಿನ ಸ್ವಚ್ಛತೆಯ ಬಗ್ಗೆ ಅರಿವು ಮೂಡಿಸಬೇಕು. ಸ್ವಚ್ಛವಾಗಿಲ್ಲದಿದ್ದರೆ ಸೋಂಕಿನಂತಹ ಸಮಸ್ಯೆ ಉಂಟಾಗುತ್ತದೆ ಎಂಬುದನ್ನು ತಿಳಿಸಬೇಕು.
- ಮಕ್ಕಳಿಗೆ ಇದರ ಕುರಿತು ಪ್ರಾಯೋಗಿಕ ಸಲಹೆ ನೀಡುವುದು ಮುಖ್ಯವಾಗುತ್ತದೆ. ಯಾವಾಗ ಆರಂಭವಾಗುತ್ತದೆ, ಯಾವ ಭಾಗದಲ್ಲಿ ನೋವಾಗುತ್ತದೆ, ಯಾವ ಕಾರಣಕ್ಕೆ ನೋವಾಗುತ್ತದೆ, ಎಷ್ಟು ದಿನಗಳವರೆಗೆ ಸ್ರಾವವಿರುತ್ತದೆ, ಮುಟ್ಟಿನ ನೈರ್ಮಲ್ಯ ವಿಧಾನ, ಮುಟ್ಟಿನ ಸಮಯದಲ್ಲಿ ಬಳಸುವ ಪ್ಯಾಡ್, ಬಟ್ಟೆ, ಮೆನ್‌ಸ್ಟ್ರುಯಲ್ ಕಪ್ ಮುಂತಾದವುಗಳ ಬಳಕೆ, ಅವುಗಳ ಸ್ವಚ್ಛತೆ ಹಾಗೂ ಬಳಸಿದ ನಂತರ ಏನು ಮಾಡಬೇಕು ಎಂಬೆಲ್ಲಾ ವಿಷಯಗಳನ್ನು ತಿಳಿಸಬೇಕು.
- ಪೋಷಕರು ಇದರ ಬಗ್ಗೆ ತಾವೇ ಅರಿವು ಮೂಡಿಸಬಹುದು ಅಥವಾ ಕುಟುಂಬ ವೈದ್ಯರ ಬಳಿ ಕರೆದುಕೊಂಡು ಹೋಗಿ ತಿಳಿವಳಿಕೆ ಮೂಡಿಸಬಹುದು. ವೈದ್ಯರಿಂದ ಈ ಕುರಿತು ಆಪ್ತಸಮಾಲೋಚನೆ ಮಾಡಿಸಬಹುದು.
- ಮಕ್ಕಳಿಗೆ ಕೌಟುಂಬಿಕ ಹಾಗೂ ಸಾಮಾಜಿಕ ಭದ್ರತೆ ಕೊಡಿಸುವುದು.
- ಕೌಟುಂಬಿಕವಾಗಿ ಹಾಗೂ ಸಾಮಾಜಿಕವಾಗಿ ಮಕ್ಕಳ ವರ್ತನೆ ಹೇಗಿರಬೇಕು, ಮುಟ್ಟಾದ ನಂತರ ಹೇಗೆ ಎಚ್ಚರಿಕೆಯಿಂದ ಇರಬೇಕು ಎಂಬ ಬಗ್ಗೆ ಮಾರ್ಗದರ್ಶನ ನೀಡಬೇಕು.
- ಹಿಂಜರಿಕೆ ಕಡಿಮೆ ಮಾಡಿ ಹೆಚ್ಚು ಆತ್ಮವಿಶ್ವಾಸ ಮೂಡಿಸಬೇಕು. ದೈಹಿಕ ಹಾಗೂ ಮಾನಸಿಕ ಬದಲಾವಣೆಯ ಕುರಿತು ತಿಳಿಸಬೇಕು.
- ಭವಿಷ್ಯದಲ್ಲಿ ಪಿಸಿಒಡಿಯಂತಹ ಸಮಸ್ಯೆ ಕಾಣಿಸಿಕೊಳ್ಳುವ ಸಾಧ್ಯತೆ ಹೆಚ್ಚು. ಆ ಕಾರಣಕ್ಕೆ ಪೋಷಕರು ಅದರ ಬಗ್ಗೆ ತಿಳಿದುಕೊಂಡು ಮಕ್ಕಳಿಗೆ ತಿಳಿ ಹೇಳಬೇಕು.
- ಕೆಲವು ಹೆಣ್ಣುಮಕ್ಕಳು ಸ್ತನಗಳ ಗಾತ್ರ ದೊಡ್ಡದಾದಾಗ ಗೂನು ಬೆನ್ನು ಮಾಡಿಕೊಂಡು ಓಡಾಡುವುದು, ಮನೆಯ ಒಳಗೇ ಕುಳಿತು ಖಿನ್ನತೆಗೆ ಒಳಗಾಗುವುದು ಮಾಡುತ್ತಾರೆ. ಅಂತಹ ಸಂದರ್ಭದಲ್ಲಿ ‘ಇದು ಪ್ರಕೃತಿ ಸಹಜ. ಎಲ್ಲಾ ಹೆಣ್ಣುಮಕ್ಕಳು ಈ ಸಮಸ್ಯೆ ಎದುರಿಸುತ್ತಾರೆ’ ಎಂದು ಧೈರ್ಯ ತುಂಬಿ ಆತ್ಮವಿಶ್ವಾಸ ಮೂಡಿಸುವುದು ಅಗತ್ಯ. ಇದರೊಂದಿಗೆ ಸಮಾಜದಲ್ಲಿ ಹೆಣ್ಣುಮಕ್ಕಳ ಮೇಲೆ ನಡೆಯುವ ದೌರ್ಜನ್ಯ, ಅಪರಿಚಿತ ಪುರುಷರಿಂದ ದೂರವಿರುವುದು, ‘ಗುಡ್ ಟಚ್ ಮತ್ತು ಬ್ಯಾಡ್ ಟಚ್’ ಕುರಿತೂ ಅರಿವು ಮೂಡಿಸಬೇಕು.

‘ದೊಡ್ಡವಳಾಗುವುದು ಎಂದರೆ ಸಂತಾನೋತ್ಪತ್ತಿಯ ಅವಯವಗಳು ಕೆಲಸ ಮಾಡಲು ಆರಂಭವಾಗಿವೆ ಎಂದಷ್ಟೇ. ಇದೊಂದು ಎಚ್ಚರಿಕೆ ಅಷ್ಟೇ ಬಿಟ್ಟರೆ ಹೆಣ್ಣುಮಕ್ಕಳಿಗೆ 21 ವರ್ಷ ಆದ ನಂತರವೇ ಮದುವೆ ಮಾಡಬೇಕು. ಕೋವಿಡ್ ಸಂದರ್ಭದಲ್ಲಿ ಬಾಲ್ಯವಿವಾಹಗಳು ಹೆಚ್ಚುತ್ತಿರುವುದಕ್ಕೂ ಅಕಾಲಿಕ ಋತುಪ್ರಾಪ್ತಿ ಕಾರಣ. ಸಂತಾನೋತ್ಪತ್ತಿ ಅಂಗಾಂಗಗಳು ಸರಿಯಾಗಿ ಕಾರ್ಯ ನಿರ್ವಹಣೆ ಮಾಡಬೇಕು ಎಂದರೆ 20 ವರ್ಷ ಕಳೆಯಬೇಕು ಎಂಬುದನ್ನು ಪೋಷಕರು ಮನಗಾಣಬೇಕು, ಹದಿಹರೆಯದಲ್ಲಿ ಮಕ್ಕಳಿಗೆ ಮದುವೆ ಮಾಡಿಸಿದರೆ ಗರ್ಭಧಾರಣೆಯಂತಹ ವಿಷಯದಲ್ಲಿ ಹಲವು ತೊಂದರೆಗಳಾಗುತ್ತವೆ. ಇದರಿಂದ ತಾಯಿ, ಮಗು ಇಬ್ಬರಿಗೂ ಅಪಾಯ.

ಡಾ. ವೀಣಾ ಎಸ್. ಭಟ್

❖

ಒಲ್ಲದ ಮದುವೆಯಲ್ಲಿ ಮೂಡದ ಲೈಂಗಿಕ ಆಸಕ್ತಿ

ಏನಾದ್ರೂ ಕೇಳ್ಬೋದು

ನಡಹಳ್ಳಿ ವಂಸತ್

• 32ರ ಯುವಕ. ಹೆಂಡತಿಯ ವಯಸ್ಸು 22. ಅವಳು ನನ್ನ ಅಕ್ಕನ ಮಗಳು. ಚಿಕ್ಕವಯಸ್ಸಿನಲ್ಲಿ ಹಿರಿಯರು ಮದುವೆ ಮಾಡಿದ್ದು. ಈಗ ನನಗೆ ಅವಳ ಮೇಲೆ ಲೈಂಗಿಕ ಆಸಕ್ತಿ ಬರುತ್ತಿಲ್ಲ. ಇದರಿಂದ ಚಿಂತೆ ಹೆಚ್ಚಾಗಿ ರಕ್ತದೊತ್ತಡ ಏರುಪೇರಾಗಿ ಮಾನಸಿಕವಾಗಿ ನೊಂದಿದ್ದೇನೆ. ಇದಕ್ಕೆ ಪರಿಹಾರವೇನು.

ಮುತ್ತುರಾಮನ್, ಊರಿನ ಹೆಸರಿಲ್ಲ.

ಪರಿಚಿತರು, ನೆಂಟರಲ್ಲಿ ಮದುವೆ ಮಾಡಿಸಿದರೆ ಕುಟುಂಬದ ಸಂಬಂಧಗಳು ಚೆನ್ನಾಗಿರುತ್ತವೆ ಎನ್ನುವುದು ಹಿರಿಯರ ನಂಬಿಕೆ. ಆದರೆ ನಿಮ್ಮಿಬ್ಬರ ಮನಃಸ್ಥಿತಿಯನ್ನು ತಿಳಿಯದೆ ಒತ್ತಾಯದ ಮದುವೆ ಮಾಡಿಸುವುದರ ಮೂಲಕ ನಿಮಗೆ ಅನ್ಯಾಯವನ್ನು ಮಾಡುತ್ತಿದ್ದೇವೆ ಎನ್ನುವ ಅರಿವು ಅವರಿಗೆ ಇರುವುದಿಲ್ಲ. ಸದ್ಯದ ಸಮಸ್ಯೆ ಇಬ್ಬರಿಗೂ ಸೇರಿದ್ದಾಗಿರುವುದರಿಂದ ಪತ್ನಿಯ ಜೊತೆ ನಿಮ್ಮ ಕಷ್ಟ, ನೋವು, ಹಿಂಜರಿಕೆಗಳನ್ನು ಮುಕ್ತವಾಗಿ ಹೇಳಿಕೊಳ್ಳಿ. ಇಬ್ಬರ ಒಪ್ಪಿಗೆಯಿದ್ದರೆ ದಾಂಪತ್ಯಚಿಕಿತ್ಸಕರ ಸಹಾಯ ಪಡೆಯಬಹುದು ಅಥವಾ ಇಬ್ಬರೂ ಒಪ್ಪಿಗೆಯಿಂದ ವಿಚ್ಛೇದನದ ಕುರಿತಾಗಿ ಯೋಚಿಸಬಹುದು. ವಿಚ್ಛೇದನ ಇಬ್ಬರ ನಿರ್ಧಾರವಾದಾಗ ವಿರೋಧ, ಒತ್ತಡಗಳಿದ್ದರೂ ನಿಧಾನವಾಗಿ ಹಿರಿಯರು ಒಪ್ಪಿಕೊಳ್ಳಲೇಬೇಕಾಗುತ್ತದೆ.

• ಮೂರು ವರ್ಷದಿಂದ ಒಬ್ಬ ಹುಡುಗನನ್ನು ಪ್ರೀತಿಸುತ್ತಿದ್ದೆ. ಒಬ್ಬರನ್ನೊಬ್ಬರು ಇಷ್ಟಪಡುತ್ತಿದ್ದೆವು. 2 ವರ್ಷಕ್ಕೆಂದು ಹೊರಗಡೆ ಹೋಗಿದ್ದವನು ನನ್ನನ್ನು ಬಿಟ್ಟು ಇರಲಾಗುವುದಿಲ್ಲವೆಂದು ಒಂದು ವರ್ಷಕ್ಕೇ ಹಿಂತಿರುಗಿದ್ದ. ಮನೆಯಲ್ಲಿ ನಮ್ಮಿಬ್ಬರ ಪ್ರೇಮದ ಬಗೆಗೆ ಹೇಳಿದ್ದ. ಆದರೆ ಈಗ ಜಾತಿ, ದೇವರು ಎಂದು ಹೇಳಿ ನನ್ನನ್ನು ದೂರ ಮಾಡುತ್ತಿದ್ದಾನೆ. ‘ನನ್ನನ್ನು ಮರೆತುಬಿಡು’ ಎನ್ನುತ್ತಿದ್ದಾನೆ. ಏನು ಮಾಡಬೇಕೆಂದು ತಿಳಿಯುತ್ತಿಲ್ಲ.

ಅಂಜಲಿ, ಊರಿನ ಹೆಸರಿಲ್ಲ.

ನಿಮ್ಮ ಪ್ರೇಮ ಪ್ರಾಮಾಣಿಕವಾಗಿತ್ತು ಮತ್ತು ಮನಃಪೂರ್ವಕವಾಗಿತ್ತು. ಈಗ ಹುಡುಗ ಹಿಂದೆ ಸರಿದಿರುವುದರಿಂದ ಮೋಸಹೋದ ಅನುಭವವಾಗುತ್ತಿರಬೇಕಲ್ಲವೇ? ಅವನಿಗಾಗಿ ನಿಮ್ಮ ಅಮೂಲ್ಯವಾದ ಭಾವನೆಗಳನ್ನು ಹಾಗೂ ಜೀವನದ ಸಮಯವನ್ನು ಕಳೆದುಕೊಂಡ ನೋವು ಕಾಡುತ್ತಿರಬೇಕಲ್ಲವೇ? ಇದು ಸ್ವಲ್ಪಕಾಲ ನಿಮ್ಮನ್ನು ಬಾಧಿಸುವುದು ಸಹಜ. ಆದರೆ ಹುಡುಗನ ನಿರ್ಧಾರ ನಿಮ್ಮ ಹಿಡಿತದಲ್ಲಿ ಇರುವುದು ಸಾಧ್ಯವೇ? ನಂಬಿಕೆಗೆ ಅರ್ಹನಲ್ಲ ಎಂದು ಅವನೇ ತೋರಿಸಿದ್ದಾನಲ್ಲವೇ? ಒತ್ತಾಯದಿಂದ ಮದುವೆಯಾಗಿ ಜೀವನಪರ್ಯಂತ ಬೇಡದ ಸಂಬಂಧದಲ್ಲಿರುವುದು ಅಥವಾ ತಾತ್ಕಾಲಿಕವಾಗಿ ನೋವನ್ನು ಅನುಭವಿಸಿದರೂ ದೀರ್ಘಕಾಲ ಮುದನೀಡಬಲ್ಲ ಸಂಬಂಧವನ್ನು ನಿಧಾನವಾಗಿ ಹುಡುಕುವುದು- ಇವೆರಡರಲ್ಲಿ ನಿಮ್ಮ ಆಯ್ಕೆ ಯಾವುದು? ಉತ್ತರ ಸ್ಪಷ್ಟವಾಗಿದೆಯಲ್ಲವೇ? ಒಂದು ವೃತ್ತಿ, ಆರ್ಥಿಕ ಸ್ವಾತಂತ್ರ, ಹವ್ಯಾಸಗಳು, ಸ್ನೇಹಿತರು ಮುಂತಾದವುಗಳ ಮೂಲಕ ನಿಮ್ಮ ಸ್ವಂತಿಕೆಯನ್ನು ಕಂಡುಕೊಳ್ಳಿ. ಜಾತಿ– ಕುಲಗಳ ನಿರ್ಬಂಧವನ್ನು ಮೀರಿ ನಿಮ್ಮತ್ತ ಆಕರ್ಷಿತನಾಗುವವನು ಹುಡುಕಿ ಬರುತ್ತಾನೆ.

• 58ರ ಪುರುಷ. ಸಕ್ಕರೆ ಕಾಯಿಲೆಯಿದೆ. ಲೈಂಗಿಕ ಕ್ರಿಯೆಯಲ್ಲಿ ಆಸಕ್ತಿಯಿದೆ. ನಿಮಿರುವಿಕೆ ಜಾಸ್ತಿ ಹೊತ್ತು ಇರುವುದಿಲ್ಲ. ಶೀಘ್ರಸ್ಖಲನವಾಗುತ್ತದೆ. ಪರಿಹಾರವೇನು?

ವೆಂಕಟೇಶ, ಊರಿನ ಹೆಸರಿಲ್ಲ.

ನಿಮ್ಮ ಇಳಿವಯಸ್ಸಿನ ಲೈಂಗಿಕ ಆಸಕ್ತಿ ಸಹಜವಾದದ್ದು. ದೀರ್ಘಕಾಲದ ಸಕ್ಕರೆ ಕಾಯಿಲೆ ನಿಮಿರು ದೌರ್ಬಲ್ಯದ ಸಾಧ್ಯತೆಗಳನ್ನು ಹೆಚ್ಚಿಸುತ್ತದೆ. ಇದರ ಕುರಿತಾಗಿ ನಿಮ್ಮ ವೈದ್ಯರಲ್ಲಿ ಚರ್ಚೆಮಾಡಿ. ಇಳಿವಯಸ್ಸಿಗೆ ಜಾರುತ್ತಾ ಬಂದಂತೆ ದೇಹದಲ್ಲಿ ಹಾರ್ಮೋನ್‌ಗಳ ಸೃಜನೆ ಕಡಿಮೆಯಾಗುವುದರಿಂದ ನಿಮಿರುವಿಕೆ ನಿಧಾನವಾಗುತ್ತದೆ. ಆಗ ನಿಮ್ಮನ್ನು ಆಕರ್ಷಿಸುವ ನೀವು ಇಷ್ಟಪಡುವ ಪತ್ನಿಯ ಜೊತೆ ಹೆಚ್ಚುಹೆಚ್ಚು ಸಮಯವನ್ನು ಕಳೆಯುವುದು ಸಾಧ್ಯವಾದರೆ ದೇಹ ಸೂಕ್ತವಾಗಿ ಪ್ರತಿಕ್ರಿಯೆ ತೋರಿಸುತ್ತದೆ. ನಿಮ್ಮ ಲೈಂಗಿಕತೆಯ ಆಸಕ್ತಿ, ಕನಸುಗಳು, ನಿರೀಕ್ಷೆ ಎಲ್ಲವನ್ನೂ ಪತ್ನಿಯ ಜೊತೆ ಮುಕ್ತವಾಗಿ ಮಾತನಾಡಲು ಸಾಧ್ಯವೇ? ಸಾಧ್ಯವಾಗದಿದ್ದರೆ ನಿಮ್ಮಿಬ್ಬರ ನಡುವಿನ ಅನ್ಯೋನ್ಯತೆಯನ್ನು ಪರೀಕ್ಷೆಗೆ ಒಡ್ಡಬೇಕಾಗುತ್ತದೆ. ಅದಕ್ಕೆ ಸಿದ್ಧರಿದ್ದೀರಾ? ಅಗತ್ಯವಿದ್ದರೆ ಲೈಂಗಿಕ ಮನೋಚಿಕಿತ್ಸಕರನ್ನು ಭೇಟಿಯಾಗಿ.

ಇನ್ನಷ್ಟು ಪ್ರಶ್ನೋತ್ತರಗಳಿಗೆ prajavani.net ನೋಡಿ

ಏನಾದ್ರೂ ಕೇಳ್ಬೋದು

ಹದಿಹರೆಯದ ಮತ್ತು ದಾಂಪತ್ಯದ ಲೈಂಗಿಕ ಸಮಸ್ಯೆ, ಮಾನಸಿಕ ಸಮಸ್ಯೆ ಕುರಿತು ಪ್ರಶ್ನೆಗಳನ್ನು ನಮಗೆ ಕಳುಹಿಸಿ. ನಿಮ್ಮ ಪ್ರಶ್ನೆಗಳಿಗೆ ಮನೋಚಿಕಿತ್ಸಕ ನಡಹಳ್ಳಿ ವಸಂತ್ ಉತ್ತರಿಸಲಿದ್ದಾರೆ.

bhoomika@prajavani.co.in

ಹೆಚ್ಚು ತಿನ್ನುತ್ತಿದ್ದೀರಾ? ಮನೋವ್ಯಾಕುಲತೆ ಇರಬಹುದು!

ಡಾ. ವಿನಯ ಶ್ರೀನಿವಾಸ್

ಜಾನಕಿ ಗೃಹಿಣಿ. ಲಾಕ್‌ಡೌನ್ ಆರಂಭವಾದಾಗಿನಿಂದ ಅವಳ ಬದುಕಿನ ಶೈಲಿಯೇ ಬದಲಾಗಿ ಬಿಟ್ಟಿದೆ. ಮೊದಲಿನ ದಿನಗಳ ಬೆಳಗಿನ ವಾಕಿಂಗ್, ಸಂಜೆಯ ಶಟ್ಲ್ ಕಾಕ್ ಎಲ್ಲದಕ್ಕೂ ವಿರಾಮ ಬಿದ್ದಿದೆ. ಆ ಸಮಯದಲ್ಲಿ ಮನಸ್ಸನ್ನು ಹಗುರವಾಗಿಸುತ್ತಿದ್ದ ಗೆಳತಿಯರೊಡನೆಯ ಮಾತು-ನಗು ಕೂಡ ಇಲ್ಲದಂತಾಗಿದೆ. ಇಡೀ ದಿನ ಮನೆಯಲ್ಲಿಯೇ ಇರುವ ಪತಿ ಮತ್ತು ಮಕ್ಕಳ ಬೇಕು-ಬೇಡಗಳನ್ನು ಗಮನಿಸುವುದಷ್ಟೇ ಆಕೆಯ ಕೆಲಸ ಈಗ. ದೇಹಕ್ಕೆ ಯಾವ ವ್ಯಾಯಾಮವೂ ಇಲ್ಲದಂತಾಗಿದೆ. ನಿಧಾನವಾಗಿ ಹೆಚ್ಚುತ್ತಿರುವ ಸೊಂಟದ ಸುತ್ತಲಿನ ಕೊಬ್ಬು ಅವಳ ಆತಂಕವನ್ನು ಹೆಚ್ಚಿಸಿದೆ. ಆತಂಕ ಹೆಚ್ಚಾಗುತ್ತಲೂ ಜಾನಕಿಯ ಚಿತ್ತ ಅಡುಗೆಯ ಮನೆಯತ್ತ ಹೊರಳುತ್ತದೆ. ಕೈಗಳು ಅಡುಗೆ ಮನೆಯ ತಿಂಡಿ ಡಬ್ಬಿಗಳನ್ನು ತಡಕುತ್ತವೆ.

* * *

ಶ್ರುತಿ ಶಿಕ್ಷಕಿ. ಲಾಕ್‌ಡೌನ್ ಶುರುವಾದಾಗಿನಿಂದ ಮನೆಯಿಂದಲೇ ಆನ್‌ಲೈನ್ ತರಗತಿಗಳನ್ನು ತೆಗೆದುಕೊಳ್ಳಬೇಕಾದ ಪರಿಸ್ಥಿತಿ. ಬಿಡುವು ಮಾಡಿಕೊಂಡು ಮಕ್ಕಳು-ಯಜಮಾನರಿಗೆ ಮಾಡಿ ಬಡಿಸುವ ಎಲ್ಲ ಹೆಚ್ಚುವರಿ ತಿಂಡಿಗಳು ಬೇಡವೆಂದರೂ ಅವಳ ಹೊಟ್ಟೆಯನ್ನು ಸೇರುತ್ತಿವೆ. ಮನೆಯಲ್ಲಿಯೇ ಇರುವುದರಿಂದ ಮಕ್ಕಳಿಗೆಂದು ತಂದಿರಿಸಿದ ಬೇಕರಿಯ ತಿಂಡಿ-ತಿನಿಸುಗಳೂ ಅವಳನ್ನು ಪದೇ ಪದೇ ಸೆಳೆಯುತ್ತವೆ. ಪರಿಣಾಮ, ದೇಹದ ತೂಕ ಮೂರು ಕೆಜಿಯಷ್ಟು ಹೆಚ್ಚಾಗಿದೆ. ಇದು ಮನಸ್ಸಿಗೆ ಸಾಕಷ್ಟು ಬೇಸರವನ್ನುಂಟು ಮಾಡಿದೆ. ದುಗುಡ ಹೆಚ್ಚಾಗುತ್ತಲೂ ಅವಳ ಕಾಲುಗಳು ಅಡುಗೆ ಮನೆಯತ್ತ ಹೋಗುತ್ತವೆ. ಕೈಗೆ ಸಿಕ್ಕಿದ್ದನ್ನು ತಿನ್ನತೊಡಗುತ್ತಾಳೆ.

ಇದು ಭಾವನಾತ್ಮಕ ಆಹಾರ ಸೇವನೆ (ಎಮೋಷನಲ್ ಈಟಿಂಗ್). ಹಸಿವು ಎನಿಸದಿದ್ದಾಗಲೂ ಹಿಂದು ಮುಂದು ಯೋಚಿಸದೆಯೇ ಸಿಕ್ಕಿದ್ದನ್ನೆಲ್ಲ ತಿನ್ನುವುದು ಮನಸ್ಸಿನ ಭಾವನೆಗಳ ಏರಿಳಿತದ ಒಂದು ಲಕ್ಷಣ. ಇದು ಮಹಿಳೆಯರಲ್ಲಿ ಹೆಚ್ಚು. ಮನಸ್ಸಿನ ಒತ್ತಡ, ದುಗುಡ, ಚಿಂತೆ, ಆತಂಕ ಹೆಚ್ಚಾದಾಗ ಅದರಿಂದ ಹೊರಬರಲು ಆಕೆ ಹೆಚ್ಚು ತಿನ್ನುವುದನ್ನು ರೂಢಿ ಮಾಡಿಕೊಳ್ಳುತ್ತಾಳೆ. ಆ ಕ್ಷಣದ ಆಹಾರ ಸೇವನೆ ಅವಳ ಮನೋವ್ಯಾಕುಲತೆಯನ್ನು ಕೊಂಚ ಕಡಿಮೆ ಮಾಡುತ್ತದೆ ಮತ್ತು ತಾತ್ಕಾಲಿಕ ನೆಮ್ಮದಿಯನ್ನು ಕೊಡುತ್ತದೆ.

ಕೋವಿಡ್ ನಿರ್ಬಂಧದಿಂದ ಮೊದಲಿನ ವಾಕಿಂಗ್, ಯೋಗ ತರಗತಿಗಳೂ ಮಹಿಳೆಯರಿಗೆ ಇಲ್ಲವಾಗಿದೆ. ಇದರಿಂದಾಗಿ ದೇಹ ಮತ್ತು ಮನಸ್ಸು, ಕ್ರಿಯಾಶೀಲತೆ ಮತ್ತು ಲವಲವಿಕೆಯನ್ನು ಕಳೆದುಕೊಂಡಿವೆ. ಇದರ ಜೊತೆಯಲ್ಲಿಯೇ ಕೊರೊನಾದಿಂದ ಮನೆಯಲ್ಲಿ ಉದ್ಭವಿಸಿರಬಹುದಾದ ಇತರ ಸಂಕಷ್ಟಗಳಿಂದಲೂ ಮನಸ್ಸು ಮುದುಡಿ ಹೋಗುತ್ತದೆ. ಮನಸ್ಸಿನ ತುಮುಲ ಹೆಚ್ಚಾಗುತ್ತಲೂ ಆಕೆ ಹೆಚ್ಚು ಹೆಚ್ಚು ತಿನ್ನುವುದನ್ನು ಅಭ್ಯಾಸ ಮಾಡಿಕೊಳ್ಳುತ್ತಾಳೆ. ತಿನ್ನುವುದು ಹೆಚ್ಚಾದಾಗ ದೇಹದ ತೂಕ ಏರುತ್ತದೆ. ಇದು ಪುನಃ ಆಕೆಯ ಅಸಮಾಧಾನಕ್ಕೆ ಕಾರಣವಾಗುತ್ತದೆ. ಒಟ್ಟಿನಲ್ಲಿ ಒಂದು ವೃತ್ತಾಕಾರದ ಸರಪಳಿಯಂತೆ ಇವು ಆಕೆಯನ್ನು ಬಂಧಿಸುತ್ತವೆ. ದೇಹದ ಕ್ರಿಯಾಶೀಲತೆ, ಮನಸ್ಸಿನ ಪ್ರಫುಲ್ಲತೆ ಮತ್ತು ಆಹಾರ ಸೇವನೆ ಇವು ಮೂರೂ ಒಂದಕ್ಕೊಂದು ಸರಪಳಿಯಂತೆ ಅಂಟಿಕೊಂಡಿವೆ. ಅವು ಮೂರಕ್ಕೂ ಪರಸ್ಪರ ಸಂಬಂಧವಿದೆ. ದೇಹ ಕ್ರಿಯಾಶೀಲವಾಗಿದ್ದರೆ ಮನಸ್ಸೂ ಸಮಸ್ಥಿತಿಯಲ್ಲಿರುತ್ತದೆ. ಮನಸ್ಸು ಸಮಸ್ಥಿತಿಯಲ್ಲಿದ್ದರೆ ಆಹಾರ ಕ್ರಮವೂ ಸದಾ ಎಚ್ಚರಿಕೆಯಿಂದ ಕೂಡಿದ್ದು ನಮ್ಮ ನಿಯಂತ್ರಣದಲ್ಲಿರುತ್ತದೆ.



ಆ ವರ್ತುಲದಿಂದ ಹೊರ ಬರಲು ಹೀಗೆ ಮಾಡಿ..

- ದೈನಂದಿನ ನಿಯಮಿತವಾದ ಸರಳ ವ್ಯಾಯಾಮವೇ ಈ ಎಲ್ಲ ಸಮಸ್ಯೆಗಳಿಗೂ ದಿವ್ಯೌಷಧ. ದೇಹ ಮತ್ತು ಮನಸ್ಸನ್ನು ಸುಸ್ಥಿತಿಯಲ್ಲಿಡುವ ಶಕ್ತಿ ವ್ಯಾಯಾಮಕ್ಕಿದೆ.
- ಕಡ್ಡಾಯವಾಗಿ ಬೆಳಗಿನ ಕನಿಷ್ಠ ಮೂವತ್ತು ನಿಮಿಷ ವ್ಯಾಯಾಮಕ್ಕಾಗಿ ಮೀಸಲಿಡಿ.
- ಒಂದೇ ಸ್ಥಳದಲ್ಲಿ ಮೂವತ್ತು ನಿಮಿಷಗಳಿಗೂ ಹೆಚ್ಚುಕಾಲ ಕುಳಿತಿರಬೇಡಿ. ಮನೆಯಲ್ಲಿಯೇ ಓಡಾಡಿ. ಮೆಟ್ಟಿಲುಗಳನ್ನು ಹತ್ತಿ ಇಳಿಯುವುದನ್ನು ಮಾಡಿ. ತಾರಸಿ ಇದ್ದರೆ ಅಲ್ಲಿ ಸ್ವಲ್ಪ ಕಾಲ ವಾಕ್ ಮಾಡಿ.
- ಪದೇ ಪದೇ ಅಡುಗೆ ಮನೆಗೆ ಹೋಗಿ ಕೈಗೆ ಸಿಕ್ಕಿದ್ದನ್ನು ತಿನ್ನುವ ಅಭ್ಯಾಸ ಬಿಡಿ.
- ಬೆಳಗಿನ ಉಪಾಹಾರದ ಮತ್ತು ಮಧ್ಯಾಹ್ನದ ಊಟದ ನಡುವೆ ಏನೂ ತಿನ್ನದಿರಿ.
- ಹಸಿವು ಎನಿಸಿದಾಗ ನೀರು ಕುಡಿಯಿರಿ ಅಥವಾ ಯಾವುದಾದರೂ ಹಣ್ಣು, ಮೊಳಕೆ ಬರಿಸಿದ ಕಾಳುಗಳು ಅಥವಾ ತರಕಾರಿಯ ಪದಾರ್ಥಗಳನ್ನು ಸೇವಿಸಿ.
- ಸಿಹಿ ತಿಂಡಿಗಳು, ಎಣ್ಣೆಯಲ್ಲಿ ಕರಿದ, ಹುರಿದ ಪದಾರ್ಥಗಳು, ಬೇಕರಿ ತಿಂಡಿಗಳ ಸೇವನೆಯನ್ನು ಸಂಪೂರ್ಣ ಮಿತಿಯಲ್ಲಿಡಿ.
- ನಿಜವಾದ ಹಸಿವಿನ ಅನುಭವವಾಗದ ಹೊರತು ಊಟ-ತಿಂಡಿಗೆ ಏಳಬೇಡಿ.
- ನಿಮ್ಮ ಹವ್ಯಾಸಗಳನ್ನು ಪೋಷಿಸಿಕೊಳ್ಳಲು ಈ ಸುಸಮಯವನ್ನು ವಿನಿಯೋಗಿಸಿಕೊಳ್ಳಿರಿ. ಓದು, ಬರವಣಿಗೆ, ಸಂಗೀತ, ಹೂದೋಟದ ಆರೈಕೆ ಮೊದಲಾದ ಹವ್ಯಾಸಗಳಲ್ಲಿ ತೊಡಗಿಸಿಕೊಂಡು ಒತ್ತಡದಿಂದ ಹೊರಬನ್ನಿ. ಮನೆಯಲ್ಲಿಯೇ ಹೊಸದೇನಾದರೂ ಕಲಿಯಲು ಪ್ರಯತ್ನಿಸಿ.
- ಸಕಾರಾತ್ಮಕ ಚಿಂತನೆಯನ್ನು ಮಾಡಿ, ಸಮಚಿತ್ತತೆಯನ್ನು ಕಾಪಾಡಿಕೊಳ್ಳಿ. ❖

ಪತ್ರೊಡೆ, ಹಲಸಿನ ಕಾಯಿ ಕಬಾಬ್

ರಶ್ಮಿ ಭಟ್

ನಳಪಾಕ

ಪತ್ರೊಡೆ

ಬೇಕಾಗುವ ಸಾಮಗ್ರಿಗಳು: ಅಕ್ಕಿ – 2 ಕಪ್, ತೊಗರಿಬೇಳೆ – ಅರ್ಧ ಕಪ್, ಕೊತ್ತಂಬರಿ ಕಾಳು – 1 ಕಪ್, ಉದ್ದಿನಬೇಳೆ – 1 ಚಮಚ, ಜೀರಿಗೆ – 1 ಚಮಚ, ಒಣಮೆಣಸು – 8, ಬ್ಯಾಡಗಿ ಮೆಣಸು – 6, ಎಣ್ಣೆ – 1 ಚಮಚ, ಇಂಗು – ಚಿಟಿಕೆ, ಹುಣಸೆಹಣ್ಣು – ನಿಂಬೆ ಗಾತ್ರದ್ದು, ಉಪ್ಪು – ರುಚಿಗೆ, ಬೆಲ್ಲ – 1 ತುಂಡು, ಕೆಸುವಿನ ಎಲೆ – 15.

ತಯಾರಿಸುವ ವಿಧಾನ: ಅಕ್ಕಿ ಹಾಗೂ ತೊಗರಿಬೇಳೆಯನ್ನು ತೊಳೆದು 4 ರಿಂದ 5 ಗಂಟೆಗಳ ಕಾಲ ನೆನೆ ಹಾಕಿ. ಪ್ಯಾನ್ ಬಿಸಿ ಮಾಡಿ ಅದಕ್ಕೆ ಕೊತ್ತಂಬರಿ ಕಾಳು, ಜೀರಿಗೆ, ಉದ್ದಿನಬೇಳೆ, ಮೆಣಸು, ಸ್ವಲ್ಪ ಎಣ್ಣೆ, ಚಿಟಿಕೆ ಇಂಗು ಸೇರಿಸಿ ಹುರಿಯಿರಿ. ಮಿಕ್ಸಿಯಲ್ಲಿ ಅಕ್ಕಿ, ತೊಗರಿಬೇಳೆ ತೊಳೆದು ಹಾಕಿ ಅದಕ್ಕೆ ಹುರಿದ ಸಾಮಗ್ರಿಗಳನ್ನು ಸೇರಿಸಿ. ಅದಕ್ಕೆ ಹುಣಸೆಹಣ್ಣು, ಉಪ್ಪು, ಬೆಲ್ಲ, ನೀರು ಸೇರಿಸಿ ಮಂದವಾಗಿ ರುಬ್ಬಿಕೊಳ್ಳಿ. ಕೆಸುವಿನ ಎಲೆಯನ್ನು ತೊಳೆದು ಹಿಂಬದಿ ದಂಟನ್ನು ತೆಗೆದು ಎಲೆಗೆ ರುಬ್ಬಿದ ಮಿಶ್ರಣ ತೆಳುವಾಗಿ ಹಚ್ಚಿ. ಎಲೆಯನ್ನು ಸುರುಳಿಯಾಕಾರಕ್ಕೆ ಮಡಿಸಿ ಬಾಳೆಯ ನಾರಿನಿಂದ ಕಟ್ಟಿ. ಅದನ್ನು ಹಬೆಯಲ್ಲಿ ಇಟ್ಟು 40 ನಿಮಿಷ ಬೇಯಿಸಿ. ನಂತರ ದಾರ ಬಿಚ್ಚಿ ಅದನ್ನು ಸುರುಳಿ ಸುರುಳಿಯಾಗಿ ಕತ್ತರಿಸಿ. ತವಾ ಇರಿಸಿ ಬಿಸಿಯಾದ ಮೇಲೆ ಎಣ್ಣೆ ಸವರಿ ಪತ್ರೊಡೆ ತುಂಡುಗಳನ್ನು ಇರಿಸಿ ಎರಡೂ ಬದಿ ಕಾಯಿಸಿ. ಈಗ ಬಿಸಿ ಬಿಸಿ ಪತ್ರೊಡೆ ತಿನ್ನಲು ರೆಡಿ.

ಉಡುಪಿ ಗುಳ್ಳ ತವಾ ಫ್ರೈ



ಬೇಕಾಗುವ ಸಾಮಗ್ರಿಗಳು: ಉಡುಪಿ ಗುಳ್ಳ – 1 (ದುಂಡಾಗಿ ಕತ್ತರಿಸಿದ್ದು), ಒಣಮೆಣಸು – 10 ರಿಂದ 12 (ನೀರಿನಲ್ಲಿ ನೆನೆಸಿದ್ದು), ಉಪ್ಪು– ಚಿಟಿಕೆ, ಎಣ್ಣೆ – ಸ್ವಲ್ಪ, ಅಕ್ಕಿಹಿಟ್ಟು – ಸ್ವಲ್ಪ

ತಯಾರಿಸುವ ವಿಧಾನ: ಪಾತ್ರೆಯಲ್ಲಿ ಬದನೆಕಾಯಿ ತುಂಡನ್ನು ಹಾಕಿ ಅದಕ್ಕೆ ಉಪ್ಪು ಉದುರಿಸಿ ಚೆನ್ನಾಗಿ ಮಿಶ್ರಣ ಮಾಡಿ. ನೆನೆಸಿದ ಒಣಮೆಣಸನ್ನು ಮಿಕ್ಸಿ ಜಾರಿಗೆ ಹಾಕಿ ಸ್ವಲ್ಪ ನೀರು ಸೇರಿಸಿ ನುಣ್ಣಗೆ ರುಬ್ಬಿಕೊಳ್ಳಿ. ರುಬ್ಬಿಕೊಂಡ ಮಿಶ್ರಣವನ್ನು ಬದನೆಕಾಯಿ ಹೋಳಿಗೆ ಸೇರಿಸಿ. ಮಿಶ್ರಣ ಬದನೆತುಂಡಿಗೆ ಹಿಡಿಯುವಂತೆ ಚೆನ್ನಾಗಿ ಕಲೆಸಿ. ಅದನ್ನು ಅಕ್ಕಿಹಿಟ್ಟಿನಲ್ಲಿ ಅದ್ದಿ ಕಾಯಿಸಿದ ತವಾಕ್ಕೆ ಎಣ್ಣೆ ಹಚ್ಚಿ ಅದರ ಮೇಲೆ ಎಣ್ಣೆ ಹಚ್ಚಿ. ಸ್ವಲ್ಪ ಕಾದ ಮೇಲೆ ಮಗುಚಿ ಹಾಕಿ. ಇದು ಊಟದ ಜೊತೆ ಅಥವಾ ಹಾಗೇ ತಿನ್ನಲು ಚೆನ್ನಾಗಿರುತ್ತದೆ.

ಹಲಸಿನ ಕಾಯಿ ಕಬಾಬ್

ಬೇಕಾಗುವ ಸಾಮಗ್ರಿಗಳು: ಹಲಸಿನ ಕಾಯಿ – ತೊಳೆ ಬಿಡಿಸಿದ್ದು 1 ಕಪ್, ಕಡಲೆಹಿಟ್ಟು – 1/4 ಕಪ್, ಅಕ್ಕಿಹಿಟ್ಟು – ಮುಕ್ಕಾಲು ಕಪ್, ಉಪ್ಪು, ಅರಿಸಿನ ಪುಡಿ – ಚಿಟಿಕೆ, ಖಾರದಪುಡಿ – 2 ಚಮಚ, ಶುಂಠಿ–ಬೆಳ್ಳುಳ್ಳಿ – 1 ಚಮಚ, ಕರಿಬೇವಿನ ಎಲೆ – 10, ನೀರು – ಅಗತ್ಯಕ್ಕೆ ತಕ್ಕಷ್ಟು, ಇಂಗು – ಚಿಟಿಕೆ, ಎಣ್ಣೆ – ಕರಿಯಲು.

ತಯಾರಿಸುವ ವಿಧಾನ: ಬಿಡಿಸಿದ ತೊಳೆಯನ್ನು ಎರಡು ತುಂಡಾಗಿ ಕತ್ತರಿಸಿಕೊಳ್ಳಿ. ಅದಕ್ಕೆ ಅಕ್ಕಿಹಿಟ್ಟು, ಕಡಲೆಹಿಟ್ಟು, ಉಪ್ಪು, ಖಾರದಪುಡಿ, ಅರಿಸಿನ ಪುಡಿ, ಶುಂಠಿ–ಬೆಳ್ಳುಳ್ಳಿ ಪೇಸ್ಟ್, ಕರಿಬೇವು, ನೀರು ಸೇರಿಸಿ ಎಲ್ಲವನ್ನೂ ಚೆನ್ನಾಗಿ ಮಿಶ್ರಣ ಮಾಡಿ. ಅದಕ್ಕೆ ಚಿಟಿಕೆ ಇಂಗು ಸೇರಿಸಿ. ಎಣ್ಣೆಯಲ್ಲಿ ಬಣ್ಣ ಬದಲಾಗುವವರೆಗೂ ಕಾಯಿಸಿ. ಇದು ಮಳೆಗಾಲದಲ್ಲಿ ತಿನ್ನಲು ಚೆನ್ನಾಗಿರುತ್ತದೆ.

ಪ್ರಜಾವಾಣಿ ನೋಡಿಯೊ

ರೆಸಿಪಿ ವಿಡಿಯೊಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

(ಲೇಖಕಿ: ರಶ್ಮೀಸ್ ಗೋರ್ಮೆ ಯುಟ್ಯೂಬ್ ಚಾನೆಲ್ ನಿರ್ವಾಹಕಿ)

ಪೌರಾಡಳಿತ ಸಚಿವ ಎಂ.ಟಿ.ಬಿ. ನಾಗರಾಜ್ ಗಂಭೀರ ಆರೋಪ; ಹೋರಾಟದ ಎಚ್ಚರಿಕೆ

ಬಚ್ಚೇಗೌಡ ಕುಟುಂಬದಿಂದ ಭೂಕಬಳಿಕೆ

ಪ್ರಜಾವಾಣಿ ವಾರ್ತೆ

ಹೊಸಕೋಟೆ: 'ತಾಲ್ಲೂಕಿನ ಶಾಂತನಪುರ ಗ್ರಾಮದ ಸರ್ವೆ ನಂ. 9ರಲ್ಲಿರುವ ಪರಿಶಿಷ್ಟ ಜಾತಿಯವರಿಗೆ ಸೇರಿದ 26 ಎಕರೆ ಜಮೀನನ್ನು ಬಿಜೆಪಿ ಸಂಸದ ಬಿ.ಎನ್. ಬಚ್ಚೇಗೌಡ ಅವರ ಕುಟುಂಬ ಕಬಳಿಕೆ ಮಾಡಿದೆ' ಎಂದು ಪೌರಾಡಳಿತ ಸಚಿವ ಎಂ.ಟಿ.ಬಿ. ನಾಗರಾಜ್ ಗಂಭೀರ ಆರೋಪ ಮಾಡಿದ್ದಾರೆ.

'ಹಿಂದೆ ಪ್ಲೇಗ್ ರೋಗ ಕಾಣಿಸಿಕೊಂಡಾಗ ಗ್ರಾಮಸ್ಥರು ಈ ಜಮೀನಿನಲ್ಲಿ ಊರು ನಿರ್ಮಿಸಿಕೊಂಡಿದ್ದರು. ರೋಗ ನಿವಾರಣೆಯಾದ ಬಳಿಕ ಖಾಲಿ ಮಾಡಿದ್ದರು. ಇದು ಸರ್ಕಾರಿ ಜಮೀನಾಗಿತ್ತು. ಇದನ್ನು ಸಂಸದ ಬಚ್ಚೇಗೌಡ ಕುಟುಂಬದವರು

ನಾಗರಾಜ್

ಕಬಳಿಸಿದ್ದಾರೆ' ಎಂದು ಸಚಿವರು ಆರೋಪಿಸಿದ್ದಾರೆ.

'ಪರಿಶಿಷ್ಟ ಜಾತಿಯವರ ಬಳಿ ಜಮೀನಿನ ದಾಖಲೆಗಳಿವೆ. ಜಮೀನು ಪಡೆಯಲು ಅವರು ಭೂ ಕಬಳಿಕೆ ತಡೆ ನ್ಯಾಯಾಲಯಕ್ಕೂ ಹೋಗಿದ್ದರು. ಅಲ್ಲಿ ಅವರಿಗೆ ನ್ಯಾಯ ವಿಳಂಬವಾಯಿತು. ನಂತರ ಜಿಲ್ಲಾಧಿಕಾರಿಗೆ ದೂರು ಸಲ್ಲಿಸಿದ್ದರು. ಡಿ.ಸಿ ಅವರು 26 ಎಕರೆಯು ಸರ್ಕಾರಿ ಜಮೀನಾಗಿದೆ ಎಂದು ಆದೇಶಿಸಿದ್ದಾರೆ. ಈ ಆದೇಶದ ಪ್ರತಿಯೂ ನನ್ನ ಬಳಿ ಇದೆ' ಎಂದು ತಿಳಿಸಿದ್ದಾರೆ.

ನ್ಯಾಯ ಕೊಡಿಸುತ್ತೇನೆ: 'ಜಮೀನಿನ ಸಂಬಂಧ ಬಡಜನರು ಹೈಕೋರ್ಟ್‌ಗೂ ಮೊರೆ ಹೋಗಿದ್ದರು. ನ್ಯಾಯಾಲಯ ಯಥಾಸ್ಥಿತಿ ಕಾಯ್ದುಕೊಳ್ಳುವಂತೆ ಆದೇಶಿಸಿದೆ. ಈ ಆದೇಶದನ್ವಯ ಜಿಲ್ಲಾಧಿಕಾರಿ, ಉಪ ವಿಭಾಗಾಧಿಕಾರಿ ಸ್ಥಳಕ್ಕೆ ಭೇಟಿ ನೀಡಿ ಬಡವರಿಗೆ ಜಮೀನು ಬಿಟ್ಟುಕೊಡುವಂತೆ ಸೂಚಿಸಿದ್ದರು. ಆದರೆ, ಜಮೀನು ಬಿಟ್ಟುಕೊಡದೆ ಬಚ್ಚೇಗೌಡರ ಕುಟುಂಬ ಅನ್ಯಾಯ ಎಸಗುತ್ತಿದೆ. ನಾನು ಬಡವರ ಪರ ಹೋರಾಟಕ್ಕೆ ಸಿದ್ಧ' ಎಂದು ಸಚಿವ ಎಂ.ಟಿ.ಬಿ. ನಾಗರಾಜ್ 'ಪ್ರಜಾವಾಣಿ'ಗೆ ತಿಳಿಸಿದರು.

ಪಿತ್ರಾರ್ಜಿತ ಆಸ್ತಿ: ಬಚ್ಚೇಗೌಡರ ಪ್ರತಿಪಾದನೆ

ಬಚ್ಚೇಗೌಡ

'ಶಾಂತನಪುರ ಬೇಚಾರಕ್ ಹಳ್ಳಿಯಾಗಿದೆ. ಅಲ್ಲಿ ಯಾರೂ ವಾಸವಾಗಿಲ್ಲ. ನಮ್ಮ ತಾತ ಭೈರೇಗೌಡರು ಈ ಜಮೀನಿನ ಒಡೆಯರಾಗಿದ್ದರು. ಅವರು ನನ್ನ ತಂದೆ ಮತ್ತು ಅವರ ಅಣ್ಣ, ತಮ್ಮಂದಿರಿಗೆ ನೀಡಿರುವ ಪಿತ್ರಾರ್ಜಿತ ಆಸ್ತಿಯಾಗಿದ್ದು ನಮ್ಮ ಹೆಸರಿನಲ್ಲಿಯೇ ಇದೆ. ಈಗ ನನ್ನ ತಮ್ಮ ಗೋಪಾಲಗೌಡ ನೋಡಿಕೊಳ್ಳುತ್ತಿದ್ದಾರೆ' ಎಂದು ಸಂಸದ ಬಚ್ಚೇಗೌಡ ಪ್ರತಿಕ್ರಿಯಿಸಿದರು.

'ಮಹಾರಾಜರ ಕಾಲದಲ್ಲಿ ಜೋಡಿದಾರರಾಗಿದ್ದ ಕುಟುಂಬ ನಮ್ಮದು. ತಾಲ್ಲೂಕಿನಲ್ಲಿ ನಮಗೆ ನೂರಾರು ಎಕರೆ ಜಮೀನಿದೆ. ನಾವೇ ಕೆಲವರಿಗೆ ಜಮೀನನ್ನು ದಾನವಾಗಿ ನೀಡಿದ್ದೇವೆ. ಸರ್ಕಾರಿ ಅಥವಾ ಬೇರೆಯವರ ಜಮೀನು ಕಬಳಿಸುವ ಅಗತ್ಯ ನಮಗಿಲ್ಲ' ಎಂದು ಸ್ಪಷ್ಟಪಡಿಸಿದರು.

'ಸಚಿವರು ಬಡವರಿಗೆ ನ್ಯಾಯ ಕೊಡಿಸುವುದಕ್ಕೆ ನಮ್ಮ ಅಭ್ಯಂತರವಿಲ್ಲ. ಅವರ ಕೆಲಸಕ್ಕೆ ಅಡ್ಡಿ ಬರುವುದಿಲ್ಲ. ಈ ಜಮೀನಿನ ಸಂಬಂಧ ಯಾವುದೇ ನ್ಯಾಯಾಲಯದಲ್ಲಿ ಮೊಕದ್ದಮೆ ದಾಖಲಾಗಿಲ್ಲ. ಅವರು ಹೇಳುವ ರೀತಿಯಲ್ಲಿ ಜಮೀನಿನ ಪ್ರಕರಣ ಕೋರ್ಟ್‌ನಲ್ಲಿದ್ದರೆ ನ್ಯಾಯಾಲಯ ನೀಡುವ ತೀರ್ಪಿಗೆ ನಾವು ಬದ್ಧ' ಎಂದು ಹೇಳಿದರು.

ಆನ್‌ಲೈನ್–ಆಫ್‌ಲೈನ್ ಬೋಧನೆಗೆ ಮಾರ್ಗಸೂಚಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಸಕ್ತ ವರ್ಷದ (2021–22) ಶೈಕ್ಷಣಿಕ ಚಟುವಟಿಕೆಗಳ ನಿರ್ವಹಣೆಗೆ ಶುಕ್ರವಾರ ಹೊಸ ಮಾರ್ಗಸೂಚಿಗಳನ್ನು ಪ್ರಕಟಿಸಿರುವ ಸಾರ್ವಜನಿಕ ಶಿಕ್ಷಣ ಇಲಾಖೆ, ಭೌತಿಕ ತರಗತಿಯಲ್ಲದೆ, ಆನ್‌ಲೈನ್ ಬೋಧನೆಗೂ ಸಹಕಾರಿಯಾಗುವಂತೆ ಪರ್ಯಾಯ ಶೈಕ್ಷಣಿಕ ಯೋಜನೆ ರೂಪಿಸಿದೆ.

ಮೊಬೈಲ್ ಫೋನ್, ದೂರದರ್ಶನ ಸಂಪರ್ಕ ಹೊಂದಿರುವ ವಿದ್ಯಾರ್ಥಿಗಳು ಮತ್ತು ಈ ಸಂಪರ್ಕ ಇಲ್ಲದ ವಿದ್ಯಾರ್ಥಿಗಳನ್ನು ಕಲಿಕೆಯಲ್ಲಿ ತೊಡಗಿಸಿಕೊಳ್ಳುವ ಬಗ್ಗೆಯೂ ಮಾರ್ಗಸೂಚಿಯಲ್ಲಿ ಹೇಳಲಾಗಿದೆ.

1ರಿಂದ 10ನೆಯ ತರಗತಿಯ ಎಲ್ಲ ವಿದ್ಯಾರ್ಥಿಗಳ ಪೋಷಕರಲ್ಲಿ ಇರುವ ತಾಂತ್ರಿಕ ಸಾಧನಗಳ ಲಭ್ಯತೆಯ ಕುರಿತ ಮಾಹಿತಿಯನ್ನು ಸಂಗ್ರಹಿಸಬೇಕು,

ತಂದೆ–ತಾಯಿ ಇಲ್ಲದಿದ್ದಲ್ಲಿ ಮನೆಯ ಹತ್ತಿರದಲ್ಲಿ ಶೈಕ್ಷಣಿಕ ಬೆಂಬಲ ನೀಡಲು ಇಚ್ಛೆ ಇರುವ ಸಹೃದಯರನ್ನು ಗುರುತಿಸಬೇಕು ಎಂದು ಇಲಾಖೆ ಸೂಚಿಸಿದೆ.

ಯಾವುದೇ ಫೋನ್, ದೂರದರ್ಶನ ಲಭ್ಯವಿಲ್ಲದಿರುವ ವಿದ್ಯಾರ್ಥಿಗಳಿಗೆ ನೆರೆ ಮನೆಯವರ ಸಮ್ಮತಿಯ ಮೇರೆಗೆ, ಚಂದನ ವಾಹಿನಿಯಲ್ಲಿ ಪ್ರಸಾರವಾಗುವ ಪಾಠಗಳನ್ನು ವಿದ್ಯಾರ್ಥಿಗಳು ವೀಕ್ಷಿಸಲು ವ್ಯವಸ್ಥೆ ಮಾಡಬಹುದಾಗಿದೆ ಎಂದೂ ಸಲಹೆ ನೀಡಲಾಗಿದೆ.

ಕೀ ಪ್ಯಾಡ್ ಮೊಬೈಲ್ ಸಂಪರ್ಕ ಇರುವ ವಿದ್ಯಾರ್ಥಿಗಳ ಮನೆಯಲ್ಲಿ ರೇಡಿಯೊ ಲಭ್ಯವಿದ್ದಲ್ಲಿ, ಎಫ್.ಎಂ. ಮೂಲಕ ಪ್ರಸಾರವಾಗುವ ರೇಡಿಯೊ ಪಾಠಗಳನ್ನು ಕೇಳಲು ಮಾರ್ಗದರ್ಶನ ನೀಡಬೇಕು ಎಂದು ಸೂಚಿಸಲಾಗಿದೆ.

ಪ್ರತಿ ವಿದ್ಯಾರ್ಥಿಗೆ ವಿಷಯವಾರು ಕೃತಿ ಸಂಪುಟ (ಚೈಲ್ಡ್ ಪ್ರೊಫೈಲ್) ನಿರ್ವಹಣೆ ಮಾಡಿ, ಮೌಲ್ಯಮಾಪನ ಮಾಡಬೇಕು. ಇದರ ವಿವರವನ್ನು ಕಡ್ಡಾಯವಾಗಿ ಸ್ಯಾಟ್ಸ್ (ಎಸ್‌ಎಟಿಎಸ್) ತಂತ್ರಾಂಶದಲ್ಲಿ ಅಳವಡಿಸಬೇಕು ಎಂದು ಇಲಾಖೆಯ ಆಯುಕ್ತರು ಸೂಚಿಸಿದ್ದಾರೆ.

ಪ್ರಗತಿ ವರದಿ ನೀಡಲು ಸೂಚನೆ: ಈ ಚಟುವಟಿಕೆಗಳು ಸಮರ್ಪಕವಾಗಿ ನಡೆಯುವಂತೆ ನೋಡಿಕೊಳ್ಳಲು ಪ್ರತಿ ಜಿಲ್ಲೆಯಲ್ಲಿ ನೋಡಲ್ ಅಧಿಕಾರಿಗಳನ್ನು ನೇಮಕ ಮಾಡಲಾಗಿದೆ. ಇವರು, ಪ್ರಸ್ತುತ ವರ್ಷದ ಬೋಧನೆ–ಕಲಿಕೆ ಮತ್ತು ಪರ್ಯಾಯ ಶೈಕ್ಷಣಿಕ ಯೋಜನೆಯ ಅನುಷ್ಠಾನ ಕುರಿತು ಪ್ರತಿ ತಿಂಗಳ ಐದರೊಳಗೆ ಹಿಂದಿನ ತಿಂಗಳ ಪ್ರಗತಿ ವರದಿಯನ್ನು ಆಯುಕ್ತರಿಗೆ ಸಲ್ಲಿಸಬೇಕು ಎಂದು ಸೂಚಿಸಲಾಗಿದೆ.

ಜುಲೈ 1ರಿಂದ ನೂತನ ಶೈಕ್ಷಣಿಕ ವರ್ಷ ಪ್ರಾರಂಭವಾಗಲಿದೆ.

ಅಕ್ರಮ ದಾಸ್ತಾನು; 131 ಕ್ವಿಂಟಲ್ ಬಿತ್ತನೆ ಬೀಜ ವಶ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ನಗರದ ಗೋಕುಲ ರಸ್ತೆಯ ಕೈಗಾರಿಕಾ ವಸಾಹತು ಪ್ರದೇಶದಲ್ಲಿರುವ ಬೀಜ–ರಸಗೊಬ್ಬರ ದಾಸ್ತಾನು ಕೇಂದ್ರದ ಮೇಲೆ ದಾಳಿ ನಡೆಸಿದ ಜಿಲ್ಲೆಯ ಕೃಷಿ ವಿಚಕ್ಷಣಾ ದಳದ ಅಧಿಕಾರಿಗಳು ₹63 ಲಕ್ಷ ಮೌಲ್ಯದ ಅಕ್ರಮ ದಾಸ್ತಾನು ಬೀಜಗಳನ್ನು ವಶಪಡಿಸಿಕೊಂಡಿದ್ದಾರೆ.

ಕೃಷಿ ಜಾಗೃತ ದಳದ ಸಹಾಯಕ ನಿರ್ದೇಶಕರಾದ ರಾಘವೇಂದ್ರ ಬಮ್ಮಿಗಟ್ಟಿ ಮತ್ತು ವಿಠಲ್‌ರಾವ್ ನೇತೃತ್ವದ ತಂಡ ವಿವಿಧ ಬಗೆಯ 131 ಕ್ವಿಂಟಲ್ ಬಿತ್ತನೆ ಬೀಜ ವಶಕ್ಕೆ ಪಡೆದು, ಗೋದಾಮಿನ ಮಾಲೀಕರ ವಿರುದ್ಧ ಕ್ರಮಕ್ಕೆ ಜಿಲ್ಲಾಧಿಕಾರಿಗೆ ವರದಿ ನೀಡಿದ್ದಾರೆ.

ರಾಜೇಂದ್ರ ಅಗ್ರಿ ಪ್ರೈ.ಲಿ. ಗೋದಾಮಿನಲ್ಲಿ ₹6 ಲಕ್ಷ ಮೌಲ್ಯದ 800 ಬಿ.ಟಿ ಹತ್ತಿ, ಹೈ ಈಲ್ಡ್ ಅಗ್ರಿ ಪ್ರೈ.ಲಿ. ಗೋದಾಮಿನಲ್ಲಿ ₹14 ಲಕ್ಷ ಮೌಲ್ಯದ 70 ಕ್ವಿಂಟಲ್ ಗೋವಿನ ಜೋಳ ಹಾಗೂ ನವಭಾರತ ಸೀಡ್ಸ್ ಗೋದಾಮಿನಲ್ಲಿ 35.68 ಕ್ವಿಂಟಲ್ ಬಿ.ಟಿ ಹತ್ತಿ, 5.58 ಕ್ವಿಂಟಲ್ ಜೋಳ ಹಾಗೂ 16.92 ಕ್ವಿಂಟಲ್ ಹೈಬ್ರೀಡ್ ಸಜ್ಜೆ ವಶಪಡಿಸಿಕೊಂಡಿದ್ದು, ಇವುಗಳ ಒಟ್ಟು ಮೌಲ್ಯ ₹63 ಲಕ್ಷ ಎಂದು ಅಧಿಕಾರಿಗಳು ಅಂದಾಜಿಸಿದ್ದಾರೆ.

ಬೀಜ, ರಸಗೊಬ್ಬರವನ್ನು ಹೋಲ್‌ಸೇಲ್ ಆಗಿ ಮಾರಾಟ ಮಾಡುವ ಮಧ್ಯವರ್ತಿಗಳು ಅನುಮತಿ ಪಡೆಯದೆ ಗೋದಾಮಿನಲ್ಲಿ ಬೀಜಗಳನ್ನು ಸಂಗ್ರಹಿಸಿದ್ದರು. ಹೈದರಾಬಾದ್ ಮತ್ತು ಮಹಾರಾಷ್ಟ್ರಗಳಿಂದ ಖರೀದಿಸಿದ ಬೀಜಗಳನ್ನು ಇವರು ಸ್ಥಳೀಯ ಮಾರುಕಟ್ಟೆಗೆ ಪೂರೈಸುತ್ತಿದ್ದರು. ಈಗಾಗಲೇ ಕೆಲವು ಅಂಗಡಿಗಳಿಗೆ ಈ ಬೀಜಗಳನ್ನೇ ವಿತರಿಸಿರುವುದಾಗಿ ತಿಳಿದು ಬಂದಿದೆ.

ಬಸ್ ಪ್ರಯಾಣ ದರ ಹೆಚ್ಚಳಕ್ಕೆ ಪ್ರಸ್ತಾವ: ಶಿವಯೋಗಿ ಕಳಸದ

ಪ್ರಜಾವಾಣಿ ವಾರ್ತೆ

ಬಾಗಲಕೋಟೆ: 'ಸಾರಿಗೆ ಸಂಸ್ಥೆಯ ಪ್ರಯಾಣ ದರ ಶೇ 10ರಿಂದ 15ರಷ್ಟು ಹೆಚ್ಚಿಸುವಂತೆ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಲಾಗಿದೆ. ಅದಿನ್ನೂ ಪರಿಶೀಲನೆಯ ಹಂತದಲ್ಲಿದೆ' ಎಂದು ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ವ್ಯವಸ್ಥಾಪಕ ನಿರ್ದೇಶಕ ಶಿವಯೋಗಿ ಕಳಸದ ತಿಳಿಸಿದರು.

ಕೋವಿಡ್ ಲಾಕ್‌ಡೌನ್ ಕಾರಣ ಸಾರಿಗೆ ಸಂಸ್ಥೆಗೆ ನಿತ್ಯ ₹20 ಕೋಟಿ ಆದಾಯ ಖೋತಾ ಆಗುತ್ತಿದೆ. ಸಂಸ್ಥೆ ವ್ಯಾಪ್ತಿಯ ನಾಲ್ಕು ನಿಗಮಗಳ 1.15 ಲಕ್ಷ ಸಿಬ್ಬಂದಿಗೆ ವೇತನ ನೀಡಲು ಪ್ರತಿ ತಿಂಗಳು ₹300 ಕೋಟಿ ಅಗತ್ಯವಿದೆ. ಅದನ್ನು ಈಗ ಸರ್ಕಾರವೇ

ಶಿವಯೋಗಿ ಕಳಸದ

ಭರಿಸುತ್ತಿದೆ. ಈಗ ಆಗಿರುವ ನಷ್ಟ ತುಂಬಿಕೊಳ್ಳಲು ಪ್ರಯಾಣ ದರವನ್ನು ಶೇ 50 ರಷ್ಟು ಹೆಚ್ಚಳಗೊಳಿಸಬೇಕಾಗುತ್ತದೆ ಎಂದು ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿದರು.

ಲಾಕ್‌ಡೌನ್ ಹಿಂತೆಗೆದುಕೊಂಡು ಸರ್ಕಾರ ಅನುಮತಿ ನೀಡಿದ ನಂತರ ಹಂತ ಹಂತವಾಗಿ ಬೇಡಿಕೆ ಆಧರಿಸಿ ಬಸ್‌ಗಳ ಸಂಚಾರ ಆರಂಭಿಸಲಾಗುವುದು. ಆರಂಭದಲ್ಲಿ ಜಿಲ್ಲೆಗಳ ಒಳಗೆ ಬಸ್‌ಗಳ ಓಡಾಟಕ್ಕೆ ಅವಕಾಶವಾಗಬಹುದು ಎಂದರು.

ಪರಿಶಿಷ್ಟರ ವಿಶೇಷ ಅನುದಾನ: ಕ್ರಿಯಾ ಯೋಜನೆಗೆ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 2021–22ನೇ ಸಾಲಿನ ಎಸ್‌ಸಿಎಸ್‌ಪಿ ಮತ್ತು ಟಿಎಸ್‌ಪಿ ಯೋಜನೆಯಡಿ ₹26,005 ಕೋಟಿ ಅನುದಾನ ಹಂಚಿಕೆ ಮಾಡಿದ್ದು, ಇದಕ್ಕೆ ಶೀಘ್ರವೇ ಕರಡು ಕ್ರಿಯಾ ಯೋಜನೆ ರೂಪಿಸುವಂತೆ ಸಮಾಜ ಕಲ್ಯಾಣ ಇಲಾಖೆ ಸಚಿವ ಬಿ.ಶ್ರೀರಾಮುಲು ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಈ ಸಂಬಂಧ ವಿಕಾಸಸೌಧದಲ್ಲಿ ಎರಡು ದಿನಗಳ ಅವಧಿಯ ವರ್ಚುವಲ್ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಮುಖ್ಯಮಂತ್ರಿಯವರು ಶೀಘ್ರವೇ ರಾಜ್ಯ ಪರಿಷತ್ ಸಭೆ ಕರೆಯಲಿದ್ದಾರೆ. ಅದಕ್ಕೆ ಮೊದಲೇ ಕ್ರಿಯಾ ಯೋಜನೆ ತಯಾರಿಸಬೇಕು ಎಂದು 35 ಇಲಾಖೆಗಳ ನೋಡಲ್ ಅಧಿಕಾರಿಗಳಿಗೆ ಸೂಚಿಸಿದರು.

ಎಲ್ಲ ಇಲಾಖೆಗಳ ಕ್ರೋಡೀಕೃತ ಕರಡು ಕ್ರಿಯಾ ಯೋಜನೆಯನ್ನು ಶೀಘ್ರವಾಗಿ ಸಲ್ಲಿಸಬೇಕು. ಈ ಕರಡು ಕ್ರಿಯಾ ಯೋಜನೆಯನ್ನು ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ನಡೆಯಲಿರುವ ರಾಜ್ಯ ಪರಿಷತ್ ಸಭೆಯಲ್ಲಿ ಮಂಡಿಸಿ ಅಂತಿಮ ಅನುಮೋದನೆ ಪಡೆಯಲಾಗುವುದು ಎಂದರು.

ಕಳೆದ ಸಾಲಿನಲ್ಲಿ ಈ ಯೋಜನೆಗೆ ₹25,916 ಕೋಟಿ ಹಂಚಿಕೆ ಆಗಿತ್ತು. ಅದರಲ್ಲಿ ₹24,568 ಕೋಟಿಯನ್ನು (ಶೇ 95) ಪರಿಶಿಷ್ಟ ಜಾತಿ ಮತ್ತು ಪಂಗಡದ ಸಮುದಾಯದ ಕಲ್ಯಾಣಕ್ಕಾಗಿ ಖರ್ಚು ಮಾಡಲಾಗಿದೆ ಎಂದು ಶ್ರೀರಾಮುಲು ಹೇಳಿದರು.

ಪರಿಶಿಷ್ಟ ಜಾತಿ ಮತ್ತು ವರ್ಗಗಳ ಕಲ್ಯಾಣಕ್ಕಾಗಿ ಹಲವು ಯೋಜನೆಗಳನ್ನು ಸರ್ಕಾರ ಹಮ್ಮಿಕೊಂಡಿದ್ದು, ಅತ್ಯಂತ ತಳಮಟ್ಟದವರೆಗೆ ಈ ಯೋಜನೆಯನ್ನು ತಲುಪಿಸಲಾಗುವುದು. ಈ ಯೋಜನೆಗಳನ್ನು ಸಮುದಾಯವು ಸದ್ಬಳಕೆ ಮಾಡಿಕೊಳ್ಳುವ ಮೂಲಕ ಅಭಿವೃದ್ಧಿ ಹೊಂದಬೇಕು ಎಂದೂ ಮನವಿ ಮಾಡಿದರು.

ಸಭೆಯಲ್ಲಿ ಸಮಾಜಕಲ್ಯಾಣ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗಳಾದ ಎನ್.ನಾಗಾಂಬಿಕಾ ದೇವಿ, ಎಸ್‌ಸಿಎಸ್‌ಪಿ ಮತ್ತು ಟಿಎಸ್‌ಪಿ ಯೋಜನೆಯ ಸಲಹೆಗಾರ ವೆಂಕಟಯ್ಯ, ನೀರಾವರಿ ಇಲಾಖೆಯ ಹೆಚ್ಚುವರಿ ಮುಖ್ಯಕಾರ್ಯದರ್ಶಿ ರಾಕೇಶ್ ಸಿಂಗ್, ಸಮಾಜ ಕಲ್ಯಾಣ ಇಲಾಖೆಯ ಆಯುಕ್ತ ರವಿಕುಮಾರ್ ಸುರಪುರ್ ಇದ್ದರು.

ಹುಬ್ಬಳ್ಳಿ ತಾಲ್ಲೂಕಿನ ಛಬ್ಬಿ ಬಳಿ ಇರುವ ತೋಟದಲ್ಲಿ ಟ್ರ್ಯಾಕ್ಟರ್ ಮೂಲಕ ಹೊಲ ಉಳುಮೆ ಮಾಡುತ್ತಿರುವ ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ

ಕೋವಿಡ್‌ನಿಂದ ಗುಣಮುಖ: ಕೃಷಿ ಕಾಯಕದಲ್ಲಿ ಹೊರಟ್ಟಿ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಕೋವಿಡ್–19 ಬಾಧಿತರಾಗಿದ್ದ ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅವರು ಕ್ವಾರಂಟೈನ್ ಅವಧಿ ಪೂರ್ಣಗೊಳಿಸಿದ ನಂತರ ತಾಲ್ಲೂಕಿನ ಛಬ್ಬಿ ಬಳಿ ಇರುವ ತಮ್ಮ 'ನಿಸರ್ಗ' ತೋಟದಲ್ಲಿ ಕೃಷಿ ಚಟುವಟಿಕೆಯಲ್ಲಿ ತೊಡಗಿಸಿಕೊಂಡಿದ್ದಾರೆ.

ಕೋವಿಡ್‌ನಿಂದ ಚೇತರಿಸಿಕೊಂಡ ನಂತರ ಬಹಳಷ್ಟು ಮಂದಿ ಆತಂಕದಲ್ಲಿಯೇ ಕೆಲ ದಿನಗಳನ್ನು ದೂಡುತ್ತಾರೆ. ಆದರೆ, ಹೊರಟ್ಟಿ ಅವರು, ಟ್ರ್ಯಾಕ್ಟರ್ ಹಾಗೂ ನೇಗಿಲು ಹೂಡಿ, ಉಳುಮೆ ಕೆಲಸದಲ್ಲಿ ತೊಡಗಿಸಿಕೊಂಡಿದ್ದಾರೆ. ಮುಂಗಾರು ಬಿತ್ತನೆ ಕಾರ್ಯದಲ್ಲಿ ತೊಡಗಿಸಿಕೊಳ್ಳುವ ಮೂಲಕ ಯುವಕರು ನಾಚುವಂತೆ ಕೆಲಸ ಮಾಡುತ್ತಿದ್ದಾರೆ.

ಕೃಷಿ ಹಾಗೂ ಹೈನುಗಾರಿಕೆ ಬಗೆಗೆ ಮೊದಲಿನಿಂದಲೂ ಆಸಕ್ತಿ ಹೊಂದಿರುವ ಅವರು, ತಮ್ಮ ತೋಟವನ್ನು ಕೃಷಿಕರಿಗೆ ಮಾದರಿ ಆಗುವಂತೆ ನಿರ್ವಹಿಸಿದ್ದಾರೆ. ಸಭಾಪತಿಯಾದ ನಂತರವೂ ಕೃಷಿ ಚಟುವಟಿಕೆಯಿಂದ ದೂರ ಸರಿದಿಲ್ಲ.

'ಹಿಂದೆ ಟ್ರ್ಯಾಕ್ಟರ್ ಮೂಲಕ ಉಳುಮೆ ಮಾಡುತ್ತಿದ್ದೆ. ಇತ್ತೀಚಿನ ವರ್ಷಗಳಲ್ಲಿ ಮಾಡಿರಲಿಲ್ಲ. ಪುನಃ ಕೃಷಿ ಚಟುವಟಿಕೆಯಲ್ಲಿ ತೊಡಗಿಸಿಕೊಂಡಿರುವುದು ಖುಷಿ ತಂದಿದೆ' ಎನ್ನುತ್ತಾರೆ ಬಸವರಾಜ ಹೊರಟ್ಟಿ.

ನಿಧನ ವಾರ್ತೆ

ಹಿರಿಯ ಪತ್ರಕರ್ತ, ನಟ ಸುರೇಶಚಂದ್ರ

ಬೆಂಗಳೂರು: ಕೋವಿಡ್ ದೃಢಪಟ್ಟು, ಜಯನಗರದ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಹಿರಿಯ ಪತ್ರಕರ್ತ, ನಟ ಲಿಂಗೇನಹಳ್ಳಿ ಸುರೇಶಚಂದ್ರ (69) ಅವರು ಶುಕ್ರವಾರ ನಿಧನರಾದರು.



ಸುರೇಶಚಂದ್ರ

ಮೃತರು ಪತ್ನಿ ಹಾಗೂ ಇಬ್ಬರು ಪುತ್ರರನ್ನು ಅಗಲಿದ್ದಾರೆ. ತುಮಕೂರು ಜಿಲ್ಲೆಯ ಮಧುಗಿರಿಯ ಲಿಂಗೇನಹಳ್ಳಿ ಮೂಲದ ಇವರು, ಭಾರತೀಯ ವಿದ್ಯಾಭವನದಲ್ಲಿ ಸ್ನಾತಕೋತ್ತರ ಪತ್ರಿಕೋದ್ಯಮ ಡಿಪ್ಲೊಮಾ ಮಾಡಿದ್ದರು.

'ಪ್ರಜಾವಾಣಿ'ಯಲ್ಲಿ ಮೂರು ತಿಂಗಳು ಇಂಟರ್ನ್‌ಶಿಪ್ ಮೂಲಕ ಪತ್ರಿಕೋದ್ಯಮಕ್ಕೆ ಮೊದಲ ಹೆಜ್ಜೆಇಟ್ಟಿದ್ದ ಸುರೇಶಚಂದ್ರ ಅವರು 'ಸಂಜೆವಾಣಿ'ಗೆ ಸೇರಿ ಅಲ್ಲಿಯೇ ಮುಂದುವರಿದು ಸಂಪಾದಕರಾಗಿ ಕಾರ್ಯನಿರ್ವಹಿಸಿ 2019ರಲ್ಲಿ ನಿವೃತ್ತರಾಗಿದ್ದರು.

ಕೆಲ ಚಿತ್ರಗಳಲ್ಲಿ ಸಣ್ಣಪುಟ್ಟ ಪಾತ್ರ ಮಾಡಿಕೊಂಡಿದ್ದ ಅವರು, ಎಸ್. ನಾರಾಯಣ್ ನಿರ್ದೇಶನದ, ಗಣೇಶ್ ಅಭಿನಯದ 'ಚೆಲುವಿನ ಚಿತ್ತಾರ'ದಲ್ಲಿ ನಾಯಕಿಯ ಅಪ್ಪನ ಪಾತ್ರದ ಮುಖಾಂತರ ಖ್ಯಾತಿ ಪಡೆದಿದ್ದರು.

ಇಲ್ಲಿಯವರೆಗೆ 25ಕ್ಕೂ ಅಧಿಕ ಸಿನಿಮಾಗಳಲ್ಲಿ ಅವರು ನಟಿಸಿದ್ದು, ಈ ಪೈಕಿ 'ನಂದ ಲವ್ಸ್ ನಂದಿತ', 'ಜಂಗ್ಲಿ', 'ಉಗ್ರಂ' ಸಿನಿಮಾಗಳು ಹಿಟ್ ಆಗಿದ್ದವು.

ಕರ್ನಾಟಕ ಸರ್ಕಾರ
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಾರ್ಯಾಲಯ
ಏಕ್ ಮೀನಾರ್ ಹತ್ತಿರ, ರಾಯಚೂರು, ಇ–ಮೇಲ್: dhoraichur@gmail.com, ದೂ.: 08532–226020
ಸಂಖ್ಯೆ: ಜಿಆಕುಕಇರಾ/ಕೆಕೆಆರ್‌ಡಿಬಿ/ಅಭಿವೃದ್ಧಿ/ 03/2020–2021 ದಿನಾಂಕ: 09/06/2021
:: ಟೆಂಡರ್ ಪ್ರಕಟಣೆ ::
ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ, ಕಲಬುರಗಿಯ ಮ್ಯಾಕ್ರೋ ಯೋಜನೆಯ 2021–22 ನೇ ಸಾಲಿನ ಕ್ರಿಯಾ ಯೋಜನೆಯಡಿಯಲ್ಲಿ ರಾಯಚೂರು ಜಿಲ್ಲೆಯ ವಿವಿಧ ಆಸ್ಪತ್ರೆಗಳಿಗೆ ಕೋವಿಡ್–19 ನಿರ್ವಹಣೆಗಾಗಿ ಮತ್ತು ಚಿಕಿತ್ಸೆಗಾಗಿ ಅವಶ್ಯವಿರುವ ವೈದ್ಯಕೀಯ ಉಪಕರಣಗಳ ಖರೀದಿಗಾಗಿ ಅಧಿಕೃತ ಮಾರಾಟಗಾರರಿಂದ/ಸಂಸ್ಥೆಗಳ ಮುಖಾಂತರ ಮೊಹರು ಮಾಡಿದ ದ್ವಿ–ಬಿಡ್ ಪದ್ಧತಿಯಲ್ಲಿ ಕೆ.ಟಿ.ಪಿ.ಪಿ ಅಧಿನಿಯಮ 1999, ನಿಯಮಗಳು 2000 ಪ್ರಕಾರ ಅಲ್ಪಾವಧಿ ಇ–ಟೆಂಡರ್ ಆಹ್ವಾನಿಸಲಾಗಿದೆ.
1) ಟೆಂಡರ್ ಸಂಖ್ಯೆ. : Tender No: DHFWS/KKRDB/ DEVLP/03/2021-22, 2) ಟೆಂಡರ್ ಮೊತ್ತ : **250.00 ಲಕ್ಷಗಳಲ್ಲಿ,** 3) ಇ.ಎಮ್.ಡಿ ಮೊತ್ತ : 0/–, 4) ಟೆಂಡರ್ ಪ್ರಾರಂಭ ದಿನಾಂಕ http://eproc.karnataka.gov.in 09-06-2021, 5) ಟೆಂಡರ್ ಅಕ್ಷೇಪಣೆ ದಿನಾಂಕ : **22–06–2021,** 6) ಪ್ರೀ–ಬಿಡ್ ಸಭೆ ದಿನಾಂಕ : **24–06–2021 @ ಮಧಾಹ್ನ 12.00 ಘಂಟೆಗೆ** ಝುಮ್ ವಿ.ಸಿ. ಮುಖಾಂತರ, ಟೆಂಡರ್ ನಲ್ಲಿ ಭಾಗವಹಿಸುವರು ಇ–ಮೇಲ್ ಗೆ ಪತ್ರ ಮುಖೇನ ದಿನಾಂಕ:23/06/2021 ರ 5.00 ಒಳಗಾಗಿ ಮನವಿ ಸಲ್ಲಿಸಲು ಸೂಚಿಸಿದೆ. 6) ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ ಮತ್ತು ವೇಳೆ : 25-06-2021 Up to 5:00 PM, 7) ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ : 26-06-2021@ 5:30 PM, 8) ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ : 29-06-2020 @11:00 AM, 9) ಸಂಪರ್ಕಕ್ಕಾಗಿ ವಿಳಾಸ: ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಾರ್ಯಾಲಯ ರಾಯಚೂರು dhoraichur@gmail.com, 08532-226020, 9480417161.
ಸಹಿ/– ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು, ರಾಯಚೂರು.
ವಾ.ಸಾ.ಸಂ.ಇ/ರಾಯಚೂರು/104/ಎಂ.ಸಿ.&ಎ/2021–22

ಕರ್ನಾಟಕ ಸರ್ಕಾರ
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಾರ್ಯಾಲಯ
ಏಕ್ ಮೀನಾರ್ ಹತ್ತಿರ, ರಾಯಚೂರು, ಇ–ಮೇಲ್: dhoraichur@gmail.com, ದೂ.: 08532–226020
ಸಂಖ್ಯೆ: ಜಿಆಕುಕಇರಾ/ಕೆಕೆಆರ್‌ಡಿಬಿ/ಅಭಿವೃದ್ಧಿ/ 06/2020–2021 ದಿನಾಂಕ: 09/06/2021
:: ಟೆಂಡರ್ ಪ್ರಕಟಣೆ ::
ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ, ಕಲಬುರಗಿಯ ಮ್ಯಾಕ್ರೋ ಯೋಜನೆಯ 2021–22 ನೇ ಸಾಲಿನ ಕ್ರಿಯಾ ಯೋಜನೆಯಡಿಯಲ್ಲಿ ರಾಯಚೂರು ಜಿಲ್ಲೆಯ ವಿವಿಧ ಆಸ್ಪತ್ರೆಗಳಿಗೆ ಕೋವಿಡ್–19 ನಿರ್ವಹಣೆಗಾಗಿ ಮತ್ತು ಚಿಕಿತ್ಸೆಗಾಗಿ ಅವಶ್ಯವಿರುವ ವೈದ್ಯಕೀಯ ಉಪಕರಣಗಳ ಖರೀದಿಗಾಗಿ ಅಧಿಕೃತ ಮಾರಾಟಗಾರರಿಂದ/ಸಂಸ್ಥೆಗಳ ಮುಖಾಂತರ ಮೊಹರು ಮಾಡಿದ ದ್ವಿ–ಬಿಡ್ ಪದ್ಧತಿಯಲ್ಲಿ ಕೆ.ಟಿ.ಪಿ.ಪಿ ಅಧಿನಿಯಮ 1999, ನಿಯಮಗಳು 2000 ಪ್ರಕಾರ ಅಲ್ಪಾವಧಿ ಇ–ಟೆಂಡರ್ ಆಹ್ವಾನಿಸಲಾಗಿದೆ.
1) ಟೆಂಡರ್ ಸಂಖ್ಯೆ : **Tender No: DHFWS/KKRDB/ DEVLP/06/2021-22,** 2) ಟೆಂಡರ್ ಮೊತ್ತ : **122.45 ಲಕ್ಷಗಳಲ್ಲಿ,** 3) ಇ.ಎಮ್.ಡಿ ಮೊತ್ತ : 0/–, 4) ಟೆಂಡರ್ ಪ್ರಾರಂಭ ದಿನಾಂಕ: http://eproc.karnataka.gov.in: **09–06–2021,** 5) ಟೆಂಡರ್ ಅಕ್ಷೇಪಣೆ ದಿನಾಂಕ : **22–06–2021,** 6) ಪ್ರೀ–ಬಿಡ್ ಸಭೆ ದಿನಾಂಕ : **24–06–2021 @ ಮಧಾಹ್ನ 12.00 ಘಂಟೆಗೆ** ಝುಮ್ ವಿ.ಸಿ. ಮುಖಾಂತರ, ಟೆಂಡರ್‌ನಲ್ಲಿ ಭಾಗವಹಿಸುವರು ಇ–ಮೇಲ್ ಗೆ ಪತ್ರ ಮುಖೇನ ದಿನಾಂಕ:23/06/2021 ರ 5.00 ಒಳಗಾಗಿ ಮನವಿ ಸಲ್ಲಿಸಲು ಸೂಚಿಸಿದೆ. 6) ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ ಮತ್ತು ವೇಳೆ : **25-06-2021 Up to 5:00 PM,** 7) ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ: **26-06-2021@ 5:30 PM,** 8) ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ : **29-06-2020 @11:00 AM,** 9) ಸಂಪರ್ಕಕ್ಕಾಗಿ ವಿಳಾಸ : ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಾರ್ಯಾಲಯ ರಾಯಚೂರು, dhoraichur@gmail.com 08532–226020, 9480417161.
ಸಹಿ/– ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು, ರಾಯಚೂರು.
ವಾ.ಸಾ.ಸಂ.ಇ/ರಾಯಚೂರು/107/ಎಂ.ಸಿ.&ಎ/2021–22

ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ನಿಗಮ ಕಾರ್ಯಾಲಯ, ಖರೀದಿ ಶಾಖೆ, ಚಾವಿಸನಿನಿ, ಮೈಸೂರು–570017
Telephone No: 9448994705
CHAMUNDESHWARI ELECTRICITY SUPPLY CORPORATION LIMITED
(A Government of Karnataka Undertaking)
Corporate Office, Procurement Section, CESC, Mysuru-570017
Website: www.cescmysore.org
E-mail ID: gmpurc@cescmysore.org
Company Identity Number(CIN): U40109KA2004SGC035177
ಚಾವಿಸನಿನಿ/ಪ್ರವ್ಯ(ಖ)/ಉ.ಪ್ರವ್ಯ(ಖ)/ಸ.ಪ್ರ.ವ್ಯ(ಖ)–2/21–22/3626 ದಿನಾಂಕ: 11–06–2021
ಅಲ್ಪಾವಧಿ ಟೆಂಡರ್ ಮರುಪ್ರಕಟಣೆ
(ವಿದ್ಯುನ್ಮಾನ ಸಂಗ್ರಹಣಾ ವೇದಿಕೆ)
ಚಾ.ವಿ.ಸ.ನಿ.ನಿ ಯು ಈ ಕೆಳಕಂಡ ಕಾಮಗಾರಿ ಟೆಂಡರ್‌ಗಳಿಗೆ ಅರ್ಹ ಬಿಡ್ಡುದಾರರಿಂದ ಸ್ಪರ್ಧಾತ್ಮಕ ಬಿಡ್‌ಗಳನ್ನು ಆಹ್ವಾನಿಸಿದೆ.

ಕ್ರ.ಸಂ.	ವಿಚಾರಣಾ ಸಂಖ್ಯೆ	ವಿವರ	ತಾಲ್ಲೂಕು
1.	ಚಾವಿಸನಿನಿ/ಪ್ರವ್ಯ(ಖ)/ ಸಿ2–4942/ 26.04.2021	11 ಕಿ ವೋ ದರ್ಜೆಯ 25, 63, 100 ಕೆವಿಎ ಸಾಮರ್ಥ್ಯದ 3&4 ಸ್ಟಾರ್ ರೇಟೆಡ್ ಮತ್ತು ಕನ್ವೆನ್ಷನಲ್ ಪರಿವರ್ತಕಗಳನ್ನು ಬೈ ಬ್ಯಾಕ್ ಆಧಾರದಲ್ಲಿ ಮೂಲ ಸೌಕರ್ಯ ಒದಗಿಸುವುದರೊಂದಿಗೆ ದುರಸ್ತಿಗೊಳಿಸುವುದು ಮತ್ತು ರೀಕಂಡಿಷನಿಂಗ್ ಮಾಡುವುದು.	ಚಾಮರಾಜನಗರ
2.	ಚಾವಿಸನಿನಿ/ಪ್ರವ್ಯ(ಖ)/ ಸಿ2–4943/ 26.04.2021		ಗುಂಡ್ಲುಪೇಟೆ
3.	ಚಾವಿಸನಿನಿ/ಪ್ರವ್ಯ(ಖ)/ ಸಿ2–4944/ 26.04.2021		ಕೊಳ್ಳೆಗಾಲ
4.	ಚಾವಿಸನಿನಿ/ಪ್ರವ್ಯ(ಖ)/ ಸಿ2–4945/ 26.04.2021		ಕೆ.ಆರ್.ನಗರ
5.	ಚಾವಿಸನಿನಿ/ಪ್ರವ್ಯ(ಖ)/ ಸಿ2–4946/ 26.04.2021		ಡಿ.ಎಂ. ಕುರ್ಕೆ (ಬಾಣಾವರ)

ಟೆಂಡರ್‌ನಲ್ಲಿ ಭಾಗವಹಿಸುವ ಬಗ್ಗೆ ಹೆಚ್ಚಿನ ವಿವರಗಳನ್ನು ವೆಬ್‌ಸೈಟ್ http//www.eproc.karnataka.gov.in ನಲ್ಲಿ ದಿನಾಂಕ 14–06–2021 ರ ನಂತರ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಹೆಲ್ಪ್‌ಲೈನ್ 080–46010000/22631200 /68948777 ಗೆ ಅಥವಾ ಇ–ಮೇಲ್ ವಿಳಾಸ support@eprochelpdesk.com ವ್ಯವಹರಿಸಲು ಕೋರಲಾಗಿದೆ.
ವಿದ್ಯುತ್ ಸಂಬಂಧಿಸಿದ ದೂರುಗಳಿಗೆ ಕರೆ ಮಾಡಿ : 1912
ಸಹಿ/– ಪ್ರಧಾನ ವ್ಯವಸ್ಥಾಪಕರು (ಖರೀದಿ), ಚಾವಿಸನಿನಿ, ಮೈಸೂರು
DIPR/DDMYS/MCA/174A/2021-22

ಕರ್ನಾಟಕ ಸರಕಾರ
ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಕಲಬುರಗಿ–585105
ಫೋ.ನಂ 08472–278634/256944, Email:eerwssglb14@gmail.com
ಸಂ.ಕಾ.ನಿ.ಅ/ಗ್ರಾ.ಕು.ನೀ&ನೈ/.ವಿ.ಕ/ ತಾ .ಶಾ /2020–21/410 ದಿನಾಂಕ–08.06.2021
ಅಲ್ಪಾವಧಿ ಟೆಂಡರ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಪದ್ಧತಿಯಲ್ಲಿ e-procurement portal ನಡಿಯಲ್ಲಿ ಮಾತ್ರ) (ದ್ವಿ ಲಕೋಟೆಯಲ್ಲಿ)
ಕರ್ನಾಟಕ ಘನತೆವೆತ್ತ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಕಲಬುರಗಿರವರಿಂದ ಕುಡಿಯುವ ನೀರು ಕಾಮಗಾರಿಗಳಿಗೆ ಅರ್ಹ ಗುತ್ತಿಗೆದಾರರಿಂದ ಟೆಂಡರ ಆಹ್ವಾನಿಸಲಾಗಿದ್ದು ವಿವರ ಈ ಕೆಳಗಿನಂತಿದೆ.
1) ಕಾಮಗಾರಿಯ ವಿವರ : ಅಫಜಲಪೂರ ತಾಲೂಕಿನ 01 (Indent No 33847). 2) ಟೆಂಡರಿಗಿಟ್ಟ ಮೊತ್ತ : ಕನಿಷ್ಠ 2,13,42,690/–, ಗರಿಷ್ಠ 2,13,42,690/– 3) ಲೆಕ್ಕ ಶಿರ್ಷಿಕೆ : Jal Jeevan Mission 2020-21 . 4) ಗುತ್ತಿಗೆದಾರರ ಅರ್ಹತೆ : 2ನೇ ದರ್ಜೆ ಗುತ್ತಿಗೆದಾರರು & ಮೇಲ್ಪಟ್ಟು. 5) ಟೆಂಡರ ಫಾರಂ ಪಡೆಯುವ ದಿನಾಂಕ : 06–05–2021 ರಿಂದ 18–06–2021. 6) ಟೆಂಡರ ಅರ್ಜಿ ಬೆಲೆ ಮತ್ತು ಇ.ಎಂ.ಡಿ. ಮೊತ್ತ : ಇ–ಪ್ರೋಕ್ಯೂರ್‌ಮೆಂಟ್ ಪ್ರಕಾರ. 7) ಟೆಂಡರ ಫಾರಂ ಸಲ್ಲಿಸುವ ಅಂತಿಮ ದಿನಾಂಕ : 18–06–2021 ಸಾಯಂಕಾಲ 4:00 ಗಂಟೆವರೆಗೆ. 8) ಪ್ರೀ ಬಿಡ್ಡ್ ಸಭೆ : 11–06–2021 ಬೆ.11.00 ಗಂಟೆಗೆ. 9) ತಾಂತ್ರಿಕ ಬಿಡ್ಡ ತೆರೆಯುವ ದಿನಾಂಕ : 21–06–2021 ಸಾಯಂಕಾಲ 4:01 ಗಂಟೆವರೆಗೆ. 10) ಆರ್ಥಿಕ ಬಿಡ್ ತೆರೆಯುವ ದಿನಾಂಕ : 23–06–2021 ಬೆ. 11.00 ಗಂಟೆಯ ನಂತರ. 11) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ : ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ ಮೊದಲನೆ ಮಹಡಿ ಕುಸನೂರ ರೋಡ, ಕಲಬುರಗಿ. 12) ಅಂತರಜಾಲ ತಾಣದ ವಿಳಾಸ : **www.eproc.karnataka.gov.in**
ಸಹಿ/– ಕಾರ್ಯನಿರ್ವಾಹಕ ಅಭಿಯಂತರರು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ ಕಲಬುರಗಿ
ವಾ.ಸಾ.ಸಂ.ಇ/ಕಲಬುರಗಿ/280/ಎಂ.ಸಿ.&ಎ/2021–22

ಕರ್ನಾಟಕ ಸರ್ಕಾರ
(ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ)
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ,
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಶಿವಮೊಗ್ಗ
No:EE/RWSS/Dvn/SMG/AE/JJM/E-Proc/2021-22/511 Date: 09.06.2021
ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ)
ಕರ್ನಾಟಕ ರಾಜ್ಯಪಾಲರ ಪರವಾಗಿ ಕರ್ನಾಟಕ ಪಾರದರ್ಶಕ ಅಧಿನಿಯಮ 2000ರ ಪ್ರಕಾರ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಶಿವಮೊಗ್ಗ ವ್ಯಾಪ್ತಿಯಲ್ಲಿ ಜಲಜೀವನ್ ಮಿಷನ್ ಯೋಜನೆಯಡಿಯಲ್ಲಿ ಕೆಳಕಂಡ ಕಾಮಗಾರಿಗಳನ್ನು ನಿರ್ವಹಿಸಲು ಟೆಂಡರ್ ಆಹ್ವಾನಿಸಲಾಗಿರುತ್ತದೆ.

ಕ್ರ.ಸಂ.	ಉಪವಿಭಾಗ/ ತಾಲ್ಲೂಕು	ಕಾಮಗಾರಿಯ ಇಂಡೆಂಟ್ ಸಂಖ್ಯೆ	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)	ಟೆಂಡರ್‌ಗಿಟ್ಟ ಮೊತ್ತ (ರೂ)	ಷರಾ
1	ಭದ್ರಾವತಿ	33665/Call 2	66.37	55,88,067.85	ದ್ವಿ ಲಕೋಟೆ ಪದ್ಧತಿ
2	ಭದ್ರಾವತಿ	33667/Call 2	99.95	84,15,337.18	ದ್ವಿ ಲಕೋಟೆ ಪದ್ಧತಿ
3	ಭದ್ರಾವತಿ	33669/Call 2	26.41	22,23,191.32	ಏಕ ಲಕೋಟೆ ಪದ್ಧತಿ
4	ಭದ್ರಾವತಿ	30235/Call 3	35.36	29,76,778.86	ಏಕ ಲಕೋಟೆ ಪದ್ಧತಿ

ಟೆಂಡರ್ ವಿವರಗಳು, ಷರತ್ತುಗಳು ಮತ್ತು ತಿದ್ದುಪಡಿಗಳು ಅಥವಾ ಬದಲಾವಣೆಗಳು https:/www.eproc.karnataka.gov.in ಜಾಲತಾಣದಲ್ಲಿ ಲಭ್ಯವಿದ್ದು, ಅರ್ಹ ಗುತ್ತಿಗೆದಾರರು ಅಗತ್ಯ ದಾಖಲೆಗಳನ್ನು ಮತ್ತು ತಮ್ಮ ಬಿಡ್ ಅನ್ನು ಸದರಿ ಜಾಲತಾಣದಲ್ಲಿಯೇ ಸಲ್ಲಿಸುವುದು.
ಟೆಂಡರ್‌ನ ಕೆಲವು ಷರತ್ತುಗಳು : 1. ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ:14.06.2021 **2.** ದ್ವಿ ಲಕೋಟಿ ಪದ್ಧತಿಯ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 16.06.2021 **3.** ಏಕ ಲಕೋಟೆ ಪದ್ಧತಿಯ ತಾಂತ್ರಿಕ/ಆರ್ಥಿಕ ಬಿಡ್ ತೆರೆಯುವ ದಿನಾಂಕ: 16.06.2021 **4.** ದ್ವಿ ಲಕೋಟೆ ಪದ್ಧತಿಯ ಆರ್ಥಿಕ ಬಿಡ್ ತೆರೆಯುವ ದಿನಾಂಕ: 18.06.2021 **5.** ಕಾಮಗಾರಿಯನ್ನು ಪೂರ್ಣಗೊಳಿಸಲು ನಿಗಧಿಪಡಿಸಿದ ಕಾಲಾವಧಿ: 2 ತಿಂಗಳು (60 ದಿನಗಳು)
ಸಹಿ/– ಕಾರ್ಯಪಾಲಕ ಇಂಜಿನಿಯರ್, ಗ್ರಾ.ಕು.ನೀ&ನೈ ವಿಭಾಗ, ಶಿವಮೊಗ್ಗ.
ವಾ.ಸಾ.ಸಂ.ಇ/ಶಿ/ನಂ–07/06/ಎಂಸಿಎ/21–22

ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ
(ಕರ್ನಾಟಕ ಸರ್ಕಾರದ ಸ್ವಯತ್ತತಾ ಸಂಸ್ಥೆ)
ಡಾ. ಎಂ.ಹೆಚ್. ಮರಿಗೌಡ ರಸ್ತೆ, ಬೆಂಗಳೂರು–560 029.
ದೂರವಾಣಿ: 91–80–26560722 (Dir), 26094000 ಫ್ಯಾಕ್ಸ್: 080–26560723
No.: KMIO/SME(1)/Tender/CW/237/2021-22 Date: 10.06.2021
ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ
ಈ ಕೆಳಗಿನ ವೈದ್ಯಕೀಯ ಸಲಕರಣೆಗಳ ಪೂರೈಕೆಗಾಗಿ **ದ್ವಿ–ಲಕೋಟಿ ಪದ್ಧತಿಯಲ್ಲಿ** ಆನ್‌ಲೈನ್ ಮುಖಾಂತರ ಟೆಂಡರುಗಳನ್ನು ಆಹ್ವಾನಿಸಲಾಗಿದೆ.

Sl. No.	Tender No. & Date	Name of the Equipment / Works
1	No. KMIO/SME(1)/Tender/CW/237/ 2021-22, dated: 10.06.2021 **(Call-2)**	Construction of Godown at New Residential Area of KMIO.
2	No. KMIO/SME(1)/Tender/Oxygen Pipeline/ 245/2021-22, Dt. 10.06.2021 **(Call-3)**	Design, Supply, Installation, Testing & Commissioning of Medical Gas Pipeline System at KMIO., Bangalore.
3	No. KMIO/SME(1)/Tender/Syringes/253/ 2021-22, dated: 10.06.2021 **(Call-1)**	Disposable Syringes, Surgical Gloves & I.V. Sets.
4	No. KMIO/SME(1)/Tender/CW/254/ 2021-22, dated: 10.06.2021 **(Call-1)**	Waiting Hall Behind Infosys Dharmashala.
5	No. KMIO/SME(1)/Tender/CW/255/ 2021-22, dated: 10.06.2021 **(Call-1)**	Construction of Laundry Building at KMIO.

ಆನ್‌ಲೈನ್‌ನಲ್ಲಿ ಬಿಡ್ ದಾಖಲೆಗಳ ಲಭ್ಯತೆ ದಿನಾಂಕ: **14.06.2021 ರಿಂದ 30.06.2021.** ಬಿಡ್ ದಾಖಲೆಗಳನ್ನು ವೆಬ್‌ಸೈಟ್ **https://eproc.karnataka.gov.in** ನಿಂದ ನೋಡಿ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಇ–ಪೋರ್ಟಲ್ ಶುಲ್ಕ ರೂ. 500/-ನ್ನು ಪಾವತಿಸಿ ಬಿಡ್‌ನ್ನು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಸಲ್ಲಿಸಬಹುದಾಗಿದೆ. ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಬಿಡ್ ಸಲ್ಲಿಕೆಗೆ ಕೊನೆಯ ದಿನಾಂಕ ಮತ್ತು ಸಮಯ: **30.06.2021 ರಂದು ಮಧ್ಯಾಹ್ನ 3:00 ಗಂಟೆಯವರೆಗೆ.** ಟೆಂಡರ್ ಸ್ವೀಕರಿಸುವ ಪ್ರಾಧಿಕಾರವು ಯಾವುದೇ ಕಾರಣ ನೀಡದೆ ಟೆಂಡರನ್ನು ಸ್ವೀಕರಿಸುವ / ತಿರಸ್ಕರಿಸುವ / ರದ್ದುಪಡಿಸುವ ಹಕ್ಕನ್ನು ಕಾಯ್ದಿರಿಸಿಕೊಂಡಿರುತ್ತದೆ.
ಸಹಿ/- ನಿರ್ದೇಶಕರು
DIPR/DDU/526/2021-22
ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಬೆಂಗಳೂರಿನ ಬಸವನಗುಡಿ ನ್ಯಾಷನಲ್ ಕಾಲೇಜು ಮೈದಾನದಲ್ಲಿ ನಡೆದಿದ್ದ ಪುಸ್ತಕ ಪರಿಷೆಯಲ್ಲಿ ಸಂಸದರಾಗಿದ್ದ ಅನಂತಕುಮಾರ್, ಹಿರಿಯ ಸಾಹಿತಿ ಯು.ಆರ್.ಅನಂತಮೂರ್ತಿ, ಅಂದಿನ ಶಿಕ್ಷಣ ಸಚಿವ ಕಿಮ್ಮನೆ ರತ್ನಾಕರ್ ಜತೆಗೆ ಪುಸ್ತಕಗಳನ್ನು ವೀಕ್ಷಿಸಿದ ಸಿದ್ದಲಿಂಗಯ್ಯ (ಚಿತ್ರ: 1) ಶ್ರವಣಬೆಳಗೊಳದಲ್ಲಿ ನಡೆದ 81ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷತೆ ವಹಿಸಿದ್ದ ಸಿದ್ದಲಿಂಗಯ್ಯ ಅವರನ್ನು ಅಂದಿನ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸನ್ಮಾನಿಸಿದ ಕ್ಷಣ (ಚಿತ್ರ: 2) ಬೆಂಗಳೂರಿನಲ್ಲಿ ನಡೆದಿದ್ದ ಸಿದ್ದಲಿಂಗಯ್ಯ ಅವರ ಕುರಿತಾದ 'ದನಿಯಿಲ್ಲದವರ ದನಿ' ಕೃತಿ ಬಿಡುಗಡೆ ಸಮಾರಂಭದಲ್ಲಿ ಸಚಿವ ಗೋವಿಂದ ಎಂ.ಕಾರಜೋಳ, ಮನು ಬಳಿಗಾರ ಹಾಗೂ ಇತರರ ಜತೆಗೆ ಸಿದ್ದಲಿಂಗಯ್ಯ(ಚಿತ್ರ:3)

'ಮೆರವಣಿಗೆ' ಮುಗಿಸಿದ ಸಿದ್ದಲಿಂಗಯ್ಯ

ಮಿಂಚು ಹರಿಸಿದ 'ನನ್ನ ಜನರು'

ಸಿದ್ಧಲಿಂಗಯ್ಯನವರನ್ನು ನಾನು ಮೊದಲು ಕಂಡಿದ್ದು ವಿಶ್ವ ಕನ್ನಡ ಸಮ್ಮೇಳನದಲ್ಲಿ. ಕಲಾಭವನದ ಕಿಕ್ಕಿರಿದ ಸಭೆಯಲ್ಲಿ ಅವರು 'ನನ್ನ ಜನರು' ವಾಚಿಸಿದರು. ಅದು ಮಿಂಚನ್ನು ಹರಿಸಿತು. ನಾನು ಕರಗಿದೆ. ಕಣ್ಣು ಒದ್ದೆಯಾದವು. ನನ್ನ ಭಾವುಕ ಅನುಭವವನ್ನು ನಿರೂಪಿಸಿ ಪತ್ರ ಬರೆದೆ. 'ಸಾವಿರಾರು ನದಿಗಳು' ಸಂಕಲನ ಕಳಿಸಿಕೊಟ್ಟರು. ನನ್ನ ಮೂರುವರೆ ದಶಕದ ಅಧ್ಯಾಪನ ಬಾಳುವೆಯಲ್ಲಿ, ತರಗತಿಗಳಲ್ಲಿ ಅತಿಹೆಚ್ಚು ಚರ್ಚಿಸಿದ ಲೇಖಕರಲ್ಲಿ ಅವರೊಬ್ಬರು.

ದಲಿತ-ಬಂಡಾಯ ಸಾಹಿತ್ಯ ಮತ್ತು ದಲಿತ ಚಳವಳಿಗಳ ಚರಿತ್ರೆಯನ್ನು ಯಾರು ಬರೆದರೂ, ಅದರಲ್ಲಿ ಸಿದ್ಧಲಿಂಗಯ್ಯನವರ ಪಾತ್ರ ಮಹತ್ವದ್ದಾಗಿರಲೇಬೇಕು. ಕನ್ನಡದಲ್ಲಿ ಅಕ್ಷರಸ್ಥಕಾವ್ಯ ಹಾಡುಗಾರರ ಮೂಲಕ ಜನಪದವಾಗಿ ರೂಪಾಂತರಗೊಂಡಿದ್ದು ಬೇಂದ್ರೆ ಬಿಟ್ಟರೆ ಇವರದೇ. ಸರಳ ಪದಗಳಲ್ಲಿ, ಧ್ವನಿಪೂರ್ಣ ರೂಪಕಗಳಲ್ಲಿ, ತೀವ್ರತರ ರಾಜಕೀಯ ಪ್ರಜ್ಞೆಯನ್ನು ಹಾಯಿಸುತ್ತ, ಹಾಡುಕಟ್ಟುವ ಪ್ರತಿಭೆ-ಕುಶಲತೆ ಅವರಿಗೆ ಕೈವಶವಾಗಿತ್ತು. ಇದು`ಹೊಲೆಮಾದಿಗರ ಹಾಡು'ವಿನಲ್ಲಿ ಶುರುವಾಗಿ 'ಹೋರಾಟದ ಹಾಡುಗಳು'ಗಳಲ್ಲಿ ಎತ್ತರಕ್ಕೇರಿತು.

ಕರ್ನಾಟಕದ ಬೇರೆ ಬೇರೆ ಸೈದ್ಧಾಂತಿಕ ಹಿನ್ನೆಲೆಯ ಜನ-ಚಳವಳಿಗಳು ಈ ಹಾಡುಗಳನ್ನು ಹಾಡಿಕೊಂಡೇ ಬೆಳೆದವು. ಆದರೆ ಈಚಿನ ವರ್ಷಗಳಲ್ಲಿ ಸಿದ್ಧಲಿಂಗಯ್ಯನವರ ರಾಜಕೀಯ ಒಲವುಗಳು, ಅವರ ಮೊದಲ ಘಟ್ಟದ ವ್ಯಕ್ತಿತ್ವವನ್ನು ಮುಖಾಮುಖಿಗೊಳಿಸಿ, ಕಸಿವಿಸಿ-ಪ್ರಶ್ನೆ ಹುಟ್ಟಿಸುತ್ತಿದ್ದವು. ಅವರಷ್ಟು ಓದುಗರ-ಚಳವಳಿಗಾರರ ಪ್ರೀತಿಗೂ ತಾಪಕ್ಕೂ ಈಡಾದ ಮತ್ತೊಬ್ಬ ಸಮಕಾಲೀನ ಲೇಖಕರಿಲ್ಲವೇನೊ?

ಸಿದ್ಧಲಿಂಗಯ್ಯನವರು ಈಚೆಗೆ ಸಭೆಗಳಲ್ಲಿ ತುಂಬ ನಗಿಸುತ್ತಿದ್ದರು. ನಗೆಗೆ ಅವರು ಬಳಸುತ್ತಿದ್ದ ಪ್ರಸಂಗಗಳಲ್ಲಿ, ಕಿರಂ ತೀರಿಕೊಂಡಾಗ ನಾನು ಉಲ್ಲೇಖಿಸಿದ್ದ ಘಟನೆಯೂ ಸೇರಿತ್ತು. ಕಿರಂ, ನನ್ನಪ್ಪನ ಜತೆಗೆ 'ಯಾವ ಬೀಡಿ ಆರೋಗ್ಯಕ್ಕೆ ಒಳ್ಳೆಯದು' ಎಂದು ಗಂಭೀರ ಚರ್ಚೆ ಮಾಡಿದ ಪ್ರಸಂಗವದು. ಇದು ಸಿದ್ಧಲಿಂಗಯ್ಯನವರಲ್ಲಿ ರೆಕ್ಕೆಪುಕ್ಕ ಹಚ್ಚಿಕೊಂಡು ಜಾನಪದವಾಗಿ ಪಾಠಾಂತರ ಪಡೆದುಕೊಂಡಿತ್ತು.

ಆಕ್ರೋಶ ದುಗುಡ ಕನಸುಗಳನ್ನು ಕನ್ನಡಿಗರ ಪ್ರಜ್ಞೆ ರೂಪಿಸಿದ ಲೇಖಕ, ಈಗ ನಗಿಸುತ್ತಿದ್ದರು. ಇದು ಅವರ ಅಭಿಜಾತ ಹಾಸ್ಯಪ್ರಜ್ಞೆಯ ಫಲವೂ ಆಗಿತ್ತು. ಸ್ವವ್ಯಕ್ತಿತ್ವದಲ್ಲಾದ ವೈರುಧ್ಯಕರ ಪಲ್ಲಟಗಳನ್ನು ಸಂಭಾಳಿಸಲು ಅವರು ಸೆಣಸಾಡುತ್ತಿದ್ದುದರ ಭಾಗವೂ ಆಗಿತ್ತು ಅನಿಸುತ್ತದೆ.

ಪ್ರೊ. ರಹಮತ್ ತರೀಕೆರೆ
ಹಂಪಿ ಕನ್ನಡ ವಿಶ್ವವಿದ್ಯಾಲಯ

ಕಾವ್ಯದ ದಿಕ್ಕನ್ನೇ ತಿರುಗಿಸಿದ ಕವಿ

ಒಂದನೇ ಪುಟದಿಂದ...

ಕೆಲ ವರ್ಷಗಳ ನಂತರ ಮತ್ತೆ ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಪ್ರೊಫೆಸರ್ ಹುದ್ದೆ ತೆರವಾದಾಗ ಅರ್ಜಿ ನಮೂನೆಯನ್ನು ಕಳುಹಿಸುತ್ತೇನೆ, ಹಾಕಿ ಎಂದು ಹೇಳಿದರು. ಇಲ್ಲ, ನಾನೀಗ ಮೈಸೂರಿಗೆ ಬಂದುದರಿಂದ ಬದಲಾವಣೆ ಬೇಡ ಎನಿಸಿದೆ ಎಂದೆ. ಈ ಎರಡು ಸಂದರ್ಭಗಳು ಅವರ ಸಹೃದಯತೆಯ ಪರಿಚಯ ಮಾಡಿಕೊಡುತ್ತವೆ.

ಅವರಕಾವ್ಯದಪ್ರಾರಂಭವೇಒಂದುಮೈಲುಗಲ್ಲು. ಅವರ ಕಾವ್ಯದ ಪ್ರಭಾವದಿಂದ ತಪ್ಪಿಸಿಕೊಳ್ಳುವುದಕ್ಕೆ ಚಳವಳಿಯಲ್ಲಿ ಯಾರಿಂದಲೂ ಸಾಧ್ಯವಾಗಲಿಲ್ಲ. ಚಳವಳಿಯಿಂದ ಆಚೆಗಿದ್ದ ಹಿರಿಯರೂ ಕೂಡ ಬಿಡಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಚಳವಳಿಯಲ್ಲಿ ಅವರ ಹಾಡುಗಳಿಲ್ಲದೆ ಕಾರ್ಯಕ್ರಮಗಳು ಆರಂಭವಾಗುತ್ತಿರಲಿಲ್ಲ. ಒಂದರ್ಥದಲ್ಲಿ ಅವರ ಕ್ರಾಂತಿಗೀತೆಗಳು ಚಳವಳಿಗಾರರಿಗೆ ಪ್ರಾರ್ಥನಾಗೀತೆಗಳಂತೆ ಬಳಕೆಯಾಗುತ್ತಿದ್ದವು . ಆ ಹಾಡುಗಳನ್ನು ಕೇಳುತ್ತಿದ್ದರೆ ರೋಮಗಳೆಲ್ಲ ಎದ್ದುನಿಲ್ಲುತ್ತಿದ್ದವು. ಚಳವಳಿಯನ್ನು ಕಟ್ಟಿ ಬೆಳೆಸುವುದರಲ್ಲಿ ಇವರ ಕಾವ್ಯ ಪ್ರಧಾನ ಪಾತ್ರ ವಹಿಸಿತ್ತು.

ಸಾಹಿತ್ಯದ ಮೂಲಕ ಜನನಾಡಿಯನ್ನು ಹಿಡಿದು ಅವರು ತುಂಬ ಎತ್ತರಕ್ಕೆ ಬೆಳೆದರು. ಸಮಾಜವನ್ನು ಬೆಳೆಯುವಂತೆ ಮಾಡಿದರು. ಅವರ 'ಹೊಲೆ ಮಾದಿಗರ ಹಾಡು ನಲ್ವತ್ತು, ನಲವತ್ತೈದು ಪುಟದ ಪುಟ್ಟ ಕವನ ಸಂಕಲನ, ಕನ್ನಡ ಕಾವ್ಯದ ದಿಕ್ಕನ್ನೇ ಬದಲಿಸಿತು. 'ಸಾವಿರಾರು ನದಿಗಳು ಸಂಕಲನ ಕ್ಯಾಸೆಟ್ ಆಗಿ ಹೊರಬಂದದ್ದು ಒಂದು ದೊಡ್ಡ ದಾಖಲೆಯೇ. ಅವರ ಆತ್ಮಕತೆ 'ಊರುಕೇರಿ ಭಿನ್ನ ನಡೆಯ ಹೆಜ್ಜೆಗಳನ್ನು ದಾಖಲಿಸುವಂತಹದು. ಮೆರವಣಿಗೆ, ಕಪ್ಪು ಕಾಡಿನ ಹಾಡು ಇತರ ಸಂಕಲನಗಳು. ಅವರು ಬರೆದ ನಾಟಕಗಳು ಜನಮನ್ನಣೆ ಪಡೆಯುವುದರೊಂದಿಗೆ ಬೀದಿನಾಟಕಗಳಿಗೆ ಪ್ರಧಾನವಾಗಿ ಜೀವಂತಿಕೆಯನ್ನೂ ತಂದುಕೊಟ್ಟರು. ಸಮುದಾಯದ ಜಾಥಾಗಳ ಮೂಲಕ ಮನೆಮಾತಾದರು. ದಲಿತರ ವಿಷಯಗಳು ಮಾಧ್ಯಮದಲ್ಲಿ ಪ್ರಕಟವಾಗಲು ಹಿಂದೇಟು ಹಾಕುತ್ತಿದ್ದ ಕಾಲವದು. ಆ ಪರಿಕಲ್ಪನೆಯನ್ನು ಬಡಿದು ನೀರಾಗಿಸುವುದರಲ್ಲಿ ಇವರ ಪಾತ್ರ ಹಿರಿದು.

ಸಿದ್ಧಲಿಂಗಯ್ಯನವರು ಹೋರಾಟದಿಂದ ರಾಜಕೀಯ ಕ್ಷೇತ್ರಕ್ಕೆ ಪ್ರವೇಶ ಮಾಡಿದಾಗ ತುಂಬ ಚರ್ಚೆಗೆ ಒಳಗಾದರು. ಚಳವಳಿ ಮತ್ತು ರಾಜಕೀಯ ಒಂದಕ್ಕೊಂದು ವಿರೋಧಿ ಸ್ವರೂಪದವು ಎನ್ನುವ ಧೋರಣೆ ಇತ್ತು. ಅಂತಹ ಸಂದರ್ಭದಲ್ಲಿ ಅವರು ಪ್ರವೇಶ ಮಾಡಿ ಅದರ ಚಹರೆಯನ್ನು ಬದಲಾಯಿಸಿದರು. 'ಸದನದಲ್ಲಿ ಸಿದ್ಧಲಿಂಗಯ್ಯ' ಒಂದು ಅತ್ಯತ್ತಮವಾದ ದಾಖಲಾರ್ಹ ಪ್ರಾತಿನಿಧಿಕ ಸಮಸ್ಯೆ ಹಾಗೂ ಪರಿಹಾರ ಮಾರ್ಗದ ಚಿಂತನಕೃತಿ. ಸದನದಲ್ಲಿ ಮಾಡಿದ ಭಾಷಣಗಳು, ಚರ್ಚೆ ಎಂದಿಗೂ ಮಾರ್ಗದರ್ಶಿಯಾಗಿ ನಿಲ್ಲುವಂಥವು.

ಸಾಹಿತಿಯಾಗಿ, ರಾಜಕೀಯವಾಗಿ ಅವರ ನಡೆಗಳು ವಿವಾದಕ್ಕೆ ಒಳಗಾಗಿವೆ. ರಾಜ್ಯ ಹಾಗೂ ಕೇಂದ್ರ ಬಿಜೆಪಿ ಸರ್ಕಾರದೊಂದಿಗಿನ ಅವರ ಸಂಬಂಧ ಕರ್ನಾಟಕದಲ್ಲಿ ಟೀಕೆಗೂ ಕಾರಣವಾಗಿತ್ತು. ಮೊದಲ ದಲಿತ ಚಳವಳಿಯ ನಾಯಕರು ಅವರಾಗಿರುವುದರಿಂದ ಅವರ ಹೆಜ್ಜೆಗಳನ್ನು ಎಲ್ಲರೂ ಗಮನಿಸುವವರೇ ಆಗಿದ್ದರು. ಇಂಥ ಸಂದರ್ಭದಲ್ಲಿ ಅವರು ತೆಗೆದುಕೊಂಡ ನಿರ್ಣಯ, ಕೊಟ್ಟ ಪ್ರತಿಕ್ರಿಯೆಗಳು ಹಲವಾರು ಚಾರಿತ್ರಿಕವಾಗಿವೆ. ಮತ್ತು ಮುಂದಿನವರು ಪರಿಶೀಲಿಸಿ ಹೆಜ್ಜೆ ಹಾಕಲು ಕೈಪಿಡಿಯಂತೆ ನಿಂತುಕೊಳ್ಳುತ್ತವೆ.

ಸಿದ್ಧಲಿಂಗಯ್ಯನವರ ಕಾವ್ಯ ಎಷ್ಟು ಗಂಭೀರವೋ ಅವರ ಭಾಷಣಗಳು ಅಷ್ಟೇ ನವಿರು ಹಾಸ್ಯದಿಂದ ಕೂಡಿರುತ್ತಿದ್ದವು. ಎರಡು ಭಿನ್ನ ವ್ಯಕ್ತಿತ್ವದ ನೆಲೆಗಳು ಅವು. ಬಂಡಾಯವೆಂದರೆ ಗಾಂಭೀರ್ಯದ ಮುಸುಕಿನಲ್ಲಿಯೇ ಚಲಿಸುವಂತಹದು ಎನ್ನುವ ಪರಿಕಲ್ಪನೆಯನ್ನೇ ಮುರಿದುಹಾಕಿದವರು. ಅದು ಅವರದ್ದೇ ಶೈಲಿ. ಇದಕ್ಕೆ ಮುಖ್ಯ ಕಾರಣ ಮತ್ತು ಪ್ರೇರಣೆ ಅವರ ಜಾನಪದ ಅಧ್ಯಯನದ ಮಾರ್ಗವೆಂದೇ ನಾನು ಭಾವಿಸಿದ್ದೇನೆ.

ಕೇಂದ್ರ ಸಾಹಿತ್ಯ ಅಕಾಡೆಮಿಯ ಸಭೆಯೊಂದರ ಸಂದರ್ಭದಲ್ಲಿ ಎಸ್.ಜಿ. ಸಿದ್ಧರಾಮಯ್ಯ, ಪದ್ಮಪ್ರಸಾದ್, ನಾನು, ಸಿದ್ಧಲಿಂಗಯ್ಯನವರು ಒಟ್ಟಿಗೆ ಸೇರಿದ್ದೆವು. ನನ್ನ ಹೊಸ ಬರಹದ ಬಗ್ಗೆ ಕೇಳಿದ್ದರು. ಹಾಗೂ ನನ್ನ ಹೊಸ ಪುಸ್ತಕ ಕಳುಹಿಸದೇ ಇದ್ದ ಬಗ್ಗೆ ಆಕ್ಷೇಪಿಸಿ, ಕಳುಹಿಸಲು ಹೇಳಿದ್ದರು. ಲಾಕ್‌ಡೌನ್ ಕಾರಣದಿಂದ ಕಳುಹಿಸಲಾಗಲೇ ಇಲ್ಲ. ಅವರು ಪುಸ್ತಕ ಪ್ರೇಮಿ. ಅವರ ಮನೆಯೇ ಒಂದು ಗ್ರಂಥಾಲಯವಾಗಿತ್ತು. ನನ್ನ ಗ್ರಂಥಾಲಯವನ್ನೂ ಅಷ್ಟೇ ಮೆಚ್ಚಿಕೊಂಡಿದ್ದರು. ಕೊರೊನಾದಿಂದ ಬಹಳಷ್ಟು ಜನ ವಾಸಿಯಾಗಿ ಬಂದರು. ಇವರ ಆರೋಗ್ಯವೂ ಸುಧಾರಣೆಯಲ್ಲಿದೆ ಎನ್ನುವುದನ್ನು ಕೇಳಿದ್ದೆ. ಆದರೆ ಅವರಿಲ್ಲದ ಸುದ್ದಿ ಹೀಗೆ ಬಂದು ಅಪ್ಪಳಿಸುತ್ತದೆ ಎಂದು ಭಾವಿಸಿರಲಿಲ್ಲ.

ಒಂದನೇ ಪುಟದಿಂದ...

ಅವರ 'ಹೊಲೆ ಮಾದಿಗರ ಹಾಡು' ಕವನ ಸಂಕಲನವು ಭಾರತೀಯ ಸಾಹಿತ್ಯದಲ್ಲಿಯೇ ವಿಶಿಷ್ಟವಾದ ಸ್ಥಾನಗಳಿಸಿರುವ ಶ್ರೇಷ್ಠ ಕೃತಿಯಾಗಿದೆ. ವಿಧಾನಪರಿಷತ್ ಸದಸ್ಯರಾಗಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರ ಮತ್ತು ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದರು.

ಅವರ ಆತ್ಮಕಥೆ 'ಊರು ಕೇರಿ'ಯು ಎರಡು ಭಾಗದಲ್ಲಿ ಪ್ರಕಟಗೊಂಡಿದೆ. ಇಂಗ್ಲಿಷ್ ಹಾಗೂ ತಮಿಳು ಭಾಷೆಗೆ ಅನುವಾದಗೊಂಡಿದ್ದು, ಇಂಗ್ಲಿಷ್ ಅನುವಾದವನ್ನು ಕೇಂದ್ರ ಸಾಹಿತ್ಯ ಅಕಾಡೆಮಿಯು ಪ್ರಕಟಿಸಿದೆ. ಅವರ ಹಲವಾರು ಕವಿತೆಗಳು ಇಂಗ್ಲಿಷ್, ಹಿಂದಿ, ತಮಿಳು, ಬಂಗಾಳಿ, ಮಲಯಾಳಂ ಮತ್ತು ತೆಲುಗು ಭಾಷೆಗಳಲ್ಲಿ ಅನುವಾದಗೊಂಡಿವೆ.

ಅವರಿಗೆ ಕಳೆದ ತಿಂಗಳು ಕೆಮ್ಮು ಮತ್ತು ಉಸಿರಾಟದ ಸಮಸ್ಯೆ ಕಾಣಿಸಿಕೊಂಡಿತ್ತು. ಮೇ 2 ರಂದು ಕೊರೊನಾ ಸೋಂಕು ತಗುಲಿರುವುದು ದೃಢಪಟ್ಟಿತ್ತು. ಹಳೆ ವಿಮಾನ ನಿಲ್ದಾಣ ರಸ್ತೆಯ ಮಣಿಪಾಲ್ ಆಸ್ಪತ್ರೆಯ ತೀವ್ರ ನಿಗಾ ಘಟಕದಲ್ಲಿ (ಐಸಿಯು) ಚಿಕಿತ್ಸೆ ಒದಗಿಸಲಾಗುತ್ತಿತ್ತು. ಬಹುಅಂಗಾಂಗ ವೈಫಲ್ಯ ಸಮಸ್ಯೆಯನ್ನು ಎದುರಿಸುತ್ತಿದ್ದರು. ಒಂದು ತಿಂಗಳಿಗೂ ಅಧಿಕ ಕಾಲ ಆಸ್ಪತ್ರೆಯಲ್ಲಿದ್ದ ಅವರು, ಚಿಕಿತ್ಸೆಗೆ ಸ್ಪಂದಿಸದೇ ಶುಕ್ರವಾರ ಮಧ್ಯಾಹ್ನ 3.45ಕ್ಕೆ ಮೃತಪಟ್ಟಿದ್ದಾರೆ.

ಅವರಿಗೆ ಪತ್ನಿ, ಓರ್ವ ಪುತ್ರಿ ಹಾಗೂ ಪುತ್ರ ಇದ್ದಾರೆ. ಕೆಲ ದಿನಗಳ ಹಿಂದೆ ಅವರ ಪತ್ನಿಗೂ ಸೋಂಕು ತಗುಲಿತ್ತು. ಅವರು ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ಚೇತರಿಸಿಕೊಂಡಿದ್ದರು.

1954ರ ಫೆಬ್ರವರಿ 3 ರಂದು ರಾಮನಗರ ಜಿಲ್ಲೆಯ ಮಾಗಡಿ ತಾಲ್ಲೂಕಿನ ಮಂಚನಬೆಲೆಯಲ್ಲಿ ಜನಿಸಿದ ಅವರು, 1976ರಲ್ಲಿ ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಸ್ವರ್ಣಪದಕದೊಂದಿಗೆ ಕನ್ನಡ ಎಂ.ಎ. ಪದವಿ ಪಡೆದಿದ್ದರು. ಪ್ರೊ.ಜಿ.ಎಸ್. ಶಿವರುದ್ರಪ್ಪ ಅವರ ಮಾರ್ಗದರ್ಶನದಲ್ಲಿ 'ಗ್ರಾಮದೇವತೆಗಳು' ಎಂಬ ಪ್ರೌಢ ಪ್ರಬಂಧದ ಮೇಲೆ 1989ರಲ್ಲಿ ಪಿಎಚ್.ಡಿ. ಪದವಿಯನ್ನು ಪಡೆದಿದ್ದರು. ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿ, ಕನ್ನಡ ಅಧ್ಯಯನ ಕೇಂದ್ರದ ನಿರ್ದೇಶಕರಾಗಿಯೂ ಕಾರ್ಯನಿರ್ವಹಿಸಿದ್ದರು.

'ಸಾವಿರಾರು ನದಿಗಳು', 'ಕಪ್ಪುಕಾಡಿನ ಹಾಡು', 'ಮೆರವಣಿಗೆ', 'ನನ್ನ ಜನಗಳು' ಮತ್ತು ಇತರ ಕವಿತೆಗಳು', 'ಆಯ್ದ ಕವನಗಳು', 'ಅಲ್ಲೆಕುಂತವರು' ಮುಂತಾದ ಕವನ ಸಂಕಲನಗಳು ಪ್ರಕಟಗೊಂಡಿವೆ.

'ಪಂಚಮ', 'ನೆಲಸಮ', 'ಏಕಲವ್ಯ' ಪ್ರಮುಖ ನಾಟಕಗಳಾಗಿವೆ. 'ರಸಘಳಿಗೆಗಳು', 'ಎಡಬಲ', 'ಹಕ್ಕಿನೋಟ', 'ಜನಸಂಸ್ಕೃತಿ', 'ಉರಿಕಂಡಾಯ' ಮುಂತಾದ ಲೇಖನ ಸಂಗ್ರಹಗಳು, 'ಸದನದಲ್ಲಿ ಸಿದ್ದಲಿಂಗಯ್ಯ ಭಾಗ 1 ಮತ್ತು 2' ಸೇರಿದಂತೆ ವಿವಿಧ ಕೃತಿಗಳು ಪ್ರಕಟಗೊಂಡಿವೆ. ಪುಟ್ಟಣ್ಣ ಕಣಗಾಲರು ನಿರ್ದೇಶಿಸಿದ 'ಧರಣಿಮಂಡಲ ಮಧ್ಯದೊಳಗೆ' ಚಿತ್ರಕ್ಕೆ ಬರೆದ ಗೀತೆಗೆ ರಾಜ್ಯ-ಪ್ರಶಸ್ತಿ ಸಂದಿದೆ.

'ನವ್ಯ'ಕ್ಕೆ ಬಹುರ್ಮುಖೀ ಕವಿತೆಗಳ ಉತ್ತರ ಕೊಟ್ಟ ಕವಿ

1973ರಲ್ಲಿ ಮೈಸೂರಿನಲ್ಲಿ ನಡೆದ ಜಾತಿ ವಿನಾಶ ಸಮ್ಮೇಳನ, 1974ರಲ್ಲಿ ಮತ್ತೆ ಮೈಸೂರಲ್ಲಿಯೇ ನಡೆದ ಬರಹಗಾರ ಮತ್ತು ಕಲಾವಿದರ ಒಕ್ಕೂಟದ ಸಮ್ಮೇಳನದ ಪ್ರಭಾವದಿಂದ ಸ್ಫೂರ್ತಿ ಪಡೆದ ಸಿದ್ದಲಿಂಗಯ್ಯನವರು 1975ರಲ್ಲಿ 'ಹೊಲೆಮಾದಿಗರ ಹಾಡು' ಪ್ರಕಟಿಸಿದಾಗ ಅವರಿಗೆ ಕೇವಲ 21 ವರ್ಷ. ಸಂಕಲನದ ಆರಂಭದಲ್ಲಿ 'ಇವುಗಳನ್ನು ಗಟ್ಟಿಯಾಗಿ ಹಾಡಿಕೊಳ್ಳಿ' ಎಂದು ಅವರು ಬರೆದುದನ್ನು ನಾವು ಹಲವರು ಅಕ್ಷರಶಃ ಪಾಲಿಸಿ ಕಾಲೇಜಿನ ವರಾಂಡಗಳಲ್ಲಿ ಹಾಡಿದ್ದು ಮಾತ್ರವಲ್ಲ, ಸಿಕ್ಕ ಸಿಕ್ಕ ಗೋಡೆಗಳಲ್ಲಿ ಅದರಲ್ಲಿನ ಕೆಲವು ಸಾಲುಗಳನ್ನು ಕದ್ದು ಕದ್ದು ಬರೆದು ಬಿಟ್ಟೆವು.

ರಾಜ್ಯದಾದ್ಯಂತ ನಡೆದ ಈ ಇಡೀ ಪ್ರಕ್ರಿಯೆಯೇ ಕನ್ನಡ ನವ್ಯ ಸಾಹಿತ್ಯಕ್ಕೆ ಕೊನೆ ಹಾಡಿಬಿಟ್ಟಿತು. ನವ್ಯದ ಅಂತರ್ಮುಖೀ ನೆಲೆಗಳಿಗೆ ಸಿದ್ದಲಿಂಗಯ್ಯನವರು ತಮ್ಮ ಬಹಿರ್ಮುಖೀ ಕವಿತೆಗಳ ಮೂಲಕ ಸಮರ್ಥವಾಗಿ ಉತ್ತರ ನೀಡಿದ್ದರು. ಅಲ್ಲಿಂದ ಮುಂದೆ ಸಾಹಿತ್ಯದ ಒಲವಿರುವ ಜನಗಳಿಂದ 'ಕವಿಗಳು' ಎಂದೇ ಕರೆಯಿಸಿಕೊಂಡು ಕನ್ನಡಿಗರ ಕಣ್ಮಣಿಯಾಗಿ ಬೆಳೆದರು. 1979 ರಲ್ಲಿ ಪ್ರಕಟವಾದ ಅವರ 'ಸಾವಿರಾರು ನದಿಗಳು' ಕವನ ಸಂಕಲನವು ಅವರ ಬಹಿರ್ಮುಖತೆಯನ್ನು ಅತ್ಯುತ್ತಮ ಸಾಹಿತ್ಯವನ್ನಾಗಿ ಮಾರ್ಪಡಿಸಿದ್ದೇ ಆಗಿತ್ತು. ಅವರು ಬರೆದ -' ನಿನ್ನೆ ದಿನ ನನ್ನ ಜನ ಬೆಟ್ಟದಂತೆ ಬಂದರ , ಕಪ್ಪುಮುಖ ಬೆಳ್ಳಿಗಡ್ಡ ಉರಿಯುತಿರುವ ಕಣ್ಣುಗಳು, ಹಗಲು ರಾತ್ರಿಗಳನು ಸೀಳಿ ನಿದ್ದೆಯನ್ನು ಒದ್ದರು' ಎಂಬ ಸಾಲುಗಳು ವಿಶ್ವಸಾಹಿತ್ಯಕ್ಕೆ ಅವರು ನೀಡಿದ ಅತ್ಯುತ್ತಮ ಕೊಡುಗೆ. ಈ ಕವಿತೆಯ ಇಂಗ್ಲಿಷ್ ಅನುವಾದವು ಜೆಎನ್‌ಯುವಿನ ಕ್ಯಾಂಟೀನ್ ಒಂದರಲ್ಲಿ ರಾರಾಜಿಸುತ್ತಿದ್ದು, ಅದನ್ನು ಸಾವಿರಾರು ವಿದ್ಯಾರ್ಥಿಗಳು ಓದುತ್ತಲೇ ಇದ್ದಾರೆ. ಕೆಲವು ವರ್ಷಗಳ ಹಿಂದೆ ಅದನ್ನು ನೋಡಿದ್ದ ಅವರು ಕಣ್ಣು ಮಿಟುಕಿಸಿ ನಕ್ಕು ಫೋಟೋ ತೆಗೆಸಿಕೊಂಡಿದ್ದರು.

ಕೊನೆ ಕೊನೆಗೆ ವ್ಯವಸ್ಥೆಯೊಂದಿಗೆ ರಾಜಿಮಾಡಿಕೊಂಡ ಅವರು ಹಲವರ ವ್ಯಂಗ್ಯಕ್ಕೂ ಗುರಿಯಾಗಿದ್ದರು. ಇದು ಅವರಿಗಿರುವ ಚಾರಿತ್ರಿಕ ಮಹತ್ವವನ್ನು ಕಡಿಮೆ ಮಾಡಲಾರದು.

ಪ್ರೊ.ಪುರುಷೋತ್ತಮ ಬಿಳಿಮಲೆ
ಜಾನಪದ ವಿದ್ವಾಂಸ ಹಾಗೂ ವಿಶ್ರಾಂತ ಪ್ರಾಧ್ಯಾಪಕ, ಜೆಎನ್‌ಯು, ದೆಹಲಿ

ಇಂದು ಸಾರ್ವಜನಿಕ ದರ್ಶನಕ್ಕೆ ಅವಕಾಶ

ಸಿದ್ದಲಿಂಗಯ್ಯ ಅವರಿಗೆ ನಡೆಸಲಾದ ಮರಣೋತ್ತರ ಕೋವಿಡ್ ಪರೀಕ್ಷೆಯಲ್ಲಿ ಕೊರೊನಾ ಸೋಂಕಿತರಾಗಿಲ್ಲ (ನೆಗೆಟಿವ್) ಎಂಬ ವರದಿ ಬಂದಿದೆ. ಹೀಗಾಗಿ, ಶನಿವಾರ ಬೆಳಿಗ್ಗೆ 9 ಗಂಟೆಯಿಂದ 10.30ರವರೆಗೆ ಬೆಂಗಳೂರಿನ ಮಲ್ಲತ್ತಹಳ್ಳಿಯ ಕಲಾಗ್ರಾಮದಲ್ಲಿ ಸಾರ್ವಜನಿಕ ದರ್ಶನಕ್ಕೆ ಅವಕಾಶ ಕಲ್ಪಿಸಲಾಗಿದೆ. ಅಲ್ಲಿಯೇ ಮಧ್ಯಾಹ್ನ 12.30ರೊಳಗೆ ಸಕಲ ಸರ್ಕಾರಿ ಗೌರವಗಳೊಂದಿಗೆ ಅಂತ್ಯಸಂಸ್ಕಾರ ನಡೆಸಲಾಗುತ್ತದೆ. ಈ ಬಗ್ಗೆ ಸರ್ಕಾರ ಅಧಿಸೂಚನೆ ಹೊರಡಿಸಿದೆ.

ಶ್ರವಣಬೆಳಗೊಳದಲ್ಲಿ ನಡೆದ 81ನೇ ಅಖಿಲಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ಸೇರಿದಂತೆ ಮುಂತಾದ ಗೌರವಗಳು ಅವರಿಗೆ ಸಂದಿವೆ. ನೃಪತುಂಗ ಪ್ರಶಸ್ತಿ, ಪಂಪ ಪ್ರಶಸ್ತಿ ರಾಜ್ಯೋತ್ಸವ ಪ್ರಶಸ್ತಿ, ಡಾ. ಅಂಬೇಡ್ಕರ್ ಶತಮಾನೋತ್ಸವ ವಿಶೇಷ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡಮಿ ಪ್ರಶಸ್ತಿ, ಜಾನಪದ ತಜ್ಞ ಪ್ರಶಸ್ತಿ, ಡಾ. ಅಂಬೇಡ್ಕರ್ ಪ್ರಶಸ್ತಿ, ಸತ್ಯಕಾಮ ಪ್ರತಿಷ್ಠಾನ ಪ್ರಶಸ್ತಿ, ಬಾಬು ಜಗಜೀವನ ರಾಮ್ ಪ್ರಶಸ್ತಿ, ಹಂಪಿ ವಿಶ್ವವಿದ್ಯಾಲಯದ ನಾಡೋಜ ಪ್ರಶಸ್ತಿ ಸೇರಿದಂತೆ ಹಲವು ಪ್ರಶಸ್ತಿ ಗೌರವಗಳು ಅವರಿಗೆ ಸಂದಿವೆ.

ಸಮುದಾಯವನ್ನೇ ಕಾವ್ಯವಾಗಿಸಿದ ಕವಿ...

ಶ್ರೀರಾಮಪುರದ ಸ್ಮಶಾನದಲ್ಲಿ, ಗೋರಿ ಕಲ್ಲುಗಳ ಮೇಲೆ ಕುಳಿತು ಬರೆದ ಆ ದಲಿತ ಯುವಕನ ಪದ್ಯ ಮತ್ತು ಹಾಡುಗಳು ಕರ್ನಾಟಕದ ಬಹುದೊಡ್ಡ ಆಂದೋಲನವೊಂದರ ಆತ್ಮಗೀತೆಗಳಾದವು. ಆ ಕಾವ್ಯದ ರೂಪಕಗಳು, ಪ್ರತಿಮೆಗಳು, ಹಾಡುಗಳ ಧಾಟಿಯ ಹಿಂದೆ ಇರುವಂತಹ ಕೆಚ್ಚು, ವ್ಯಂಗ್ಯ, ಆಕ್ರೋಶಗಳೆಲ್ಲಾ ಹೇಗೆ ಸಶರೀರವಾಗಿ ಮೈತಳೆದವೆಂದರೆ ಕನ್ನಡದಲ್ಲಿ ದಲಿತ ಕಾವ್ಯ ತಾನು ಸ್ವಯಂಭೂ ಅನ್ನುವ ಹಾಗೆಯೇ ಹುಟ್ಟಿಕೊಂಡುಬಿಟ್ಟಿತು.

ಕರ್ನಾಟಕದ ಚರಿತ್ರೆಯ ವಿಶಿಷ್ಟವಾದ ಘಟ್ಟವೆಂದರೆ ದಲಿತ ಸಂಘರ್ಷ ಸಮಿತಿ ಅಸ್ತಿತ್ವಕ್ಕೆ ಬಂದು ಬೆಳೆದ ರೀತಿ. ಪ್ರಾಯಶಃ ತುಂಬಾ ವಿರಳವಾಗಿ ಕಾಣುವ ಹಾಗೆ ಚಳವಳಿಯೊಂದು ಕಾವ್ಯ, ಕಥೆಗಳಲ್ಲೇ ಹುಟ್ಟಿದ್ದು ಎಂದರೆ ಅದು ದಲಿತ ಸಂಘರ್ಷ ಸಮಿತಿ. ಸಿದ್ದಲಿಂಗಯ್ಯನವರು ಹಾಡು, ರೂಪಕಗಳೇ ಇಡೀ ಜಗತ್ತನ್ನು ನೋಡುವ ದೃಷ್ಟಿಯ ಭಾಗವಾಗಿ ದಲಿತ ಸಮುದಾಯಗಳಿಗೆ ದತ್ತವಾಗಿ ಬಂದಿದ್ದನ್ನು ಕಾವ್ಯವಾಗಿ ಪರಿವರ್ತಿಸಿದರು. ಹೀಗಾಗಿ ಅವರು ಆಧುನಿಕ ಸಂದರ್ಭದ ಸಂಘರ್ಷದ ಕಾಲದಲ್ಲಿ ಕಾವ್ಯ ಬರೆದರೂ ಅದರ ಹಿಂದೆ ಸಾವಿರಾರು ವರ್ಷಗಳ ಸಮುದಾಯದ ಅನುಭವಗಳ ಜೊತೆಗೆ ಆ ಸಮುದಾಯಗಳು ಮಾತಿನಲ್ಲಿ, ಹಾಡಿನಲ್ಲಿ ಇಟ್ಟುಕೊಂಡಿದ್ದ ಅಪಾರ ಶ್ರದ್ಧೆಯ ದ್ಯೋತಕವೂ ಆಗಿದ್ದವು. ಹೀಗಾಗಿ ದಿಟ್ಟವಾದಂತಹ ಒಂದು ದೊಡ್ಡ ಚಳವಳಿ ಕಾವ್ಯದ ಮಗ್ಗಲನ್ನೂ ಪಡೆಯಲು ಸಿದ್ದಲಿಂಗಯ್ಯ ಕಾರಣ.

ಸಿದ್ದಲಿಂಗಯ್ಯನವರು ಪ್ರಥಮತಃ ಕವಿ. ಆದರೆ, ಅವರು ದಲಿತ ವ್ಯಕ್ತಿ, ದಲಿತ ಹೋರಾಟಗಾರರಾಗಿದ್ದರು. ಹೀಗಾಗಿ ದಲಿತ ಕಾವ್ಯ ಬರೆದರು. ಅವರ ಕಾವ್ಯದ ಪ್ರತಿಭಟನೆಯ ಅಂಶಗಳು ಅನಿವಾರ್ಯವಾಗಿ ಆ ಹೋರಾಟದ ಕಾಲದಲ್ಲಿ ಮುನ್ನೆಲೆಗೆ ಬಂದವು. ಆ ಕಾವ್ಯ ಶ್ರೀಮಂತವೂ ಆಗಿತ್ತು. ಅದು ಹಲವು ದನಿಗಳು, ಲಯಗಳನ್ನು ತನ್ನ ನೇಯ್ಗೆಯಲ್ಲಿ ಹಿಡಿದಿಟ್ಟುಕೊಂಡಿತ್ತು. ಇಂತಹದ್ದನ್ನು ಸಿದ್ದಲಿಂಗಯ್ಯ ಸಾಧಿಸಿದ್ದು ಸಾಂಸ್ಕೃತಿಕವಾಗಿ ಬಹುಮುಖ್ಯ ಘಟನೆ.

ವಿದ್ಯಾರ್ಥಿ ದಿಶೆಯಿಂದಲೇ ಅನೇಕ ಚಳವಳಿಗಳಲ್ಲಿ ಭಾಗವಹಿಸಿ ಆ ಮೂಲಕ ತಮ್ಮ ಅನುಭವಲೋಕವನ್ನು ವಿಸ್ತರಿಸಿಕೊಂಡಿದ್ದ ಸಿದ್ದಲಿಂಗಯ್ಯನವರು ಕನ್ನಡ ಸಂಸ್ಕೃತಿಗೆ ಕೊನೆಯವರೆಗೂ ಮುಖ್ಯವಾಗಿ ಉಳಿಯುವಂತಹ ಬರಹಗಾರರು.

ಪ್ರೊ. ರಾಜೇಂದ್ರ ಚೆನ್ನಿ ವಿಮರ್ಶಕ ಹಾಗೂ ಚಿಂತಕ

ಸಿದ್ದಲಿಂಗಯ್ಯ ಕುರಿತ ಅಭಿಪ್ರಾಯ

'ಕನ್ನಡದ ಅಂಬೇಡ್ಕರ್'

'ಸಿದ್ದಲಿಂಗಯ್ಯ ಅವರ ಕಾವ್ಯವು ವೈಚಾರಿಕ ಔಷಧದ ಮೂಲಕ ಸಾಮಾಜಿಕ ರೋಗಕ್ಕೆ ಮದ್ದು ಕೊಡುವಂತಹದ್ದಾಗಿದೆ. ಸಮಾಜ ನಿಂತ ನೀರಾಗಿದ್ದರಿಂದಲೇ ಅವರ ಕಾವ್ಯದಲ್ಲಿ ಅಷ್ಟೊಂದು ಆಕ್ರೋಶವಿದೆ. 'ಕನ್ನಡದ ಅಂಬೇಡ್ಕರ್' ಎಂದು ಮುಕ್ತ ಮನಸ್ಸಿನಿಂದ ಕರೆಯಬಹುದಾದ ಈ ಕವಿಯು, ಹೃದಯವಂತಿಕೆ, ಅಭಿಮಾನ, ಚಾಣಾಕ್ಷತನ, ಸೃಜನಶೀಲಗುಣ ಹಾಗೂ ನಿರ್ಭಯ ವ್ಯಕ್ತಿತ್ವಗಳಿಂದ ಕಾವ್ಯದಲ್ಲಿ ಅಖಂಡವಾಗಿಯೇ ಪ್ರಕಟವಾಗಿದ್ದಾರೆ. ಭಾರತೀಯ ಸಮುದಾಯದಲ್ಲಿ ಸಮತೆಯ ಹೂವು ಅರಳಲಿಲ್ಲವೇಕೆ ಎಂಬ ಜಿಜ್ಞಾಸೆ, ಬಡವರ ಬಾಳಿಗೆ ಬೆಳಕು ತರುವ ದಾರಿಯನ್ನು ಅನ್ವೇಷಿಸುವ ಹೆಬ್ಬಯಕೆ, ಜೋಪಡಿಯಲ್ಲಿ ಉರಿಯುವ ಒಲೆಯು ಮೊರೆದಂತೆ ಸದಾ ತಪ್ತವಾಗಿರುವ ಛಲ ಅವರಲ್ಲಿತ್ತು.

ಡಾ. ದೊಡ್ಡರಂಗೇಗೌಡ, ಕವಿ

'ನೋವಿನ ಅಭಿವ್ಯಕ್ತಿಗೆ ಹೊಸ ಛಾಪು ಕೊಟ್ಟವರು'

ಕೋವಿಡ್ ಮಹಾಮಾರಿಗೆ ಸಿದ್ದಲಿಂಗಯ್ಯ ಅವರು ಬಲಿಯಾದುದು ಮನವನ್ನು ಕಲಕುತ್ತಿದೆ. ಎಲ್ಲ ವಿಧದ ನೋವನ್ನುಂಡ ಸಮುದಾಯದ ಗಟ್ಟಿ ದನಿಯಾಗಿ, ಹೋರಾಟದ ಕಹಳೆಯೂದಿದ ಅವರು ಕನ್ನಡ ಬರಹ ಮತ್ತು ಮಾತಿನಲ್ಲಿ ನೋವಿನ ಅಭಿವ್ಯಕ್ತಿಯ ಹೊಸ ಛಾಪನ್ನೇ ಮೂಡಿಸಿದರು. ಕವಿ, ಸಾಹಿತಿ, ಅಧ್ಯಾಪಕ, ಶಾಸಕ, ಆಡಳಿತಗಾರ ಮುಂತಾಗಿ ಹಲವು ಆಯಾಮಗಳಲ್ಲಿ ಪರಿಚಿತರಾದ ಅವರು ಎಲ್ಲವನ್ನೂ ಮೀರಿ ಶ್ರೇಷ್ಠ ಮಾನವರಾಗಿದ್ದರು. ಸಂವೇದನೆಯಿದ್ದ ಒಬ್ಬ ಸಾಮಾಜಿಕ-ಸಾಹಿತ್ಯಕ ನೇತಾರರಾಗಿದದ ಅವರು ವೈಚಾರಿಕ ಮತಭೇದವಿದ್ದೂ ಸಹಚಿಂತನಕ್ಕೆ ಹಾಗೂ ಸಹಮತಿ ಇರುವಲ್ಲಿ ಅದನ್ನು ವ್ಯಕ್ತಪಡಿಸಲು ಹಿಂಜರಿಯುತ್ತಿರಲಿಲ್ಲ

ದತ್ತಾತ್ರೇಯ ಹೊಸಬಾಳೆ, ಸರಕಾರ್ಯವಾಹ, ರಾ.ಸ್ವ. ಸಂಘ

'ಹಾಡುಗಳಲ್ಲಿ ಎಂದಿಗೂ ಅಮರ'

ಪ್ರಖರ ಚಿಂತನೆ ಮತ್ತು ವಿಡಂಬನಾ ಪ್ರಜ್ಞೆಯನ್ನು ಒಂದಾಗಿಸಿಕೊಂಡಿದ್ದ ವಿಶಿಷ್ಟ ವ್ಯಕ್ತಿತ್ವದ ಕವಿ ಸಿದ್ದಲಿಂಗಯ್ಯ. ವಿದ್ಯಾರ್ಥಿ ದೆಸೆಯಲ್ಲಿಯೇ ಬೂಸಾ ಹೆಸರಿನ ಚಳವಳಿಗೆ ಧುಮುಕಿದ ಅವರು ತೀವ್ರವಾದ ಪ್ರಗತಿಪರ ಕ್ರಿಯೆ ಮತ್ತು ಚಿಂತನೆಗಳಿಂದ ಪ್ರಸಿದ್ಧರು. ಅವರ ಮೊದಲ ಕವನ ಸಂಕಲನ 'ಹೊಲೆ ಮಾದಿಗರ ಹಾಡು' ಕನ್ನಡ ಕಾವ್ಯಲೋಕದಲ್ಲಿ ಸಂಚಲನ ಉಂಟು ಮಾಡಿತ್ತು. ಅವರ ಹೋರಾಟದ ಹಾಡುಗಳು ಚಳವಳಿಯ ಭಾಗವಾಗಿ ಬೆಳೆದವು. ಇಂತಹ ಹಾಡುಗಳಲ್ಲಿ ಅವರು ಎಂದಿಗೂ ಅಮರ. ಮೊದಲ ಬಂಡಾಯ ಸಾಹಿತ್ಯ ಸಮ್ಮೇಳನ ಸಂಘಟಿಸುವುದರಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಸಿದ್ದಲಿಂಗಯ್ಯ, ಸಂಘಟನೆ ಆರಂಭವಾದಾಗ ಮೊದಲ ಮೂವರು ರಾಜ್ಯ ಸಂಚಾಲಕರಲ್ಲಿ ಒಬ್ಬರಾಗಿ ದುಡಿದರು. ಸಂಘಟನೆಗೆ ಒಂದು ಶಕ್ತಿಯಾಗಿದ್ದರು.

ಪ್ರೊ. ಬರಗೂರು ರಾಮಚಂದ್ರಪ್ಪ, ಹಿರಿಯ ಸಾಹಿತಿ

'ದೇವರು ಕ್ರೂರಿ, ಅಮ್ಮನನ್ನು ದೂರ ಮಾಡಿಬಿಟ್ಟ'

ಒಂದನೇ ಪುಟದಿಂದ...

'ವಿಪರೀತ ಬಳಲಿದಂತಿದ್ದ ಅಮ್ಮ ಮಾತನಾಡುವುದಕ್ಕೂ ಕಷ್ಟಪಡುತ್ತಿದ್ದಳು. ಅಮ್ಮನನ್ನು ಆ ಪರಿಸ್ಥಿತಿಯಲ್ಲಿ ನಾವು ಹಿಂದೆಂದೂ ನೋಡಿರಲೇ ಇಲ್ಲ' ಎನ್ನುತ್ತಾ ವೈಷ್ಣವಿ ಮೌನಕ್ಕೆ ಜಾರಿದಳು.

'ಅದೇ ದಿನ ಸಂಜೆ 7 ಗಂಟೆಗೆ ಅಮ್ಮ ಪ್ರಾಣಬಿಟ್ಟಳು. ಕೋವಿಡ್ ದೃಢಪಟ್ಟಿದ್ದರಿಂದ ರಾತ್ರೋ ರಾತ್ರಿ ಶವ ಸಂಸ್ಕಾರ ನೆರವೇರಿಸಲಾಯಿತು. ಅಮ್ಮ ನಮ್ಮನ್ನು ಅಕ್ಕರೆಯಿಂದ ನೋಡಿಕೊಳ್ಳುತ್ತಿದ್ದಳು. ಚೆನ್ನಾಗಿ ಓದಿ ದೊಡ್ಡ ಕೆಲಸಕ್ಕೆ ಸೇರಬೇಕು ಎಂದು ಆಗಾಗ ಹೇಳುತ್ತಿದ್ದಳು. ಶಿಕ್ಷಕಿಯಾಗಿ ಆಕೆಯ ಕನಸು ನನಸಾಗಿಸಬೇಕು ಎಂದುಕೊಂಡಿದ್ದೇನೆ. ಆ ಹಾದಿಯೇ ಈಗ ದುರ್ಗಮವೆನಿಸಿದೆ. ವಿದ್ಯಾಭ್ಯಾಸ ಮುಂದುವರಿಸುವುದು ಹೇಗೆ ಎಂಬ ಚಿಂತೆ ಕಾಡುತ್ತಿದೆ. ಸರ್ಕಾರಿ ಅಧಿಕಾರಿಗಳಾಗಲಿ, ಜನಪ್ರತಿನಿಧಿಗಳಾಗಲಿ ನಮ್ಮನ್ನು ಸೌಜನ್ಯಕ್ಕೂ ಭೇಟಿಯಾಗಿಲ್ಲ. ನಾವು ತುಂಬಾ ಬಡವರು. ಶಿಕ್ಷಣ ಮುಂದುವರಿಸುವುದಕ್ಕಾದರೂ ಸರ್ಕಾರ ಸಹಾಯ ಮಾಡಿದರೆ ಹೇಗೊ ಬದುಕು ಕಟ್ಟಿಕೊಳ್ಳಬಹುದು' ಎಂದು ಮನವಿ ಮಾಡಿದಳು.

ಅಪಾಯ ಆಹ್ವಾನಿಸುವ ಉತ್ಸಾಹ

ಒಂದನೇ ಪುಟದಿಂದ...

'ಬೆಳಿಗ್ಗೆ ಅಗತ್ಯ ವಸ್ತುಗಳ ಖರೀದಿ ಹೆಸರಿನಲ್ಲಿ ಜನರು ಹೊರ ಬರುತ್ತಿದ್ದಾರೆ. ನಂತರ ಕೋವಿಡ್ ಲಸಿಕೆ ಪಡೆಯುವ ಕಾರಣ ನೀಡಿ ಇಡೀ ದಿನ ಓಡಾಡುತ್ತಿದ್ದಾರೆ. ವಾಹನಗಳ ಸಂಖ್ಯೆ ಜಾಸ್ತಿ ಇದ್ದಾಗ ಪೊಲೀಸ್ ಸಿಬ್ಬಂದಿ ವಿಚಾರಣೆ ನಡೆಸದೇ ಕಳುಹಿಸುತ್ತಿದ್ದಾರೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

ಕಲಬುರ್ಗಿ, ಬೀದರ್, ರಾಯಚೂರು, ಯಾದಗಿರಿ, ಕೊಪ್ಪಳ ಜಿಲ್ಲೆಗಳಲ್ಲೂ ಶುಕ್ರವಾರ ಬೆಳಿಗ್ಗೆಯಿಂದ ದೈನಂದಿನ ವ್ಯಾಪಾರ, ವಹಿವಾಟು ಬಿರುಸಾಗಿತ್ತು. ಕೆಲವೆಡೆ ಜನರು ಮಾಸ್ಕ್ ಧರಿಸದೆ, ಅಂತರ ಕಾಯ್ದುಕೊಳ್ಳದೇ ಖರೀದಿಗೆ ಮುಗಿಬಿದ್ದಿದ್ದರು. ಕಲಬುರ್ಗಿ ಮತ್ತು ಕೊಪ್ಪಳ ಜಿಲ್ಲೆಗಳ ಗ್ರಾಮೀಣ ಪ್ರದೇಶದಲ್ಲಿ ಹೋಟೆಲ್, ಖಾನಾವಳಿಗಳಲ್ಲಿ ಜನರು ಕುಳಿತು ಊಟ ಮಾಡುತ್ತಿದ್ದರು. ಚಹಾ, ಪಾನ್ ಅಂಗಡಿಗಳೂ ತೆರೆದಿದ್ದವು. ಬಿಗಿ ಕ್ರಮ ಕೈಗೊಳ್ಳುವತ್ತ ಪೊಲೀಸರು ಆಸಕ್ತಿ ತೋರಲಿಲ್ಲ.

ಧಾರವಾಡ, ಗದಗ, ವಿಜಯಪುರ, ಹಾವೇರಿ, ಚಿತ್ರದುರ್ಗ ಜಿಲ್ಲೆಗಳಲ್ಲೂ ಶುಕ್ರವಾರ ಹೆಚ್ಚಿನ ಸಂಖ್ಯೆಯ ಜನರು ರಸ್ತೆಗಿಳಿದಿದ್ದರು. ಹುಬ್ಬಳ್ಳಿ- ಧಾರವಾಡ ನಗರಗಳಲ್ಲಿ ವಾಹನಗಳ ಸಂಚಾರದಲ್ಲಿ ಏರಿಕೆಯಾಗಿತ್ತು. ಕೆಲ ಸಮಯ ತಪಾಸಣೆ ನಡೆಸಿದ ಪೊಲೀಸರು, ಬಳಿಕ ಸುಮ್ಮನಾದರು. ವಿಜಯಪುರ ಜಿಲ್ಲೆಯ ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಮಧ್ಯಾಹ್ನದವರೆಗೂ ಅಂಗಡಿಗಳು ತೆರೆದಿದ್ದವು. ಕೆಲವೆಡೆ ಪೊಲೀಸರು ಅರ್ಧದಷ್ಟು ಬ್ಯಾರಿಕೇಡ್‌ಗಳನ್ನು ತೆರವು ಮಾಡಿದ್ದರು.

ಕಿಂಡಿಯಲ್ಲಿ ಮದ್ಯ: ಬೆಂಗಳೂರು ನಗರ ಸೇರಿದಂತೆ ಕೆಲವು ಜಿಲ್ಲೆಗಳಲ್ಲಿ ಶುಕ್ರವಾರ ಮದ್ಯ ಮಾರಾಟವೂ ಜೋರಾಗಿತ್ತು. ಕೆಲವು ಮದ್ಯದಂಗಡಿಗಳಲ್ಲಿ ಬೆಳಿಗ್ಗೆ 10 ಗಂಟೆಯ ಬಳಿಕವೂ ಗ್ರಾಹಕರಿಗೆ ಮದ್ಯ ಮಾರಾಟ ಮಾಡುತ್ತಿದ್ದುದು ಕಂಡುಬಂತು.

ಬಿಗಿ ನಿಯಂತ್ರಣ

ಚಿಕ್ಕಬಳ್ಳಾಪುರ, ರಾಮನಗರ, ತುಮಕೂರು, ಕೋಲಾರ, ಬೆಂಗಳೂರು ಗ್ರಾಮಾಂತರ, ವಿಜಯನಗರ (ಹೊಸಪೇಟೆ), ಬಳ್ಳಾರಿ, ಕಾರವಾರ, ಶಿರಸಿ, ಬಾಗಲಕೋಟೆ, ದಕ್ಷಿಣ ಕನ್ನಡ, ಉಡುಪಿ, ಚಿಕ್ಕಮಗಳೂರು, ಮೈಸೂರು, ಮಂಡ್ಯ, ಚಾಮರಾಜನಗರ, ಕೊಡಗು, ಹಾಸನ, ದಾವಣಗೆರೆ, ಶಿವಮೊಗ್ಗ ಜಿಲ್ಲೆಗಳಲ್ಲಿ ಬಿಗಿ ನಿಯಂತ್ರಣ ಮುಂದುವರಿದಿತ್ತು.

ನಾಲ್ಕು ದಿನ ತಾಳ್ಮೆ ಇರಲಿ: ಬೊಮ್ಮಾಯಿ

ಬೆಂಗಳೂರು: 'ರಾಜ್ಯದಲ್ಲಿ ಕೋವಿಡ್ ಈಗಷ್ಟೇ ನಿಯಂತ್ರಣಕ್ಕೆ ಬರುತ್ತಿದೆ. ಲಾಕ್‌ಡೌನ್ ಸಡಿಲಿಕೆ ನಿರ್ಧಾರದ ಬೆನ್ನಲ್ಲೇ ಜನರು ರಸ್ತೆಗೆ ಇಳಿಯಬಾರದು. ನಾಲ್ಕು ದಿನ ತಾಳ್ಮೆಯಿಂದ ಇರಬೇಕು' ಎಂದು ಗೃಹ ಸಚಿವ ಬಸವರಾಜ ಬೊಮ್ಮಾಯಿ ಮನವಿ ಮಾಡಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, 'ಕೆಲವು ಜಿಲ್ಲೆಗಳಲ್ಲಿ ಇದೇ 14ರ ಬಳಿಕ ಲಾಕ್‌ಡೌನ್‌ನಲ್ಲಿ ಸಡಿಲಿಕೆ ಆಗಲಿದೆ. ಈಗಲೇ ಜನರು ಲಾಕ್‌ಡೌನ್ ಅಂತ್ಯಗೊಂಡಿದೆ ಎಂಬಂತೆ ರಸ್ತೆಗೆ ಇಳಿಯುತ್ತಿರುವುದು ಸರಿಯಲ್ಲ' ಎಂದರು.

'ಮುಖ್ಯಮಂತ್ರಿ ಪ್ರಕಟಿಸಿರುವ ತೀರ್ಮಾನಗಳು ಸೋಮವಾರದಿಂದ ಜಾರಿಗೆ ಬರಲಿವೆ. ಆದರೆ, ಶುಕ್ರವಾರದಿಂದಲೇ ಹೊಸ ಮಾರ್ಗಸೂಚಿ ಜಾರಿಯಾಗಿದೆ ಎಂದು ಕೆಲವರು ಭಾವಿಸಿದಂತಿದೆ. ಅನಗತ್ಯವಾಗಿ ಯಾರೂ ರಸ್ತೆಗೆ ಇಳಿಯಬಾರದು. ಪೊಲೀಸರು ಬಲ ಪ್ರಯೋಗ ಮಾಡುವುದಕ್ಕೆ ಅವಕಾಶ ಕಲ್ಪಿಸಬಾರದು' ಎಂದು ಹೇಳಿದರು.

ಜನರು ಹೆಚ್ಚಿನ ಸಂಖ್ಯೆಯಲ್ಲಿ ಸೇರುವಂತಹ ಯಾವುದೇ ಚಟುವಟಿಕೆಗಳಿಗೂ ಅವಕಾಶ ಕಲ್ಪಿಸಿಲ್ಲ. ಲಾಕ್‌ಡೌನ್ ಜಾರಿಯಾದ ಬಳಿಕ ಹೊರ ಜಿಲ್ಲೆಗಳಿಗೆ ತೆರಳಿದ್ದ ಬೃಹತ್ ಸಂಖ್ಯೆಯ ಜನರು ನಗರಕ್ಕೆ ವಾಪಸಾಗಲಿದ್ದಾರೆ. ಈ ಕಾರಣದಿಂದ ಬಸ್ ನಿಲ್ದಾಣ, ರೈಲು ನಿಲ್ದಾಣ ಮತ್ತು ವಿಮಾನ ನಿಲ್ದಾಣಗಳಲ್ಲಿ ಕೋವಿಡ್ ರ್‍ಯಾಪಿಡ್ ಆ್ಯಂಟಿಜೆನ್ ಪರೀಕ್ಷೆ ಹೆಚ್ಚಿಸಲು ನಿರ್ಧರಿಸಲಾಗಿದೆ ಎಂದರು.

ಕಾರಾಗೃಹಗಳ ಖಾಲಿ ಹುದ್ದೆ ಭರ್ತಿಗೆ ನಿರ್ದೇಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಾದ್ಯಂತ ಕಾರಾಗೃಹಗಳಲ್ಲಿ ಖಾಲಿ ಇರುವ ವೈದ್ಯಕೀಯ ಮತ್ತು ಅರೆ ವೈದ್ಯಕೀಯ ಸಿಬ್ಬಂದಿಯ ಎಲ್ಲಾ ಹುದ್ದೆಗಳನ್ನು ಮೂರು ತಿಂಗಳಲ್ಲಿ ಭರ್ತಿ ಮಾಡಬೇಕು ಎಂದು ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ನಿರ್ದೇಶನ ನೀಡಿದೆ.

ಕಾರಾಗೃಹಗಳ 114 ವೈದ್ಯಕೀಯ ಹುದ್ದೆಗಳಲ್ಲಿ 86 ಹುದ್ದೆಗಳು ಖಾಲಿ ಇವೆ. ಹುದ್ದೆಗಳ ಭರ್ತಿ ಸಂಬಂಧ ಕ್ರಮ ಕೈಗೊಳ್ಳಲು ಮೂರು ತಿಂಗಳ ಸಮಯಾವಕಾಶ ಬೇಕು ಎಂದು ಸರ್ಕಾರ ಕೋರಿತು.

ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ, 'ಕಾರಾಗೃಹಗಳಲ್ಲಿನ ಸಂದರ್ಶಕರ ಕೊಠಡಿಗಳಲ್ಲಿನ ಸೌಲಭ್ಯಗಳ ಕುರಿತು ತಪಾಸಣೆ ನಡೆಸಲು ದಿಢೀರ್ ಭೇಟಿ ನೀಡಬೇಕು' ಎಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರಗಳಿಗೆ ಸೂಚನೆ ನೀಡಿತು.

ಬಿಜೆಪಿಗೆ ಸೇರ್ಪಡೆ: ರೀಟಾ ಹೇಳಿಕೆ ಅಲ್ಲಗಳೆದ ಪೈಲಟ್

ಜೈಪುರ (ಪಿಟಿಐ): 'ಬಿಜೆಪಿ ಸೇರುವ ಕುರಿತು ಮಾಜಿ ಉಪ ಮುಖ್ಯಮಂತ್ರಿ ಸಚಿನ್ ಪೈಲಟ್ ಅವರ ಜೊತೆಗೆ ಚರ್ಚಿಸಿದ್ದೇನೆ ಬಿಜೆಪಿ ನಾಯಕಿ ರೀಟಾ ಬಹುಗುಣ ಜೋಷಿ ಹೇಳಿಕೆಯನ್ನು ಸಚಿನ್ ಪೈಲಟ್ ಅಲ್ಲಗಳೆದಿದ್ದಾರೆ.

ಸಚಿನ್ ಪೈಲಟ್ ಜೊತೆ ಚರ್ಚಿಸಿದ್ದೇನೆ ಎಂದು ರೀಟಾ ಹೇಳಿದ್ದಾರೆ. ಬಹುಶಃ ಅವರು ಸಚಿನ್ ತೆಂಡೂಲ್ಕರ್ ಜೊತೆಗೆ ಚರ್ಚಿಸಿರಬಹುದು. ನನ್ನ ಜೊತೆಗೆ ಚರ್ಚಿಸುವ ಧೈರ್ಯ ಅವರಿಗಿಲ್ಲ' ಎಂದು ಪೈಲಟ್ ಪ್ರತಿಕ್ರಿಯಿಸಿದರು.

ಕಾಂಗ್ರೆಸ್ ಪಕ್ಷ ಜೈಪುರದಲ್ಲಿ ಪೆಟ್ರೋಲ್ ದರ ಏರಿಕೆ ವಿರುದ್ಧ ಏರ್ಪಡಿಸಿದ್ದ ಪ್ರತಿಭಟನೆ ವೇಳೆ ಈ ಪ್ರತಿಕ್ರಿಯೆ ನೀಡಿದರು.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ

ಸುಭಾಷಿತ

ನೀವು ಯಾರನ್ನಾದರೂ ಪ್ರೀತಿಸುತ್ತಿದ್ದು, ಅವರಿಗಾಗಿ ನಿಮ್ಮ ಸಮಯ ಕೊಡದಿದ್ದರೆ ಅದು ನಿಜವಾದ ಪ್ರೀತಿಯಲ್ಲ.
-ನಾಟ್ ಹಾನ್

ಐಎಎಸ್ ಅಧಿಕಾರಿಗಳ ಕಿತ್ತಾಟ ಪ್ರಕರಣ: ಸಮಗ್ರ ತನಿಖೆ ಆಗಲಿ

ಮೈಸೂರಿನಲ್ಲಿ ಕರ್ತವ್ಯದಲ್ಲಿದ್ದ ಇಬ್ಬರು ಐಎಎಸ್ ಅಧಿಕಾರಿಗಳ ನಡುವಣ ಬಹಿರಂಗ ಆರೋಪ-ಪ್ರತ್ಯಾರೋಪಗಳ ಪ್ರಕರಣ ಮೇಲ್ನೋಟಕ್ಕೆ ಕಂಡಷ್ಟು ಸರಳವಾಗಿಲ್ಲ. ಈ ಇಬ್ಬರೂ ಅಧಿಕಾರಿಗಳನ್ನು ಮೈಸೂರಿನಿಂದ ಎತ್ತಂಗಡಿ ಮಾಡುವ ಮೂಲಕ ಸಮಸ್ಯೆ ಬಗೆಹರಿಸಲಾಗಿದೆ ಎಂದು ಸರ್ಕಾರ ತಿಳಿದುಕೊಂಡಿದ್ದರೆ ಅದು ಖಂಡಿತವಾಗಿಯೂ ತಪ್ಪು ತಿಳಿವಳಿಕೆ. ವರ್ಗಾವಣೆಯು ಸಮಸ್ಯೆಯನ್ನು ಪರಿಹರಿಸುವ ಬದಲು ಇನ್ನಷ್ಟು ಪ್ರಶ್ನೆಗಳು ಮತ್ತು ಅನುಮಾನಗಳನ್ನು ಹುಟ್ಟುಹಾಕಿದೆ. 'ಜಿಲ್ಲಾಧಿಕಾರಿ ರೋಹಿಣಿ ಸಿಂಧೂರಿಯವರ ಕಿರುಕುಳದಿಂದ ರೋಸಿಹೋಗಿ ಪಾಲಿಕೆಯ ಹುದ್ದೆಗೆ ಮತ್ತು ಐಎಎಸ್ ಹುದ್ದೆಗೆ ರಾಜೀನಾಮೆ ನೀಡಿದ್ದೇನೆ' ಎಂದು ಮೈಸೂರು ಮಹಾನಗರ ಪಾಲಿಕೆಯ ಆಯುಕ್ತರಾಗಿದ್ದ ಶಿಲ್ಪಾ ನಾಗ್ ಮಾಧ್ಯಮಗೋಷ್ಠಿಯಲ್ಲಿ ಪ್ರಕಟಿಸುವ ಮೂಲಕ ಅಧಿಕಾರಿಗಳ ತಿಕ್ಕಾಟ ಬಹಿರಂಗಕ್ಕೆ ಬಂದಿತ್ತು. 'ಶಿಲ್ಪಾ ನಾಗ್ ಅವರು ಕೋವಿಡ್ ಪರಿಹಾರ ಕ್ರಮಗಳಿಗೆ ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ (ಸಿಎಸ್‌ಆರ್) ನಿಧಿಯಿಂದ ಬಳಸಿರುವ ₹ 12 ಕೋಟಿ ಮೊತ್ತದ ಲೆಕ್ಕ ಕೊಟ್ಟಿಲ್ಲ. ಅದನ್ನು ಪ್ರಶ್ನಿಸಿದ್ದಕ್ಕೆ ನನ್ನ ವಿರುದ್ಧ ಸುಳ್ಳು ಆರೋಪಗಳನ್ನು ಮಾಡುತ್ತಿದ್ದಾರೆ' ಎಂದು ಸಿಂಧೂರಿ ಪ್ರತಿಕ್ರಿಯೆ ನೀಡಿದ್ದರು. 'ಸಿಎಸ್‌ಆರ್ ನಿಧಿಗೆ ನಗದಿನ ಬದಲು ವಸ್ತುಗಳನ್ನು ಸ್ವೀಕರಿಸಲಾಗಿದೆ. ಎಲ್ಲ ಲೆಕ್ಕ ಸರಿಯಾಗಿದೆ' ಎಂದು ಶಿಲ್ಪಾ ನಾಗ್ ಬಳಿಕ ಲೆಕ್ಕವೊಂದನ್ನು ಮಾಧ್ಯಮಗಳಿಗೆ ಬಿಡುಗಡೆ ಮಾಡಿದರು. ಇದಕ್ಕೂ ಮುನ್ನ ಸಿಂಧೂರಿಯವರ ವಿರುದ್ಧ ಜಿಲ್ಲೆಯ ಕೆಲವು ಶಾಸಕರು ಮತ್ತು ಸಂಸದರು ಟೀಕಾ ಪ್ರಹಾರ ಮಾಡಿದ್ದೂ ಸುದ್ದಿಯಾಗಿತ್ತು. ಶಿಲ್ಪಾ ನಾಗ್ ಅವರು ಜಿಲ್ಲಾಧಿಕಾರಿ ವಿರುದ್ಧ ಸಾರ್ವಜನಿಕವಾಗಿ ನಡೆಸಿದ ಟೀಕಾಪ್ರಹಾರಕ್ಕೆ ಹಲವು ರಾಜಕೀಯ ಮುಖಂಡರು ಬೆಂಬಲ ನೀಡಿದ್ದರು. ಇಬ್ಬರು ಅಧಿಕಾರಿಗಳ ನಡುವಣ ಬಹಿರಂಗ ತಿಕ್ಕಾಟವನ್ನು ಬಗೆಹರಿಸಲು ಮೈಸೂರಿಗೆ ಬಂದ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್, 'ವಿವಾದ ನನ್ನ ಕೈಮೀರಿದೆ. ತಾಯಿ ಚಾಮುಂಡೇಶ್ವರಿಯೇ ನೋಡಿಕೊಳ್ಳುತ್ತಾಳೆ' ಎಂದು ದೇವರ ಮೇಲೆ ಭಾರ ಹಾಕಿದ್ದೂ ನಡೆಯಿತು. ಇಬ್ಬರೂ ಅಧಿಕಾರಿಗಳನ್ನು ಬೆಂಗಳೂರಿಗೆ ವರ್ಗಾವಣೆ ಮಾಡಿದ ಬಳಿಕವೂ ಮಾತಿನ ಜಗಳ ಮುಂದುವರಿದಿದೆ. 'ನನ್ನ ವರ್ಗಾವಣೆಯ ಹಿಂದೆ ಸ್ಥಳೀಯ ರಾಜಕಾರಣಿಗಳ ಬೆಂಬಲವುಳ್ಳ ಭೂಮಾಫಿಯಾದ ಕೈವಾಡ ಇದೆ. ಶಾಸಕರೊಬ್ಬರಿಂದ ಲಿಂಗಾಂಬುಧಿ ಕೆರೆಯ ಬಳಿ ಅಕ್ರಮ ಭೂ ಒತ್ತುವರಿ ನಡೆದಿದ್ದು, ಅದರ ತನಿಖೆಗೆ ನಾನು ಕೈಗೊಂಡ ಕ್ರಮ ಕೆಲವರಿಗೆ ಸಹಿಸಲು ಆಗಿಲ್ಲ. ಮೈಸೂರಿನ ಭೂಹಗರಣಗಳ ಬಗ್ಗೆ ಸಮಗ್ರ ತನಿಖೆ ಆಗಬೇಕು' ಎಂದು ಸರ್ಕಾರವನ್ನು ಸಿಂಧೂರಿ ಒತ್ತಾಯಿಸಿದ್ದಾರೆ. ಮೈಸೂರಿನ ಚಾಮುಂಡಿ ಬೆಟ್ಟದ ತಪ್ಪಲಲ್ಲಿ ಒತ್ತುವರಿಯಾಗಿದೆ ಎನ್ನಲಾದ ಭಾರಿ ಬೆಲೆ ಬಾಳುವ ಜಮೀನನ್ನು ಸರ್ಕಾರದ ಹಿಡಿತಕ್ಕೆ ತೆಗೆದುಕೊಳ್ಳಲು ಸುಪ್ರೀಂ ಕೋರ್ಟಿನಲ್ಲಿ ಹೂಡಿರುವ ಮೊಕದ್ದಮೆಯಲ್ಲಿ ಹಿರಿಯ ವಕೀಲ ಹರೀಶ್ ಸಾಳ್ವೆ ಅವರ ಸೇವೆ ಪಡೆಯಲಾಗಿದೆ ಎಂಬುದು ಪ್ರಕರಣದ ಗಂಭೀರತೆಯನ್ನು ಸೂಚಿಸುವಂತಿದೆ.

ರಾಜ್ಯದ ಬೊಕ್ಕಸಕ್ಕೆ ನಷ್ಟ ಉಂಟು ಮಾಡುವ ಅಕ್ರಮಗಳಿದ್ದರೆ ತಡೆಯುವುದು ಮತ್ತು ತಪ್ಪಿತಸ್ಥರಿಗೆ ಶಿಕ್ಷೆ ವಿಧಿಸುವುದು ಸರ್ಕಾರದ ಆದ್ಯ ಕರ್ತವ್ಯ. ಅಧಿಕಾರಿಗಳನ್ನು ವರ್ಗಾವಣೆ ಮಾಡುವುದು ಇದಕ್ಕೆ ಪರಿಹಾರವಲ್ಲ

ವಿವಾದಗಳು ಸಿಂಧೂರಿ ಅವರ ಬೆನ್ನು ಹತ್ತಿರುವುದು ಇದು ಮೊದಲೇನಲ್ಲ. ಈ ಹಿಂದೆ, ಹಾಸನದಲ್ಲಿ ಜಿಲ್ಲಾಧಿಕಾರಿ ಆಗಿದ್ದಾಗ ಶ್ರವಣಬೆಳಗೊಳ ಮಹಾಮಸ್ತಕಾಭಿಷೇಕದಲ್ಲಿ ದುಂದುವೆಚ್ಚದ ಕುರಿತು ಸಿಂಧೂರಿ ಅವರು ತಳೆದ ಕಠಿಣ ನಿಲುವು ಜಿಲ್ಲಾ ಉಸ್ತುವಾರಿ ಸಚಿವರ ಜೊತೆಗೆ ತಿಕ್ಕಾಟಕ್ಕೆ ಕಾರಣವಾಗಿತ್ತು. ಮಂಡ್ಯದಲ್ಲಿ ಜಿಲ್ಲಾ ಪಂಚಾಯಿತಿ ಸಿಇಒ ಆಗಿದ್ದಾಗ ಬಯಲು ಬಹಿರ್ದೆಸೆ ಮುಕ್ತ ಯೋಜನೆ ಜಾರಿಯಲ್ಲಿ ಸಿಂಧೂರಿ ಅತ್ಯುತ್ತಮ ಸಾಧನೆ ಮಾಡಿದ್ದರು. ಈ ಯೋಜನೆಯ ಹಣಕಾಸು ನಿರ್ವಹಣೆಗೆ ಸಂಬಂಧಿಸಿ ಸಿಂಧೂರಿಯವರು ಪಾರದರ್ಶಕ ಕ್ರಮಗಳನ್ನು ಕೈಗೊಂಡಾಗ ಸ್ಥಳೀಯ ರಾಜಕಾರಣಿಗಳ ಒತ್ತಡದ ಕಾರಣದಿಂದ ಮಂಡ್ಯದಿಂದ ವರ್ಗಾವಣೆ ಮಾಡಲಾಗಿತ್ತು. ಮೈಸೂರಿನ ಭೂಕಬಳಿಕೆಯ ಕುರಿತು ಸಿಂಧೂರಿ ಮಾಡಿದ ಆರೋಪಗಳನ್ನು ಅವರೊಬ್ಬ ವಿವಾದಾಸ್ಪದ ಅಧಿಕಾರಿ ಎಂಬ ಕಾರಣಕ್ಕೆ ತಳ್ಳಿಹಾಕುವುದು ಖಂಡಿತಾ ಸರಿಯಲ್ಲ. ರಾಜ್ಯ ಸರ್ಕಾರವು ಮೈಸೂರಿನ ಎಲ್ಲ ಭೂಕಬಳಿಕೆ ಆರೋಪಗಳ ಕುರಿತು ಸಮಗ್ರ ತನಿಖೆ ಕೈಗೊಳ್ಳಬೇಕಾದ ಅಗತ್ಯವಿದೆ. ಹಾಗೆಯೇ ಪಾರಂಪರಿಕ ಕಟ್ಟಡವಾದ ಜಿಲ್ಲಾಧಿಕಾರಿ ನಿವಾಸದ ಆವರಣದಲ್ಲಿ ಸಿಂಧೂರಿಯವರು ಅಕ್ರಮವಾಗಿ ಈಜುಕೊಳವನ್ನು ನಿರ್ಮಿಸಿದ್ದರ ಬಗ್ಗೆಯೂ ತನಿಖೆ ನಡೆಯಬೇಕು. ಈ ಹಿಂದೆ 'ಬೆಂಗಳೂರು ಸೇಫ್ ಸಿಟಿ' ಯೋಜನೆಯಲ್ಲಿ ಹಣದ ಅವ್ಯವಹಾರ ನಡೆದಿದೆ ಎಂದು ಇಬ್ಬರು ಉನ್ನತ ಪೊಲೀಸ್ ಅಧಿಕಾರಿಗಳ ಮಧ್ಯೆ ಆರೋಪ- ಪ್ರತ್ಯಾರೋಪಗಳು ನಡೆದಾಗಲೂ ಸರ್ಕಾರ ಇಬ್ಬರನ್ನೂ ವರ್ಗಾವಣೆ ಮಾಡಿ ಕೈತೊಳೆದುಕೊಂಡಿತ್ತು. ಮೈಸೂರಿನಲ್ಲೂ ಹಾಗಾಗುವುದು ಬೇಡ. ರಾಜ್ಯದ ಬೊಕ್ಕಸಕ್ಕೆ ನಷ್ಟ ಉಂಟು ಮಾಡುವ ಯಾವುದೇ ಅಕ್ರಮಗಳಿದ್ದರೂ ಅವುಗಳನ್ನು ತಡೆಯುವುದು ಮತ್ತು ತಪ್ಪಿತಸ್ಥರಿಗೆ ಶಿಕ್ಷೆ ವಿಧಿಸುವುದು ಸರ್ಕಾರದ ಆದ್ಯ ಕರ್ತವ್ಯ. ಅಧಿಕಾರಿಗಳನ್ನು ವರ್ಗಾವಣೆ ಮಾಡುವುದು ಇದಕ್ಕೆ ಪರಿಹಾರವಲ್ಲ. ರಾಜ್ಯ ಸರ್ಕಾರವು ಈ ಹಿನ್ನೆಲೆಯಲ್ಲಿ ಮೈಸೂರು ಭೂ ಒತ್ತುವರಿ ಆರೋಪ ಕುರಿತು ಸಮಗ್ರ ಮತ್ತು ಪಾರದರ್ಶಕ ತನಿಖೆಯನ್ನು ಕೈಗೊಳ್ಳಬೇಕು. ಪೂರ್ಣ ಸತ್ಯ ಹೊರಗೆ ಬರುವುದು ಸರ್ಕಾರಕ್ಕೆ ಬೇಕಿಲ್ಲ ಎಂದೇ ಜನರು ಭಾವಿಸಬೇಕಾಗುತ್ತದೆ.

ದಿನದ ಟ್ವೀಟ್

ಶುಲ್ಕ ಹೇರಿಕೆ ಸರಿಯೇ?

ಜನರಿಗೆ ನೂತನವಾಗಿ ಅತ್ಯಾಧುನಿಕ ಸವಲತ್ತು ಕಲ್ಪಿಸುವುದು, ಅದಕ್ಕೆ ಒಗ್ಗಿ ಬಳಕೆ ಹೆಚ್ಚಾದಂತೆ ನಂತರದ ದಿನಗಳಲ್ಲಿ ಅದರ ಮೇಲೆ ಬಳಕೆ ಶುಲ್ಕ ವಿಧಿಸುವುದು. ಇದು ಸರ್ಕಾರಗಳು ಜನರನ್ನು ದೋಚುವ ಪರಿ. ಎಟಿಎಂ ಹೆಚ್ಚು ಬಳಕೆ ಮಾಡಿದರೆ ಆರ್‌ಬಿಐ ಶುಲ್ಕ ವಿಧಿಸುತ್ತಂತೆ. ಅರೇ, ಎಟಿಎಂ ಇರುವುದೇ ಎಷ್ಟು ಬೇಕೋ ಅಷ್ಟು, ಯಾವಾಗ ಬೇಕೋ ಆವಾಗ ಹಣ ತೆಗೆಯುವುದಕ್ಕೆ ತಾನೆ?

ರೋಹಿತ್ ಸಿಂಹ, ಎಂಜಿನಿಯರ್

25 ವರ್ಷಗಳ ಹಿಂದೆ

ಬುಧವಾರ, 12-6-1996

● **ವಿಶ್ವಾಸಮತ: ನಿರ್ಣಯ ಮಂಡನೆ**

ನವದೆಹಲಿ, ಜೂನ್ 11– ಲೋಕಸಭೆಯ ಮುಂದೆ ಇಂದು ವಿಶ್ವಾಸಮತ ಕೋರಿಕೆ ನಿರ್ಣಯವನ್ನು ಪ್ರಧಾನಿ ಎಚ್.ಡಿ. ದೇವೇಗೌಡ ಮಂಡಿಸಿದರು.

ಎರಡು ವರ್ಷದ ಹಿಂದೆ ಈ ಸದನದ ಎಸ್‌ಪಿಪಿ ಸದಸ್ಯರಾಗಿ ಕೊನೆಯ ಸಾಲಿನಲ್ಲಿ ಒಬ್ಬಂಟಿಗರಾಗಿ ಕುಳಿತುಕೊಳ್ಳುತ್ತಿದ್ದ ಅವರನ್ನು, ಬದಲಾದ ರಾಜಕೀಯ ಪರಿಸ್ಥಿತಿಯು ಇಡೀ ಸದನ ಕುತೂಹಲದಿಂದ ನೋಡುವಂತೆ ಮಾಡಿತು.

● **ಅತೃಪ್ತ ಶಾಸಕರ ದಂಡು ದೆಹಲಿಗೆ**

ಬೆಂಗಳೂರು, ಜೂನ್ 11– ಮುಖ್ಯಮಂತ್ರಿ ಜೆ.ಎಚ್. ಪಟೇಲ್ ಅವರು ತಮ್ಮ ಸಚಿವ ಸಂಪುಟವನ್ನು ವಿಸ್ತರಿಸಿದ ನಂತರ ಅಸಮಾಧಾನದಿಂದ ಕುದಿಯುತ್ತಿರುವ ಜನತಾ ದಳದ ಅತೃಪ್ತ ಶಾಸಕರು, ಪ್ರಧಾನಿಯನ್ನು ಭೇಟಿ ಮಾಡಲು ಇಂದು ಸಂಜೆ ದೆಹಲಿಗೆ ತೆರಳಿದರು. ಈ ಮಧ್ಯೆ ಹಲವರು ಸಚಿವರೂ ದೆಹಲಿ ಸೇರಿದ್ದಾರೆ.

50 ವರ್ಷಗಳ ಹಿಂದೆ

ಶನಿವಾರ, 12-6-1971

● **ಗಗನಯಾನದಲ್ಲಿ ರಕ್ತಪರೀಕ್ಷೆ**

ಮಾಸ್ಕೊ, ಜೂನ್ 11– ಭಾರರಾಹಿತ್ಯದಿಂದ ತಮ್ಮ ಮೂಳೆಗಳಲ್ಲಿರುವ ಕ್ಯಾಲ್ಸಿಯಂ ಪ್ರಮಾಣ ಕಡಿಮೆಯಾಗಿದೆಯೇ ಎಂಬುದನ್ನು ಕಂಡುಹಿಡಿಯಲು, ಸೋಯುಜ್-ಸಲ್ಯೂಟ್ ಅಂತರಿಕ್ಷ ಪ್ರಯೋಗಾಲಯದಲ್ಲಿರುವ ಮೂವರು ರಷ್ಯನ್ ಗಗನಯಾತ್ರಿಗಳು ಇಂದು ತಮ್ಮ ಮೇಲೆ ಪ್ರಯೋಗ ನಡೆಸಿದರು.

ಅಂತರಿಕ್ಷದಲ್ಲಿ ಕಾಯಂ ನಿಲ್ದಾಣ ನಿರ್ಮಿಸಲು ಅಡ್ಡಿಯಾಗಿರುವ ಸಮಸ್ಯೆಗಳಲ್ಲೊಂದಾದ ಭಾರರಾಹಿತ್ಯ ಕುರಿತು ಕೂಲಂಕಷ ಅಧ್ಯಯನ ಈ ಯಾನದಲ್ಲಿ ನಡೆಯಲಿದೆ.

● **'ತ್ವರಿತ ಸರ್ಕಾರಿ ಕಾರ್ಯಕ್ಕೆ ಮಾಯ ಮಾಟ ಬೇಕಿಲ್ಲ'**

ಬೆಂಗಳೂರು, ಜೂನ್ 11– ಸರ್ಕಾರದ ಕೆಲವು ಕಾರ್ಯಗಳು ತ್ವರಿತವಾಗಿ ನಡೆಯಲು ಯಾವ 'ಮಾಯಮಂತ್ರ'ವೂ ಇಲ್ಲ. ಭೂ ಸುಧಾರಣೆಗಳ ತ್ವರಿತ ಕಾರ್ಯಾಚರಣೆಗಾಗಿ ಅಧಿಕಾರಿಗಳ ಸಮಿತಿಯೊಂದನ್ನು ನೇಮಿಸಲಾಗಿದೆ ಎಂದು ರಾಜ್ಯಪಾಲ ಶ್ರೀ ಧರ್ಮವೀರ ಹೇಳಿದರು.

ವಿದ್ಯಾಕ್ಷೇತ್ರ, ಭೂಸುಧಾರಣೆಯಂಥ ವಿಷಯಗಳಲ್ಲಿ ಕೆಲವು ಬದಲಾವಣೆಗಳನ್ನು ಜನರು ತಮ್ಮಿಂದ ನಿರೀಕ್ಷಿಸಿದ್ದರು ಎಂದು ವರದಿಗಾರರೊಬ್ಬರು ಹೇಳಿದಾಗ ಅವರು ಹೀಗೆ ಪ್ರತಿಕ್ರಿಯಿಸಿದರು.

ಪರಿಸರ ಸಂರಕ್ಷಣೆಯ ಪಾಠಕ್ಕೂ ಹೊರಪ್ರಪಂಚದ ಬದುಕಿಗೂ ನಡುವಿನ ಕಂದಕ ಕಿರಿದುಗೊಳಿಸಬೇಕಿದೆ

ಪರಿಸರ ಸಂರಕ್ಷಣೆ: ಶಿಕ್ಷಣವೊಂದೇ ಸಾಕೇ?

ವಿಶ್ಲೇಷಣೆ

ಡಾ. ಎಚ್.ಆರ್.ಕೃಷ್ಣಮೂರ್ತಿ

ಪರಿಸರ ಮಾಲಿನ್ಯ, ಕಣ್ಮರೆಯಾಗುತ್ತಿರುವ ಅರಣ್ಯ, ವನ್ಯಜೀವಿಗಳು, ಕ್ಷೀಣಿಸುತ್ತಿರುವ ನಿಸರ್ಗ ಸಂಪನ್ಮೂಲಗಳು, ಬಡವಾಗುತ್ತಿರುವ ಜೀವವೈವಿಧ್ಯ, ನಗರಗಳಲ್ಲಿ ತ್ಯಾಜ್ಯ ವಸ್ತುಗಳ ನಿರ್ವಹಣೆ, ಸಂಚಾರ ದಟ್ಟಣೆ, ಆರೋಗ್ಯದ ತೊಂದರೆಯಂತಹ ಹಲವಾರು ಸಮಸ್ಯೆಗಳನ್ನು ಪರಿಹರಿಸುವ ಸರಳ ಮಾರ್ಗ ನಿಮಗೆ ಗೊತ್ತೇ? ಈ ವಿಷಯಗಳನ್ನು ಪ್ರಾರಂಭದಿಂದಲೇ ಶಾಲಾ ಶಿಕ್ಷಣದಲ್ಲಿ ಸೇರಿಸಿದರೆ ಸಾಕು, ಅವುಗಳ ಬಗ್ಗೆ ತಿಳಿದ ಮಕ್ಕಳು ಮುಂದೆ ಜವಾಬ್ದಾರಿಯಿಂದ ನಡೆದುಕೊಳ್ಳುತ್ತಾರೆ ಎಂಬ ತೀರಾ ಸರಳೀಕೃತವಾದ ಅಭಿಪ್ರಾಯ ನಮ್ಮಲ್ಲಿ ಸಾರ್ವತ್ರಿಕವಾಗಿದೆ.

ಪರಿಸರ ಸಂರಕ್ಷಣೆಗೆ ಸಂಬಂಧಿಸಿದ ಎಲ್ಲ ಸಭೆ, ಸಮಾರಂಭ, ವಿಚಾರ ಸಂಕಿರಣ, ವಿದ್ವತ್ ಗೋಷ್ಠಿ, ಶಿಕ್ಷಣಕ್ಕೆ ಸಂಬಂಧಿಸಿದ ವರದಿಗಳಲ್ಲಿ ಈ ಅಭಿಪ್ರಾಯ ಮತ್ತೆ ಮತ್ತೆ ವ್ಯಕ್ತವಾಗುತ್ತ ಬಂದಿದೆ. ಹಾಗಾದರೆ ನಮ್ಮ ಶಿಕ್ಷಣಕ್ಕೆ ನಿಜವಾಗಿಯೂ ಅಂಥ ವಿಶಿಷ್ಟ ಸಾಮರ್ಥ್ಯವಿದೆಯೇ?

ಪರಿಸರಕ್ಕೆ ಸಂಬಂಧಿಸಿದ ಶಿಕ್ಷಣ ನಮಗೆ ಹೊಸದೇನಲ್ಲ. 1983-84ರಲ್ಲಿ ಕರ್ನಾಟಕ ಸರ್ಕಾರ ಹೊರತಂದ ಮೊದಲ 'ಕರ್ನಾಟಕ ಪರಿಸರ ಪರಿಸ್ಥಿತಿ' ವರದಿಯಲ್ಲಿ, ಆ ಕಾಲಘಟ್ಟದಲ್ಲೇ ಪ್ರಾಥಮಿಕ ಮತ್ತು ಮಾಧ್ಯಮಿಕ ಹಂತದ ಪಠ್ಯಪುಸ್ತಕಗಳಲ್ಲಿ ಪರಿಸರ ಅಧ್ಯಯನಕ್ಕೆ ಸಂಬಂಧಿಸಿದ ಬಹುತೇಕ ಮೂಲಭೂತ ಪರಿಕಲ್ಪನೆಗಳನ್ನು ಅಳವಡಿಸಿರುವುದರ ಜೊತೆಗೆ, ಅವುಗಳನ್ನು ಬೋಧಿಸಲು ಶಿಕ್ಷಕರ ಕೈಪಿಡಿಗಳನ್ನು ಸಿದ್ಧಪಡಿಸಿರುವುದು ಕಂಡುಬರುತ್ತದೆ. ಈ ಪ್ರಯತ್ನಗಳಿಗೆ ಮತ್ತಷ್ಟು ಬಲ ಬಂದದ್ದು 1986ರ ರಾಷ್ಟ್ರೀಯ ಶಿಕ್ಷಣ ನೀತಿ ಜಾರಿಯಾದ ನಂತರ. ಈ ನೀತಿಯನ್ನು ಆಧರಿಸಿದ ಸುಧಾರಣೆಗಳು ಪಠ್ಯ ಮತ್ತು ಪಾಠಕ್ರಮಗಳ ಮೂಲಕ ನಮ್ಮ ಶಾಲೆಗಳನ್ನು ಪ್ರವೇಶಿಸಿದ್ದು 1990ರ ಸುಮಾರಿಗೆ. ಆದರೆ ಹೆಚ್ಚು ಕಡಿಮೆ ಅದೇ ಸಮಯದಲ್ಲಿ ನಮ್ಮ ದೇಶದಲ್ಲಿ ಜಾಗತೀಕರಣ ಮತ್ತು ಉದಾರೀಕರಣದ ಪ್ರಕ್ರಿಯೆಗಳೂ ಪ್ರಾರಂಭವಾದವು. ಶಾಲೆಯ ಒಳಗೆ ಶಿಕ್ಷಕರು ಮತ್ತು ಪಠ್ಯಪುಸ್ತಕಗಳು ಹೊಸ ಉತ್ಸಾಹದಿಂದ ಪ್ರಕೃತಿ ಸಂಪನ್ಮೂಲಗಳ ಮಿತಬಳಕೆ, ಪುನರ್ಬಳಕೆ, ಸಂರಕ್ಷಣೆಯ ತತ್ವಗಳನ್ನು ಮಕ್ಕಳಿಗೆ ಪರಿಚಯಿಸುತ್ತಿದ್ದರೆ, ಶಾಲೆಯ ಹೊರಗಿನ ಪ್ರಪಂಚದಲ್ಲಿ ಭೋಗವಸ್ತುಗಳ ಬೆನ್ನುಹತ್ತಿ ಓಡುವ ಕೊಳ್ಳುಬಾಕತನದ ಹೊಸ ಜೀವನಶೈಲಿಗೆ ಸರ್ಕಾರದ ನೀತಿ, ನಿಲುವುಗಳೇ ಪ್ರೋತ್ಸಾಹ ನೀಡುತ್ತಿದ್ದವು.

ಪರಿಸರ ಮತ್ತು ಪರಿಸರ ಸಂರಕ್ಷಣೆಯ ಅರಿವಿಗೆ ಸಂಬಂಧಿಸಿದಂತೆ ಶಾಲೆಯ ಕಲಿಕೆಗೂ ದಿನನಿತ್ಯದ ಬದುಕಿಗೂ ಸಂಬಂಧವೇ ಇಲ್ಲದಂತಹ ವೈರುಧ್ಯದ ಪರಿಸ್ಥಿತಿ ಮತ್ತಷ್ಟು ತೀವ್ರವಾಗಲು ಪ್ರಾರಂಭವಾದದ್ದು ಆ ಸಮಯದಲ್ಲೇ. ಪರಿಸರದ ವಿಷಯಗಳಿಗೆ ಸಂಬಂಧಿಸಿದಂತೆ ನಮ್ಮೆಲ್ಲ ಪಠ್ಯಪುಸ್ತಕಗಳೂ 'ಮಾಹಿತಿ ಕೊರತೆ'ಯ ಮಾದರಿಯನ್ನು (ಇನ್‌ಫರ್ಮೇಶನ್ ಡಿಫಿಸಿಟ್ ಮಾಡೆಲ್) ಅನುಸರಿಸುತ್ತವೆ. 'ಶಾಲಾ ಮತ್ತು ಕಾಲೇಜು ಹಂತದ ವಿದ್ಯಾರ್ಥಿಗಳಿಗೆ ಪರಿಸರ ಸಂರಕ್ಷಣೆಯ ಮಹತ್ವ, ಅಗತ್ಯ, ವಿಧಾನಗಳ ಬಗ್ಗೆ ಮಾಹಿತಿಯ ಕೊರತೆ ಇದೆ. ಆ ಕೊರತೆಯನ್ನು ಪಠ್ಯಪುಸ್ತಕಗಳು ಮತ್ತು ತರಗತಿಯ ಬೋಧನೆಯ ಮೂಲಕ ತುಂಬಿದರೆ, ವಿದ್ಯಾರ್ಥಿಗಳು ಆ ವಿಷಯಗಳನ್ನು ಗ್ರಹಿಸಿ, ಪರಿಸರದ ಬಗೆಗಿನ ತಮ್ಮ ಯೋಚನೆ, ಧೋರಣೆ, ನಡವಳಿಕೆಗಳಲ್ಲಿ ಬದಲಾವಣೆಗಳನ್ನು ಮಾಡಿಕೊಂಡು ಪರಿಸರ ಸಂರಕ್ಷಣೆಗೆ ಮುಂದಾಗುತ್ತಾರೆ' ಎಂಬುದೇ ಈ ಮಾದರಿಯ ತತ್ವ ಮತ್ತು ನಿರೀಕ್ಷೆ. ಆದರೆ ಕೇವಲ ಮಾಹಿತಿ ನೀಡುವ ಶಿಕ್ಷಣದಿಂದ ಇಂಥ ಬದಲಾವಣೆ ಸಾಧ್ಯವಿಲ್ಲವೆಂಬುದನ್ನು ಅನೇಕ ಅಧ್ಯಯನಗಳು ಸ್ಪಷ್ಟವಾಗಿ ತೋರಿಸಿಕೊಟ್ಟಿವೆ.

ಶಾಲೆಯಲ್ಲಿನ ಕಲಿಕೆ ಮತ್ತು ಹೊರ ಪ್ರಪಂಚದ ಬದುಕಿನ ನಡುವಿನ ಈ ಕಂದಕವನ್ನು ಕಿರಿದುಗೊಳಿಸಿ, ಸಂಬಂಧಗಳನ್ನು ಕಲ್ಪಿಸುವ ಗಂಭೀರ ಪ್ರಯತ್ನವನ್ನು, 'ನ್ಯಾಷನಲ್ ಕರಿಕ್ಯುಲಮ್ ಫ್ರೇಮ್‌ವರ್ಕ್' 2005ರಲ್ಲಿ ಪ್ರಾರಂಭಿಸಿತು. ಕುತೂಹಲ, ಆಸಕ್ತಿಗಳು ತುಂಬಿ ತುಳುಕಿ ಸುತ್ತಮುತ್ತಲಿನ ಪರಿಸರವನ್ನು ಪರಿಶೋಧಿಸುವ ಪ್ರವೃತ್ತಿ ಸಹಜವಾಗಿಯೇ ಇರುವ ಮಕ್ಕಳ ಆಸಕ್ತಿ, ಉತ್ಸಾಹಗಳನ್ನು ಪೋಷಿಸಿ ಬೆಳೆಸುವಂತಹ, ಸರಳವಾಗಿ ಬದಲಿಸಬಹುದಾದ ದಿನಚರಿಯನ್ನು ಶಾಲೆಗಳಲ್ಲಿ ತರುವಂತೆ ಸೂಚಿಸಿತು. ಸಲಹೆಯೇನೋ ಬಹು ಚಂದ. ಆದರೆ ಅದನ್ನು ಕಾರ್ಯರೂಪಕ್ಕೆ ತರುವುದು ಹೇಗೆ?

ಶಿಕ್ಷಣ, ಸಂಶೋಧನೆ ಮತ್ತು ತರಬೇತಿಯ ರಾಷ್ಟ್ರೀಯ ಮಂಡಳಿ (ಎನ್‌ಸಿಇಆರ್‌ಟಿ) ಈ ಸವಾಲನ್ನು ಅಂಗೀಕರಿಸಿ, ಶಾಲೆಯಲ್ಲಿನ ಪರಿಸರ ಪಾಠ ಮತ್ತು ಬದುಕಿನ ಪರಿಸರಗಳ ನಡುವೆ ಸಂಬಂಧ ಕಲ್ಪಿಸಲು 'ಪ್ರಾಜೆಕ್ಟ್' ಮಾದರಿಯ ಕಲಿಕೆಯನ್ನು ಬಳಕೆಗೆ ತಂದಿತು. ಶಾಲೆಯ ಹೊರಗಿನ ಪ್ರಪಂಚದ ಪರಿಸರ ಸಮಸ್ಯೆಗಳನ್ನು ಮಕ್ಕಳಿಗೆ ಪರಿಚಯಿಸಿ, ಅವುಗಳನ್ನು ಪರಿಹರಿಸುವ ದಿಕ್ಕಿನಲ್ಲಿ ಮಕ್ಕಳೇ ಸ್ವತಂತ್ರವಾಗಿ ಚಿಂತಿಸಿ, ಪರಿಹಾರವನ್ನು ಕಾರ್ಯಗತಗೊಳಿಸುವ ಸಾಮರ್ಥ್ಯವನ್ನು ಅವರಲ್ಲಿ ಬೆಳೆಸುವುದು ಯೋಜನೆಯ ಉದ್ದೇಶವಾಗಿತ್ತು. ಇದಕ್ಕಾಗಿ 2009ರಲ್ಲಿ 6ರಿಂದ 10ನೆಯ ತರಗತಿಯ ವಿದ್ಯಾರ್ಥಿಗಳಿಗಾಗಿ 5 ಪ್ರತ್ಯೇಕ ಮಾರ್ಗದರ್ಶಿ ಕೈಪಿಡಿಗಳನ್ನು ಹೊರತರಲಾಯಿತು. ಆಯಾ ಹಂತದ ವಿದ್ಯಾರ್ಥಿಗಳ ಅರಿವಿನ ಮಟ್ಟಕ್ಕೆ ಅನುಗುಣವಾಗಿ ಪ್ರತೀ ಹಂತದಲ್ಲೂ 20 ಯೋಜನೆಗಳನ್ನು ಗುರುತಿಸಲಾಗಿತ್ತು. ನಾವಿಂದು ಎದುರಿಸುತ್ತಿರುವ ಬದುಕಿನ ಎಲ್ಲ ನೈಜ ಪರಿಸರ ಸಮಸ್ಯೆಗಳೂ ಈ ಯೋಜನೆಗಳಲ್ಲಿದ್ದವು. ವಿದ್ಯಾರ್ಥಿಗಳ ಸಣ್ಣ ಸಣ್ಣ ತಂಡಗಳು ಯಾವುದಾದರೊಂದು ಸಮಸ್ಯೆಯನ್ನು ಆರಿಸಿಕೊಂಡು, ಕೈಪಿಡಿಯ ಮಾರ್ಗದರ್ಶನದಿಂದ ಅಧ್ಯಯನ ನಡೆಸಬೇಕಿತ್ತು. ಹೀಗೆ ನಡೆಸಿದ ಅಧ್ಯಯನದ ಅಂತಿಮ ವರದಿಯನ್ನು ಸಾರ್ವಜನಿಕವಾಗಿ ಲಭ್ಯವಿರುವ ಜಾಲತಾಣದಲ್ಲಿ ದೊರಕುವಂತೆ ಹಾಕಬೇಕಿತ್ತು. ಇದರಿಂದ ದೇಶದ ವಿವಿಧ ಭಾಗಗಳಲ್ಲಿ, ಅಲ್ಲಿನ ಸ್ಥಳೀಯ ಪರಿಸರ ಸಮಸ್ಯೆಗಳು ಮತ್ತು ಅವುಗಳ ಪರಿಹಾರ ಮಾರ್ಗಗಳ ದೇಶವ್ಯಾಪಿ ಆಧಾರ ದತ್ತಾಂಶವನ್ನು ಸಿದ್ಧಪಡಿಸುವುದು ಯೋಜನೆಯ ಉದ್ದೇಶವಾಗಿತ್ತು.

ಈ ಇಡೀ ಯೋಜನೆಯ ಯಶಸ್ಸು ವಿದ್ಯಾರ್ಥಿಗಳು, ಶಿಕ್ಷಕರು, ಶಾಲಾ ಮುಖ್ಯಸ್ಥರು, ಆಡಳಿತ ಮಂಡಳಿ, ಪೋಷಕರು ಹಾಗೂ ನಾಗರಿಕ ಸಮಾಜದ ಆಸಕ್ತಿ, ಪ್ರೋತ್ಸಾಹಗಳ ಮೇಲೆ ಅವಲಂಬಿತವಾಗಿತ್ತು. ಅನೇಕ ಶಾಲೆಗಳು ಆಸ್ಥೆಯಿಂದ ಈ ಯೋಜನೆಯನ್ನು ಅನುಷ್ಠಾನಗೊಳಿಸಿದವು. ಆದರೆ ತರಗತಿಯ ಪಾಠಗಳ ನಡುವೆಯೇ ವರ್ಷವಿಡೀ ಈ ಪ್ರಾಜೆಕ್ಟ್ ಮಾಡಿದರೂ ಅಂತಹ ಉಪಯುಕ್ತ ಕೆಲಸಕ್ಕೆ ಯಾವ ಅಂಕವೂ ದೊರೆಯುತ್ತಿರಲಿಲ್ಲ. ಹೀಗಾಗಿ ಶಾಲೆಯ ಕಲಿಕೆ-ಬದುಕಿನ ಗ್ರಹಿಕೆಗಳ ನಡುವೆ ಸಂಬಂಧವನ್ನು ಕಲ್ಪಿಸುವ ಸಾಮರ್ಥ್ಯ ಇದ್ದ ಈ ಯೋಜನೆ ಕ್ರಮೇಣ ಕೇವಲ ಒಂದು ಕಾಟಾಚಾರವಾಯಿತು. ಆದರೆ ಈ ಯಾವ ವ್ಯವಸ್ಥಿತ ವಿಧಾನಗಳಿಗೂ ಒಳಗಾಗದೇ, ಶಿಕ್ಷಕರು ಮತ್ತು ವಿದ್ಯಾರ್ಥಿಗಳು, ಪರಿಸರ ಪ್ರೀತಿ, ಕಾಳಜಿ, ಆಸಕ್ತಿಗಳಿಂದ ಪರಿಸರ ಸಂರಕ್ಷಣೆಯ ಕೆಲಸ ಮಾಡಿದ ಅನೇಕ ನಿದರ್ಶನಗಳು ದೊರೆಯುತ್ತವೆ. ನಮ್ಮ ರಾಜ್ಯದಲ್ಲಿ ಇಂತಹ ಅನೇಕ ಹಸಿರು ಶಾಲೆಗಳ ಅನುಕರಣೀಯ ಚಟುವಟಿಕೆಗಳನ್ನು ಸುಮಾರು ಎರಡು ದಶಕಗಳಷ್ಟು ಹಿಂದೆಯೇ, 'ಕರ್ನಾಟಕ ದರ್ಶನ'ದ ಮೂಲಕ ಪರಿಚಯ ಮಾಡಿಕೊಟ್ಟ ಅಗ್ಗಳಿಕೆ 'ಪ್ರಜಾವಾಣಿ'ಗೆ ಸಲ್ಲುತ್ತದೆ.

ಎನ್‌ಸಿಇಆರ್‌ಟಿ ಸಂಸ್ಥೆಯ ಪ್ರಾಜೆಕ್ಟ್ ಮಾರ್ಗ ನಿರೀಕ್ಷಿತ ಫಲವನ್ನು ನೀಡದಿದ್ದಾಗ, 'ನ್ಯಾಷನಲ್ ಫೋಕಸ್ ಗ್ರೂಪ್ ಆನ್ ಹ್ಯಾಬಿಟಾಟ್ ಆ್ಯಂಡ್ ಲರ್ನಿಂಗ್' ಈ ಹಿಂದೆ ಸೂಚಿಸಿದ್ದ ಮತ್ತೊಂದು ಕಾರ್ಯತಂತ್ರ ಮುನ್ನೆಲೆಗೆ ಬಂದಿತು. ಪಠ್ಯಪುಸ್ತಕಗಳಲ್ಲಿ ಪರಿಸರಕ್ಕೆ ಸಂಬಂಧಿಸಿದ ವೈಜ್ಞಾನಿಕ ಮಾಹಿತಿಗಳನ್ನು ನೀಡುವ ಜೊತೆಗೆ, ಪ್ರಕೃತಿಗೆ ಸಮೀಪವಾಗಿ, ಅದರೊಡನೆ ಹೊಂದಿಕೊಂಡು ಬದುಕುತ್ತಿರುವ 'ಬರಿಕಾಲಿನ ಪರಿಸರ ತಜ್ಞರ' ಪರಿಸರ ಸಂಬಂಧಿ ಜ್ಞಾನ, ಜಾಣ್ಮೆ, ಸಂರಕ್ಷಣಾ ಪ್ರಯತ್ನಗಳನ್ನು ಪರಿಚಯಿಸಿ, ಮಕ್ಕಳಿಗೆ ಜೀವಂತ ನಿದರ್ಶನಗಳ 'ರೋಲ್ ಮಾಡೆಲ್'ಗಳಿಂದ ಪ್ರೇರಣೆ ದೊರೆಯಬೇಕೆಂದು ಸೂಚಿಸಿತು. ಇದು ಸಾಧ್ಯವಾಗಿದ್ದರೆ, ನಮ್ಮ ರಾಜ್ಯದಲ್ಲೇ ನೆಲ, ಜಲ, ಅರಣ್ಯ, ಕೃಷಿ ಮುಂತಾದ ಕ್ಷೇತ್ರಗಳಲ್ಲಿ ಸದ್ದಿಲ್ಲದೇ ಶ್ರಮಿಸುತ್ತಿರುವ ನೂರಾರು ಪರಿಸರ ಸೇನಾನಿಗಳು ಮತ್ತು ಅವರ ವಿಶಿಷ್ಟ ಪ್ರಯತ್ನಗಳು ಮಕ್ಕಳಿಗೆ ಪ್ರೇರಣೆಯಾಗುತ್ತಿದ್ದವು. ಆದರೆ ಪಠ್ಯಪುಸ್ತಕಗಳ ಹಿಂದಿನ ಪಟ್ಟಭದ್ರ ವ್ಯವಸ್ಥೆಯಲ್ಲಿ ಇದು ಸಾಧ್ಯವಾಗಿಲ್ಲ.

ಪರಿಸರ ಪ್ರಜ್ಞೆ ರೂಪಿಸುವಲ್ಲಿ ಶಾಲಾ ಶಿಕ್ಷಣ ಮುಖ್ಯ ಪಾತ್ರ ವಹಿಸುತ್ತದೆ, ನಿಜ. ಆದರೆ ಪರಿಸರ ಸಂರಕ್ಷಣೆಯ ಪರಿಕಲ್ಪನೆಗಳನ್ನು ಪಠ್ಯಪುಸ್ತಕಗಳಲ್ಲಿ ಸೇರಿಸಿದ ಮಾತ್ರಕ್ಕೆ ಪರಿಸರದ ಸಮಸ್ಯೆಗಳು ಬಗೆಹರಿಯುವುದಿಲ್ಲ ಎಂಬುದು ಅಪ್ರಿಯವಾದರೂ ಸತ್ಯ. ಸರ್ಕಾರ, ಕಾನೂನು ಕಟ್ಟಲೆಗಳು, ಕಾನೂನುಗಳನ್ನು ಜಾರಿಗೊಳಿಸುವ ವ್ಯವಸ್ಥೆ, ಸಾರ್ವಜನಿಕರ ಧೋರಣೆ, ಸಂಪನ್ಮೂಲಗಳನ್ನು ಬಳಸುವ ಉದ್ಯಮ, ಕೈಗಾರಿಕೆಗಳ ಜವಾಬ್ದಾರಿಯುತವಾದ ನಡವಳಿಕೆ ಮುಂತಾದವುಗಳೆಲ್ಲವೂ ಒಟ್ಟಾಗಿ ಸೇರಿದಾಗ ಮಾತ್ರ ಪರಿಸರ ಸಂರಕ್ಷಣೆ ಸಾಧ್ಯವಾಗುತ್ತದೆ.

ಚುರುಮುರಿ



ಬಾಗಿಲು ಬಡಿದ ವೈರಸ್ಸು!

● ಬಿ.ಎನ್.ಮಲ್ಲೇಶ್

ಲಾಕ್‌ಡೌನ್ ಸಡಿಲ ಮಾಡಿದ್ರು ಅಂತ ತೆಪರೇಸಿ ಪೇಟೆ ಕಡೆ ಹೋಗಿ ಹಾಗೇ ಸುತ್ತಾಡಿ ಮನೆಗೆ ಬಂದ. ಮರುದಿನ ಬೆಳಿಗ್ಗೆ ಗಂಟಲು ಕೆರೆತ, ಮೈ ಕೈ ನೋವು. ಹಾಸಿಗೆಯಲ್ಲೇ ಬಿದ್ದುಕೊಂಡಿದ್ದ ತೆಪರೇಸಿಗೆ ಯಾರೋ ಬಾಗಿಲು ಬಡಿದಂತಾಯಿತು. 'ಯಾರು?' ಎಂದ.

'ನಾನು ವೈರಸ್ಸು..., ಒಳಗೆ ಬರಬೇಕು, ಬಾಗಿಲು ತೆಗಿ...'

'ಏಯ್ ಬ್ಯಾಡೋ ಮಾರಾಯಾ, ಊರೆಲ್ಲ ಹಾರಾಡಿದ್ದು ಇನ್ನೂ ಸಾಕಾಗಿಲ್ಲೇನು? ಎಲ್ಲ ಕಡಿ ನೀ ಇಳೀತಿದಿ ಅಂತದಾರೆ, ಮತ್ತ ನನ್ ಮ್ಯಾಲ ಏರಾಕ ಬಂದೀಯಲ್ಲ?'

'ಇಳಿಯಾಕ ನಾ ಮುಖ್ಯಮಂತ್ರಿ ಕುರ್ಚಿ ಮ್ಯಾಲ ಕುಂತೀನೇನು ಮಂಗ್ಯಾ, ಹೈಕಮಾಂಡ್ ಅಲ್ಲ, ನಾ ಯಾರು ಹೇಳಿದ್ರು ಕೇಳಾವಲ್ಲ...'

'ನಿನ್ನೆಲಿ, ಎಲ್ಲ ಕಡಿ ನಿನ್ ಬಾಲ ಕಟ್ ಆಗೇತಿ ಅಂತ ನಂಗೂ ಗೊತ್ತು. ಹೋಗೋ ಮುಂಚೆ ನನ್ ಕಡಿ ಯಾಕ ಬಂದಿ? ನಾ ಯಾರು ಗೊತ್ತೇನು, ಟಿ.ವಿ. ರಿಪೋರ್ಟು... ನಿನ್ನ ಹಗಲು ರಾತ್ರಿ ತೆಲಿ ಮ್ಯಾಲ ಹೊತ್ತು ಮೆರೆಸಿದೀನಿ... ರಣಕೇಕೆ, ಮರಣಮೃದಂಗ, ಸುನಾಮಿ, ತಾಂಡವನೃತ್ಯ ಅಂತೆಲ್ಲ ಹೊಗಳಿದೀನಿ...'

'ಅದಕ್ಕೇ ನಾನು ಬಂದಿರೋದು. ನಿನ್ ಕೈ ಕುಲುಕಿ ನಿಂಗೊಂದು ಥ್ಯಾಂಕ್ಸ್ ಹೇಳಿ ಹೋಗಾಣ ಅಂತ'.

'ಹೆದರಿಸ್ಬೇಡೋ ಮಾರಾಯ, ನೀ ಹೋಗೋದು ಹೋಗ್ತಿ, ನನ್ನ ಆಸ್ಪತ್ರಿ ಸೇರಿಸಬೇಕು ಅಂತ ಮಾಡೀ ಏನು?'

'ನೀನು ನಿನ್ ಟೀವಿಯಲ್ಲಿ ನನ್ ಹೆಸರು ಹೇಳಿ ಎಷ್ಟ್ ಜನಕ್ಕ ಹೆದರಿಸಿಲ್ಲ, ನಾನೇನಾದ್ರು ಕೇಳಿದೀನಾ? ನಿನ್ನ ಕೈ ಕುಲುಕೇ ನಾ ಹೋಗೋದು, ಬಾಗಿಲು ತೆಗಿ...'

'ಲೇ ತಮಾ, ವೈರಸ್ಸು... ಒಳಗೆ ನನ್ ಹೆಂಡ್ತಿ ಅದಾಳೆ. ಅಕಿ ಮುಂದೆ ನೀ ಯಾವ ಲೆಕ್ಕ, ಬಾ ನೋಡ್ಕೋತೀನಿ ಅಂತ ತೆಪರೇಸಿ ಏಳೋಕೆ ಹೋಗಿ ಜೋಲಿ ತಪ್ಪಿ ಕೆಳಕ್ಕೆ ಬಿದ್ದ. ಕಣ್ಣು ಬಿಟ್ಟರೆ ಮಂಚದಿಂದ ಕೆಳಕ್ಕೆ ಬಿದ್ದಿದ್ದ.

ಹೆಂಡ್ತಿ ಪಮ್ಮಿ ಎದುರಿಗೇ ನಿಂತಿದ್ದಳು, ಕೈಯಲ್ಲಿ ಒಗ್ಗರಣೆ ಸೌಟಿತ್ತು!

ಸಂಗತ

ಬೆಂಗಳೂರು 'ಟೆಕ್‌ಹಳ್ಳಿ' ಆಗಬೇಕೆ?

ಜಗತ್ಪ್ರಸಿದ್ಧವಾದ ಬ್ರ್ಯಾಂಡ್ ಮಹತ್ವ 'ಸಿಲಿಕಾನ್ ಸಿಟಿ' ಹೆಸರಿಗೆ ಇದೆ

● ಎಸ್.ಆರ್.ವಿಜಯಶಂಕರ

ಸುಮಾರು ಮೂರು ದಶಕಗಳಿಂದಲೂ 'ಸಿಲಿಕಾನ್ ವ್ಯಾಲಿ ಆಫ್ ಇಂಡಿಯಾ' ಎಂದು ಜಗತ್ತಿನಾದ್ಯಂತ ಪ್ರಖ್ಯಾತವಾಗಿರುವ ಬೆಂಗಳೂರಿನ ಬ್ರ್ಯಾಂಡ್ ಹೆಸರನ್ನು ಇನ್ನು ಮುಂದೆ 'ಟೆಕ್‌ಹಳ್ಳಿ' ಎಂದು ಕರೆಯಬೇಕೆಂದು ಮಹೀಂದ್ರಾ ಆ್ಯಂಡ್ ಮಹೀಂದ್ರಾ ಕಂಪನಿಯ ಮುಖ್ಯಸ್ಥ ಆನಂದ ಮಹೀಂದ್ರಾ ನಿರ್ಧರಿಸಿದ್ದಾರೆ. ಅದಕ್ಕಾಗಿ ಅವರು, ಬೆಂಗಳೂರಿನವರೇ ಆದ ಇನ್ಫೊಸಿಸ್‌ನ ನಂದನ್ ನಿಲೇಕಣಿ ಅವರಿಗೆ ತಮ್ಮ ವಿಚಾರ ಹೇಳಿ ಒಪ್ಪಿಸಿದ್ದಾರೆ.

ನಡೆದಿದ್ದು ಇಷ್ಟು: ಕೊರೊನಾ ಲಾಕ್‌ಡೌನ್‌ನಲ್ಲಿ ಬೆಂಗಳೂರು ಒದ್ದಾಡುತ್ತಿರುವಾಗ ಆನಂದ ಅವರಿಗೆ ದೇಸಿ ಸಂಸ್ಕೃತಿಗೆ ಹೊಂದುವಂತೆ ಬೆಂಗಳೂರಿಗೆ ಹೊಸ ಬ್ರ್ಯಾಂಡ್ ಹೆಸರಿಡಬೇಕೆನಿಸಿತು. ತಕ್ಷಣ ಅವರು ಟ್ವಿಟರ್ ಅಭಿಯಾನದ ಮೂಲಕ ಹೊಸ ಹೆಸರು ಸೂಚಿಸುವ ಸ್ಪರ್ಧೆ ಏರ್ಪಡಿಸಿದರು. ಹೈದರಾಬಾದಿನ ಶ್ರೀನಿವಾಸ ರೆಡ್ಡಿ ಪಟಿಯೋಲಾ ಸೂಚಿಸಿದ 'ಟೆಕ್‌ಹಳ್ಳಿ' ಮತ್ತು ಇತರ ಮೂರು ಹೆಸರುಗಳ ಮೊದಲ ಆಯ್ಕೆಯ ಬಳಿಕ ನಿಲೇಕಣಿ ಅವರನ್ನು ಸಹತೀರ್ಪುಗಾರರನ್ನಾಗಿ ಆಯ್ಕೆ ಮಾಡಿದರು. ಇಬ್ಬರೂ ಸೇರಿ ಬೆಂಗಳೂರಿಗೆ ಟೆಕ್‌ಹಳ್ಳಿ ಎಂಬ ಹೆಸರೇ ಸರಿ ಎಂದು ಪ್ರಕಟಿಸಿದರು.

ಇದು ಇಲ್ಲಿಗೇ ನಿಲ್ಲುವುದಿಲ್ಲ. ಈ ಕೈಗಾರಿಕಾಧಿಪತಿಗಳಿಗೆ ಹೆಸರು ಬದಲಾಯಿಸಲು ಮುಂದೆ ಏನೆಲ್ಲ ಮಾಡಬೇಕೆಂಬ ನೀಲಿನಕ್ಷೆ ಸ್ಪಷ್ಟವಾಗಿರುತ್ತದೆ. ಅದಕ್ಕೆ ಬೇಕಾದ ಲಾಬಿ ಮಾಡಲು ಬೇಕಾದಷ್ಟು ಹಣವೂ ಇರುತ್ತದೆ. ಇಂಗ್ಲಿಷ್‌ನಲ್ಲಿ ಬರೆಯಲು TecHalli ಎಂಬ ಹೊಸ ಪದವನ್ನೇ ಅವರು ಸೃಷ್ಟಿಸಿದ್ದಾರೆ. ಇದು ಅವರ ಹೊಸ ಬ್ರ್ಯಾಂಡಿಂಗ್‌ನ ಮೊದಲ ಸೂಚನೆ. ಆದರೆ ಕನ್ನಡ ನಾಮಾಂತರಗಳ ಸ್ವರೂಪ ಬಲ್ಲವರಿಗೆ ಟೆಕ್‌ಹಳ್ಳಿ ಮುಂದೆ ಜನರ ಬಾಯಲ್ಲಿ ಠಕ್ ಹಳ್ಳಿ ಅಥವಾ ಠಕ್ಕರ ಹಳ್ಳಿ ಎಂದಾದರೆ ಎಂಬ ಆತಂಕ ಮೂಡಿದರೆ ಆಶ್ಚರ್ಯವಿಲ್ಲ.

ಬೆಂಗಳೂರಿಗೆ ಅತ್ಯಾಧುನಿಕ ತಂತ್ರಜ್ಞಾನದ ಪ್ರಸಿದ್ಧಿ ಬರುವುದಕ್ಕೆ ಚಾರಿತ್ರಿಕ ಮತ್ತು ವರ್ತಮಾನದ ಹಲವು ಕಾರಣಗಳಿವೆ. ಮೈಸೂರಿನ ಅರಸರು ಮತ್ತು ಸರ್ ಎಂ.ವಿಶ್ವೇಶ್ವರಯ್ಯನವರು ಏಷ್ಯಾದ ಮೊದಲ ಜಲವಿದ್ಯುತ್ ತಯಾರಿಕಾ ಘಟಕವನ್ನು ಗಗನಚುಕ್ಕಿ-ಭರಚುಕ್ಕಿ ಜಲಪಾತದ ಬಳಿ ಸ್ಥಾಪಿಸಿದ್ದರು. ಕನ್ನಂಬಾಡಿ ಕಟ್ಟೆಯಂತೆ ಭದ್ರಾವತಿ ಕಬ್ಬಿಣ ಕಾರ್ಖಾನೆ ಇತ್ಯಾದಿಗಳಾದವು. 1909ರಲ್ಲಿ ಐಐಎಸ್‌ಸಿ ಪ್ರಾರಂಭವಾಯಿತು. ಐಐಟಿ, ಎಚ್.ಎ.ಎಲ್., ಭಾರತ್ ಎಲೆಕ್ಟ್ರಾನಿಕ್ಸ್, ಇಸ್ರೊ- ಹೀಗೆ ಹಲವು ಸಂಸ್ಥೆಗಳಾದವು. ದೇವರಾಜ ಅರಸು ಅವರು ಮುಖ್ಯಮಂತ್ರಿಯಾಗಿದ್ದಾಗ ಸಚಿವರಾಗಿದ್ದ ವೀರಪ್ಪ ಮೊಯಿಲಿ ಹಾಗೂ ಕೈಗಾರಿಕಾ ದೂರದೃಷ್ಟಿ ಇದ್ದ ಆರ್.ಕೆ.ಬಾಳಿಗ ಅವರು ಬೆಂಗಳೂರಲ್ಲಿ ಎಲೆಕ್ಟ್ರಾನಿಕ್ ಸಿಟಿ ನಿರ್ಮಾಣಕ್ಕೆ ಕಾರಣರಾದರು. ಮೊಯಿಲಿ ಮುಖ್ಯಮಂತ್ರಿಯಾಗಿದ್ದಾಗ ಸಿಂಗಪುರ ಮಾದರಿಯಲ್ಲಿ ಐಟಿಪಿಎಲ್ ನಿರ್ಮಾಣಕ್ಕೆ ಮುಂದಾದರು. ಬೆಂಗಳೂರನ್ನು ಸಿಲಿಕಾನ್ ವ್ಯಾಲಿ ಆಫ್ ಇಂಡಿಯಾ ಎಂದು ರಾಜಕೀಯ ನಾಯಕರಲ್ಲಿ ಮೊದಲು ಪ್ರಚುರಪಡಿಸಿದವರೂ ವೀರಪ್ಪ ಮೊಯಿಲಿಯವರು. ಉಳಿದಂತೆ ಇಂದಿನ ನಮ್ಮ ಸಾಫ್ಟ್‌ವೇರ್ ಕಂಪನಿಗಳ ಚರಿತ್ರೆ ಎಲ್ಲರಿಗೂ ತಿಳಿದಿರುವಂತಹದು.

ಕ್ಯಾಲಿಫೋರ್ನಿಯಾದ ಸಿಲಿಕಾನ್ ವ್ಯಾಲಿಯಂತೆ ಬೆಂಗಳೂರು ಬೆಟ್ಟ ಕಣಿವೆಗಳ ನೆಲವಲ್ಲ. ಆದರೆ ಅದು ಸಾಫ್ಟ್‌ವೇರ್ ಉದ್ಯೋಗಿಗಳಿಂದಾಗಿ ಜಗತ್ತಿನ ಕಣ್ಣಲ್ಲಿ ಸಿಲಿಕಾನ್ ವ್ಯಾಲಿಯ ಸಾಫ್ಟ್‌ವೇರ್ ಸಾಂದ್ರೀಕರಣಕ್ಕೆ ಸಮಾನವಾದ ಜಾಗ. ಕಂಪ್ಯೂಟರ್ ಚಿಪ್ ತಯಾರಿಕೆಗೆ ಬೇಕಾಗುವ ಕಚ್ಚಾವಸ್ತು ಸಿಲಿಕಾನ್. ಅದು ಕ್ಯಾಲಿಫೋರ್ನಿಯಾದ ನೆಲದಲ್ಲೂ ಸಿಗುವ ವಸ್ತುವಲ್ಲ. ಆದರೂ ಅದಕ್ಕೆ ಹೆಸರು ಬಂದಿರುವಂತೆ ಬೆಂಗಳೂರಿಗೂ ಸಾಫ್ಟ್‌ವೇರ್ ಉದ್ಯೋಗಿಗಳು ಒಂದೆಡೆ ಸೇರಿದ್ದರಿಂದ ಈ ಹೆಸರು ಬಂದಿದೆ.



ಅಮೆರಿಕದಲ್ಲಿ 'ಬ್ಯಾಂಗಲೂರ್ಡ್' ಎಂಬ ಪದವಿದೆ. ಬರಾಕ್ ಒಬಾಮ ಅಧ್ಯಕ್ಷರಾಗಿದ್ದಾಗ, ಮಕ್ಕಳಿಗೆ ವಿಜ್ಞಾನ, ಗಣಿತವನ್ನು ಸರಿಯಾಗಿ ಕಲಿಸುವ ಮೂಲಕ ತಮ್ಮ ಕೆಲಸಗಳೆಲ್ಲಾ ಬ್ಯಾಂಗಲೂರ್ಡ್ ಆಗದಂತೆ ನೋಡಿಕೊಳ್ಳಬೇಕು ಎಂದಿದ್ದರು. ಬ್ಯಾಂಗಲೂರ್ಡ್ ಅಂದರೆ, ಬೆಂಗಳೂರಿಗೆ ಆ ಕೆಲಸ ಹೋಯಿತು ಅಥವಾ ಒಂದು ಕೆಲಸವನ್ನು ಹೊರಗುತ್ತಿಗೆಯಾಗಿ ಬೆಂಗಳೂರಿಗೆ ಕಳುಹಿಸಿ ಆಯಿತು ಎಂದು ಅರ್ಥ.

ಗಾರ್ಡನ್ ಸಿಟಿ, ನಿವೃತ್ತರ ಸ್ವರ್ಗ ಇತ್ಯಾದಿ ಹೆಸರುಗಳಿಗಿಂತ ಭಿನ್ನವಾದ ಬ್ರ್ಯಾಂಡ್ ಮಹತ್ವ ಸಿಲಿಕಾನ್ ಸಿಟಿಗೆ ಇದೆ. ಇದು ಉದ್ಯೋಗದ ಗುತ್ತಿಗೆ ಪಡೆಯಲು ಸಹಕರಿಸುವ ಬ್ರ್ಯಾಂಡ್. ಇಲ್ಲಿ ಯಾವ ಕೆಲಸಕ್ಕೆ ಎಷ್ಟು ಜನ ಕೌಶಲಪೂರ್ಣ ಎಂಜಿನಿಯರ್‌ಗಳು ಬೇಕಾದರೂ ಸಿಗುತ್ತಾರೆ ಎಂಬ ಅರ್ಥವನ್ನು ಇದು ಧ್ವನಿಸುತ್ತದೆ. ಇಷ್ಟು ಪ್ರಸಿದ್ಧವಾದ ಒಂದು ಬ್ರ್ಯಾಂಡ್ ವ್ಯಾಲ್ಯೂ ಹೆಸರನ್ನು ಈಗ ಇದ್ದಕ್ಕಿದ್ದಂತೆ ಕಿತ್ತು ಹಾಕಿ, 'ಟೆಕ್‌ಹಳ್ಳಿ' ಎಂದು ಮಾಡುವ ಅಗತ್ಯ ಏನು? ಬಸ್ಸು, ಕಾರಿನಂತೆ ಸಿಲಿಕಾನ್ ವ್ಯಾಲಿ ಕೂಡಾ ಕನ್ನಡ ಪದಗಳಂತಾಗಿವೆ. ಕಲ್ಪಿತ ಸಂಸ್ಕೃತಿ ಲಾಭಕ್ಕಾಗಿ, ಒಂದು ಕೋಟಿಗೂ ಹೆಚ್ಚು ಜನಸಂಖ್ಯೆ ಇರುವ ಬೆಂಗಳೂರು ನಗರವನ್ನು ಹಳ್ಳಿಯಾಗಿ ಯಾಕೆ ಮಾಡಬೇಕು?

ಇಷ್ಟಕ್ಕೂ ಈ ಇಂಡಸ್ಟ್ರಿ ನಾಯಕರಿಗೆ ಸ್ವಂತಿಕೆ ಬೇಕು ಎಂದಾದರೆ ಅದನ್ನು ತಂತ್ರಜ್ಞಾನದಲ್ಲಿ ಸಾಧಿಸಿ ತೋರಿಸಬೇಕು. ಬೆಂಗಳೂರಿನ ಬಹುತೇಕ ಕಂಪನಿಗಳು ಸಾಫ್ಟ್‌ವೇರ್ ಸರ್ವಿಸ್‌ನಲ್ಲಿ ತೊಡಗಿರುವಂತಹವು. ತಂತ್ರಜ್ಞಾನದ ಮೌಲ್ಯಮಾಪನದಲ್ಲಿ 'ಪ್ರೊಡಕ್ಟ್'ಗಳು ಮೇಲಿನ ಮಟ್ಟದಲ್ಲಿ ಇರುವಂತಹವು. ನಮ್ಮ ಈ ನಾಯಕರು ಬೆಂಗಳೂರಿನ ಬ್ರ್ಯಾಂಡ್ ಹೆಸರು ಬದಲಿಸುವುದಕ್ಕೆ ಕೆಲಸ ಮಾಡುವ ಬದಲು, ಹೆಚ್ಚು ಪ್ರೊಡಕ್ಟ್ ಕಂಪನಿಗಳಾಗುವಂತೆ ಪ್ರಯತ್ನಿಸಿದರೆ ನಮ್ಮ ಸ್ವಂತಿಕೆ ಮತ್ತು ಆರ್ಥಿಕತೆ ಎರಡೂ ಇನ್ನಷ್ಟು ಶಕ್ತಿಶಾಲಿಯಾಗುತ್ತವೆ.

ವಾಚಕರ ವಾಣಿ

ಕನ್ನಡದಲ್ಲಿ ಎಂಜಿನಿಯರಿಂಗ್: ವೃತ್ತಿಗೆ ತೊಡಕು?

ಎಂಜಿನಿಯರಿಂಗ್ ಪದವಿಯನ್ನು ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡುವ ಸಾಧ್ಯತೆಯು ಕನ್ನಡ ಅಭಿಮಾನಿಗಳಾದ ನಮಗೆ ನಿಶ್ಚಯವಾಗಿಯೂ ಸಂತಸದ ವಿಷಯ. ಆದರೆ ಈ ನಿರ್ಧಾರದಿಂದ ಗ್ರಾಮೀಣ ವಿದ್ಯಾರ್ಥಿಗಳಿಗೆ ಕೇವಲ ಪದವಿಯ ಸರ್ಟಿಫಿಕೇಟ್ ಪಡೆಯಲು ಅನುಕೂಲವಾಗುತ್ತದೆ ಹೊರತು, ಅವರ ವೃತ್ತಿ ಜೀವನಕ್ಕಲ್ಲ. ಏಕೆಂದರೆ ಅವರೆಲ್ಲರಿಗೂ ರಾಜ್ಯ ಸರ್ಕಾರಿ ನೌಕರಿಯೇ ಸಿಗುತ್ತದೆಯೇ? ಕರ್ನಾಟಕವಲ್ಲದೆ ಬೇರೆ ರಾಜ್ಯ, ದೇಶಗಳಿಗೆ ಸಂಬಂಧಿಸಿದ ಕಂಪನಿಗಳಲ್ಲಿ ಅವರು ಕೆಲಸ ಮಾಡಬೇಕಾಗುತ್ತದೆ. ಪರಿಪೂರ್ಣವಾಗಿ ಕನ್ನಡದಲ್ಲೇ ಓದಿರುವ ಅಭ್ಯರ್ಥಿ ಕೆಲಸಕ್ಕೆ ಸೇರುವಾಗ ಸಂದರ್ಶನವನ್ನು ಹೇಗೆ ಎದುರಿಸಬೇಕು, ನಂತರದಲ್ಲಿ ಸಹ ಕೆಲಸಗಾರರು ಅಥವಾ ಮೇಲಧಿಕಾರಿಗಳ ಜೊತೆ ಹೇಗೆ ವ್ಯವಹರಿಸಬೇಕು? ಅವರು ತಮ್ಮ ಜ್ಞಾನವನ್ನು ಇತರರೊಂದಿಗೆ ಹಂಚಿಕೊಳ್ಳುವ ಬಗೆ ಹೇಗೆ? ಇದಕ್ಕೆಲ್ಲ ಪ್ರಪಂಚದ ವ್ಯವಹಾರ ಭಾಷೆಯಾದ ಇಂಗ್ಲಿಷ್ ಗೊತ್ತಿರಬೇಕಾದುದು ಅನಿವಾರ್ಯ.

ಕನ್ನಡ ನಮ್ಮ ಹೃದಯದ ಭಾಷೆ. ಯಾವತ್ತಿಗೂ ಅದಕ್ಕೆ ಮೊದಲ ಆದ್ಯತೆ. ಆದರೆ ಜೀವನೋಪಾಯದ ಅನೇಕ ವೃತ್ತಿಗಳಿಗೆ ಇಂಗ್ಲಿಷ್ ಅತ್ಯಗತ್ಯ. ಗ್ರಾಮೀಣ ವಿದ್ಯಾರ್ಥಿಗಳು ಈಗ ಕಲಿಯಬಹುದಾದ ಅಲ್ಪಸ್ವಲ್ಪ ಇಂಗ್ಲಿಷನ್ನೂ ಕಲಿಯದಂತೆ ಮಾಡುವ ಯೋಜನೆ ಇದಾಗಿದೆ ಅನಿಸುತ್ತಿದೆ.

ಅರ್ಚನಾ ಶಂಕರ್, ಬೆಂಗಳೂರು

ಕಲ್ಯಾಣ ಮಂಟಪ ತೆರೆಯಲಿ

ಲಾಕ್‌ಡೌನ್‌ನಿಂದ ಕಲ್ಯಾಣ ಮಂಟಪಗಳು ಬಂದ್ ಆಗಿರುವುದರಿಂದ, ನಿಗದಿಯಾಗಿದ್ದ ಮದುವೆಗಳನ್ನು ಕೆಲವರು ಮುಂದೂಡಿದ್ದಾರೆ. ಇನ್ನು ಕೆಲವರು ಮನೆಯ ಮುಂದೆಯೇ ಹೇಗೋ ಮಾಡಿ ಮುಗಿಸಿದ್ದಾರೆ. ಈ ಹಿಂದೆ ಸರ್ಕಾರವು ಕಲ್ಯಾಣ ಮಂಟಪಗಳಿಗೆ ಇಂತಿಷ್ಟೇ ಜನರು ಭಾಗವಹಿಸಬೇಕೆಂದು ನಿಗದಿಪಡಿಸಿತ್ತು. ಆದರೆ ಈಗ ಮನೆಗಳಲ್ಲೇ ಮದುವೆ ಕಾರ್ಯ ನಡೆಸಬೇಕೆಂದಿರುವುದು ಎಷ್ಟು ಸರಿ? ಮದುವೆ ಕಾರ್ಯಗಳನ್ನು ಮಾಡಲು ಗ್ರಾಮೀಣ ಭಾಗಗಳಲ್ಲಿ ವಿಶಾಲವಾದ ಜಾಗವಿರುತ್ತದೆ, ಆದರೆ ನಗರಗಳಲ್ಲಿ ಮನೆಮಂದಿ ವಾಸಿಸುವುದೇ ಕಷ್ಟ, ಅಂತಹದ್ದರಲ್ಲಿ ಮದುವೆ ಕಾರ್ಯ ಹೇಗೆ ಮಾಡುವುದು?

ಕಲ್ಯಾಣ ಮಂಟಪಗಳಲ್ಲಿ ಅಂತರ ಕಾಯ್ದುಕೊಳ್ಳುವುದು ಕಷ್ಟವೇನಲ್ಲ. ಆದರೆ ಇಕ್ಕಟ್ಟಾದ ಮನೆಗಳಲ್ಲಿ ಅಂತರ ಕಾಪಾಡುವುದೇ ಕಷ್ಟ. ನೆಂಟರು ಬಂದರೂ ಉಳಿಸಿಕೊಳ್ಳುವುದು ಇನ್ನೂ ಕಷ್ಟ. ಈ ಎಲ್ಲಾ ಪ್ರಕ್ರಿಯೆಗಳಿಂದ ಕೊರೊನಾಕ್ಕೆ ನಾವೇ ಮುಕ್ತ ಆಹ್ವಾನ ನೀಡಿದಂತಾಗುತ್ತದೆಯಲ್ಲವೇ? ಇನ್ನಾದರೂ ಸರ್ಕಾರವು ಕಲ್ಯಾಣ ಮಂಟಪಗಳಲ್ಲಿ ಮದುವೆ ನಡೆಸಲು ಷರತ್ತುಬದ್ಧ ಅನುಮತಿ ನೀಡಿ ಜನರಿಗೆ ಅನುಕೂಲ ಮಾಡಿಕೊಡಬೇಕು.

ಮುರುಗೇಶ ಡಿ., ದಾವಣಗೆರೆ

ತಂದೆಯ ಜಾಗದಲ್ಲಿ ಪುತ್ರ: ಒಪ್ಪಿತ ನಡೆಯಲ್ಲ

ಸಿ.ಎಂ.ಉದಾಸಿ ಅವರ ನಿಧನದಿಂದ ತೆರವಾದ ವಿಧಾನಸಭಾ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿಯಾಗಿ ಅವರ ಪುತ್ರ ಹಾಲಿ ಸಂಸದ ಶಿವಕುಮಾರ್ ಉದಾಸಿ ಅವರನ್ನು ಕಣಕ್ಕಿಳಿಸುವ ಇಂಗಿತವನ್ನು ಸಚಿವ ಬಸವರಾಜ ಬೊಮ್ಮಾಯಿ ವ್ಯಕ್ತಪಡಿಸಿದ್ದಾರೆ (ಪ್ರ.ವಾ., ಜೂನ್ 10). ಪಕ್ಷದ ಅಭಿವೃದ್ಧಿಗೆ ಇಂಥ ಆಲೋಚನೆಗಳು ಸರಿಯೆನಿಸಬಹುದು. ಹಾಲಿ ಸಂಸದರು ಮತ್ತೊಂದು ಚುನಾವಣೆಗೆ ಸ್ಪರ್ಧಿಸುವುದಕ್ಕೆ ಸಂವಿಧಾನ ಅಡ್ಡಿ ಬರದೇ ಇದ್ದರೂ ಪ್ರಸಕ್ತ ಸಾಮಾಜಿಕ ಬೆಳವಣಿಗೆಯಲ್ಲಿ ಇಂಥ ಸ್ಪರ್ಧೆ ಅಗತ್ಯವೇ ಎಂಬ ಅಂಶ ಚರ್ಚೆಯಾಗಬೇಕು. ಮಿಗಿಲಾಗಿ, ತಂದೆಯ ಜಾಗವನ್ನು ಪುತ್ರ ತುಂಬುತ್ತಾರೆ ಎಂಬ ಮಾತು ಕೂಡ 'ಜನತಂತ್ರ ವ್ಯವಸ್ಥೆಯಡಿ ಒಪ್ಪುವಂಥದ್ದಲ್ಲ'. ಈಗಾಗಲೇ ಸಮಾಜ ಈ ವಿಚಾರದಲ್ಲಿ ರೋಸಿ ಹೋಗಿದೆ.

ಹಾಲಿ ಸಂಸದರು ವಿಧಾನಸಭಾ ಚುನಾವಣೆಯಲ್ಲಿ ಗೆಲುವು ಸಾಧಿಸಿದರೆ ಲೋಕಸಭಾ ಸದಸ್ಯತ್ವಕ್ಕೆ ಸಹಜವಾಗಿಯೇ ಮತ್ತೊಮ್ಮೆ ಚುನಾವಣೆ ನಡೆಸಬೇಕಾಗುತ್ತದೆ. ಇದರಿಂದಾಗುವ ಆರ್ಥಿಕ ಹೊರೆ, ಮಾನವ ಸಂಪನ್ಮೂಲಗಳ ಬಳಕೆ ದೃಷ್ಟಿಯಲ್ಲಿ ಇಂಥ ಅನಗತ್ಯ ಚುನಾವಣೆಯಿಂದ ಸರ್ಕಾರಕ್ಕೆ ಹೊರೆಯಾಗದೇ?

ಡಾ. ಜಿ.ಬೈರೇಗೌಡ, ಬೆಂಗಳೂರು

ಇಂಧನ ಬೆಲೆ: ಆಶ್ವಾಸನೆ ಜಾರಿಗೆ ಬರಲಿ

ಪೆಟ್ರೋಲ್ - ಡೀಸೆಲ್ ದರ ₹ 100ರ ಗಡಿ ದಾಟಲು ಪ್ರಮುಖವಾಗಿ ಅಂತರರಾಷ್ಟ್ರೀಯ ಮಟ್ಟದಲ್ಲಿ ಏರುತ್ತಿರುವ ಕಚ್ಚಾ ತೈಲದ ಬೆಲೆಯೇ ಕಾರಣ ಎನ್ನಲಾಗುತ್ತಿದೆ. ಇದು ನಿಜವೇ ಎಂದು ಪರಿಶೀಲಿಸಿದರೆ, ಅದು ಶುದ್ಧ ಸುಳ್ಳು ಎಂದು ಸಾಬೀತಾಗುತ್ತಿದೆ. ಉದಾಹರಣೆಗೆ, 2014ರಲ್ಲಿ ನರೇಂದ್ರ ಮೋದಿ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬಂದಾಗ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆ ಬ್ಯಾರೆಲ್ಲಿಗೆ 110 ಡಾಲರಿನ ಆಸುಪಾಸಿನಲ್ಲಿತ್ತು. ಆಗ ಭಾರತದಲ್ಲಿ ಪೆಟ್ರೋಲ್ ದರ ಲೀಟರಿಗೆ ₹ 72ರ ಆಸುಪಾಸಿನಲ್ಲಿತ್ತು. ಈಗ ಅಂತರರಾಷ್ಟ್ರೀಯ ಕಚ್ಚಾ ತೈಲದ ಬೆಲೆ 72 ಡಾಲರ್ ಇದೆ. ಅದರ ಆಧಾರದಲ್ಲಿ ಈಗ ನಮ್ಮಲ್ಲಿ ಪೆಟ್ರೋಲ್ ಬೆಲೆ ₹ 52 ಇರಬೇಕಾಗುತ್ತದೆ.

ಕಳೆದ ಏಳು ವರ್ಷಗಳಲ್ಲಿ ಪೆಟ್ರೋಲ್, ಡೀಸೆಲ್ ಮೇಲೆ 11 ಬಾರಿ ಅಬಕಾರಿ ಸುಂಕವನ್ನು ವಿಧಿಸಿ ₹ 2.65 ಲಕ್ಷ ಕೋಟಿ ಆದಾಯವನ್ನು ಸರ್ಕಾರ ಗಳಿಸಿದೆ. ನೆನಪಿಡಬೇಕಾದ ಅಂಶವೆಂದರೆ, ಆ ಅವಧಿಯಲ್ಲಿ ಕಚ್ಚಾ ತೈಲದ ಬೆಲೆ 110 ಡಾಲರಿನಿಂದ 35 ಡಾಲರಿಗೆ ಬಂದು, ತದನಂತರ ಈಗ 72 ಡಾಲರ್‌ನಲ್ಲಿ ನಿಂತಿದೆ. ಮತ್ತೊಂದು ಅಂಶವೆಂದರೆ, ತೈಲ ಬೆಲೆ ಏರಿಕೆಗೂ ಕೇಂದ್ರ ಸರ್ಕಾರಕ್ಕೂ ಯಾವುದೇ ಸಂಬಂಧವಿಲ್ಲ, ಅದು 'ಸ್ವಾಯತ್ತ ತೈಲ ಕಂಪನಿ'ಗಳ ಜವಾಬ್ದಾರಿ ಎಂದು ಸರ್ಕಾರ ನುಣುಚಿಕೊಳ್ಳುತ್ತಿದೆ. ಇತ್ತೀಚೆಗೆ ಐದು ರಾಜ್ಯಗಳ ಚುನಾವಣೆಯ ಸಂದರ್ಭದಲ್ಲಿ, ಪೆಟ್ರೋಲಿಯಂ ಉತ್ಪನ್ನಗಳ ಬೆಲೆ ಏರಿಕೆ ತನಗೆ ಮುಜುಗರ ಉಂಟು ಮಾಡುತ್ತದೆ ಎಂದು ಈ ಕಂಪನಿಗಳ ಮೇಲೆ ಪ್ರಭಾವ ಬೀರಿ ಬೆಲೆಗಳು ಏರದಂತೆ ನೋಡಿಕೊಂಡಿದೆ. ಈ ಸಂಗತಿಯನ್ನು ಅರಿಯಲಾರದಷ್ಟು ದಡ್ಡರಲ್ಲ ನಮ್ಮ ದೇಶದ ಮತದಾರರು!

ಸಂಪಾದಕೀಯವು (ಪ್ರ.ವಾ., ಜೂನ್ 10) ಗುರುತಿಸಿರುವಂತೆ, ಹಿಂದೆ ಇದ್ದ ಆಡಳಿತಾತ್ಮಕ ಬೆಲೆ ನಿಗದಿ ವಿಧಾನವನ್ನು ವಾಜಪೇಯಿ ನೇತೃತ್ವದ ಸರ್ಕಾರ ಕಿತ್ತುಹಾಕುವಾಗ 'ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬೆಲೆ ಇಳಿಕೆಯಾದರೆ ದೇಶದಲ್ಲಿಯೂ ಬೆಲೆ ತಗ್ಗುತ್ತದೆ' ಎಂದು ನೀಡಿದ್ದ ಆಶ್ವಾಸನೆಯನ್ನು ಈಗಿನ ಸರ್ಕಾರ ವಸ್ತುಶಃ ಜಾರಿಗೆ ತರುವುದು ಒಳ್ಳೆಯದು. ತೈಲ ಬೆಲೆಗಳ ಇಳಿಕೆಯಿಂದ ಹಣದುಬ್ಬರ ಕಡಿಮೆಯಾಗಿ, ಜೀವನಾವಶ್ಯಕ ವಸ್ತುಗಳ ಬೆಲೆಗಳೂ ಇಳಿದು ಜನಸಾಮಾನ್ಯರು ನೆಮ್ಮದಿಯಿಂದ ಬದುಕುವಂತಾಗಲಿ.

ಟಿ.ಸುರೇಂದ್ರ ರಾವ್, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

2011ರ ಗೆಜೆಟೆಡ್ ಪ್ರೊಬೆಷನರಿ ಹುದ್ದೆಗಳ ನೇಮಕಾತಿಯಲ್ಲಿ ಅಕ್ರಮ ಪ್ರಕರಣ: ಆರೋಪಿಗಳ ವಿರುದ್ಧ ತನಿಖೆಗೆ ಅನುಮತಿ ನೀಡಬೇಕೇ?

ಕೆಪಿಎಸ್‌ಸಿ ಭ್ರಷ್ಟರಿಗೆ ರಕ್ಷಣೆ, ಅಕ್ರಮಗಳಿಗೆ ಪ್ರಚೋದನೆ

• ರವಿ ಕೃಷ್ಣಾರೆಡ್ಡಿ



ಕೆಪಿಎಸ್‌ಸಿಯಲ್ಲಿ (ಕರ್ನಾಟಕ ಲೋಕಸೇವಾ ಆಯೋಗ) ಅಕ್ರಮಗಳು ಇತ್ತೀಚಿನ ಬೆಳವಣಿಗೆಗಳೇನೂ ಅಲ್ಲ. 1998, 1999 ಮತ್ತು 2004ರ ಸಾಲಿನ ಗೆಜೆಟೆಡ್ ಪ್ರೊಬೆಷನರಿ ಹುದ್ದೆಗಳ ನೇಮಕಾತಿ ಪ್ರಕ್ರಿಯೆ ಎಷ್ಟು ಅಕ್ರಮಗಳಿಂದ ಕೂಡಿತ್ತು ಎಂದರೆ, ಕೆಪಿಎಸ್‌ಸಿ ಅಧ್ಯಕ್ಷರಾಗಿದ್ದ ಎಚ್.ಎನ್.ಕೃಷ್ಣ ಒಮ್ಮೆ ಜೈಲಿಗೆ ಹೋಗಿಬಂದರು ಮತ್ತು ಈಗಲೂ ವಿಚಾರಣೆ ಎದುರಿಸುತ್ತಿದ್ದಾರೆ. ಆ ಸಾಲಿನ ಅನೇಕ ಅಧಿಕಾರಿಗಳ ಮೇಲೆ ಈಗಲೂ ವಜಾ ಅಥವಾ ಹಿಂಬಡ್ತಿಯ ತೂಗುಗತ್ತಿ ಇದೆ. ವಂಚಿತ ಅಭ್ಯರ್ಥಿಗಳು ತಮಗಾದ ಅನ್ಯಾಯವನ್ನು ಪ್ರಶ್ನಿಸಿ ಹೈಕೋರ್ಟ್‌ಗೆ ಮಾತ್ರವಲ್ಲ, ಸುಪ್ರೀಂ ಕೋರ್ಟ್‌ಗೂ ಪ್ರಕರಣವನ್ನು ಒಯ್ದಿದ್ದಾರೆ ಮತ್ತು ಈಗಲೂ ನ್ಯಾಯಕ್ಕಾಗಿ ಹೋರಾಡುತ್ತಿದ್ದಾರೆ. ಅನ್ಯಾಯ ಮುಂದುವರಿದಿದೆ.

ಆದರೆ, 2011ರ ಸಾಲಿನ ಗೆಜೆಟೆಡ್ ಪ್ರೊಬೆಷನರಿ ಹುದ್ದೆಗಳ ನೇಮಕಾತಿ ಪ್ರಕ್ರಿಯೆಯಲ್ಲಿ ನಡೆದ ಅಕ್ರಮಗಳು ಅನುಮಾನಕ್ಕೆ ಎಡೆಯಿಲ್ಲದಂತೆ ಸ್ಪಷ್ಟವಾಗಿವೆ. 362 ಹುದ್ದೆಗಳ ನೇಮಕಕ್ಕೆ ಕೆಪಿಎಸ್‌ಸಿ 2011ರ ನವೆಂಬರ್ 3ರಂದು ಅರ್ಜಿ ಆಹ್ವಾನಿಸಿ, 2013ರ ಮಾರ್ಚ್ 22ರಂದು ತಾತ್ಕಾಲಿಕ ಪಟ್ಟಿ ಪ್ರಕಟಿಸಿತ್ತು. ಮುಖ್ಯಪರೀಕ್ಷೆಯಲ್ಲಿ ತಮ್ಮ ವಿಭಾಗದಲ್ಲಿ ಅತಿಹೆಚ್ಚು ಅಂಕ ಗಳಿಸಿದ್ದ ಡಾ. ಮೈತ್ರಿ ಎನ್ನುವವರು ವೈಯಕ್ತಿಕ ಸಂದರ್ಶನದಲ್ಲಿ ಕನಿಷ್ಠ ಅಂಕ ಪಡೆದಿದ್ದರು. ಎರಡನೇ ಸ್ಥಾನದಲ್ಲಿದ್ದ ಅಭ್ಯರ್ಥಿಗೆ ವೈಯಕ್ತಿಕ ಸಂದರ್ಶನದಲ್ಲಿ ಗರಿಷ್ಠ ಅಂಕ ಸಿಕ್ಕಿತ್ತು. ಆ ಕಾರಣ ಡಾ. ಮೈತ್ರಿಯವರಿಗೆ ಮೊದಲ ಸ್ಥಾನ ತಪ್ಪಿ ಅವರು ಎಸಿ ಹುದ್ದೆಯಿಂದ ವಂಚಿತರಾದರು. ಅವರ ಪ್ರಕಾರ, ಅವರಿಗೆ ಮೊದಲ ಸ್ಥಾನ ಖಚಿತಪಡಿಸಲು ಕೆಪಿಎಸ್‌ಸಿ ಸದಸ್ಯರ ಕಡೆಯಿಂದ ಪರೋಕ್ಷವಾಗಿ ಲಂಚಕ್ಕೆ ಕೋರಿಕೆ ಇಡಲಾಗಿತ್ತು. ಅದನ್ನು ತಿರಸ್ಕರಿಸಿದ್ದ ಕಾರಣಕ್ಕೆ ತಮಗೆ ಅನ್ಯಾಯವಾಗಿದೆ ಮತ್ತು ಇಡೀ ನೇಮಕಾತಿಯಲ್ಲಿ ಅಕ್ರಮ ನಡೆದಿದೆ ಎಂದು ಡಾ. ಮೈತ್ರಿ ಆಗ ರಾಜ್ಯದ ಅಡ್ವೊಕೇಟ್ ಜನರಲ್‌ಗೆ (ಎ.ಜಿ) ಪತ್ರ ಬರೆದಿದ್ದರು. ವಿಷಯ ಮಾಧ್ಯಮಗಳಲ್ಲಿಯೂ ಚರ್ಚೆಯಾಗಿತ್ತು. ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯು ಎ.ಜಿ ಅಭಿಪ್ರಾಯದ ಮೇರೆಗೆ ವಿಧಾನಸೌಧ ಪೊಲೀಸ್ ಠಾಣೆಗೆ ದೂರು ನೀಡಿತ್ತು. ಇದೊಂದು ಗಂಭೀರ ಪ್ರಕರಣವಾದ ಕಾರಣ, ಸಿದ್ದರಾಮಯ್ಯ ನೇತೃತ್ವದ ಸರ್ಕಾರ ತನಿಖೆಯನ್ನು ಸಿಐಡಿಗೆ ವಹಿಸಿತ್ತು. ದಕ್ಷವಾಗಿ ತನಿಖೆ ಮಾಡಿದ ಸಿಐಡಿ, ನೇಮಕಾತಿಯಲ್ಲಿ ಅಕ್ರಮ, ಸ್ವಜನಪಕ್ಷಪಾತ, ಭ್ರಷ್ಟಾಚಾರ ನಡೆದಿದೆ ಎಂದು ಸರ್ಕಾರಕ್ಕೆ ಮಧ್ಯಂತರ ವರದಿ ಸಲ್ಲಿಸಿತು.

ಆ ಮಧ್ಯಂತರ ವರದಿ ಹಾಗೂ ಇತರ ಮೂಲಗಳ ಆಧಾರದ ಮೇಲೆ 2013ರ ಉತ್ತರಾರ್ಧದಲ್ಲಿ ಈ ಅಕ್ರಮಗಳ ಬಗ್ಗೆ ಪ್ರಜಾವಾಣಿಯಲ್ಲಿ 'ಕೆಪಿಎಸ್‌ಸಿ ಕರ್ಮಕಾಂಡ' ಎನ್ನುವ ಹೆಸರಿನಲ್ಲಿ ಸರಣಿ ವರದಿಗಳು ಪ್ರಕಟವಾಗಿದ್ದವು. ವರದಿಗಳಲ್ಲಿ ಇದ್ದ ಮಾಹಿತಿ ಮತ್ತು ನಡೆದಿದ್ದ ಅಕ್ರಮಗಳ ವಿವರಣೆಯನ್ನು ನೋಡಿ ಇಡೀ ರಾಜ್ಯವೇ ಬೆಚ್ಚಿಬಿತ್ತು.

ಪ್ರಜಾವಾಣಿಯಲ್ಲಿ ಪ್ರಕಟವಾದ ವರದಿಗಳ ಆಧಾರದ ಮೇಲೆ ಈ ಲೇಖನದ ಲೇಖಕನು ಆಗ ಪದಾಧಿಕಾರಿಯಾಗಿದ್ದ ಲೋಕಸತ್ತಾ ಪಕ್ಷವು ಕೆಪಿಎಸ್‌ಸಿ ಅಕ್ರಮಗಳ ವಿರುದ್ಧ ರಾಜ್ಯಾದ್ಯಂತ ದೊಡ್ಡಮಟ್ಟದಲ್ಲಿ ಧ್ವನಿಯೆತ್ತಿತ್ತು. ಕೆಪಿಎಸ್‌ಸಿ ಮುಂದೆ ಧರಣಿ, ವಿವಿಧೆಡೆ ಪತ್ರಿಕಾಗೋಷ್ಠಿಗಳು, ಸತ್ಯಾಗ್ರಹ, ರಾಜ್ಯಪಾಲರ ಭೇಟಿ, 'ಸರ್ಕಾರಿ ನೌಕರಿ ಮಾರಾಟಕ್ಕಿದೆ' ಎನ್ನುವ ಬ್ಯಾನರ್‌ಗಳನ್ನು ವಿಧಾನಸೌಧದ ಸುತ್ತಮುತ್ತ ಪ್ರದರ್ಶಿಸಿದ್ದು ಸೇರಿದಂತೆ ಹಲವು ಹೋರಾಟಗಳ ಮೂಲಕ ವಿಚಾರವನ್ನು ಇನ್ನಷ್ಟು ಕಾಲ ಜೀವಂತ ಇಟ್ಟಿತ್ತು.

ಅಂತಿಮವಾಗಿ, ಜನಾಭಿಪ್ರಾಯಕ್ಕೆ ಮಣಿದ ಸರ್ಕಾರ 2014ರ ಆಗಸ್ಟ್ 8ರಂದು ನೇಮಕಾತಿ ಅಧಿಸೂಚನೆಯನ್ನು ಹಿಂಪಡೆಯಿತು. ಆಯ್ಕೆಪಟ್ಟಿಯಲ್ಲಿದ್ದ ಕೆಲವು ಅಭ್ಯರ್ಥಿಗಳು ಇದನ್ನು ಪ್ರಶ್ನಿಸಿ ಕರ್ನಾಟಕ ಆಡಳಿತ ನ್ಯಾಯಮಂಡಳಿ (ಕೆಎಟಿ) ಮೆಟ್ಟಿಲೇರಿದ್ದರು. ಅಧಿಸೂಚನೆ ರದ್ದುಗೊಳಿಸಿದ್ದ ಸರ್ಕಾರದ ಆದೇಶವನ್ನು ವಜಾಗೊಳಿಸಿದ ಕೆಎಟಿ, ಅರ್ಹ ಅಭ್ಯರ್ಥಿಗಳಿಗೆ ನೇಮಕ ಪತ್ರ ನೀಡುವಂತೆ 2016ರ ಅಕ್ಟೋಬರ್ 19ರಂದು ಆದೇಶಿಸಿತ್ತು. ಕೆಎಟಿ ತೀರ್ಪು ಪ್ರಶ್ನಿಸಿ ವಂಚಿತ ಅಭ್ಯರ್ಥಿಗಳು ಹೈಕೋರ್ಟ್‌ಗೆ ಹೋದರು. ಕೆಎಟಿ ಆದೇಶವನ್ನು ಹೈಕೋರ್ಟ್ ರದ್ದುಪಡಿಸಿತ್ತು. ಸುಪ್ರೀಂ ಕೋರ್ಟ್ ಸಹ ಹೈಕೋರ್ಟ್ ಆದೇಶವನ್ನು ಎತ್ತಿಹಿಡಿದಿತ್ತು.

> ನೇಮಕವಾಗುವಾಗಲೇ ಲಕ್ಷ ಮತ್ತು ಕೋಟಿಗಳಲ್ಲಿ ಹಣ ಕೊಟ್ಟು ಬರುವ ಅಧಿಕಾರಿಗಳು ಕೆಲಸಕ್ಕೆ ಸೇರಿದ ನಂತರ ಭ್ರಷ್ಟಾಚಾರ ಮಾಡದೆ ಇರುತ್ತಾರೆಯೆ? ಈಗ ಲೋಕಾಯುಕ್ತವೂ ದುರ್ಬಲವಾಗಿದೆ ಮತ್ತು ನಿಷ್ಕ್ರಿಯವಾಗಿದೆ. ಎಸಿಬಿ ಎನ್ನುವುದು ಬೆದರುಬೊಂಬೆಯೂ ಅಲ್ಲ.

ಆದರೆ, ದೋಷಾರೋಪ ಪಟ್ಟಿಯಲ್ಲಿ ಹೆಸರಿಸಲ್ಪಟ್ಟಿದ್ದ ಕೆಪಿಎಸ್‌ಸಿಯ ಆಗಿನ ಅಧ್ಯಕ್ಷ ಗೋನಾಳ್ ಭೀಮಪ್ಪ ಮತ್ತು ಇತರ ಸದಸ್ಯರನ್ನು ರಕ್ಷಿಸುವ ಕೆಲಸ ಎಲ್ಲಾ ಸಾಕ್ಷ್ಯಾಧಾರಗಳ ನಡುವೆಯೂ ಜೋರಾಗಿ ನಡೆಯಿತು. ಗೋನಾಳ್ ಭೀಮಪ್ಪನವರು ಸಿದ್ದರಾಮಯ್ಯ ನೇತೃತ್ವದ ಸರ್ಕಾರದಲ್ಲಿ ಪ್ರಭಾವಿ ಮಂತ್ರಿಯಾಗಿದ್ದ ಎಚ್. ಆಂಜನೇಯರ ಹತ್ತಿರದ ಸಂಬಂಧಿ. ಸಂಬಂಧಿಯನ್ನು ರಕ್ಷಿಸುವುದು ತಮ್ಮ ಜವಾಬ್ದಾರಿ ಎಂದು ಸಚಿವರು ಸಾರ್ವಜನಿಕವಾಗಿಯೇ ಹೇಳಿದ್ದರು. ತತ್ಪರಿಣಾಮವಾಗಿ ದೋಷಾರೋಪ ಪಟ್ಟಿಯಲ್ಲಿ ಹೆಸರಿಸಲ್ಪಟ್ಟಿದ್ದ ಕೆಪಿಎಸ್‌ಸಿ ಅಧ್ಯಕ್ಷರು ಮತ್ತು ಇತರರ ವಿಚಾರಣೆ ಆರಂಭವಾಗಲೇ ಇಲ್ಲ. ಅವರ ವಿಚಾರಣೆಗೆ ಸಕ್ಷಮ ಪ್ರಾಧಿಕಾರದ ಅನುಮತಿ ಬೇಕಿದೆ ಎನ್ನುವ ಸಬೂಬನ್ನು ಮುಂದೆ ಮಾಡುತ್ತಾ, ಏಳು ವರ್ಷಗಳಿಂದ ಸಿದ್ದರಾಮಯ್ಯನವರ ನೇತೃತ್ವದ ಸರ್ಕಾರವೂ ಸೇರಿದಂತೆ ಕುಮಾರಸ್ವಾಮಿ ಮತ್ತು ಯಡಿಯೂರಪ್ಪ ಸರ್ಕಾರಗಳು ಆ ತಾಂತ್ರಿಕ ಅಗತ್ಯವನ್ನು ಪೂರೈಸುವ ಕೆಲಸಕ್ಕೆ ಮುಂದಾಗಲೇ ಇಲ್ಲ.

ಇದಿಷ್ಟೇ ಅಲ್ಲ, 2011ರ ನೇಮಕಾತಿ ಪಟ್ಟಿಯಲ್ಲಿದ್ದ ಅನರ್ಹರೂ ಸೇರಿದಂತೆ ಎಲ್ಲಾ ಅಭ್ಯರ್ಥಿಗಳಿಗೆ ನೇಮಕಾತಿ ಪತ್ರ ನೀಡಲು ಇತ್ತೀಚಿನ ದಿನಗಳಲ್ಲಿ ಬಿರುಸಿನ ಚಟುವಟಿಕೆ ನಡೆದಿದೆ. ಈ ತರಹದ ತೀರ್ಮಾನಕ್ಕೆ ಭ್ರಷ್ಟಾಚಾರವೊಂದು ಬಿಟ್ಟರೆ ಇನ್ನಾವುದೇ ಕಾರಣ ಇರಲು ಸಾಧ್ಯವೇ ಇಲ್ಲ.

ಸಿಐಡಿ ವರದಿಯಲ್ಲಿ ದಾಖಲಾಗಿರುವಂತೆ ಆ ಸಾಲಿನ ಅನೇಕ ಅಭ್ಯರ್ಥಿಗಳು ಎಸಿ ಹುದ್ದೆಗೆ ₹1.5 ಕೋಟಿ, ಡಿವೈಎಸ್ಪಿ ಹುದ್ದೆಗೆ ₹80 ಲಕ್ಷ, ತಹಶೀಲ್ದಾರ್ ಹುದ್ದೆಗೆ ₹60 ಲಕ್ಷ ಲಂಚ ನೀಡಿದ್ದರು. ಪ್ರಾಮಾಣಿಕವಾಗಿ ಆಯ್ಕೆಯಾಗಿದ್ದ ಕೆಲವು ಅಭ್ಯರ್ಥಿಗಳ ನೈತಿಕ ಒತ್ತಡವೂ ಇದರಲ್ಲಿ ಅನೈತಿಕವಾಗಿ ಸೇರಿಕೊಂಡು, ಈಗಿನ ಭ್ರಷ್ಟ ಸರ್ಕಾರ ಅಕ್ರಮಗಳನ್ನು ಸಕ್ರಮ ಮಾಡಲು ಮುಂದಾಗಿದೆ ಎಂದು ನಿಸ್ಸಂಶಯವಾಗಿ ಹೇಳಬಹುದು

ಸರ್ಕಾರದ ಇತ್ತೀಚಿನ ಅಕ್ರಮಪರ ನಡೆಗೆ, ವಿರೋಧಪಕ್ಷಗಳಾಗಿರುವ ಕಾಂಗ್ರೆಸ್ ಮತ್ತು ಜೆಡಿಎಸ್‌ನ ಕೆಲವು ನಾಯಕರ ಬೆಂಬಲವೂ ಇದೆ. ಕೆಪಿಎಸ್‌ಸಿಗೆ ಯಾವಾಗಲೂ ಪ್ರಭಾವಶಾಲಿಗಳೇ ನೇಮಕವಾಗುತ್ತಾರೆ. ಗೋನಾಳ್ ಭೀಮಪ್ಪ ಕೆಪಿಎಸ್‌ಸಿಗೆ ನೇಮಕವಾಗಿದ್ದು ಎಚ್.ಡಿ.ಕುಮಾರಸ್ವಾಮಿ ಮೊದಲ ಬಾರಿಗೆ ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ. ಜೊತೆಗೆ ಅವರ ಕುಟುಂಬ ಸದಸ್ಯರಿಗೆ ಹತ್ತಿರವಿದ್ದವರು ಎನ್ನುವ ಆರೋಪವೂ ಇದೆ. ಹಗರಣದ ಮತ್ತೊಬ್ಬ ಪ್ರಮುಖ ಆರೋಪಿ ಮಂಗಳಾ ಶ್ರೀಧರ್ ಮೊದಲು ಬಿಜೆಪಿಯಲ್ಲಿ ಸಕ್ರಿಯವಾಗಿದ್ದವರು ಮತ್ತು ಬಿಜೆಪಿ ಕೋಟಾದಲ್ಲಿ ಸದಸ್ಯರಾದವರು.

ಈ ಸೂಕ್ಷ್ಮಗಳ ಹಿನ್ನೆಲೆಯಲ್ಲಿ ನೋಡಿದಾಗ, 2011ರ ಅಕ್ರಮ ನೇಮಕಾತಿ ಪಟ್ಟಿಯನ್ನು ಅನುಮೋದಿಸಲು ಮತ್ತು ಆರೋಪಿತ ಕೆಪಿಎಸ್‌ಸಿ ಅಧ್ಯಕ್ಷ ಹಾಗೂ ಸದಸ್ಯರ ಮೇಲೆ ಕಾನೂನು ಕ್ರಮಕ್ಕೆ ಶಿಫಾರಸು ಮಾಡದೇ ಇರುವುದರಲ್ಲಿ ಸದ್ಯ ಆಡಳಿತ ನಡೆಸುತ್ತಿರುವವರಿಗೆ ಹಣಕಾಸಿನ ಲಾಭವಿದೆ, ವಿರೋಧಪಕ್ಷದ ನಾಯಕರ ಬೆಂಬಲವಿದೆ ಮತ್ತು ಕಣ್ಣಿಗೆ ಕಾಣಿಸದ ಹಲವು ಕಡೆಗಳಿಂದ ಒತ್ತಡವೂ ಇದೆ ಎಂದು ಖಚಿತವಾಗಿ ಹೇಳಬಹುದು.

ಈಗಲೂ ಕಾಲ ಮಿಂಚಿಲ್ಲ. ಸರ್ಕಾರ ಯಾವುದೇ ಕಾರಣಕ್ಕೂ 2011ರ ನೇಮಕಾತಿ ರದ್ದತಿ ತೀರ್ಮಾನದ ವಿರುದ್ಧವಾಗಿ ಹೋಗಬಾರದು. ಹಾಗೆಯೇ ದೋಷಾರೋಪ ಪಟ್ಟಿಯಲ್ಲಿರುವ ಆರೋಪಿಗಳನ್ನು ವಿಚಾರಣೆಗೆ ಒಳಪಡಿಸಲು ಸೂಕ್ತ ಕ್ರಮ ಕೈಗೊಳ್ಳಬೇಕು. ಇಲ್ಲವಾದಲ್ಲಿ ಈ ಎರಡೂ ವಿಷಯಗಳ ಮೇಲೆ ನ್ಯಾಯಾಂಗ ಹೋರಾಟ ಮಾಡುವುದು ನಮ್ಮಂತಹವರಿಗೆ ಅನಿವಾರ್ಯವಾಗುತ್ತದೆ. ಈಗಾಗಲೇ ಆ ದಿಕ್ಕಿನಲ್ಲಿ ಕೆಲಸಗಳು ಪುನರಾರಂಭವಾಗಿವೆ. ಅಕ್ರಮಗಳನ್ನು ಸಕ್ರಮ ಮಾಡುವ ಸರ್ಕಾರಕ್ಕೆ ಮುಂದಿನ ದಿನಗಳಲ್ಲಿ ಮುಖಭಂಗ ತಪ್ಪಿದ್ದಲ್ಲ.

ಲೇಖಕ: ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷದ ಅಧ್ಯಕ್ಷ

ಪ್ರಜಾವಾಣಿ ಚರ್ಚೆ

ಸತ್ಯಾಂಶ ಮರೆಮಾಚಿದ 'ಪ್ರಕರಣ' ಅಭ್ಯರ್ಥಿಗಳು 'ನ್ಯಾಯ'ಕ್ಕೆ ಅರ್ಹರು

• ಪಿ.ಆರ್. ರಮೇಶ್

2011ರ 362 ಗೆಜೆಟೆಡ್ ಪ್ರೊಬೆಷನರಿ ಹುದ್ದೆಗಳ ನೇಮಕಾತಿ ವಿಚಾರ ಮತ್ತೆ ಮುನ್ನೆಲೆಗೆ ಬಂದಿದೆ. ನೇಮಕಾತಿ ವೇಳೆ ನಡೆದಿದೆ ಎನ್ನಲಾದ ಅವ್ಯವಹಾರಗಳಲ್ಲಿ ಭಾಗಿಯಾದ ಆರೋಪದಲ್ಲಿ ಅಂದಿನ ಅಧ್ಯಕ್ಷರು ಮತ್ತು 9 ಸದಸ್ಯರ ವಿರುದ್ಧ ಭ್ರಷ್ಟಾಚಾರ ಮತ್ತು ಕ್ರಿಮಿನಲ್ ಅಪರಾಧ ಕಾಯ್ದೆಗಳಡಿ ಪ್ರಾಸಿಕ್ಯೂಷನ್‌ಗೆ ಮಂಜೂರಾತಿ ನೀಡುವ ಮತ್ತು ಆಯ್ಕೆಯಾಗಿಯೂ ಹುದ್ದೆ ವಂಚಿತರಾದ ಅಭ್ಯರ್ಥಿಗಳ ಭವಿಷ್ಯದ ವಿಚಾರವಿದು. ಸಂವಿಧಾನ ಮತ್ತು ಕಾನೂನಾತ್ಮಕ ಒಳ ಸುಳಿಯಲ್ಲಿ ಸಿಕ್ಕಿರುವ ಈ ಪ್ರಕರಣವನ್ನು ಈ ಎರಡೂ ಅಂಶಗಳ ಜೊತೆಗೇ, ಹುದ್ದೆ ನಿರೀಕ್ಷೆಯಲ್ಲಿ ಏಳು ವರ್ಷಗಳಿಂದ ಕಾಯುತ್ತಿರುವ ಅಭ್ಯರ್ಥಿಗಳು ಅನುಭವಿಸುತ್ತಿರುವ ಸಂಕಟ– ನೋವಿನ ಹಿನ್ನೆಲೆಯಲ್ಲೂ ನೋಡಬೇಕು.

ನೇಮಕಾತಿ ಪ್ರಕ್ರಿಯೆಯ ಸಂದರ್ಭದಲ್ಲಿ ವ್ಯಾಪಕ ಭ್ರಷ್ಟಾಚಾರ, ಸ್ವಜನಪಕ್ಷಪಾತ ನಡೆದಿದೆ ಎಂಬ ಆರೋಪದ ದೂರಿನ ಹಿನ್ನೆಲೆಯಲ್ಲಿ ಸಿಐಡಿ ಪ್ರಕರಣದ ತನಿಖೆ ನಡೆಸಿತ್ತು. ಆರೋಪಗಳಿಗೆ ಸಂಬಂಧಿಸಿದಂತೆ ಸರ್ಕಾರಕ್ಕೆ ಸಿಐಡಿ ಸಲ್ಲಿಸಿದ್ದ ಮಧ್ಯಂತರ ವರದಿಯನ್ನೇ ಆಧಾರವಾಗಿಟ್ಟು ನೇಮಕಾತಿ ಅಧಿಸೂಚನೆಯನ್ನೇ ರದ್ದುಪಡಿಸಿದ್ದ ಸಿದ್ದರಾಮಯ್ಯ ನೇತೃತ್ವದ ಸರ್ಕಾರ, ಕರ್ನಾಟಕ ಆಡಳಿತ ನ್ಯಾಯಮಂಡಳಿಯ (ಕೆಎಟಿ) ತೀರ್ಪು ಆಧರಿಸಿ ಮತ್ತೆ ನೇಮಕಾತಿ ನಡೆಸಿತ್ತು. ಆದರೆ, ಅದನ್ನು ಪ್ರಶ್ನಿಸಿ ಸಲ್ಲಿಕೆಯಾಗಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಮೇಲೆ ಹೈಕೋರ್ಟ್ ನೀಡಿದ್ದ ತೀರ್ಪಿನ ಬಳಿಕ ಪ್ರಕರಣ ತಿರುವು ಪಡೆದುಕೊಂಡಿತ್ತು. ಇಡೀ ಪ್ರಕರಣದ ಬೆಳವಣಿಗೆಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ ಹಲವು ಹಂತಗಳಲ್ಲಿ ಸತ್ಯಾಂಶಗಳನ್ನು ಮರೆ ಮಾಚಲಾಗಿದೆ. ನ್ಯಾಯಪೀಠವನ್ನೂ ಹಾದಿ ತಪ್ಪಿಸಲಾಗಿದೆ ಎಂಬುದು ತಿಳಿಯುತ್ತದೆ.

ಸಿಐಡಿ ಮಧ್ಯಂತರ ವರದಿಯನ್ನು ರಾಜ್ಯ ಸರ್ಕಾರಕ್ಕೆ 2013ರ ಸೆ. 10ರಂದು ಸಲ್ಲಿಸಿತ್ತು. ಅದನ್ನು ಆಧರಿಸಿ, 362 ಗೆಜೆಟೆಡ್ ಪ್ರೊಬೆಷನರಿಗಳ ನೇಮಕಾತಿಗೆ ಕೆಪಿಎಸ್‌ಸಿಗೆ ನೀಡಿದ್ದ ಅಧಿಸೂಚನೆಯನ್ನು ಸರ್ಕಾರ 2014ರ ಆ. 14ರಂದು ವಾಪಸು ಪಡೆದಿತ್ತು. ಕೆಪಿಎಸ್‌ಸಿಯ ಅಂದಿನ ಅಧ್ಯಕ್ಷರು ಮತ್ತು ಸದಸ್ಯರನ್ನು ಪ್ರಾಸಿಕ್ಯೂಷನ್‌ಗೆ ಒಳಪಡಿಸಲು ಸರ್ಕಾರವು ಸಿಐಡಿಯ ಮಧ್ಯಂತರ ವರದಿಯನ್ನೇ ಆಧರಿಸಿ 2014ರ ಜುಲೈ 18ರಂದು ನಿರ್ಣಯ ತೆಗೆದುಕೊಂಡಿತು. ಸಂವಿಧಾನದ 167ನೇ ವಿಧಿ ಅಡಿಯಲ್ಲಿ ರಾಜ್ಯಪಾಲರಿಗೆ ಸಲ್ಲಿಸಿತು. ಈ ಕಡತದಲ್ಲಿ ಪ್ರಸ್ತಾಪಿಸಿದ್ದ ಅಂಶಗಳನ್ನು ಮರುಪರಿಶೀಲಿಸುವಂತೆ ರಾಜ್ಯಪಾಲರು ವಾಪಸು ಕಳುಹಿಸಿದ್ದರು. ಇದು ಸಂವಿಧಾನದ 163ನೇ ವಿಧಿ ಪ್ರಕಾರ ರಾಜ್ಯಪಾಲರು ತೆಗೆದುಕೊಂಡ ತೀರ್ಮಾನ ಅಂತಿಮ. ಅದನ್ನು ಯಾರೂ ಪ್ರಶ್ನಿಸಲು ಅವಕಾಶ ಇಲ್ಲ. ಆದರೆ, ಈ ಪ್ರಕರಣದಲ್ಲಿ ಸಂವಿಧಾನದ ಈ ಅಂಶ ಉಲ್ಲಂಘನೆಯಾಗಿದೆ.

> ರಾಜ್ಯಪಾಲರ ಅಭಿಪ್ರಾಯಗಳನ್ನು ಮತ್ತು ಸತ್ಯಾಂಶಗಳನ್ನು ಮರೆಮಾಚಿ ಈ ನೇಮಕಾತಿ ಅಧಿಸೂಚನೆ ರದ್ದುಪಡಿಸುವ ಆದೇಶವನ್ನು ಸರ್ಕಾರ ಹಾಗೆಯೇ ಉಳಿಸಿಕೊಂಡಿದೆ. ಹೀಗಾಗಿ, ಅರ್ಹ ಅಭ್ಯರ್ಥಿಗಳು 'ನ್ಯಾಯ' ವಂಚಿತರಾಗಿದ್ದಾರೆ

ಸಿದ್ದರಾಮಯ್ಯ ನೇತೃತ್ವದ ಸರ್ಕಾರದ ಸಚಿವ ಸಂಪುಟ ಸಭೆಯಲ್ಲಿ (2017ರ ಮಾರ್ಚ್ 1) ಈ ನೇಮಕಾತಿ ವಿಚಾರ ಚರ್ಚೆಗೆ ಬಂದಿತ್ತು. ಇಲ್ಲಿ ಸಂವಿಧಾನದ ವಿಧಿ 323(2) ಉಲ್ಲಂಘನೆಯಾಗಿದೆ ಮತ್ತು ಸಿಐಡಿ ವರದಿ ಊಹೆಯಿಂದ ಕೂಡಿದೆ ಎಂಬ ಕೆಎಟಿ ತೀರ್ಪು ಅನ್ನು ಒಪ್ಪಿ, ಎಲ್ಲ ಅಭ್ಯರ್ಥಿಗಳಿಗೂ ನೇಮಕಾತಿ ಆದೇಶ ನೀಡಲು ತೀರ್ಮಾನ ತೆಗೆದುಕೊಳ್ಳಲಾಗಿತ್ತು. ಈ ಸಂದರ್ಭದಲ್ಲಿಯೂ, ಕೆಪಿಎಸ್‌ಸಿ ಅಧ್ಯಕ್ಷರು ಮತ್ತು ಸದಸ್ಯರ ಮೇಲಿನ ಪ್ರಾಸಿಕ್ಯೂಷನ್‌ಗೆ ಸಂಬಂಧಿಸಿದಂತೆ ರಾಜ್ಯಪಾಲರು ವ್ಯಕ್ತಪಡಿಸಿದ್ದ ಅಭಿಪ್ರಾಯ ಮತ್ತು ಸಂವಿಧಾನದ ವಿಧಿ 317ರ ಬಗ್ಗೆ ಗಮನಕ್ಕೆ ತರದೆ ಸತ್ಯಾಂಶಗಳನ್ನು ಮರೆಮಾಚಲಾಗಿದೆ.

ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡಿದ ಸಚಿವ ಸಂಪುಟ ಸಭೆಯ ನಿರ್ಣಯವನ್ನು ಪ್ರಶ್ನಿಸಿ ಸಲ್ಲಿಕೆಯಾಗಿದ್ದ ಪಿಐಎಲ್ ಹೈಕೋರ್ಟ್‌ನಲ್ಲಿ ವಿಚಾರಣೆಗೆ ಬಂದ ಸಂದರ್ಭದಲ್ಲಿ ಕೂಡಾ ಕೆಪಿಎಸ್‌ಸಿ ಸದಸ್ಯರನ್ನು ಪ್ರಾಸಿಕ್ಯೂಷನ್‌ಗೆ ಒಳಪಡಿಸುವ ಬಗ್ಗೆ ರಾಜ್ಯಪಾಲರ ಅಭಿಪ್ರಾಯಗಳನ್ನು ಗಮನಕ್ಕೆ ತರದೆ ಸತ್ಯಾಂಶಗಳನ್ನು ಮುಚ್ಚಿಡಲಾಯಿತು. ಈ ಅಂಶಗಳನ್ನು ಗಮನಿಸಿದಾಗ, ಕೆಪಿಎಸ್‌ಸಿ ಸದಸ್ಯರನ್ನು ಪ್ರಾಸಿಕ್ಯೂಷನ್‌ಗೆ ಒಳಪಡಿಸುವ ಬಗ್ಗೆ ರಾಜ್ಯಪಾಲರ ಅಭಿಪ್ರಾಯಗಳನ್ನು ಎಲ್ಲ ಸಂದರ್ಭಗಳಲ್ಲಿಯೂ ಉದ್ದೇಶಪೂರ್ವಕವಾಗಿ ಮರೆಮಾಚಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ.

ಈ ಪ್ರಕರಣದಲ್ಲಿ ರಾಜ್ಯಪಾಲರ ಸಂವಿಧಾನಾತ್ಮಕ ಮತ್ತು ಕಾನೂನಾತ್ಮಕ ಅಭಿಪ್ರಾಯಗಳನ್ನು ಸರ್ಕಾರ ಪರಾಮರ್ಶೆ ನಡೆಸುತ್ತಿದ್ದರೆ, ನೇಮಕಾತಿ ಅಧಿಸೂಚನೆಯನ್ನೇ ಹಿಂಪಡೆದಿದ್ದ ತನ್ನ ಆದೇಶವನ್ನು ರದ್ದುಪಡಿಸಬೇಕಾಗಿತ್ತು. ರಾಜ್ಯಪಾಲರ ಅಭಿಪ್ರಾಯಗಳನ್ನು ಮತ್ತು ಸತ್ಯಾಂಶಗಳನ್ನು ಮರೆಮಾಚಿ ಈ ನೇಮಕಾತಿ ಅಧಿಸೂಚನೆ ರದ್ದುಪಡಿಸುವ ಆದೇಶವನ್ನು ಸರ್ಕಾರ ಹಾಗೆಯೇ ಉಳಿಸಿಕೊಂಡಿದೆ. ಹೀಗಾಗಿ, ಅರ್ಹ ಅಭ್ಯರ್ಥಿಗಳು 'ನ್ಯಾಯ' ವಂಚಿತರಾಗಿದ್ದಾರೆ.

ಇಲ್ಲಿ ಆಗಿರುವ ಇನ್ನೊಂದು ಸಂವಿಧಾನ ಉಲ್ಲಂಘನೆ ಎಂದರೆ, ಪಿಐಎಲ್ ವಿಚಾರಣೆ ವೇಳೆ ಸರ್ಕಾರದ ಹೆಚ್ಚುವರಿ ಅಡ್ವೊಕೇಟ್ ಜನರಲ್ ಹೈಕೋರ್ಟ್‌ಗೆ ಸಲ್ಲಿಸಿದ ಮಾಹಿತಿಯಲ್ಲಿ ಸಂವಿಧಾನದ ವಿಧಿ 323(2)ರ ಪಾಲನೆಯಾಗಿದೆ ಎಂದು ಮಾಹಿತಿ ನೀಡಿರುವುದು. ಈ ವಿಧಿಯು, 'ಕೆಪಿಎಸ್‌ಸಿಯ ಆಯ್ಕೆ ಪಟ್ಟಿಯನ್ನು ಸರ್ಕಾರ ರದ್ದುಪಡಿಸಬೇಕಾದರೆ, ಹಾಗೆ ರದ್ದುಪಡಿಸುವ ಮುನ್ನ ಅದಕ್ಕೆ ಸೂಕ್ತ ಕಾರಣಗಳನ್ನು ನೀಡಿ ವಿಧಾನಮಂಡಲದ ಎರಡೂ ಸದನಗಳಲ್ಲಿ ಚರ್ಚಿಸಬೇಕು' ಎಂದು ಹೇಳುತ್ತದೆ. ಸಂವಿಧಾನದ ಈ ವಿಧಿಯನ್ನು ಸರ್ಕಾರ ಪಾಲಿಸಿರುವ ಬಗ್ಗೆ ತನ್ನ ತೀರ್ಪಿನಲ್ಲಿ ಹೈಕೋರ್ಟ್ ಉಲ್ಲೇಖಿಸಿದೆ. ಅಂದರೆ, ಈ ವಿಧಿ ಪಾಲಿಸಲಾಗಿದೆ ಎಂದು ತಪ್ಪು ಮಾಹಿತಿ ನೀಡಲಾಗಿತ್ತು.

ಕೆಎಟಿ ಆದೇಶದಂತೆ ಎಲ್ಲ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡಲು ಸಿದ್ದರಾಮಯ್ಯ ನೇತೃತ್ವದ ಸರ್ಕಾರವು ನಿರ್ಧರಿಸಿತ್ತು. ಆಯ್ಕೆ ಪಟ್ಟಿಯನ್ನು ಅಂದಿನ ಸರ್ಕಾರ ಒಪ್ಪಿಕೊಂಡಿದ್ದರಿಂದ ಸಂವಿಧಾನದ ವಿಧಿಯ ಪ್ರಕಾರ ವಿಧಾನಮಂಡಲದಲ್ಲಿ ಚರ್ಚಿಸುವ ಅಗತ್ಯವಿಲ್ಲ. ಆದರೆ, ಚರ್ಚೆ ಆಗದ ವಿಚಾರವನ್ನು ಚರ್ಚೆ ಆಗಿದೆ ಎಂದು ಹೈಕೋರ್ಟ್‌ಗೆ ಮಾಹಿತಿ ನೀಡಿ ಶಾಸಕಾಂಗದ ಹಕ್ಕು ಚ್ಯುತಿ ಮಾಡಲಾಗಿದೆ. ಕೆಎಟಿ ತೀರ್ಪನ್ನು ಒಪ್ಪಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಎಲ್ಲ ಅಭ್ಯರ್ಥಿಗಳಿಗೂ ನೇಮಕಾತಿ ಆದೇಶ ನೀಡಿದ್ದರಿಂದ ಸಂವಿಧಾನದ ವಿಧಿ 323(2)ರ ಪ್ರಕಾರ ನೇಮಕಾತಿ ಪಟ್ಟಿಯನ್ನು ಹಿಂಪಡೆಯುವ ಬಗ್ಗೆ ಯಾವುದೇ ಪ್ರಶ್ನೆ ಉದ್ಭವಿಸುವುದಿಲ್ಲ. 2014ರ ಆಗಸ್ಟ್ 14ರ ಸರ್ಕಾರಿ ಆದೇಶವು ಕಾನೂನಾತ್ಮಕವಾಗಿ ಸಿಂಧು ಆಗಿರಲಿಲ್ಲ ಎಂದು ತನ್ನ ಲಿಖಿತ ಉತ್ತರದಲ್ಲಿ ಸರ್ಕಾರವೇ ಒಪ್ಪಿಕೊಂಡಿದೆ.

ವಿಪರ್ಯಾಸವೆಂದರೆ, ರಾಜ್ಯಪಾಲರು ವ್ಯಕ್ತಪಡಿಸಿದ್ದ ಅಭಿಪ್ರಾಯ ಸರ್ಕಾರದ ಕೈಸೇರಿ ಆರು ವರ್ಷಗಳಾದರೂ ಈವರೆಗೂ ಈ ಬಗ್ಗೆ ಯಾವುದೇ ಕ್ರಮಗಳನ್ನು ರಾಜ್ಯ ಸರ್ಕಾರ ಕೈಗೊಂಡಿಲ್ಲ. ತನಿಖೆಯ ಅಂತಿಮ ವರದಿ ಸಿದ್ಧವಾಗಿಲ್ಲ ಎಂದು ಸಿಐಡಿ ನನಗೆ 2020 ಫೆ. 27ರಂದು ನೀಡಿರುವ ಲಿಖಿತ ಉತ್ತರದಲ್ಲಿ ತಿಳಿಸಿದೆ. ಆದರೆ, ಮಧ್ಯಂತರ ವರದಿಯನ್ನೇ ಅಂತಿಮ ವರದಿ ಎಂದು ಪರಿಗಣಿಸಿ ಎಲ್ಲ ಹಂತಗಳಲ್ಲಿಯೂ ಏಕಪಕ್ಷೀಯವಾಗಿ ತೀರ್ಮಾನ ತೆಗೆದುಕೊಳ್ಳಲಾಗಿದೆ. ಆಯ್ಕೆಯಾಗಿದ್ದ ಎಲ್ಲ ಅಭ್ಯರ್ಥಿಗಳಿಗೆ ಕೆಎಟಿ ತೀರ್ಪು ಆಧರಿಸಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರ ನೇಮಕಾತಿ ಆದೇಶ ನೀಡಿದ್ದರೂ, ಸತ್ಯಾಂಶಗಳನ್ನು ಮುಚ್ಚಿಟ್ಟು, ತಪ್ಪು ಮಾಹಿತಿ ನೀಡಿ ವಂಚನೆ ಮೂಲಕ ಹೈಕೋರ್ಟ್‌ನಿಂದ ತೀರ್ಪು ಪಡೆಯಲಾಗಿದೆ. ಗೊತ್ತಿದ್ದೇ ನಡೆದ ಕೆಲವು 'ಅಚಾತುರ್ಯ'ಗಳನ್ನು ಸರಿಪಡಿಸಿಕೊಳ್ಳಲು ಅವಕಾಶ ಇದ್ದಾಗಲೂ ಆಡಳಿತ ನಡೆಸಿದ ಸರ್ಕಾರಗಳು ತಿದ್ದಿಕೊಳ್ಳಲಿಲ್ಲ. ಪರಿಣಾಮ, ಮಾಡದ ತಪ್ಪಿಗೆ ಅಮಾಯಕ ಅಭ್ಯರ್ಥಿಗಳು ಪರಿತಪಿಸುವಂತಾಗಿದೆ.

ಲೇಖಕ: ವಿಧಾನ ಪರಿಷತ್ ಕಾಂಗ್ರೆಸ್ ಸದಸ್ಯ

ಸಚ್ಚಿದಾನಂದ ಸತ್ಯಸಂದೇಶ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ

ನೇಗಿಲ ದೈವ ರೈತ

'ಬೆಳಗಾಗೆದ್ದು ಯಾರ್ಯಾರ ನೆನೆಯಲಿ' ಅಂತ ಜನಪದಹಾಡಲ್ಲಿ ಗೃಹಿಣಿಯೊಬ್ಬಳು ತನಗೆ ನೆರವಾದವರ ಬಗ್ಗೆ ಕೃತಜ್ಞತೆಯಿಂದ ಸ್ಮರಿಸುತ್ತಾಳೆ. ಭಾರತೀಯ ಸಂಸ್ಕೃತಿಯೇ ಹಾಗೇ, ನಿಷ್ಠೆಯ ನೆತ್ತಿಯ ಮೇಲೆ ಕೂತು ಉಪಕಾರದ ಸ್ಮರಣೆ ಮಾಡುತ್ತದೆ. ನಾಲ್ಕು ಜನಕ್ಕೆ ಒಳ್ಳೆಯದಾಗುವುದಾದರೆ ಯಾವ ತ್ಯಾಗಕ್ಕೂ ಸಿದ್ಧ ವಾದ ಜನರ ದೊಡ್ಡ ಪಟ್ಟಿಯೇ ಭಾರತೀಯ ಪರಂಪರೆಯಲ್ಲಿದೆ. 'ಉಪ್ಪುಂಡ ಮನೆಗೆ ದ್ರೋಹ ಬಗೆಯಬೇಡ' ಎನ್ನುವುದು ನಮ್ಮ ಸಂಸ್ಕೃತಿ. ತ್ಯಾಗದ ಪ್ರತಿರೂಪವೇ ಭಾರತೀಯರು ಅನ್ನುವುದರಲ್ಲೂ ಅತಿಶಯೋಕ್ತಿಯಿಲ್ಲ. ಊರಿಗೆ ಉಪಕಾರವಾಗುವುದಾದರೆ ಪ್ರಾಣತ್ಯಾಗಮಾಡಿ 'ಕೆರೆಗೆ ಹಾರ'ವಾದ ಭಾಗೀರಥಿಯರು ಬಹಳಷ್ಟಿದ್ದಾರೆ.

ಜಗದಲ್ಲಿ ಜೀವವೈವಿಧ್ಯ ಇರುವಂತೆ ಭಾರತದಲ್ಲಿ ಭಾವವೈವಿಧ್ಯವಿದೆ. ಜಗತ್ತಿನ ಯಾವ ಭೂಭಾಗದಲ್ಲೂ ಇಲ್ಲದಷ್ಟು ಜಾತಿ-ಧರ್ಮ-ಭಾಷೆ-ಸಂಸ್ಕೃತಿಗಳು ಇಲ್ಲಿ ಮೇಳೈಸಿವೆ. ಇಲ್ಲಿ ನೂರಾರು ಕೋಟಿ ಜನರು ನೂರಾರು ಸಂಸ್ಕೃತಿ-ಭಾಷೆಯೊಂದಿಗೆ ಸಾಮರಸ್ಯದಿಂದ ಬದುಕುತ್ತಾ ಬಂದಿದ್ದಾರೆ. ಇಲ್ಲಿ ಎಲ್ಲರೂ ಬದುಕಲು ನೆರವು ನೀಡುತ್ತಿರುವುದೇ ರೈತ. ಈ ದೇಶ ಮಾತ್ರವಲ್ಲ, ಇಡೀ ಜಗತ್ತಿಗೇ ರೈತನೇ ಅನ್ನದಾತ. ತಾನು ಹಸಿದಿದ್ದರೂ, ಹಸಿದವರ ಹೊಟ್ಟೆಗೆ ಅನ್ನ ತಿನ್ನಿಸಲು ರಟ್ಟೆ ಮುರಿಯೇ ದುಡಿಯುವ ರೈತ ನನ್ನ ದೃಷ್ಟಿಯಲ್ಲಿ ಪ್ರತ್ಯಕ್ಷ ದೈವ. ಇಂಥ ತ್ಯಾಗಮಯಿ ರೈತನನ್ನ ಮಹಾಕವಿ ಕುವೆಂಪು 'ನೇಗಿಲ ಯೋಗಿ' ಎಂದರು. ನಾನು ಆ ರೈತದೇವರನ್ನ 'ನೇಗಿಲ ದೈವ' ಅಂತ ಕರೆಯುತ್ತೇನೆ.

ಮನುಷ್ಯ ಬದುಕುವುದಕ್ಕೆ ಗಾಳಿ-ನೀರು-ಆಹಾರ ಬಹಳ ಮುಖ್ಯ. ಗಾಳಿ ಮತ್ತು ನೀರನ್ನು ಕಣ್ಣಿಗೆ ಕಾಣದ ದೇವರು ಕರುಣಿಸಿದ್ದಾನೆ. ಆದರೆ ಆಹಾರವನ್ನ ಕಣ್ಣಿಗೆ ಕಾಣುವ ದೇವರು ರೈತ ಮಾತ್ರ ಕೊಡುತ್ತಾನೆ. ಹೀಗಾಗಿ ರೈತ ಈ ಜಗತ್ತಿನ ಪ್ರತ್ಯಕ್ಷ ದೇವರು. ನನ್ನ ಬಾಲ್ಯದ ದಿನಗಳಲ್ಲಿ ಅನುಭವಿಸಿದ ಹಸಿವನ್ನು ಒಂದಿಷ್ಟು ತಣಿಸಿದ್ದು ರೈತರೇ. ಚಿಕ್ಕ ವಯಸ್ಸಿನಲ್ಲೆ ತಾಯಿಯನ್ನು ಕಳೆದುಕೊಂಡ ನನ್ನ ಮತ್ತು ತಂಗಿಯರನ್ನ ಆದರಿಸಿ ಬೆಳೆಸಿದ್ದು ರೈತರೇ. ಅವರ ಋಣ ನನ್ನ ಹೆತ್ತ ತಾಯಿಯ ಋಣದಷ್ಟೇ ಇದೆ. ಹಸಿದ ನಮ್ಮ ಒಡಲಿಗೆ ರೈತರು ನೀಡುತ್ತಿದ್ದ ಹಣ್ಣುಗಳೆ ಆಧಾರವಾಗಿತ್ತು. ಯಾರ ಮನೆಗೇ ಹೋದರೂ 'ಬ್ರಾಹ್ಮಣರ ಮಕ್ಕಳು, ನಮ್ಮ ಮನೆ ಅನ್ನ ತಿನ್ನಲಾರ'ರೆಂದು ಹಣ್ಣುಗಳನ್ನು ಕೊಡುತ್ತಿದ್ದರು. ಆದರೆ ನಮ್ಮ ಹಸಿವಿಗೆ ಹಣ್ಣು ಬೇಡ, ಅನ್ನ ಕೊಡಿ ಅಂತ ಕೂಗಿ ಕೇಳಲು ನಮಗೆ ಬಾಯಿ ಬರುತ್ತಿರಲಿಲ್ಲ. ಹಸಿವು ತಣಿಸುವ ಅನ್ನಕ್ಕೆ, ರೋಗ ಗುಣಪಡಿಸುವ ಔಷಧಿಗೆ ಯಾವ ಜಾತಿ? ಯಾವ ಧರ್ಮ?

ರೈತನ ಬೆಳೆಗೆ ಯಾರೂ ಬೆಲೆ ಕಟ್ಟಲಾಗದು. ಅದು ನಮಗೆಲ್ಲಾ ನಿತ್ಯ ಚೈತನ್ಯ ನೀಡುವ ದಿವ್ಯೌಷಧ. ಇಂಥ ಹಸಿವು ನೀಗಿಸುವ ನಿತ್ಯ ಸಂಜೀವಿನಿ ನೀಡುವ ರೈತ ನಮ್ಮೆಲ್ಲರ ಪಾಲಿಗೆ ಯಾವತ್ತೂ ಪ್ರತ್ಯಕ್ಷ ದೇವರು. ನನ್ನ ತಾಯಿ ಸಾಯುವ ಕೊನೆ ಘಳಿಗೆಯಲ್ಲೂ ನನಗೆ ಮತ್ತು ನನ್ನ ಸೋದರಿಯರಿಗೆ ಉಪದೇಶಿಸಿದ್ದು 'ಅನ್ನ ಇಕ್ಕಿದವರ ಕೈ ಕೊನೆ ಉಸಿರಿರುವವರೆಗೂ ಮರೆಯಬೇಡ. ಒಂದು ತೊಟ್ಟು ನೀರು ಕೊಟ್ಟರೂ ಅವರ ಋಣ ತೀರಿಸು' ಅಂತ. ನಾನು ಅನ್ನವಿಕ್ಕಿದ ಕೈಗಳನ್ನು ಮರೆತಿಲ್ಲ. ನೀರು ಕೊಟ್ಟವರ ಮನೆಗಳನ್ನ ಮರೆತಿಲ್ಲ. ಮೇಕೆದಾಟುವಿನಲ್ಲಿ ಹುಟ್ಟಿ ಮೈಸೂರಿನಲ್ಲಿ ಬೆಳೆಯುವವರೆಗೂ ನನ್ನೀ ದೇಹ ಹಲವರ ಉಪಕಾರದಿಂದ ಬೆಳೆದಿದೆ. ಅದರಲ್ಲಿ ರೈತರ ಸಹಾಯಹಸ್ತವೇ ಹೆಚ್ಚು. ಆ ಅನ್ನ ನೀಡಿದ ಕೈಗಳನ್ನು ಶ್ರೀದತ್ತಾತ್ರೇಯನ ಪಾದದಷ್ಟೆ ಪವಿತ್ರವಾಗಿ ಕಾಣುತ್ತೇನೆ. ಆಗ ಶ್ರೀಸಚ್ಚಿದಾನಂದ ಪದತಲದಲ್ಲಿ ಮಿಂದೆದ್ದ ಆನಂದ ಸಿಗುತ್ತದೆ.

ಗುಂಡಣ್ಣ



ದಿನ ಭವಿಷ್ಯ

ಶನಿವಾರ ಜೂನ್ 12, 2021

ಶ್ರೀಪ್ಲವ ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ಜ್ಯೇಷ್ಠ ಮಾಸ ಶುಕ್ಲ ಪಕ್ಷ ಮಳೆ ನಕ್ಷತ್ರ ಮೃಗಶಿರ ದ್ವಿತೀಯ ಗಂ. 29-45 (ಸಾ. 5-56) ಶನಿವಾರ ನಿತ್ಯ ನಕ್ಷತ್ರ ಆರ್ದ್ರ ಗಂ. 23-17 (ಹ. 3-20) ಗಂಡ ನಾಮ ಯೋಗ ಗಂ. 5-49 ಕೌಲವ ಕರಣ ಗಂ. 29-45 ವಿಷ ಗಂ. 55-24 ಅಮೃತ ಗಂ. 6-22 : ರಾಹುಕಾಲ ಬೆ. ಗಂ. 9-00 ರಿಂದ 10-30 ಗುಳಿಕ ಕಾಲ ಬೆ. ಗಂ 6-00 ರಿಂದ 7-30 ಯಮಗಂಡ ಮ. ಕಾಲ ಗಂ 1-30 ರಿಂದ 3-00 ಸೂರ್ಯೋದಯ: 5-56 ಸೂರ್ಯಾಸ್ತ: 6-41 ಅದೃಷ್ಟ ಸಂಖ್ಯೆ 7

ಮೇಷ: ಗಣಿಗಾರಿಕೆ, ಕಲ್ಲು ಕೆಲಸಗಾರರಿಗೆ ಬೇಡಿಕೆ ಹೆಚ್ಚಿ ಉತ್ತಮ ಆದಾಯ ದೊರಕಲಿದೆ. ಸರ್ಕಾರದಿಂದ ಬರಬೇಕಾದ ಸಹಾಯಧನ ದೊರಕುವ ಸಾಧ್ಯತೆ. ಧಾರ್ಮಿಕ ಕಾರ್ಯಗಳಲ್ಲಿ ಭಾಗವಹಿಸಲಿದ್ದೀರಿ.

ವೃಷಭ: ಉದ್ಯೋಗದ ವಿಷಯದಲ್ಲಿ ಭಾಗ್ಯೋದಯದ ವಾರ್ತೆಯನ್ನು ಕೇಳಲಿದ್ದೀರಿ. ಮಿತ್ರರ ಔದಾರ್ಯವು ದೊರಕುವುದು. ಆರ್ಥಿಕ ಅಭಿವೃದ್ಧಿ. ಬಂಧುಗಳೊಂದಿಗೆ ಅತಿಯಾದ ಜಿಗುಟುತನದಿಂದಾಗಿ ವಿರಸ ಉಂಟಾದೀತು.

ಮಿಥುನ: ನಿವೇಶನ ಅಥವಾ ಭೂಮಿ ಖರೀದಿ ಸಾಧ್ಯತೆ. ಪತ್ರ ವ್ಯವಹಾರ ನಡೆಸುವಾಗ ಯೋಚಿಸಿ ಮುಂದುವರಿಯಿರಿ. ನಾನಾ ಮೂಲಗಳಿಂದ ಸಂಪದಾಭಿವೃದ್ಧಿಯನ್ನು ಕಾಣಲಿದ್ದೀರಿ. ಆರೋಗ್ಯದ ಬಗ್ಗೆ ಕಾಳಜಿ ಅಗತ್ಯ.

ಕರ್ಕಾಟಕ: ವ್ಯವಹಾರದಲ್ಲಿ ಹೊಸ ಯೋಜನೆಯನ್ನು ಪ್ರಾರಂಭಿಸುವ ಸಾಧ್ಯತೆ ಅಥವಾ ಹೊಸ ಉದ್ಯೋಗವೊಂದನ್ನು ಕೈಗೊಳ್ಳಲಿದ್ದೀರಿ. ಹತ್ತಿ, ಬಟ್ಟೆ ವ್ಯಾಪಾರದಿಂದ ಅಧಿಕ ಲಾಭ.

ಸಿಂಹ: ಉದ್ಯೋಗದಲ್ಲಿ ಪ್ರಗತಿ. ಬಟ್ಟೆ, ಶೃಂಗಾರ ಸಾಮಗ್ರಿಗಳ ವ್ಯಾಪಾರಸ್ಥರು, ಪ್ರಸಾದನ ಕಲಾವಿದರಿಗೆ ಹೆಚ್ಚಿನ ಲಾಭ. ಮಹಿಳಾ ರಾಜಕಾರಣಿಗಳಿಗೆ ಜನ ಬೆಂಬಲದೊಂದಿಗೆ ಗೌರವ ಪ್ರತಿಷ್ಠೆಗಳು ಪ್ರಾಪ್ತವಾಗುವವು.

ಕನ್ಯಾ: ಕ್ರೀಡೆ ಮುಂತಾದ ಸ್ಪರ್ಧೆಯಲ್ಲಿ ಭಾಗವಹಿಸುವವರಿಗೆ ಸ್ವಲ್ಪಮಟ್ಟಿನ ಹಿನ್ನಡೆ. ಉಪಾಧ್ಯಾಯರು, ಉಪನ್ಯಾಸಕರು ಮುಂತಾದ ಗಣ್ಯರುಗಳಿಗೆ ಸನ್ಮಾನ, ಗೌರವಗಳು ಪ್ರಾಪ್ತವಾಗಲಿದೆ. ಅಲಂಕಾರಿಕ ವಸ್ತುಗಳ ಖರೀದಿ ಸಾಧ್ಯತೆ.

ತುಲಾ: ವಿದ್ಯಾರ್ಥಿಗಳಿಗೆ ಒತ್ತಡದ ಪರಿಸ್ಥಿತಿ ನಿರ್ಮಾಣವಾಗುವ ಸಾಧ್ಯತೆ. ತಾಳ್ಮೆ ಮತ್ತು ಬುದ್ಧಿಮತ್ತೆಯಿಂದಾಗಿ ಯಶಸ್ಸು. ಆಹಾರ ಧಾನ್ಯಗಳ ವ್ಯಾಪಾರಸ್ಥರಿಗೆ ಉತ್ತಮ ವ್ಯವಹಾರದಿಂದಾಗಿ ಅಧಿಕ ಆದಾಯ ದೊರಕುವುದು.

ವೃಶ್ಚಿಕ: ಉದ್ಯೋಗದಲ್ಲಿ ಯಶಸ್ಸು ಮತ್ತು ಖ್ಯಾತಿ ದೊರಕುವುದು. ಮಕ್ಕಳಿಗೆ ಅದೃಷ್ಟವು ಒದಗಿ ಬರುವುದು. ಷೇರುಪೇಟೆ ವಹಿವಾಟುದಾರರಿಗೆ ವ್ಯವಹಾರದಲ್ಲಿ ಹೆಚ್ಚಳವಾಗುವ ಸಾಧ್ಯತೆ.

ಧನು: ಕಬ್ಬಿಣ, ಉಕ್ಕು ಮುಂತಾದ ಕಪ್ಪು ಲೋಹಗಳ ವ್ಯಾಪಾರಸ್ಥರು ತಕ್ಕಮಟ್ಟಿನ ಲಾಭ ಹೊಂದಲಿದ್ದೀರಿ. ವಿಶೇಷ ಕೆಲಸದ ನಿಮಿತ್ತ ದೂರದ ಪ್ರಯಾಣ ಮಾಡಬೇಕಾದೀತು. ಮಂಗಳ ಕಾರ್ಯಗಳ ಸಲುವಾಗಿ ಮಾತುಕತೆ.

ಮಕರ: ದೊಡ್ಡ ದೊಡ್ಡ ಸಾಹಸದ ಕಾರ್ಯಗಳನ್ನು ಕೈಗೊಳ್ಳಲಿದ್ದೀರಿ. ಖರೀದಿ ವ್ಯವಹಾರದಲ್ಲಿ ತೊಡಕುಂಟಾಗಿ ದುಂದು ವೆಚ್ಚವನ್ನು ಭರಿಸಬೇಕಾದೀತು. ಮನೆಯವರೊಂದಿಗೆ ವಿರಸವುಂಟಾಗುವ ಸಾಧ್ಯತೆ ಕಂಡುಬರುತ್ತಿದೆ.

ಕುಂಭ: ಸ್ಥಿರಾಸ್ತಿ ಖರೀದಿ ಮಾಡುವ ಸಾಧ್ಯತೆ. ವಿದ್ಯುತ್, ಬೆಂಕಿ ಮುಂತಾದವುಗಳ ಜೊತೆ ಕೆಲಸ ಮಾಡುವವರು ಅತ್ಯಂತ ಜಾಗರೂಕರಾಗಿರುವುದು ಒಳಿತು. ವಿವಿಧ ಮೂಲಗಳಿಂದ ಆದಾಯವು ಹರಿದುಬರಲಿದೆ.

ಮೀನ: ವೈದ್ಯ ವೃತ್ತಿಯಲ್ಲಿರುವವರಿಗೆ, ವಾಣಿಜ್ಯ ಬೆಳೆಗಳ ದಲ್ಲಾಳಿಗಳಿಗೆ ಉತ್ತಮ ಆದಾಯ. ಅರಣ್ಯಾಧಿಕಾರಿಗಳಿಗೆ ಅನಿರೀಕ್ಷಿತ ವರಮಾನ ದೊರಕಲಿದೆ. ಕ್ರೀಡಾಪಟುಗಳಿಗೆ ಹಂತ ಹಂತವಾಗಿ ಯಶಸ್ಸಿನ ಮೆಟ್ಟಿಲು ದೊರಕುವುದು.

ನಿಮ್ಮ ಜನ್ಮದಿನ 12-ಜೂನ್ ಈ ದಿನ ಅತ್ಯಂತ ಶುಭಕರ. ಉದ್ಯೋಗ ಕ್ಷೇತ್ರದಲ್ಲಿ ಹೊಸ ತಿರುವು ತೆಗೆದುಕೊಳ್ಳುವ ಮೂಲಕ ನೆಮ್ಮದಿಯ ಬದುಕಿಗೆ ನಾಂದಿಯಾಗುವುದು. ವಿವಾಹಾಕಾಂಕ್ಷಿಗಳಿಗೆ ಉತ್ತಮ ಗುಣದ ಸಂಗಾತಿಯು ದೊರೆತು ಸಂಬಂಧ ವೃದ್ಧಿಯಾಗುವುದು. ಕುಟುಂಬದಲ್ಲಿ ಹೊಸ ವ್ಯಕ್ತಿಗಳ ಆಗಮನದಿಂದ ಸಂತಸದ ದಿನಗಳು ಬಂದೊದಗುವುದು.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ

9606038256

✗ **'ಅಸ್ಸಾಂನಲ್ಲೇ** ಪ್ರತ್ಯೇಕ ಬಾಂಗ್ಲಾದೇಶಕ್ಕೆ ಆಗ್ರಹಿಸಿ ಅಲ್ಲಿನ ಮುಸ್ಲಿಮರು ಪ್ರತಿಭಟನೆ ನಡೆಸುತ್ತಿದ್ದಾರೆ. ಈ ಸಲುವಾಗಿ ಪೊಲೀಸರ ಜತೆ ಘರ್ಷಣೆಗೆ ಇಳಿದಿದ್ದಾರೆ. ಮತ್ತೆ ಭಾರತವನ್ನು ವಿಭಜನೆ ಮಾಡಲು ಯತ್ನಿಸುತ್ತಿದ್ದಾರೆ' ಎಂಬ ವಿವರ ಇರುವ ಪೋಸ್ಟ್‌ಗಳು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ. ಮುಸ್ಲಿಮರು ಪ್ರತಿಭಟನೆ ನಡೆಸುತ್ತಿರುವ ಮತ್ತು ಪೊಲೀಸರ ಜತೆ ಘರ್ಷಣೆಗೆ ಇಳಿದಿರುವ ಹತ್ತಾರು ವಿಡಿಯೊಗಳನ್ನು ಈ ಪೋಸ್ಟ್‌ಗಳ ಜತೆ ಹಂಚಿಕೊಳ್ಳಲಾಗಿದೆ. ಮುಸ್ಲಿಮರು ಮತ್ತೆ ದೇಶ ವಿಭಜನೆ ಮಾಡಲು ಬಿಡಬಾರದು ಎಂದು ಈ ಪೋಸ್ಟ್‌ಗಳಲ್ಲಿ ಆಗ್ರಹಿಸಲಾಗಿದೆ.

✓ **ಆದರೆ ಈ ವಿಡಿಯೊಗಳ** ಜತೆ ಹಂಚಿಕೊಳ್ಳಲಾಗಿರುವ ಸುದ್ದಿ ಮತ್ತು ವಿವರ ಸುಳ್ಳು ಎಂದು ಆಲ್ಟ್ ನ್ಯೂಸ್ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ. ಈ ವಿಡಿಯೊಗಳಲ್ಲಿ ಇರುವ ಪ್ರತಿಭಟನಕಾರರು ಮತ್ತು ಪೊಲೀಸರಲ್ಲಿ ಒಬ್ಬರೂ ಮಾಸ್ಕ್ ಧರಿಸಿಲ್ಲ. ಹೀಗಾಗಿ ಇದು ಕೋವಿಡ್ ಪೂರ್ವದಲ್ಲಿ ನಡೆದಿದ್ದ ಪ್ರತಿಭಟನೆಯ ಚಿತ್ರ ಎಂಬುದು ಸಾಬೀತಾಗಿದೆ. ಮೂಲ ವಿಡಿಯೊಗಳನ್ನು ಹುಡುಕಿದಾಗ ಅದು 2017ರ ಜುಲೈನಲ್ಲಿ ನಡೆದ ಪ್ರತಿಭಟನೆ ಎಂಬುದು ಪತ್ತೆಯಾಯಿತು. ಪೌರತ್ವ ನೋಂದಣಿಯ ಅಂಗವಾಗಿ 'ಅನುಮಾನಾಸ್ಪದ ಪೌರರು' ಎಂಬ ಪಟ್ಟಿಯನ್ನು ವಿರೋಧಿಸಿ ನಡೆದಿದ್ದ ಪ್ರತಿಭಟನೆಯ ವಿಡಿಯೊಗಳು ಇವು ಎಂದು ಆಲ್ಟ್‌ನ್ಯೂಸ್ ವರದಿ ಮಾಡಿದೆ.

ಪದಬಂಧ 4625 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ನೀರಿನ ಹಬೆಯಿಂದಲೇ ಕಂಡು ಹಿಡಿಯುವುದು! (4)
3.ಹೊಟ್ಟೆಯೊಳಗೆ ಭ್ರೂಣವಿರುವ ಚೀಲ (4)
5.ತೂಕ ಮಾಡುವ ಸಾಧನ (3)
6.ನಸುಕಿನಲ್ಲಿ ಬಿದ್ದಿರುವ ಸ್ವಪ್ನ (3)
8.ಜಗಳಕ್ಕೊಂದು ಪರ್ಯಾಯ ಪದ (3)
9.ಹಿಂದಿಯವನು ನೀಡಿದ ಅಡಿಕೆ (3)
10.ವರನಿಗೆ ನೀಡಿದ ಚಿನ್ನದ ನಾಣ್ಯ (3)
12.ಹಾಡಿನ ಪುನರಾವರ್ತನೆಗೊಳ್ಳುವ ಭಾಗ (3)
14.ಅಜ್ಞಾನವನ್ನು ನಿವಾರಿಸುವವನು ಈ ತರ ಬಂದಿದ್ದಾನೆ (4)
15.ಕಗ್ಗೊಲೆಯ ಘಟನೆಯಿದು (4)

ಮೇಲಿಂದ ಕೆಳಕ್ಕೆ
1.ಪೂಜೆ ಮಾಡುವವನು (4)
2.ರಜದಲ್ಲಿ ಖರೀದಿಸಿದ ಬೆಳ್ಳಿ (3)
3. ವ್ಯಾಯಾಮ ಶಾಲೆಯಿದು (3)
4.ಮಲಗುವ ಮನೆ (4)
7.ಚಿನ್ನದ ಬಣ್ಣದ ಲೋಹದ ಪುಡಿ (3)
8.ಈತ ಬಲು ಪೆದ್ದ! (3)
9.ಸುಂದರವಾದ ಅರುಣೋದಯ (4)
11.ಬಯಕೆ ಹೀಗೆ ಬಂದಿದೆ (4)
12.ಉತ್ತರದ ಕಡೆಯವರ ವೇತನ (3)
13.ವಿಶೇಷವಾದ ದ್ರೋಹ (3)



4624ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 2.ಸಮಕಾಲೀನ 4.ಅಕ್ಷರ 5.ವರಾಹ 9.ನಾಳೆ 10.ಕಾರ್ತೀಕ 11.ಶವ 12.ವರ್ಧರಂತ 15.ಜವಾನ 16.ಸಹಗಮನ

ಮೇಲಿಂದ ಕೆಳಕ್ಕೆ: 1.ವಿಕಾಸ 2.ಸರ 3.ನವ 4.ಅವಿನಾಭಾವ 6.ಹಯವದನ 7.ಠೇಂಕಾರ 8.ಆಕರ 13.ತಿಸ 14.ಮಗಳು 15.ಜನ

ಸುಡೊಕು 5011

3		2	1		4		6	7
							3	2
7			6		2	5		
2					3			5
				4		2	9	
			9					1
	4	1	2				8	
9				7	8		5	
	6			5		4	2	9

ಆಡುವುದು ಹೇಗೆ? ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5010 ಸುಡೊಕು

5	4	6	1	7	9	3	2	8
3	8	9	2	6	4	5	1	7
7	2	1	8	5	3	4	6	9
8	9	3	5	2	1	6	7	4
1	5	2	6	4	7	8	9	3
4	6	7	3	9	8	1	5	2
9	3	5	7	8	6	2	4	1
2	1	4	9	3	5	7	8	6
6	7	8	4	1	2	9	3	5

ದೇಶದಾದ್ಯಂತ ಕಾಂಗ್ರೆಸ್ ಪ್ರತಿಭಟನೆ: ಅಬಕಾರಿ ಸುಂಕ ಕೈಬಿಡಲು ಆಗ್ರಹ

ತೈಲ ಬೆಲೆ ಏರಿಕೆಗೆ ಆಕ್ರೋಶ

ಪ್ರಜಾವಾಣಿ ವಾರ್ತೆ

ನವದೆಹಲಿ: ತೈಲ ಬೆಲೆ ಏರಿಕೆಯನ್ನು ವಿರೋಧಿಸಿ ಮತ್ತು ಪೆಟ್ರೋಲ್, ಡೀಸೆಲ್ ಮೇಲಿನ ಅಬಕಾರಿ ಸುಂಕವನ್ನು ಸರ್ಕಾರ ತಕ್ಷಣ ಹಿಂಪಡೆಯಬೇಕು ಎಂದು ಆಗ್ರಹಿಸಿ ಕಾಂಗ್ರೆಸ್ ಕಾರ್ಯಕರ್ತರು ದೇಶದ ವಿವಿಧೆಡೆ ಪ್ರತಿಭಟಿಸಿದರು.

ವಿವಿಧೆಡೆ ಪೆಟ್ರೋಲ್ ಬಂಕ್‌ಗಳ ಬಳಿ ಪಕ್ಷದ ಹಿರಿಯ ನಾಯಕರು, ಕಾರ್ಯಕರ್ತರ ಒಟ್ಟುಗೂಡಿ ಕೇಂದ್ರ ಸರ್ಕಾರದ ವಿರುದ್ಧ ಬಿತ್ತಿಫಲಕ ಪ್ರದರ್ಶಿಸಿ, ಘೋಷಣೆಗಳನ್ನು ಹಾಕಿದರು.

‘ಪೆಟ್ರೋಲಿಯಂ ಉತ್ಪನ್ನಗಳ ಮೇಲೆ ಹೆಚ್ಚಿನ ತೆರಿಗೆ ವಿಧಿಸಿ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ಜನಸಾಮಾನ್ಯರ ಲೂಟಿ ಮಾಡುತ್ತಿದೆ’ ಎಂದು ಆಕ್ರೋಶ ವ್ಯಕ್ತಪಡಿಸಿದರು.

‘ಜಿಡಿಪಿ ಕುಸಿಯುತ್ತಿದೆ. ನಿರುದ್ಯೋಗ ಹೆಚ್ಚುತ್ತಿದೆ. ತೈಲ ಬೆಲೆ ಗಗನಕ್ಕೇರುತ್ತಿದೆ. ದೇಶವನ್ನು ಲೂಟಿ ಮಾಡಲು ಬಿಜೆಪಿಗೆ ಇನ್ನೂ ಎಷ್ಟು ಮಾರ್ಗಗಳಿವೆ’ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಟ್ವೀಟ್ ಮಾಡಿ ಕಿಡಿಕಾರಿದರು.

ಅಮೃತಸರದಲ್ಲಿ ಶುಕ್ರವಾರ ಕಾಂಗ್ರೆಸ್ ಕಾರ್ಯಕರ್ತರು ಪ್ರತಿಭಟನೆ ನಡೆಸಿದ ಸಂದರ್ಭದಲ್ಲಿ ಕಾರಿಗೆ ಬೆಂಕಿ ಹಚ್ಚಿ ಆಕ್ರೋಶ ವ್ಯಕ್ತಪಡಿಸಿದರು –ಪಿಟಿಐ ಚಿತ್ರ

‘ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ತಯ ಜನವರಿ 1ರಿಂದ ₹45 ಏರಿಕೆ ಕಂಡಿದೆ. ಜನರನ್ನು ಲೂಟಿ ಮಾಡಲಾಗುತ್ತಿದೆ ಎಂಬುದಕ್ಕೆ ಇದಕ್ಕಿಂತ ಬೇರೆ ನಿದರ್ಶನ ಬೇಕೆ? ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೆವಾಲಾ ಅಸಮಾಧಾನ ಹೊರಹಾಕಿದರು. ಪಕ್ಷದ ನಾಯಕರಾದ ಕೆ.ಸಿ. ವೇಣುಗೋಪಾಲ್ ಮತ್ತು ಶಕ್ತಿ ಸಿಂಗ್ ಗೋಹಿಲ್ ಕುದುರೆ ಗಾಡಿ ಏರಿ ಫಿರೋಜ್ ಷಾ ಕೋಟ್ಲಾ ಕ್ರೀಡಾಂಗಣ ಸಮೀಪದ ಪೆಟ್ರೋಲ್ ಬಂಕ್ ಸಮೀಪ ಪ್ರತಿಭಟನೆ ನಡೆಸಿದರು.

‘ಯುಪಿಎ ಸರ್ಕಾರದ ಅವಧಿಯಲ್ಲಿ ಪೆಟ್ರೋಲ್ ಮೇಲಿನ ತೆರಿಗೆ ₹9.20 ಇತ್ತು, ಇದೀಗ ₹32ಕ್ಕೆ ತಲುಪಿದೆ. ಪೆಟ್ರೋಲ್, ಡೀಸೆಲ್ ಮೇಲೆ ಅಬಕಾರಿ ಸುಂಕ ವಿಧಿಸುವುದನ್ನು ನಿಲ್ಲಿಸಬೇಕು. ಇವುಗಳನ್ನು ಜಿಎಸ್‌ಟಿ ವ್ಯಾಪ್ತಿಗೆ ತರಬೇಕು. ಬೆಲೆ ಏರಿಕೆಯನ್ನು ಸಂಪೂರ್ಣ ನಿಯಂತ್ರಿಸಬೇಕು’ ಎಂದು ವೇಣುಗೋಪಾಲ್ ಒತ್ತಾಯಿಸಿದರು.

ಎಐಸಿಸಿ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ಶಿಮ್ಲಾಗೆ ಖಾಸಗಿ ಭೇಟಿ ನೀಡಿದ್ದು, ಪ್ರತಿಭಟನೆಯಲ್ಲಿ ಇರಲಿಲ್ಲ. ಅವರ ನಿರ್ದೇಶನದಂತೆ ಉತ್ತರಪ್ರದೇಶದಲ್ಲಿ ನಡೆದ ಪ್ರತಿಭಟನೆಯಲ್ಲಿ ಕಾಂಗ್ರೆಸ್ ನಾಯಕರು ಪಾಲ್ಗೊಂಡಿದ್ದರು.

ಕೋವಿಡ್–19 ಸಾಂಕ್ರಾಮಿಕದ ಕಾರಣಕ್ಕೆ ಪ್ರತಿಭಟನೆಗಳನ್ನು ನಿರ್ಬಂಧಿಸಲಾಗಿತ್ತು. ಕೋವಿಡ್ ಮಾರ್ಗಸೂಚಿ ಉಲ್ಲಂಘಿಸಿ ಪ್ರತಿಭಟಿಸಿದ ಆರೋಪದಡಿ ದೇಶದ ವಿವಿಧೆಡೆ ಕಾರ್ಯಕರ್ತರನ್ನು ಪೊಲೀಸರು ಬಂಧಿಸಿದ್ದಾರೆ. ದೆಹಲಿಯಲ್ಲಿ ಸದ್ಯ ಒಂದು ಲೀಟರ್ ಪೆಟ್ರೋಲ್‌ಗೆ ₹95.85, ಡೀಸೆಲ್ ಲೀಟರ್‌ಗೆ ₹86.75 ಇದೆ. ಮಧ್ಯಪ್ರದೇಶ, ಮಹಾರಾಷ್ಟ್ರ, ಆಂಧ್ರಪ್ರದೇಶ, ತೆಲಂಗಾಣ, ರಾಜಸ್ಥಾನ, ಲಡಾಕ್‌ನಲ್ಲಿ ಲೀಟರ್ ದರ ₹100ಕ್ಕೆ ತಲುಪಿದೆ.

ಹೊಸ–ಹಳೆಯ ಚಾಲಿ ಅಡಿಕೆ ದರ ಏರುಮುಖ

• ಶಶಿಧರ ರೈ ಕುತ್ಯಾಳ

ಪುತ್ತೂರು: ಕ್ಯಾಂಪ್ಕೊದ ಹೊರಗಿನ ಮಾರುಕಟ್ಟೆಯಲ್ಲಿ ಚಾಲಿ ಹೊಸ ಅಡಿಕೆಯ ಧಾರಣೆ ಮೂರು ದಿನಗಳಿಂದ ಏರಿಕೆ ಕಾಣುತ್ತಿದೆ. ಶುಕ್ರವಾರ ಮಂಗಳೂರು ಚಾಲಿ ಹೊಸ ಅಡಿಕೆಯ ಧಾರಣೆ ₹ 400ರಿಂದ ₹ 412ಕ್ಕೆ ಹಾಗೂ ಹಳೆ ಅಡಿಕೆಯ ಧಾರಣೆ ₹ 500ರಿಂದ ₹ 512ಕ್ಕೆ ಏರಿದೆ.

ಕಳೆದ ವರ್ಷ ಮುಂಗಾರು ಪೂರ್ವ ಅಕಾಲಿಕ ಮಳೆಯಿಂದ ಎಳೆ ಅಡಿಕೆ ಮತ್ತು ಸಣ್ಣ ಬಲಿತ ಅಡಿಕೆ ಉದುರಿ, ಒಟ್ಟು ಫಸಲಿನಲ್ಲಿ ಶೇಕಡ 35 ರಷ್ಟು ನಷ್ಟವಾಗಿತ್ತು. ಈಗಲೂ ಇದೇ ರೀತಿ ಆಗುತ್ತಿದೆ.

‘ಚಾಲಿ ಅಡಿಕೆಯ ಉತ್ಪಾದನಾ ವೆಚ್ಚ ಹೆಚ್ಚುತ್ತಿದೆ. ಕೂಲಿ ಹೆಚ್ಚಳ, ಕೊಳರೋಗ ತಡೆಗೆ ಸಿಂಪಡಣೆ ಮಾಡುವ ಬೋರ್ಡೊ ಮಿಶ್ರಣ ತಯಾರಿಕೆಗೆ ಬಳಸುವ ಸುಣ್ಣ, ಮೈಲುತುತ್ತ ಮತ್ತು ಅಂಟಿನ ಬೆಲೆ ವಿಪರೀತ ಏರಿಕೆಯಾಗಿದೆ. ಬೋರ್ಡೊ ಸಿಂಪಡಿಸುವ ಕಾರ್ಮಿಕರ ಸಂಬಳ ದಿನಕ್ಕೆ ₹ 1,500ಕ್ಕೂ ಹೆಚ್ಚಿಗೆ ಇದೆ. ಅಡಿಕೆ ಧಾರಣೆ ಏರಿಕೆ ಆಗದಿದ್ದರೆ, ಉತ್ಪಾದನಾ ವೆಚ್ಚ ಮತ್ತು ಫಸಲು ನಷ್ಟ ಭರಿಸಿ, ಲಾಭ ಗಳಿಸುವುದು ಕಷ್ಟ’ ಎನ್ನುತ್ತಾರೆ ಬೆಳೆಗಾರರು.

‘ಶುಕ್ರವಾರ ಮಾರುಕಟ್ಟೆಯಲ್ಲಿ ಹೊಸ ಅಡಿಕೆ ಮತ್ತು ಹಳೆ ಅಡಿಕೆಯ ಧಾರಣೆಯಲ್ಲಿ ಕ್ಯಾಂಪ್ಕೊದ ಹೊರಗಿನ ವರ್ತಕರಲ್ಲಿ ಕೆ.ಜಿ.ಗೆ ₹ 12ರಷ್ಟು ಹೆಚ್ಚಾಗಿದೆ. ಬೇಡಿಕೆ ಮತ್ತು ಪೂರೈಕೆ ನಡುವೆ ಅಂತರ ಹೆಚ್ಚುತ್ತಿದ್ದು, ಮುಂಗಾರು ಚಾಲಿ ಹೊಸ ಅಡಿಕೆ ಧಾರಣೆ ಕೆ.ಜಿ.ಗೆ ₹ 450, ಹಳೆ ಅಡಿಕೆ ಕೆ.ಜಿ.ಗೆ ₹ 525ರವರೆಗೆ ತಲುಪುವ ಸಾಧ್ಯತೆಗಳಿವೆ’ ಎನ್ನುತ್ತಾರೆ ಮಾರುಕಟ್ಟೆ ತಜ್ಞರು.

ಸೆನ್ಸೆಕ್ಸ್ ಸಾರ್ವಕಾಲಿಕ ಗರಿಷ್ಠ ಮಟ್ಟ

ನವದೆಹಲಿ (ಪಿಟಿಐ): ಮುಂಬೈ ಷೇರುಪೇಟೆಯ ಪಾಲಿಗೆ ಶುಕ್ರವಾರ ಸ್ಮರಣೀಯ ದಿನವಾಗಿತ್ತು. ದಿನದ ವಹಿವಾಟಿನ ನಡುವಿನಲ್ಲಿ ಸೆನ್ಸೆಕ್ಸ್ ಸಾರ್ವಕಾಲಿಕ ದಾಖಲೆಯ ಮಟ್ಟವಾದ 52,641 ಅಂಶಗಳಿಗೆ ತಲುಪಿತ್ತು. ವಹಿವಾಟಿನ ಕೊನೆಯಲ್ಲಿ, ಷೇರುಪೇಟೆಯಲ್ಲಿ ನೋಂದಾಯಿತ ಆಗಿರುವ ಕಂಪನಿಗಳ ಒಟ್ಟು ಮಾರುಕಟ್ಟೆ ಮೌಲ್ಯವು ₹ 231 ಲಕ್ಷ ಕೋಟಿಗೆ ತಲುಪಿತು.

ಕೇವಲ ಎರಡು ದಿನಗಳ ವಹಿವಾಟಿನಲ್ಲಿ ಹೂಡಿಕೆದಾರರ ಸಂಪತ್ತು ₹ 3.26 ಲಕ್ಷ ಕೋಟಿಯಷ್ಟು ಹೆಚ್ಚಳ ಆಗಿದೆ. ಶುಕ್ರವಾರದ ವಹಿವಾಟಿನಲ್ಲಿ ಸೆನ್ಸೆಕ್ಸ್ 174 ಅಂಶ ಏರಿಕೆ ಕಂಡಿತು. 52,474 ಅಂಶಗಳಲ್ಲಿ ವಹಿವಾಟು ಕೊನೆಗೊಳಿಸಿತು. ಡಾ. ರೆಡ್ಡೀಸ್, ಪವರ್‌ಗ್ರಿಡ್, ಟಿಸಿಎಸ್, ಇನ್ಫೊಸಿಸ್, ಎಚ್‌ಸಿಎಲ್ ಟೆಕ್, ರಿಲಯನ್ಸ್ ಇಂಡಸ್ಟ್ರೀಸ್ ಷೇರುಗಳ ಮೌಲ್ಯ ಹೆಚ್ಚಿಸಿಕೊಂಡವು.

ಚೆಸ್: ವಿಶ್ವನಾಥನ್ ಆನಂದ್ ವಿರುದ್ಧ ಕಿಚ್ಚ ಸುದೀಪ್ ಸ್ಪರ್ಧೆ

ಬೆಂಗಳೂರು: ತೆರೆಯ ಮೇಲೆ ಖಳನಾಯಕರ ವಿರುದ್ಧ ಸೆಣಸಾಡುತ್ತಿದ್ದ ನಟ ಕಿಚ್ಚ ಸುದೀಪ್, ಇದೀಗ ಚೆಸ್ ಗ್ರ್ಯಾಂಡ್‌ಮಾಸ್ಟರ್ ವಿಶ್ವನಾಥನ್ ಆನಂದ್ ವಿರುದ್ಧ ಕಣಕ್ಕೆ ಇಳಿಯಲಿದ್ದಾರೆ.

ನಟರಾದ ಅಮೀರ್ ಖಾನ್, ಕಿಚ್ಚ ಸುದೀಪ್, ರಿತೇಶ್ ದೇಶಮುಖ್ ಸೇರಿದಂತೆ ಹಲವು ಸೆಲೆಬ್ರಿಟಿಗಳು ಜೂನ್ 13ರಂದು ಚೆಸ್ ಗ್ರ್ಯಾಂಡ್‌ಮಾಸ್ಟರ್ ವಿಶ್ವನಾಥನ್ ಆನಂದ್ ಅವರನ್ನು ಎದುರಿಸಲಿದ್ದಾರೆ. ಅಕ್ಷಯಪಾತ್ರ ಪ್ರತಿಷ್ಠಾನದ ಸಹಯೋಗದಲ್ಲಿ ಚೆಸ್.ಕಾಮ್ ‘ಚೆಕ್‌ಮೇಟ್ ಕೋವಿಡ್’ ಸೆಲೆಬ್ರಿಟಿ ಆವೃತ್ತಿಯನ್ನು ನಡೆಸುತ್ತಿದ್ದು, ಭಾನುವಾರ ಸಂಜೆ 5ರಿಂದ ರಾತ್ರಿ 8 ಗಂಟೆಯವರೆಗೆ ವಿಶ್ವನಾಥನ್ ಆನಂದ್ ಅವರು ಎರಡು ಬ್ಯಾಚ್‌ಗಳಲ್ಲಿ ಅರ್ಧ ಗಂಟೆಯಂತೆ ಹಲವು ಗಣ್ಯರೊಂದಿಗೆ ಏಕಕಾಲದಲ್ಲಿ ಚೆಸ್ ಆಡಲಿದ್ದಾರೆ.

ಕ್ರಿಕೆಟ್ ಆಟಗಾರ ಯುಜುವೇಂದ್ರ ಚಾಹಲ್, ಗಾಯಕಿ ಅನನ್ಯಾ ಬಿರ್ಲಾ, ಗಾಯಕ ಅರ್ಜಿತ್ ಸಿಂಗ್, ನಿರ್ಮಾಪಕ ಸಾಜಿದ್ ಕೂಡಾ ಈ ಸ್ಪರ್ಧೆಯಲ್ಲಿ ಭಾಗವಹಿಸುತ್ತಿದ್ದು, ಸ್ಪರ್ಧೆಯ ನಂತರ ಸ್ಪರ್ಧಿಗಳೊಂದಿಗೆ ಆನಂದ್ ಸಂವಾದವನ್ನೂ ನಡೆಸಲಿದ್ದಾರೆ. ಕೋವಿಡ್ ಪರಿಹಾರ ನಿಧಿಗೆ ದೇಣಿಗೆ ಸಂಗ್ರಹಿಸಲು ಇದನ್ನು ಆಯೋಜಿಸಲಾಗುತ್ತಿದೆ. ಚೆಸ್ ಡಾಟ್ ಕಾಮ್ ಇಂಡಿಯಾ ಯೂಟ್ಯೂಬ್ ಚಾನೆಲ್‌ನಲ್ಲಿ ಇದರ ನೇರಪ್ರಸಾರವಿರಲಿದೆ.

ಪ್ರಜಾವಾಣಿ DH ಕೋವಿಡ್ ಪರಿಹಾರ ನಿಧಿ

ಆಸ್ಪತ್ರೆಗಳ ಮುಂದೆ ಏದುಸಿರು ಬಿಡುವ ರೋಗಿಗಳನ್ನು ಹೊತ್ತುನಿಂತ ಆಂಬುಲೆನ್ಸ್‌ಗಳು, ಆಸ್ಪತ್ರೆ ಜೀವ ಉಳಿಸಲು ಪ್ರಾಣವಾಯುವಿಗಾಗಿ ಅಂಗಲಾಚುವವರು, ಚಿತಾಗಾರಗಳ ಮುಂದೆ ಸಾಲು ಸಾಲು ಮೃತದೇಹಗಳು... ರಾಜ್ಯದಲ್ಲಿ ಕಳೆದ ಕೆಲವು ವಾರಗಳಿಂದ ಇಂತಹದ್ದೇ ಹೃದಯವಿದ್ರಾವಕ ನೋಟಗಳು. ಕೋವಿಡ್–19 ಕಾಣಿಸಿಕೊಂಡ ದಿನದಿಂದ ಇಲ್ಲಿಯವರೆಗೂ 27 ಲಕ್ಷಕ್ಕೂ ಅಧಿಕ ಜನ ಕಾಯಿಲೆಪೀಡಿತರಾಗಿದ್ದು, 32 ಸಾವಿರಕ್ಕೂ ಅಧಿಕ ಜನ ಮೃತಪಟ್ಟಿದ್ದಾರೆ. ಈ ಅಂಕಿ–ಸಂಖ್ಯೆಗಳು ಅಧಿಕೃತ ಮಾಹಿತಿಯಷ್ಟೆ, ನೈಜ ಚಿತ್ರಣ ಇನ್ನೂ ಕರಾಳವಾಗಿದೆ. ಎರಡನೇ ಅಲೆ ಪ್ರಾರಂಭವಾಗಿ ಈಗಾಗಲೇ ಎರಡು ತಿಂಗಳಿಗೂ ಅಧಿಕ ಸಮಯ ಕಳೆದಿದೆ.

ಇಂತಹ ಸನ್ನಿವೇಶದಲ್ಲಿ, ಕೋವಿಡ್ ಪರಿಹಾರ ಕಾರ್ಯದಲ್ಲಿ ತೊಡಗಿಸಿಕೊಂಡಿರುವ ಸ್ವಯಂಸೇವಾ ಸಂಸ್ಥೆಗಳಿಗೆ ‘ಡೆಕ್ಕನ್ ಹೆರಾಲ್ಡ್’ ಹಾಗೂ ‘ಪ್ರಜಾವಾಣಿ’ ಪತ್ರಿಕೆಗಳು ಬೆಂಬಲ ನೀಡಲು ನಿರ್ಧರಿಸಿವೆ. ನೀವು ನೀಡುವ ದೇಣಿಗೆಯ ಪ್ರತೀ ಪೈಸೆಯೂ ಸಂಕಷ್ಟಕ್ಕೆ ಒಳಗಾಗಿರುವ ಅರ್ಹ ಫಲಾನುಭವಿಗೆ ನೇರವಾಗಿ ಸೇರಿ, ಅವರ ಕಣ್ಣೀರು ಒರೆಸಲು ನೆರವಾಗಲಿದೆ.

₹ 1000 ಮತ್ತು ಅದಕ್ಕಿಂತ ಹೆಚ್ಚಿನ ದೇಣಿಗೆ ನೀಡಿದವರ ಹೆಸರನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುವುದು. ಈ ದೇಣಿಗೆಗೆ 80ಜಿ ಅನ್ವಯ ಆದಾಯ ತೆರಿಗೆಯಲ್ಲಿ ವಿನಾಯಿತಿ ಸಿಗಲಿದೆ.

ಹೀಗಾಗಿ, ನಿಮ್ಮ ಕೈಲಾದ ದೇಣಿಗೆಯನ್ನು (ಅದರ ಪ್ರಮಾಣ ಎಷ್ಟೇ ಇರಲಿ) ನೀಡಿ ಸಂಕಷ್ಟದಲ್ಲಿ ಸಿಲುಕಿದವರ ಬೆಂಬಲಕ್ಕೆ ನಿಲ್ಲುವ ಮಾನವೀಯ ಕಾರ್ಯದಲ್ಲಿ ಕೈಜೋಡಿಸುವಂತೆ ಕೋರುತ್ತೇವೆ.

ಆನ್‌ಲೈನ್ ಹಣ ವರ್ಗಾವಣೆ ಮೂಲಕ ಡೆಕ್ಕನ್ ಹೆರಾಲ್ಡ್–ಪ್ರಜಾವಾಣಿ ಪರಿಹಾರ ನಿಧಿ ಟ್ರಸ್ಟ್‌ಗೆ ದೇಣಿಗೆ ನೀಡಬಹುದು:
(Canara Bank, Cantonment Branch;
A/C NO.0404101200385, IFSC CODE : CNRB0000404)

ಡೆಬಿಟ್/ಕ್ರೆಡಿಟ್ ಕಾರ್ಡ್, ಯುಪಿಐ, ಇ–ವಾಲೆಟ್ ಅಥವಾ ನೆಟ್‌ಬ್ಯಾಂಕಿಂಗ್ ಮೂಲಕ ಪಾವತಿಸುವವರು QR ಕೋಡ್ ಸ್ಕ್ಯಾನ್ ಮಾಡಿ ಅಥವಾ ಈ ಕೆಳಗಿನ ಲಿಂಕ್‌ಗೆ ಭೇಟಿ ಮಾಡಿ: https://bit.ly/3iaryCA

ದೇಣಿಗೆದಾರರು ತಾವು ನೀಡಿದ ದೇಣಿಗೆ ವಿವರದ ಜತೆಗೆ ಹೆಸರು, ವಿಳಾಸ ಹಾಗೂ ಸಂಪರ್ಕ ಸಂಖ್ಯೆಯನ್ನು dept.fincl@printersmysore.co.in ಈ ಇ–ಮೇಲ್‌ಗೆ ಕಳುಹಿಸಲು ವಿನಂತಿ. ಇದರಿಂದ ದೇಣಿಗೆದಾರರಿಗೆ ರಶೀದಿ ಕಳುಹಿಸಲು ಅನುಕೂಲವಾಗುತ್ತದೆ.

ದೇಣಿಗೆ ಕೊಟ್ಟವರ ವಿವರ

ಸಂ	ಹೆಸರು, ವಿಳಾಸ	ದೇಣಿಗೆ (₹ಗಳಲ್ಲಿ)
1	ಸ್ವಯಂಪ್ರಭಾ ಎಂ.ಆರ್, ನಂ. 4, 'ಶೋಭನ', ಗ್ರೌಂಡ್ ಫ್ಲೋರ್, 1ನೇ ಮುಖ್ಯರಸ್ತೆ, ದೊಮ್ಮಲೂರು, 2ನೇ ಹಂತ, ಬೆಂಗಳೂರು	20,000
2	ಚಂದಾ ಜೋಗ್, ಮಲ್ಲೇಶ್ವರ, ಬೆಂಗಳೂರು	20,000
3	ಎಸ್.ವಿ.ಶ್ರೀಹರಿ, 24, 17ನೇ ಅಡ್ಡರಸ್ತೆ, ಮಲ್ಲೇಶ್ವರ, ಬೆಂಗಳೂರು	10,000
4	ಎನ್.ಎನ್.ಸುನಂದಾ, 'ಬೆಳಗು', 832, 24ನೇ ಅಡ್ಡರಸ್ತೆ, 52ನೇ ಮುಖ್ಯರಸ್ತೆ, 1ನೇ ಹಂತ, ಕುಮಾರಸ್ವಾಮಿ ಲೇಔಟ್, ಬೆಂಗಳೂರು	10,000
5	ಡಾ.ರತ್ನ ಹೆಗ್ಡೆ, 408, ಪ್ರಿಯ ಏವಾರ್ಡ್, 3ನೇ ಮುಖ್ಯರಸ್ತೆ, ಬೆಂಗಳೂರು	5,000
6	ಡಾ.ತಿಪ್ಪೇಸ್ವಾಮಿ, #369 ಎ/ಬಿ ಬ್ಲಾಕ್, ಕುವೆಂಪುನಗರ, ಮೈಸೂರು	5,000
7	ಬಿ.ಎ.ಬಿಳ್ಗಿರಿ, ಶ್ರೀ ಗುರು ಹೆರಿಟೇಜ್ ಅಪಾರ್ಟ್‌ಮೆಂಟ್, 2ನೇ ಅಡ್ಡರಸ್ತೆ, ಜಯನಗರ–ವಿದ್ಯಾಗಿರಿ, ಧಾರವಾಡ	5,000
8	ಬಿಂದು ಎಂ.ಕೆ., #28 ದೊಡ್ಡಕಟ್ಟದ ರಸ್ತೆ, ಹಲಸೂರು ಮೆಟ್ರೊ ನಿಲ್ದಾಣದ ಹತ್ತಿರ, ಹಲಸೂರು, ಬೆಂಗಳೂರು	5000
9	ಪಿ.ಆರ್.ಸದಾಶಿವ, #94, ಗೂಂದಿಂದರ ರಸ್ತೆ, ಬಸವನಗುಡಿ, ಬೆಂಗಳೂರು	5000
10	ಜೆಯಾವುಲ್ಲಾ ಖಾನ್ ಮತ್ತು ಶಂಶಾದ್ ಬೇಗಂ, ಇಂದಿರಾನಗರ, 2ನೇ ಹಂತ, ಬೆಂಗಳೂರು	5000
11	ಗುಫ್ರನ್ ಕ್ವಾಸ್ತನ್ ಆರ್.ಎನ್ ಪ್ರಸಾದ್, 592, ಆಶಾಯ್ ಕೃಪಾ, 3ನೇ ಬ್ಲಾಕ್, ಸರ್.ಎಂ.ವಿಶ್ವೇಶ್ವರಯ್ಯ ಲೇಔಟ್, ಉಲ್ಲಾಳ ಉಪನಗರ ಫ್ಲೋರ್ಸ್, ಬೆಂಗಳೂರು	5000
12	ಗೀತಾ ಪ್ರಸಾದ್, 592, ಆಶಾಯ್ ಕೃಪಾ, 3ನೇ ಬ್ಲಾಕ್, ಸರ್.ಎಂ. ವಿಶ್ವೇಶ್ವರಯ್ಯ ಲೇಔಟ್, ಉಲ್ಲಾಳ ಉಪನಗರ ಫ್ಲೋರ್ಸ್, ಬೆಂಗಳೂರು	5,000
13	ವಿಜಯಶಂಕರ್ ಬಿ.ಎಂ., #58, 8ನೇ ಅಡ್ಡರಸ್ತೆ, ಬಿಎಸ್‌ಎನ್ಎಲ್ ಎಕ್ಸ್‌ಟೆನ್ಶನ್, ಪಟ್ಟಣಗೆರೆ, ಆರ್.ಆರ್.ನಗರ, ಬೆಂಗಳೂರು	4,001
14	ಒಮರ್ ಖಾನ್, ಉಜೈರ್ ಖಾನ್, ಮದೀಹಾ ಖಾನ್ ಮತ್ತು ಸಲೀಹಾ ಖಾನ್, ಇಂದಿರಾನಗರ 2ನೇ ಹಂತ, ಬೆಂಗಳೂರು	4,000
15	ಕೆ.ನಾಗರತ್ನ ನಂಜಪ್ಪ, 'ಮಂದಹಾಸ', 18ನೇ ಬಿ ಕ್ರಾಸ್, ಸಿಎಂಎಚ್ ರಸ್ತೆ, ಅಕ್ಕಿಪೇಟೆ, ಹಲಸೂರು, ಬೆಂಗಳೂರು	3,001
16	ಕೆ.ನರಸಿಂಹ ಮೂರ್ತಿ, #780, ಮನುಷಪಥ ರಸ್ತೆ, ಇ&ಎಫ್ ಬ್ಲಾಕ್, ಕುವೆಂಪುನಗರ, ಮೈಸೂರು	3,000
17	ಬಿ.ಕೆ.ಚಂದ್ರಶೇಖರ್ ಸಿಂಗ್, ಬೆಂಗಳೂರು	2,001
18	ಬಿ.ಶಿವಲಿಂಗಯ್ಯ, 17/18, 1ನೇ 'ಎ' ಮುಖ್ಯರಸ್ತೆ, 1ನೇ ಬ್ಲಾಕ್, 2ನೇ ಹಂತ, ನಾಗರಬಾವಿ, ಬೆಂಗಳೂರು	2,001
19	ಶ್ರೀನಿವಾಸ ಮೂರ್ತಿ ಜಿ.ವಿ, 131, 'ಜಿಯಾಪ್ರಿಜ', ಸತ್ತುಗಿರಿ ಲೇಔಟ್, ಪದ್ಮನಾಭ, ತಾವರೆಕೆರೆ, ಮಾಗಡಿ ರಸ್ತೆ, ಬೆಂಗಳೂರು	2,001
20	ನರಸಿಂಹ ರಾಜು ಬಿ.ಎಲ್, ನಂ.51/52, ಗ್ರೌಂಡ್ ಫ್ಲೋರ್, 4ನೇ ಮುಖ್ಯರಸ್ತೆ, ಮುನೇಶ್ವರ ನಗರ, ಹೊಸಕೆರೆಹಳ್ಳಿ, ಬೆಂಗಳೂರು	2,001
21	ಶ್ರೀಮತಿ ವಿದ್ಯಾ ಕರುಣಾಕರ್, 4ಬಿ5–206, 4ನೇ ಬಿ ಅಡ್ಡರಸ್ತೆ, ಕಸ್ತೂರಿನಗರ, ಬೆಂಗಳೂರು	2,000
22	ಎಸ್.ಮುತ್ತುಕೃಷ್ಣನ್, ಡಿ1–701, ಎಲ್‌ಕೋ ಸೌತ್, ಸಿಟಿ ಅಪಾರ್ಟ್‌ಮೆಂಟ್, ಅರಕೆರೆ ಮೈಕೊ ಲೇಔಟ್, ಬೆಂಗಳೂರು	2,000
23	ಅಂಜಪ್ಪ ದಾಸಪ್ಪ, ಬನಶಂಕರಿ, ಬೆಂಗಳೂರು	2,000
24	ವಿನಯ್ ಕುಮಾರ್ ಸಿ, ನಂ.58, ಎಸ್‌ಬಿಎಂ ಲೇಔಟ್, 3ನೇ ಹಂತ, 2ನೇ ಮುಖ್ಯರಸ್ತೆ, 1ನೇ ಅಡ್ಡರಸ್ತೆ, ಸಂಜಯನಗರ, ಬೆಂಗಳೂರು	2,000
25	ಜೆ.ಎಸ್.ಶಿವಕುಮಾರ್, ಬಿಟಿಎಂ 4ನೇ ಹಂತ, ಬೆಂಗಳೂರು	2,000
26	ಸಿ.ವಿಮಲಾ, ನಂ.154, ಎ ಬ್ಲಾಕ್, 1ನೇ ಸಂಕೇಣ, ಕೆಎಸ್ಆರ್‌ಟಿಸಿ ಕ್ವಾರ್ಟರ್ಸ್, ಕೋರಮಂಗಲ, ಬೆಂಗಳೂರು	2,000
27	ದೇಬಾಶಿಶ್ ರಾವತ್, ಫ್ಲ್ಯಾಟ್ #2ಡಿಬ್ಲ್ಯು–1, ಮೇಫ್ಲವರ್ ಗೋಲ್ಡನ್ ಮೆಡೋಸ್, ಚಿಕ್ಕಲಸಂದ್ರ, ಬೆಂಗಳೂರು	2,000
28	ವಿವೇಕ್ ವಿ.ರಾಯಚೂರು, #360 ಅಮೃತ, 1ನೇ ಫ್ಲೋರ್, 1ನೇ ಇ ಕ್ರಾಸ್, 2ನೇ ಹಂತ, 6ನೇ ಬ್ಲಾಕ್, ಬನಶಂಕರಿ 3ನೇ ಹಂತ, ಬೆಂಗಳೂರು	2,000
29	ಭಾಸ್ಕರ ಕೆ.ವಿ, ನಂ.112, ರಾಜೇಂದ್ರ ನಗರ, ಶಿವಮೊಗ್ಗ	2000
30	ಸಿ.ಎನ್.ಯೋಗಾನರಸಿಂಹನ್, ನಂ.432/2, 10ನೇ ಕ್ರಾಸ್, 2ನೇ ಮುಖ್ಯರಸ್ತೆ, ಜೆ.ಪಿ.ನಗರ, 2ನೇ ಹಂತ, ಬೆಂಗಳೂರು	2000
31	ಎಸ್.ಎಚ್.ಕರಿಯಾಣ್ ಇನ್ಫ್ರಾಸ್ಟ್ರಕ್ಚರ್ ಪ್ರೈ ಲಿ, 36, ಸಿದ್ದರಾಮೇಶ್ವರ ಕಾಲೋನಿ, ಆರ್.ಸಿ.ನಗರ, ಧಾರವಾಡ	2000
32	ಬಸವಣ್ಣೆಪ್ಪ ರಾಮಣ್ಣನವರ್, #207 ಡಿ/21, 'ಬಸವ ಬೆಳಗು', ವೀರೇಶ್ವರ ನಗರ, ಮುಳುಗುಂದ ರಸ್ತೆ, ಗದಗ	1500
33	ಪದ್ಮಪ್ರಸಾದ್ ಎನ್.ಎ, #457, ತ್ರಿಭುವನ್ 4ನೇ ಮುಖ್ಯರಸ್ತೆ, 1ನೇ ಕ್ರಾಸ್, ಮಾರುತಿ ದೇವಾಲಯ ರಸ್ತೆ, ಕುವೆಂಪುನಗರ, ಮೈಸೂರು	1111
34	ಕೆ.ಎಸ್.ಜಗನ್ನಾಥ ಶೆಟ್ಟಿ, 1068, ವಿನಯ ಮಾರ್ಗ, ಸಿದ್ಧಾರ್ಥ ನಗರ, ಮೈಸೂರು	1050
35	ಪುಷ್ಪ ಎನ್.ವಿ, ಶ್ರೈ ಜಗನ್ ಗಾರ್ಡನ್ಸ್, ಸೋಮಪುರ, ಕೊರಟಗೆರೆ ತಾಲ್ಲೂಕು, ತುಮಕೂರು	1017
36	ವಿ.ಗೋವಿಂದರಾಜನ್, ನಂ.4, 5ನೇ ಎ ಕ್ರಾಸ್, 1ನೇ ಬ್ಲಾಕ್, ಅಶ್ವಿಯನಗರ, ರಾಮಮೂರ್ತಿನಗರ, ಬೆಂಗಳೂರು	1001
37	ಸುಕುಮಾರ್ ರಾಧಾಕೃಷ್ಣನ್, ಬೆಂಗಳೂರು	1001
38	ಶ್ರೀಮತಿ ರೇಖಾ ರವೀಂದ್ರ, ನಂ.75, 1ನೇ ಮಹಡಿ, 2ನೇ ಹಂತ, 4ನೇ ಬ್ಲಾಕ್, ಬನಶಂಕರಿ 3ನೇ ಹಂತ, ಬೆಂಗಳೂರು	1001
39	ಆರ್. ಲೋಕೇಶ್, ಬಿಇಎಂಎಲ್ ನ್ಯೂ ಎಕ್ಸ್‌ಟೆನ್ಷನ್, 1ನೇ ಅಡ್ಡರಸ್ತೆ, ಕೋಲಾರ	1001
40	ಎಂ.ದಾಸಪ್ಪ, ಫ್ಲಾಟ್ ನಂ.66, ರೇಣುಕಾ ನಿವಾಸ, ಶಕ್ತಿ ನಗರ, ಕಲಬುರಗಿ	1001
41	ಎನ್.ಶಿವಪ್ರಸಾದ್, #51 ಈಶ್ವರಯ್ಯ ಪಾರ್ಕ್, ಮದಕರಿ ನಾಯಕ ರಸ್ತೆ, ರಾಮಮೂರ್ತಿ ನಗರ, ಬೆಂಗಳೂರು	1000
42	ದಿನಕರ ಗೌಡ, #41, 9ನೇ ಅಡ್ಡರಸ್ತೆ, 1ನೇ ಮುಖ್ಯರಸ್ತೆ, ಪ್ರಶಾಂತ್ ನಗರ, ಬೆಂಗಳೂರು	1000
43	ಶೇಖ್ ಮೊಹಮ್ಮದ್ ಅಕ್ರಂ, ನಂ.25, ಸಿ ಬ್ಲಾಕ್, ಫುಟ್ಬಾಲ್ ಮೈದಾನದ ಹತ್ತಿರ, ಶಾಂತಿನಗರ ಚರ್ಚ್, ಕೇಶ್ವಾಪುರ, ಹುಬ್ಬಳ್ಳಿ	1000
44	ಸಿದ್ದವೀರಸ್ವಾಮಿ ಟಿ.ಎಂ., ನಂ.158, 1ನೇ ಮುಖ್ಯರಸ್ತೆ, 1ನೇ ಅಡ್ಡರಸ್ತೆ, ಬ್ರಹ್ಮಪುರ, ಹರಿಹರ	1000
45	ಕೆ.ಗೀತಾ, #1885/65, 1ನೇ ಮುಖ್ಯರಸ್ತೆ, 3ನೇ ಅಡ್ಡರಸ್ತೆ, ಶ್ರೈನ್ ಲೇಔಟ್, ಕುಂದವಾಡ ಮುಖ್ಯರಸ್ತೆ, ದಾವಣಗೆರೆ	1000
46	ಡಾ.ಚನ್ನೇಶ್ ಹೊನ್ನಾಳಿ, ಅಂಕಿತಾ, 32/ಆರ್, ಎಂಐಜಿ, ಕೆಎಚ್‌ಬಿ ಕಾಲೊನಿ, ಅರ್ಚಕ ಕಾಲೊನಿ ಪಿಂಭಾಗ, 1ನೇ ಹಂತ, ವಿನೋಬಾ ನಗರ, ಶಿವಮೊಗ್ಗ	1000
47	ಅಮೀನಾ ಖಾತೂನ್, w/o ಫಯಾಜ್ ಹುಸೇನ್, ಗಾಂಧಿನಗರ, ಭದ್ರಾವತಿ, ಶಿವಮೊಗ್ಗ ಜಿಲ್ಲೆ	1000
48	ರಮೇಶ್ ರಾವ್, 140, 10ನೇ ಮುಖ್ಯರಸ್ತೆ, 6ನೇ ಕ್ರಾಸ್, ಎಚ್‌ಎಎಲ್ ಲೇಔಟ್, ಬೆಂಗಳೂರು	1000
49	ವೀಣಾ ಶ್ರೀಕಾಂತ್, ನಂ.15/17, ಶ್ರೀನಿಕೇತನ, 5ನೇ ಎ ಕ್ರಾಸ್, ಸಿದ್ಧಿವಿನಾಯಕ ಲೇಔಟ್, ಕತ್ರಿಗುಪ್ಪೆ, ಬೆಂಗಳೂರು	1000
50	ಕೆ.ಸುಮಾ ಹನುಮಂತಪ್ಪ, ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ (ನಿವೃತ್ತ), s/o ಕೆ.ರಾಮಪ್ಪ, ನಾಗತಿಬಸಪುರ, ತಾಲ್ಲೂಕು ಹರಿಹರ	1000
	ಒಟ್ಟು:	1,07,47,000

ಪ್ರಜಾವಾಣಿ DH ಡಿಎಚ್–ಪಿವಿ ಕೋವಿಡ್–19 ಪರಿಹಾರ ಟ್ರಸ್ಟ್

ಲಾಭದ ಉದ್ದೇಶವಿಲ್ಲದ ಸಂಸ್ಥೆಗಳಲ್ಲಿ ಮನವಿ

ಕೋವಿಡ್ ಸಾಂಕ್ರಾಮಿಕದಿಂದ ಮುರಿದ ಬದುಕನ್ನು ಮತ್ತೆ ಕಟ್ಟಬೇಕಾಗಿರುವ ಕಾಲಘಟ್ಟವಿದು. 'ಡೆಕ್ಕನ್ ಹೆರಾಲ್ಡ್'–ಪ್ರಜಾವಾಣಿ ಪರಿಹಾರ ಟ್ರಸ್ಟ್' ಸಹ ಈ ನಿಟ್ಟಿನಲ್ಲಿ ನಮ್ಮ ಗೌರವಾನ್ವಿತ ಓದುಗರಿಂದ ದೇಣಿಗೆ ಸಂಗ್ರಹಿಸಿದೆ. ಈ ದೇಣಿಗೆಯನ್ನು ಪರಿಣಾಮಕಾರಿಯಾಗಿ ಬಳಕೆ ಮಾಡಲು, ಕೋವಿಡ್–19 ಪರಿಹಾರ ಕಾರ್ಯಗಳಲ್ಲಿ ತೊಡಗಿಸಿಕೊಂಡಿರುವ, ಅಸಹಾಯಕರಿಗೆ ಜೀವನೋಪಾಯದ ದಾರಿ ತೋರುವ ಕೆಲಸದಲ್ಲಿ ನಿರತವಾಗಿರುವ ಹಾಗೂ ಲಾಭದ ಉದ್ದೇಶವಿಲ್ಲದೆ ಕಾರ್ಯನಿರ್ವಹಿಸುತ್ತಿರುವ ಸಂಸ್ಥೆಗಳ ಮುಂದೆ ಬರಬೇಕು ಎಂದು ಮನವಿ ಮಾಡುತ್ತಿದ್ದೇವೆ. ಅಗತ್ಯ ಇರುವವರಿಗೆ ಹಣಕಾಸಿನ ಸಹಾಯ ನೀಡುವುದು, ನೆರವಿನಹಸ್ತವನ್ನು ಚಾಚುವುದು ಮತ್ತು/ಅಥವಾ ಕೋವಿಡ್‌ನಿಂದಾಗಿ ತೊಂದರೆಗೆ ಒಳಗಾದವರಿಗೆ ಆಸ್ಪತ್ರೆ, ತುರ್ತು ಶಿಬಿರ ಸ್ಥಾಪಿಸುವುದು ಇಲ್ಲವೆ ಆರೋಗ್ಯ ಸೇವೆಯನ್ನು ಒದಗಿಸುವುದು – ಇಂತಹ ಉದ್ದೇಶಗಳನ್ನು ಈ ಸಂಸ್ಥೆಗಳು ಹೊಂದಿರಬೇಕು. ಅಲ್ಲದೆ, ಆದಾಯ ತೆರಿಗೆ ಕಾಯ್ದೆ 1961ರ ಸೆಕ್ಷನ್ 80 ಜಿ ಅಡಿಯಲ್ಲಿ ಮಾನ್ಯತೆಯನ್ನೂ ಪಡೆದಿರಬೇಕು.

ನಿಮ್ಮ ಸಂಸ್ಥೆಯು ಈ ಬಗೆಯದಾಗಿದ್ದರೆ, dept.fnc@printersmysore.co.in ಈ ಇ–ಮೇಲ್ ವಿಳಾಸವನ್ನು ಸಂಪರ್ಕಿಸಬಹುದು. ನಮ್ಮ ಸಂಸ್ಥೆಗೆ ಸಂಬಂಧಿಸಿದ ಮಾಹಿತಿ, 80 ಜಿ ಅಡಿಯಲ್ಲಿ ನಿಮ್ಮ ಸಂಸ್ಥೆಗೆ ಇರುವ ವಿನಾಯಿತಿಗೆ ಸಂಬಂಧಿಸಿದ ದಾಖಲೆ, ಟ್ರಸ್ಟ್ ಡೀಡ್/ಎಂಒಎ ಪ್ರತಿಗಳನ್ನು ಮೇಲ್ ಜೊತೆ ಕಳುಹಿಸಲು ಮನವಿ.

ಕೋವಿಡ್–19 ಪರಿಹಾರ ಹಾಗೂ ಜೀವನೋಪಾಯ ಕಟ್ಟಿಕೊಡಲು ಕೆಲಸ ಮಾಡುವ ಸಂಸ್ಥೆಗಳಿಗೆ ಹಣ ನೀಡುವ ವಿಚಾರದಲ್ಲಿ 'ಡೆಕ್ಕನ್ ಹೆರಾಲ್ಡ್–ಪ್ರಜಾವಾಣಿ ಪರಿಹಾರ ಟ್ರಸ್ಟ್'ನ ತೀರ್ಮಾನವೇ ಅಂತಿಮ.

‘ಜಿ–7’ ಶೃಂಗಕ್ಕೆ ಸಿಂಗಾರಗೊಂಡ ಕಾರ್ನ್‌ವೆಲ್

ಫಾಲ್‌ಮೌತ್, ಬ್ರಿಟನ್ (ಎಪಿ): ಬ್ರಿಟನ್‌ನ ನೈರುತ್ಯ ಭಾಗದಲ್ಲಿ, ಕಡಲತೀರದ ನಗರ ಕಾರ್ನ್‌ವೆಲ್ ಪ್ರವಾಸಿಗರಿಂದ ಗಿಜಿಗುಡುವ ಬೀಚ್‌ನಿಂದ, ಸಮುದ್ರದ ತೆರೆಗಳ ಏರಿಳಿತದೊಂದಿಗೆ ಆಟವಾಡಿ ಸಂಭ್ರಮಿಸುವುದಕ್ಕೆ ಪ್ರಸಿದ್ಧಿ. ಇಲ್ಲಿ ಏಳು ಬಲಿಷ್ಠ ರಾಷ್ಟ್ರಗಳ ಒಕ್ಕೂಟವಾದ ‘ಜಿ–7’ನ ಶೃಂಗಸಭೆ ಶುಕ್ರವಾರದಿಂದ ಭಾನುವಾರದವರೆಗೆ (ಜೂನ್ 11ರಿಂದ 13) ನಡೆಯಲಿದೆ. ಅಮೆರಿಕ ಅಧ್ಯಕ್ಷ ಜೋ ಬೈಡನ್ ಅವರಲ್ಲದೇ, ಕೆನಡಾ, ಫ್ರಾನ್ಸ್, ಜರ್ಮನಿ, ಇಟಲಿ ಹಾಗೂ ಜಪಾನ್ ನಾಯಕರು ಇಲ್ಲಿ ಬಂದಿಳಿಯಲಿದ್ದು, ಸಮೀಪದ ಗ್ರಾಮ ಕಾರ್ಬಿಸ್ ಬೇ ಎಂಬಲ್ಲಿ ಮೂರು ದಿನಗಳ ಕಾಲ ನಡೆಯುವ ಶೃಂಗಸಭೆಯಲ್ಲಿ ಪಾಲ್ಗೊಳ್ಳುವರು.

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರಯೋಜನಗಳು ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080 - 45557160 /161/ 162/ 163/ 164
9845114560 / 9731810277/ 9886213331

ವಾಹನ

Four Wheelers Selling

Others

ಲೈಫ್ ಸಪೋರ್ಟ್ ಸಾಧನಗಳೊಂದಿಗೆ TATA WINGER AIS 125 Part 1 Compliant

ಪ್ರಾರಂಭಿಕ ಬೆಲೆ ₹16.23* ಲಕ್ಷದಿಂದ

95% ವರೆಗೆ ಸಾಲ ಸೌಲಭ್ಯ

Bangalore/Rural 9900205018 8050296988/9845321559
Mysore/Mandya/Chamrajnagar 9900205018
Tumkur/Davanagere/Chitradurga 9071001373
Mangalore/Shivamogga/Udupi/Hassan/Chikkamagalur/Karwar 9845118186
Sirsi - 7829909087
Hubli/Haveri/Gadag- 990025580/9945658060/8660786293
Bagalkot/Bijapur 9606044611
Gangavathi - 9606095180
Raichur - 9731888150

ಯಶಸ್ಸು ಮೂರು ಚಿನ್ನದ ಆನೆಗಳೊಂದಿಗೆ

Ace GOLD ಪೆಟ್ರೋಲ್, ಡೀಸೆಲ್ ಮತ್ತು ಸಿಎನ್‌ಜಿ ವಾಹನ ಆಕರ್ಷಕ ಕೊಡುಗೆಗಳೊಂದಿಗೆ

ಇಂದೇ ಕೊಳ್ಳಿರಿ ನಿಮ್ಮ ಮಾಸಿಕ ಕಂತನ್ನು 2 ತಿಂಗಳ ನಂತರ ಪ್ರಾರಂಭಿಸಿ

1.99%* ಬಡ್ಡಿದರ

ಎಕ್ಸ್‌ಚೇಂಜ್ ಬೋನಸ್ ₹15,000/-

Bangalore - 7259784441
Bangalore/Mysore 95389 35533
Tumkur/Davanagere/Chitradurga 98950 23373
Mangalore/Shivamogga/Udupi/Hassan/Chikkamagalur/Karwar 96208 63338
Hubli/Haveri/Gadag/Bellary/Raichur - 96209 55858
Bagalkot/Bijapur/Gulbarga/Bidar - 73899 44057
Hubli/Belgaum 91088 64572

ಭವಿಷ್ಯ

Astrology

ಉದ್ಯೋಗಾವಕಾಶ

General

WORK FROM HOME ಮನೆಯಿಂದಲೇ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000ವರೆಗೆ ಸಂಪಾದಿಸಿ. ಕನ್ನಡ/ಇಂಗ್ಲಿಷ್ ಓದಲು, ಬರೆಯಲು ಬರುವ ಎಲ್ಲರಿಗೂ ಅವಕಾಶ. ಕರೆಯಿರಿ/ ವಾಟ್ಸ್‌ಆಪ್ 8884875553/ 8884875554

Part-Time Jobs

ಮನೆಯಿಂದಲೇ ಕುಳಿತು ಆನ್‌ಲೈನ್ ಡೇಟಾ ಎಂಟ್ರಿ, ಕನ್ನಡ, ಇಂಗ್ಲಿಷ್ ಬುಕ್ ರೈಟಿಂಗ್ ಫಾರಂ ಫಿಲ್ಲಿಂಗ್ ಕೆಲಸ ಗಳಿಸಿ 15,000-18,000/-. ಕರೆಯಿರಿ, ಬುಕ್ ನೌ ವಾಟ್ಸ್‌ಆಪ್ ಮಾಡಿ 9686114647, 9900229091

DH ಪ್ರಜಾವಾಣಿ BOOK YOUR CLASSIFIEDS ONLINE
5 EASY STEP TO BOOK YOUR CLASSIFIEDS ADS ONLINE
5 Easy steps to book your ads
1 LOG INTO WWW.DHCLASSIFIEDS.COM
2 CHOOSE THE CATEGORY
3 CHOOSE THE AD DATES
4 COMPOSE THE MATTER
5 CONFIRM AND PAY
REAL ESTATE JOB NOTICE NAME CHANGE ANY OTHER CATEGORY
WWW.DHCLASSIFIEDS.COM
9880856233
9886213331
E-mail: dhclassified@deccanherald.co.in

LOOKING TO BUILD, BUY OR SELL A PROPERTY
Please refer Classifieds on Sunday

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com or Scan QR code to access booking form

In Loving Remembrance

Hosadu Stany Dias
Born: 01-06-1950 - Died : 12-06-2004
We miss you every moment of our lives. Your memories can never fade away from our hearts and minds. Super Dad, Loving Husband and a Wonderful Human Being. - Rest in Peace
Deeply Mourned by: Wife, Children & Family.

ನಿಧನ



ಶ್ರೀ ಬಿ.ಮಾರಪ್ಪ
ಕಂಟ್ರಾಕ್ಟರ್

ಇವರು ದಿ. 2.6.2021ರಂದು ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧ ವೈಕುಂಠ ಸಮಾರಾಧನೆಯನ್ನು ದಿ. 12.6.2021ರಂದು ಬೆಳಿಗ್ಗೆ 10.30 ರಿಂದ 11.30ರವರೆಗೆ ಸ್ವಗೃಹ ... ನಡೆಸಲಾಗುವುದು.

ಇಂತಿ: ಆರ್.ಜಯಲಕ್ಷ್ಮ ಹಾಗೂ ಕುಟುಂಬ ವರ್ಗದವರು.

ಪುಣ್ಯಸ್ಮರಣೆ

ಶ್ರೀ ಬಿ. ಲಿಂಗೇಗೌಡರು
ಇವರು 12–5–2021 ರಂದು ...

ಇಂತಿ ದುಃಖತಪ್ತರು: ಮಕ್ಕಳು, ಅಳಿಯಂದಿರು ಮತ್ತು ಮೊಮ್ಮಕ್ಕಳು. ಫೋನ್ ನಂ. 9740072520

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ

ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ದಯವಿಟ್ಟು ಸಂಪರ್ಕಿಸಿ:
Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036

ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮ್ಯಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಿನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಪ್ರಜಾವಾಣಿ
'ಕನ್ನಡ ಧ್ವನಿ' ಪಾಡ್‌ಕಾಸ್ಟ್ ಚಾನೆಲ್‌ನ
ಪ್ರತಿ ಶನಿವಾರದ 'ಹರಟೆ ಕಟ್ಟೆ'
ಎಸ್ಸೆಸ್ಸೆಲ್ಸಿ: ಬದಲಾದ ಪರೀಕ್ಷಾ ಕ್ರಮ ಏನು? ಎತ್ತ?
ವಿಷಯ ಕುರಿತ ಈ ದಿನದ ಚರ್ಚೆಯಲ್ಲಿ
ಡಾ.ಎಂ. ಮೋಹನ ಆಳ್ವ
ಅಧ್ಯಕ್ಷರು ಆಳ್ವಾಸ್ ಶಿಕ್ಷಣ ಪ್ರತಿಷ್ಠಾನ ಮೂಡಬಿದಿರೆ
ಅರವಿಂದ ಚೊಕ್ಕಾಡಿ
ಶಿಕ್ಷಣ ತಜ್ಞರು
ಸಂಜೆ 4 ಗಂಟೆಗೆ
ನೀವೂ ಆಲಿಸಿರಿ,
ಸ್ನೇಹಿತರಿಗೂ ಕೇಳಿಸಿರಿ
https://www.prajavani.net/podcast

ಪ್ರಜಾವಾಣಿ
ಜಸ್ಟ್ ಮ್ಯೂಸಿಕ್– ಹಿತಾನುಭವ
ವಚನಕ್ಕಾಗಿಯೇ ಹುಟ್ಟಿದವ!
ಪಂಡಿತ್ ಅಂಬಯ್ಯ ನುಲಿ ಅವರು ಹಾಡಿದ ವಚನ ಕೇಳಿ ನಡೆದಾಡುವ ದೇವರು, ಪಂಡಿತ್ ಪುಟ್ಟರಾಜ ಗವಾಯಿ ಅವರು ಆನಂದಭಾಷ್ಪ ಸುರಿಸಿದರು...
https://bit.ly/3cAhkYz



ಹೊರಗೆ ಹೋಗುವಾಗ ಮುಖಗವಸು ಧರಿಸಿ

ಒಂದು ದೇಶ, ಒಂದು ಪಡಿತರ ಚೀಟಿ ಯೋಜನೆ ಜಾರಿಗೆ ರಾಜ್ಯಗಳಿಗೆ ಸುಪ್ರೀಂ ಕೋರ್ಟ್ ಸೂಚನೆ

ವಲಸೆ ಕಾರ್ಮಿಕರ ನೋಂದಣಿ ವಿಳಂಬಕ್ಕೆ ಅತೃಪ್ತಿ

ಪ್ರಜಾವಾಣಿ ವಾರ್ತೆ

ನವದೆಹಲಿ: ವಿವಿಧ ಕಲ್ಯಾಣ ಯೋಜನೆಗಳ ಅನುಕೂಲ ದೊರೆಯುವಂತೆ ಅಸಂಘಟಿತ ವಲಸೆ ಕಾರ್ಮಿಕರನ್ನು ನೋಂದಣಿ ಮಾಡಲು ತಂತ್ರಾಂಶ ಅಭಿವೃದ್ಧಿಪಡಿಸದ ಕೇಂದ್ರ ಸರ್ಕಾರವನ್ನು ಸುಪ್ರೀಂ ಕೋರ್ಟ್ ಶುಕ್ರವಾರ ತರಾಟೆಗೆ ತೆಗೆದುಕೊಂಡಿದೆ.

'ನಿಮ್ಮ ನಿರ್ದೇಶಕರಿಗೆ ಸಮಯವಿಲ್ಲ ಎಂಬ ಒಂದೇ ಕಾರಣಕ್ಕೆ ಇದನ್ನು ಹೀಗೆ ನಿಲ್ಲಿಸಿಕೊಂಡಿರಲು ಸಾಧ್ಯವಿಲ್ಲ' ಎಂದು ಸುಪ್ರೀಂ ಕೋರ್ಟ್ ಖಾರವಾಗಿ ಪ್ರತಿಕ್ರಿಯಿಸಿದೆ. ಅಲ್ಲದೆ, ಒಂದು ದೇಶ ಒಂದು ಪಡಿತರ ಚೀಟಿ ಯೋಜನೆಯನ್ನು ಶೀಘ್ರವೇ ಜಾರಿಗೆ ತರಬೇಕು ಎಂದು ರಾಜ್ಯ ಸರ್ಕಾರಗಳಿಗೆ ಸೂಚನೆ ನೀಡಿದೆ.

ವಲಸೆ ಕಾರ್ಮಿಕರು ದೇಶದ ಯಾವುದೇ ಭಾಗದಲ್ಲಿ ಇದ್ದರೂ ಪಡಿತರ ಪಡೆದುಕೊಳ್ಳಲು ಒಂದು ದೇಶ, ಒಂದು ಪಡಿತರ ಚೀಟಿ ಯೋಜನೆ ಅನುಕೂಲ ಮಾಡಿಕೊಡುತ್ತದೆ. ಯೋಜನೆ ಅನುಷ್ಠಾನದಲ್ಲಿನ ವಿಳಂಬಕ್ಕೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್‌ನಲ್ಲಿ ಸಾಮಾಜಿಕ ಕಾರ್ಯಕರ್ತರು ಸಲ್ಲಿಸಿದ್ದ ಅರ್ಜಿಯ ವಿಚಾರಣೆ ವೇಳೆ ಸುಪ್ರೀಂ ಹೀಗೆ ಹೇಳಿದೆ.

'ಅಸಂಘಟಿತ ಕಾರ್ಮಿಕರ ರಾಷ್ಟ್ರೀಯ ದತ್ತಾಂಶಕೋಶ ಅಭಿವೃದ್ಧಿಪಡಿಸುತ್ತೇವೆ. ಇದಕ್ಕಾಗಿ 417 ಕೋಟಿ ಬಿಡುಗಡೆ ಮಾಡಿದ್ದೇವೆ ಎಂದು ಸರ್ಕಾರವು ಈ ಹಿಂದಿನ ವಿಚಾರಣೆ ವೇಳೆ ಹೇಳಿತ್ತು. ಆದರೆ ಇನ್ನೂ ದತ್ತಾಂಶಕೋಶ ಸಿದ್ಧವಾಗಿಲ್ಲ. ಮೂರು ವರ್ಷಗಳಿಂದ ಈ ವಿಷಯದಲ್ಲಿ ಪ್ರಗತಿಯೇ ಆಗಿಲ್ಲ' ಎಂದು ಅರ್ಜಿದಾರರ ಪರ ವಕೀಲ ಕೊಲಿನ್ ಗೊನ್ಸಾಲ್ವೆಸ್ ಅವರು ಸುಪ್ರೀಂ ಕೋರ್ಟ್ ಪೀಠಕ್ಕೆ ಮಾಹಿತಿ ನೀಡಿದರು. ಆಗ ಪೀಠವು ತೀವ್ರ ಅಸಮಾಧಾನ ವ್ಯಕ್ತಪಡಿಸಿತು. ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರನ್ನು ಪೀಠವು ತರಾಟೆಗೆ ತೆಗೆದುಕೊಂಡಿತು.

'ಕೇಂದ್ರ ಸರ್ಕಾರ ಇನ್ನೂ ಸಮೀಕ್ಷೆಯನ್ನೂ ನಡೆಸಿಲ್ಲ. ನಿಮ್ಮ ರಾಷ್ಟ್ರೀಯ ಡೇಟಾಬೇಸ್‌ನ ಪ್ರಗತಿ ಏನಾಯಿತು? 417 ಕೋಟಿ ಬಿಡುಗಡೆಯಾದರೂ ಇನ್ನೂ ಯಾವ ಕೆಲಸವೂ ಆಗಿಲ್ಲ. ನಿಮಗಿನ್ನು ಎಷ್ಟು ಸಮಯಬೇಕು? ಪ್ರಕ್ರಿಯೆಯೇ ಆರಂಭವಾಗಿಲ್ಲವಲ್ಲ' ಎಂದು ಪ್ರಶ್ನಿಸಿತು.

'ದೇಶದಲ್ಲಿ 2.8 ಕೋಟಿ ವಲಸೆ ಕಾರ್ಮಿಕರಿಗೆ ಪಡಿತರ ಚೀಟಿಯೇ ಇಲ್ಲ. ಸರ್ಕಾರ ಘೋಷಿಸಿರುವ ಉಚಿತ ಪಡಿತರ ಯೋಜನೆ ಅಡಿ ಅವರಿಗೆ ಪಡಿತರ ಸಿಗುವುದಿಲ್ಲ. ಯೋಜನೆಯನ್ನು ನವೆಂಬರ್‌ವರೆಗೆ ವಿಸ್ತರಿಸಲಾಗಿದೆ' ಎಂದು ಅರ್ಜಿದಾರರ ಪರ ಮತ್ತೊಬ್ಬ ವಕೀಲ ದುಶ್ಯಂತ್ ದವೆ ಅವರು ಪೀಠಕ್ಕೆ ಮಾಹಿತಿ ನೀಡಿದರು. ಆಗ ಪೀಠವು, 'ಪಡಿತರ ಚೀಟಿ ಇಲ್ಲದವರಿಗಾಗಿ ಯಾವ ಯೋಜನೆ ಸಿದ್ಧಪಡಿಸಿದ್ದೀರಿ' ಎಂದು ಸರ್ಕಾರವನ್ನು ಪ್ರಶ್ನಿಸಿತು.

'ಪಡಿತರ ಚೀಟಿ ಇಲ್ಲದವರಿಗೆ ಪಡಿತರ ನೀಡುವ ಯೋಜನೆಯನ್ನು ಸಿದ್ಧಪಡಿಸಲು ರಾಜ್ಯ ಸರ್ಕಾರಗಳಿಗೆ ಅಧಿಕಾರ ನೀಡಲಾಗಿದೆ' ಎಂದು ಹೆಚ್ಚುವರಿ ಸಾಲಿಸಿಟರ್ ಜನರಲ್ ಐಶ್ವರ್ಯಾ ಭಾಟಿ ಅವರು ಪೀಠಕ್ಕೆ ಮಾಹಿತಿ ನೀಡಿದರು. ಆಗ ದುಶ್ಯಂತ್ ದವೆ ಅವರು, 'ಕೇಂದ್ರ ತನ್ನ ಹೊಣೆಯನ್ನು ರಾಜ್ಯ ಸರ್ಕಾರಗಳ ಮೇಲೆ ಹೇರುತ್ತಿದೆ' ಎಂದು ಆರೋಪಿಸಿದರು.

ಈ ವಿಚಾರಕ್ಕೆ ಸಂಬಂಧಿಸಿದಂತೆ ಒಂದು ವಾರದಲ್ಲಿ ವರದಿ ಸಲ್ಲಿಸುವಂತೆ ರಾಜ್ಯ ಸರ್ಕಾರಗಳಿಗೆ ಸುಪ್ರೀಂ ಕೋರ್ಟ್ ಪೀಠವು ಸೂಚನೆ ನೀಡಿದೆ. ಅರ್ಜಿಗೆ ಸಂಬಂಧಿಸಿದ ತನ್ನ ತೀರ್ಪನ್ನು ಕಾಯ್ದಿರಿಸಿದೆ.

ಮೃತರ ಕುಟುಂಬಕ್ಕೆ ಪರಿಹಾರ: ಪರಿಶೀಲಿಸುತ್ತಿರುವ ಕೇಂದ್ರ

ಕೋವಿಡ್–19ನಿಂದ ಮೃತಪಟ್ಟವರ ಕುಟುಂಬಕ್ಕೆ ತಲಾ ₹ 4 ಲಕ್ಷ ಪರಿಹಾರ ನೀಡುವ ಮತ್ತು ಮರಣ ಪ್ರಮಾಣ ಪತ್ರ ನೀಡುವ ಬೇಡಿಕೆಯನ್ನು ಪರಿಶೀಲಿಸಲಾಗುತ್ತಿದೆ ಎಂದು ಸುಪ್ರೀಂ ಕೋರ್ಟ್‌ಗೆ ಕೇಂದ್ರ ಸರ್ಕಾರ ಶುಕ್ರವಾರ ತಿಳಿಸಿದೆ.

ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳಲ್ಲಿ ನಮೂದಿಸಲಾಗಿದ್ದ ಬೇಡಿಕೆಗಳನ್ನು ಸರ್ಕಾರ ಪರಿಗಣಿಸಿದೆ. ಅರ್ಜಿಗಳಿಗೆ ಸದ್ಯದಲ್ಲೇ ಪ್ರತಿಕ್ರಿಯೆ ನೀಡಲಾಗುವುದು ಎಂದು ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರು ನ್ಯಾಯಮೂರ್ತಿಗಳಾದ ಅಶೋಕ್ ಭೂಷಣ್ ಮತ್ತು ಎಂ.ಆರ್. ಶಾ ಇದ್ದ ಪೀಠಕ್ಕೆ ತಿಳಿಸಿದರು. ಜೊತೆಗೆ ಸಮಯಾವಕಾಶವನ್ನೂ ಕೋರಿದರು. ತುಷಾರ್ ಮೆಹ್ತಾ ಅವರ ಮನವಿಯನ್ನು ಪರಿಗಣಿಸಿರುವ ಪೀಠ, ಇದೇ 21ಕ್ಕೆ ಪ್ರತಿಕ್ರಿಯೆ ನೀಡಲು ಸೂಚಿಸಿದೆ.

ಕೋರ್ಟ್ ಕೂಡಲೇ ಮಧ್ಯ ಪ್ರವೇಶಿಸಿ, ಕೋವಿಡ್ ಸಂತ್ರಸ್ತರ ಕುಟುಂಬಗಳಿಗೆ ತಲಾ ₹ 4 ಲಕ್ಷ ಪರಿಹಾರ ಧನ ನೀಡುವಂತೆ ಕೇಂದ್ರಕ್ಕೆ ಸೂಚಿಸಬೇಕು ಎಂದು ವಕೀಲರಾದ ಗೌರವ್ ಕುಮಾರ್ ಬನ್ಸಾಲ್ ಮತ್ತು ರೀಪಕ್ ಕನ್ಸಲ್ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿದ್ದರು. ಕೋವಿಡ್–19 ಸಾಂಕ್ರಾಮಿಕವನ್ನು ಕೇಂದ್ರ ಸರ್ಕಾರ ರಾಷ್ಟ್ರೀಯ ವಿಪತ್ತು ಎಂದು 2020ರ ಮಾರ್ಚ್ 14ರಂದು ಘೋಷಿಸಿದೆ. ಹೀಗಾಗಿ, ವಿಪತ್ತು ನಿರ್ವಹಣಾ ಕಾಯ್ದೆಯ ಸೆಕ್ಷನ್ 12ರ ಅಡಿ ಸಂತ್ರಸ್ತ ಕುಟುಂಬಗಳಿಗೆ ಪರಿಹಾರ ನೀಡಬೇಕು. ಸಂತ್ರಸ್ತರಿಗೆ ಆರ್ಥಿಕ ಸಹಾಯ ನೀಡುವುದು ಸಾಂವಿಧಾನಿಕ ಹೊಣೆಗಾರಿಕೆ ಆಗಿರುತ್ತದೆ ಎಂದು ಅರ್ಜಿಯಲ್ಲಿ ನಮೂದಿಸಿದ್ದರು.

ಅರ್ಜಿದಾರರ ಪರವಾಗಿ ಕೋರ್ಟ್‌ಗೆ ಹಾಜರಾಗಿದ್ದ ಹಿರಿಯ ವಕೀಲ ಎಸ್.ಬಿ. ಉಪಾಧ್ಯಾಯ್, ಕೋವಿಡ್–19 ನೆಪ ಹೇಳಿ ಆಸ್ಪತ್ರೆಗಳು ಮರಣ ಪ್ರಮಾಣ ಪತ್ರವನ್ನು ನೀಡುತ್ತಿಲ್ಲ. ಕೋವಿಡ್‌ನಿಂದ ಕಪ್ಪು ಶಿಲೀಂಧ್ರ ಸಮಸ್ಯೆ ಕೂಡಾ ಹೆಚ್ಚಾಗಿದೆ. ಹೀಗಾಗಿ ಮರಣ ಪ್ರಮಾಣ ಪತ್ರಗಳಲ್ಲಿ ಕಪ್ಪು ಶಿಲೀಂಧ್ರ ಕಾರಣವನ್ನೂ ಸೇರಿಸಬೇಕು ಎಂದು ಮನವಿ ಮಾಡಿದರು.

ಸಾಲದ ಕಂತು ಪಾವತಿ ಮುಂದೂಡಿಕೆ: ಆದೇಶಕ್ಕೆ ನಕಾರ

ಸಾಲದ ಕಂತು ಮರುಪಾವತಿಯನ್ನು ಕೋವಿಡ್ ಎರಡನೇ ಅಲೆಯ ಕಾರಣ ಮುಂದೂಡಲು ನಿರ್ದೇಶನ ನೀಡಿ ಎಂದು ಕೋರಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್ ಪೀಠವು ತಿರಸ್ಕರಿಸಿದೆ. 'ನಾವು ಹಣಕಾಸು ತಜ್ಞರಲ್ಲ. ಇಂತಹ ಆದೇಶ ನೀಡಲು ಸಾಧ್ಯವಿಲ್ಲ' ಎಂದು ನ್ಯಾಯಮೂರ್ತಿಗಳಾದ ಅಶೋಕ್ ಭೂಷಣ್ ಮತ್ತು ಎಂ.ಆರ್.ಶಾ ಅವರಿದ್ದ ಪೀಠವು ಹೇಳಿದೆ.

ವಕೀಲ ವಿಶಾಲ್ ತಿವಾರಿ ಅವರು ಈ ಅರ್ಜಿ ಸಲ್ಲಿಸಿದ್ದರು. ಕೋವಿಡ್ ಎರಡನೇ ಅಲೆಯ ಲಾಕ್‌ಡೌನ್‌ನಲ್ಲಿ ಒಂದು ಕೋಟಿಗೂ ಹೆಚ್ಚು ಜನರು ಉದ್ಯೋಗ ಕಳೆದುಕೊಂಡಿದ್ದಾರೆ. ಹೀಗಾಗಿ ಸಾಲ ಮರುಪಾವತಿ ಕಂತನ್ನು ಮುಂದೂಡಲು ಕೇಂದ್ರ ಸರ್ಕಾರಕ್ಕೆ ನಿರ್ದೇಶನ ನೀಡಿ ಎಂದು ಅವರು ಕೋರಿದ್ದರು.

'ನಾವು ಹಣಕಾಸು ತಜ್ಞರಲ್ಲ ಎಂಬುದನ್ನು ಒಪ್ಪಿಕೊಳ್ಳುತ್ತೇವೆ. ಹಣಕಾಸು ನೀತಿಗಳ ವಿಚಾರದಲ್ಲಿ ನಾವು ಭಾಗಿಯಾಗುವುದಿಲ್ಲ. ಇವೆಲ್ಲಾ ನೀತಿಯ ಮಟ್ಟದಲ್ಲಿ ಆಗಬೇಕಾದ ಕೆಲಸ. ಪರಿಸ್ಥಿತಿಯನ್ನು ಅವಲೋಕಿಸಿ ಸರ್ಕಾರವೇ ಸೂಕ್ತ ನಿರ್ಧಾರ ತೆಗೆದುಕೊಳ್ಳಬೇಕು' ಎಂದು ಪೀಠವು ಹೇಳಿದೆ.

'ತಕ್ಷಣವೇ ಜಾರಿಗೆ ತನ್ನಿ'

ಒಂದು ದೇಶ, ಒಂದು ಪಡಿತರ ಚೀಟಿ ಯೋಜನೆಯನ್ನು ಜಾರಿಗೆ ತರದ ರಾಜ್ಯ ಸರ್ಕಾರಗಳನ್ನು ಸುಪ್ರೀಂ ಕೋರ್ಟ್ ತರಾಟೆಗೆ ತೆಗೆದುಕೊಂಡಿದೆ. ಯೋಜನೆ ಜಾರಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರಗಳು ಸಲ್ಲಿಸಿದ್ದ ವರದಿಗಳನ್ನು ಪೀಠವು ಪರಿಶೀಲಿಸಿತು.

'ಆಧಾರ್ ಸಂಖ್ಯೆ ನಮೂದಿಸುವಲ್ಲಿ ತಾಂತ್ರಿಕ ಸಮಸ್ಯೆ ಇದೆ. ಹೀಗಾಗಿ ಯೋಜನೆ ಜಾರಿಗೆ ತರಲಾಗಿಲ್ಲ' ಎಂದು ಪಶ್ಚಿಮ ಬಂಗಾಳ ಸರ್ಕಾರ ವರದಿ ಸಲ್ಲಿಸಿತ್ತು. ಈ ವರದಿಗೆ ಪೀಠವು ಖಾರವಾಗಿ ಪ್ರತಿಕ್ರಿಯಿಸಿದೆ.

'ನೀವು ನೀಡುವ ಯಾವ ಕಾರಣವನ್ನೂ ನಾವು ಪರಿಗಣಿಸುವುದಿಲ್ಲ. ನೀವು ಪ್ರತಿ ಬಾರಿ ಒಂದೆರಡು ಕಾರಣಗಳನ್ನು ಹೇಳುತ್ತಲೇ ಇರುವುದು ಸಾಧ್ಯವಿಲ್ಲ. ಈ ಯೋಜನೆ ವಲಸೆ ಕಾರ್ಮಿಕರಿಗಾಗಿ ಮಾಡಿರುವುದು. ತಕ್ಷಣವೇ ಯೋಜನೆಯನ್ನು ಜಾರಿಗೆ ತನ್ನಿ' ಎಂದು ಪಶ್ಚಿಮ ಬಂಗಾಳ ಸರ್ಕಾರಕ್ಕೆ ಸೂಚಿಸಿತು.

ಆಡಳಿತಾಧಿಕಾರಿ ಪಟೇಲ್ 'ಜೈವಿಕ ಅಸ್ತ್ರ' ಎಂದಿದ್ದ ಆಯಿಷಾ ಸುಲ್ತಾನಾ

ಲಕ್ಷದ್ವೀಪ ನಟಿಯ ವಿರುದ್ಧ ದೇಶದ್ರೋಹ ಪ್ರಕರಣ

ಪ್ರಜಾವಾಣಿ ವಾರ್ತೆ

ತಿರುವನಂತಪುರ: ಲಕ್ಷದ್ವೀಪದ ಆಡಳಿತಾಧಿಕಾರಿ ಪ್ರಫುಲ್ ಕೆ.ಪಟೇಲ್ ಅವರು 'ಜೈವಿಕ ಅಸ್ತ್ರ' ಎಂದು ಸುದ್ದಿವಾಹಿನಿ ಚರ್ಚೆಯೊಂದರಲ್ಲಿ ಹೇಳಿದ್ದ ಲಕ್ಷದ್ವೀಪದ ಸಿನಿಮಾ ನಟಿ ಮತ್ತು ನಿರ್ದೇಶಕಿ ಆಯಿಷಾ ಸುಲ್ತಾನಾ ಅವರ ವಿರುದ್ಧ ಪೊಲೀಸರು ದೇಶದ್ರೋಹದ ಪ್ರಕರಣ ದಾಖಲಿಸಿದ್ದಾರೆ. ಇಲ್ಲಿನ ಬಿಜೆಪಿ ಘಟಕದ ಅಧ್ಯಕ್ಷ ನೀಡಿದ್ದ ದೂರಿನ ಅನ್ವಯ ಈ ಪ್ರಕರಣ ದಾಖಲಾಗಿದೆ. ಪೊಲೀಸರ ಈ ಕ್ರಮಕ್ಕೆ ಭಾರಿ ವಿರೋಧ ವ್ಯಕ್ತವಾಗಿದೆ.

ಇಲ್ಲಿನ ಆಡಳಿತಾಧಿಕಾರಿ ಪಟೇಲ್ ಅವರು ತೆಗೆದುಕೊಂಡ ಹಲವು ನಿರ್ಧಾರಗಳ ವಿರುದ್ಧ ಇಲ್ಲಿ ಹಲವು ದಿನಗಳಿಂದ ವ್ಯಾಪಕ ಪ್ರತಿಭಟನೆ ನಡೆಯುತ್ತಿದೆ. ಆಡಳಿತಾಧಿಕಾರಿಯ ಈ ನೀತಿಗಳಿಗೆ ಸಂಬಂಧಿಸಿದಂತೆ ಸ್ಥಳೀಯ ಸುದ್ದಿವಾಹಿನಿ ನಡೆಸಿದ್ದ ಚರ್ಚೆಯಲ್ಲಿ ಆಯಿಷಾ ಭಾಗವಹಿಸಿದ್ದರು. 'ಆಡಳಿತಾಧಿಕಾರಿ ಪ್ರಫುಲ್ ಪಟೇಲ್ ಅವರನ್ನು ಕೇಂದ್ರ ಸರ್ಕಾರವು, ಲಕ್ಷದ್ವೀಪದ ಜನರ ವಿರುದ್ಧ ಜೈವಿಕ ಅಸ್ತ್ರದಂತೆ ಬಳಸುತ್ತಿದೆ' ಎಂದು ಅವರು ಆರೋಪಿಸಿದ್ದರು.

ಜೈವಿಕ ಅಸ್ತ್ರ ಎಂಬ ಪದ ಬಳಸಿದ್ದರ ವಿರುದ್ಧ ಇಲ್ಲಿನ ಬಿಜೆಪಿ ಘಟಕದ ಅಧ್ಯಕ್ಷ ಅಬ್ದುಲ್ ಖಾದರ್ ಅವರು ಪೊಲೀಸರಿಗೆ ದೂರು ನೀಡಿದ್ದರು.

'ಆಯಿಷಾ ಸುಲ್ತಾನ ಅವರು ದೇಶದ್ರೋಹಿ. ಸುಳ್ಳುಸುದ್ದಿ ಹರಡುವ ಮೂಲಕ ಕೇಂದ್ರ ಸರ್ಕಾರದ ಗೌರವಕ್ಕೆ ಅವರು ಧಕ್ಕೆ ತಂದಿದ್ದಾರೆ. ಅವರ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳಬೇಕು' ಎಂದು ಅವರು ದೂರಿನಲ್ಲಿ ಕೋರಿದ್ದರು. ಅಲ್ಲದೆ, ನಟಿಯ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳಬೇಕು ಎಂದು ಒತ್ತಾಯಿಸಿ ಬಿಜೆಪಿ ಕಾರ್ಯಕರ್ತರು ಪ್ರದರ್ಶನ ನಡೆಸಿದ್ದರು. ಇದಾದ ಕೆಲವೇ ಗಂಟೆಗಳಲ್ಲಿ ಪೊಲೀಸರು ನಟಿಯ ವಿರುದ್ಧ ದೇಶದ್ರೋಹದ ಪ್ರಕರಣ ದಾಖಲಿಸಿದ್ದಾರೆ. ಭಾರತೀಯ ದಂಡ ಸಂಹಿತೆಯ ಸೆಕ್ಷನ್ 124 ಎ (ದೇಶದ್ರೋಹ) ಮತ್ತು ಸೆಕ್ಷನ್ 153 ಬಿ (ದ್ವೇಷ ಭಾಷಣ) ಅಡಿಯಲ್ಲಿ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.

ಪ್ರಕರಣ ದಾಖಲಾದ ನಂತರದ ಕೆಲವೇ ಗಂಟೆಗಳಲ್ಲಿ ಆಯಿಷಾ ಸುಲ್ತಾನಾ ಅವರು ಈ ಬಗ್ಗೆ ತಮ್ಮ ಫೇಸ್‌ಬುಕ್ ಖಾತೆಯಲ್ಲಿ ಪ್ರತಿಕ್ರಿಯೆ ನೀಡಿದ್ದಾರೆ. ತಮ್ಮ ಹೇಳಿಕೆಯನ್ನು ಸಮರ್ಥಿಸಿಕೊಂಡಿದ್ದಾರೆ. ಇಲ್ಲಿನ ಸಾಂಸ್ಕೃತಿಕ ಸಂಘಟನೆಯು ಆಯಿಷಾ ಅವರಿಗೆ ಬೆಂಬಲ ಘೋಷಿಸಿದೆ. ಸಾಮಾಜಿಕ ಜಾಲತಾಣಗಳಲ್ಲೂ ಆಯಿಷಾ ಅವರಿಗೆ ವ್ಯಾಪಕ ಬೆಂಬಲ ವ್ಯಕ್ತವಾಗಿದೆ. ಕಾಂಗ್ರೆಸ್ ಸಂಸದ ಶಶಿ ತರೂರ್ ಅವರು ಸರಣಿ ಟ್ವೀಟ್ ಮಾಡುವ ಮೂಲಕ ಪ್ರಕರಣವನ್ನು ವಾಪಸ್ ಪಡೆಯುವಂತೆ ಒತ್ತಾಯಿಸಿದ್ದಾರೆ. ಕೇರಳ ಸಿಪಿಎಂ ನಾಯಕ ಥಾಮಸ್ ಐಸಾಕ್ ಅವರು ಆಯಿಷಾ ಅವರಿಗೆ ಬೆಂಬಲ ಸೂಚಿಸಿದ್ದಾರೆ.

'ಕೋವಿಡ್ ಹರಡಲು ಆಡಳಿತಾಧಿಕಾರಿಯೇ ಕಾರಣ'

'ಆಯಿಷಾ ವಿರುದ್ಧ ದೇಶದ್ರೋಹದ ಪ್ರಕರಣ ದಾಖಲಾಗಿದೆ. ಅವರು ಮಾಡಿದ ಅಪರಾಧ: ಆಡಳಿತಾಧಿಕಾರಿಯ ಆಡಳಿತ ನೀತಿಗಳನ್ನು ಜೈವಿಕ ಅಸ್ತ್ರ ಎಂದು ಕರೆದದ್ದು. ಕಾರಣ: ಕೋವಿಡ್ ಬಂದು ಒಂದು ವರ್ಷ ಕಳೆದರೂ, ಲಕ್ಷದ್ವೀಪದಲ್ಲಿ ಒಂದೂ ಕೋವಿಡ್ ಪ್ರಕರಣ ಇರಲಿಲ್ಲ. ಆದರೆ ಆಡಳಿತಾಧಿಕಾರಿಯು ಪ್ರವಾಸಿಗರ ಕ್ವಾರಂಟೈನ್ ನಿಯಮವನ್ನು ರದ್ದುಪಡಿಸಿದರು, ಈಗ ಲಕ್ಷದ್ವೀಪದಲ್ಲಿ ಕೋವಿಡ್ ತೀವ್ರವಾಗುತ್ತಿದೆ. ಇದು ದೇಶದ್ರೋಹವೇ!' ಎಂದು ಸಿಪಿಎಂ ನಾಯಕ ಥಾಮಸ್ ಐಸಾಕ್ ಟ್ವೀಟ್ ಮಾಡಿದ್ದಾರೆ.



'ಆಯಿಷಾ ಅವರನ್ನು ದೇಶವಿರೋಧಿ ಎನ್ನುವುದು ಸರಿಯಲ್ಲ. ಆಡಳಿತಾಧಿಕಾರಿಯ ಅಮಾನವೀಯ ನೀತಿಗಳ ವಿರುದ್ಧ ಅವರು ಪ್ರತಿಕ್ರಿಯಿಸಿದ್ದಾರೆ. ಆಡಳಿತಾಧಿಕಾರಿ ಪಟೇಲ್ ಅವರ ನೀತಿಯ ಕಾರಣದಿಂದಲೇ ಲಕ್ಷದ್ವೀಪದಲ್ಲಿ ಈಗ ಕೋವಿಡ್ ತಾಂಡವವಾಡುತ್ತಿದೆ. ಲಕ್ಷದ್ವೀಪದ ಸಾಂಸ್ಕೃತಿಕ ಸಮುದಾಯವು ಆಯಿಷಾ ಅವರ ಬೆಂಬಲಕ್ಕೆ ನಿಲ್ಲುತ್ತದೆ' ಎಂದು ಲಕ್ಷದ್ವೀಪ ಸಾಹಿತ್ಯ ಪ್ರವರ್ತಕ ಸಂಘಂ ಬೆಂಬಲ ಘೋಷಿಸಿದೆ.

'ಪ್ರಕರಣ ಕೂಡಲೇ ಕೈಬಿಡಿ'

'ನಮ್ಮ ಪ್ರಜಾಪ್ರಭುತ್ವದಲ್ಲಿ ಸರ್ಕಾರದ ವಿರುದ್ಧ ಮಾಡಿದ ಟೀಕೆಗಳು ಮತ್ತು ವಿಮರ್ಶೆಗಳು ಹಿಂಸಾಚಾರವನ್ನು ಪ್ರಚೋದಿಸದೇ ಇದ್ದರೆ ಅದು ದೇಶದ್ರೋಹವಾಗುವುದಿಲ್ಲ ಎಂದು ಸುಪ್ರೀಂ ಕೋರ್ಟ್ ಹಲವು ಬಾರಿ ಹೇಳಿದೆ. ಆದರೆ ಹಲವು ರಾಜ್ಯಗಳ ಪೊಲೀಸರು ಇದನ್ನು ಹಲವು ಬಾರಿ ಕಡೆಗಣಿಸಿದ್ದಾರೆ' ಎಂದು ಕಾಂಗ್ರೆಸ್ ಸಂಸದ ಶಶಿ ತರೂರ್ ಟ್ವೀಟ್ ಮಾಡಿದ್ದಾರೆ.

'ಸುಪ್ರೀಂ ಕೋರ್ಟ್‌ನ ಅಭಿಪ್ರಾಯಗಳನ್ನು ಸ್ಪಷ್ಟಪಡಿಸುವ ಉದ್ದೇಶದಿಂದ ದೇಶದ್ರೋಹದ ಕಾನೂನಿಗೆ ಸಂಬಂಧಿಸಿದಂತೆ 2014-15ರಲ್ಲಿ ನಾನು ಸಂಸತ್ತಿನಲ್ಲಿ ಖಾಸಗಿ ಮಸೂದೆ ಮಂಡಿಸಿದ್ದೆ. ಆಯಿಷಾ ಅವರ ಹೇಳಿಕೆ ವಿರುದ್ಧ ದೇಶದ್ರೋಹ ಪ್ರಕರಣ ದಾಖಲಿಸಿರುವುದು ಸಂಪೂರ್ಣ ತಪ್ಪು. ಈ ಕಾನೂನು ಅನ್ವಯವೇ ಆಗುವುದಿಲ್ಲ. ಹೀಗಾಗಿ ನ್ಯಾಯಾಲಯದಲ್ಲಿ ಈ ಪ್ರಕರಣ ಬಿದ್ದುಹೋಗುತ್ತದೆ. ಆದರೆ ಪ್ರಕರಣ ಬೀಳುವವರೆಗೆ ಹೋರಾಡುವುದೇ ದೊಡ್ಡ ಶಿಕ್ಷೆ. ಈ ಕಾನೂನಿನಿಂದ ನಮ್ಮ ಪ್ರಜಾಪ್ರಭುತ್ವಕ್ಕೆ ಉಪಯೋಗವಿಲ್ಲ. ಇದು ಕಾನೂನು ಪ್ರಕ್ರಿಯೆಯ ದುರ್ಬಳಕೆ. ಆಯಿಷಾ ವಿರುದ್ಧದ ಪ್ರಕರಣವನ್ನು ಕೂಡಲೇ ಕೈಬಿಡಬೇಕು' ಎಂದು ತರೂರ್ ಆಗ್ರಹಿಸಿದ್ದಾರೆ.

'ಬೇರೇನು ಕರೆಯಬೇಕು?'

'ಸುದ್ದಿ ವಾಹಿನಿಯ ಚರ್ಚೆಯಲ್ಲಿ ನಾನು ಜೈವಿಕ ಅಸ್ತ್ರ ಎಂಬ ಪದ ಬಳಸಿದ್ದೇನೆ. ಆಡಳಿತಾಧಿಕಾರಿ ಪಟೇಲ್ ಮತ್ತು ಅವರ ನೀತಿಗಳು ಲಕ್ಷದ್ವೀಪದ ಜನರ ವಿರುದ್ಧ ಜೈವಿಕ ಅಸ್ತ್ರಗಳಂತೆ ಕೆಲಸ ಮಾಡಿವೆ. ಹೀಗಾಗಿ ಈ ಪದ ಬಳಸಿದ್ದೇನೆ. ಲಕ್ಷದ್ವೀಪದಲ್ಲಿ ಒಂದೂ ಕೋವಿಡ್ ಪ್ರಕರಣ ಇರಲಿಲ್ಲ. ಪಟೇಲ್ ಅವರು ಕ್ವಾರಂಟೈನ್ ಅನ್ನು ರದ್ದುಪಡಿಸಿದರು. ಆನಂತರವೇ ಲಕ್ಷದ್ವೀಪದಲ್ಲಿ ಕೋವಿಡ್ ಪ್ರಕರಣಗಳು ಕಾಣಿಸಿಕೊಡವು. ಹೀಗಾಗಿ ಅವರನ್ನು ನಾನು ಜೈವಿಕ ಅಸ್ತ್ರಕ್ಕೆ ಹೋಲಿಸಿದೆ. ವ್ಯಕ್ತಿಯನ್ನು ಜೈವಿಕ ಅಸ್ತ್ರಕ್ಕೆ ಹೋಲಿಸಿದ್ದೇನೆಯೇ ಹೊರತು ಸರ್ಕಾರ ಅಥವಾ ದೇಶವನ್ನು ಅಲ್ಲ. ಇದನ್ನು ನೀವು ಅರ್ಥ ಮಾಡಿಕೊಳ್ಳಬೇಕು. ಅವರನ್ನು ಬೇರೆ ಏನೆಂದು ಕರೆಯಬೇಕು' ಎಂದು ಆಯಿಷಾ ಅವರು ಪ್ರಶ್ನಿಸಿದ್ದಾರೆ.

ಶಾಂತಿಯಿಂದ ಬದುಕಲು ಬಿಜೆಪಿ ಬಿಡಲ್ಲ: ಮಮತಾ

ಕೋಲ್ಕತ್ತ (ಪಿಟಿಐ): 'ಮುಕುಲ್ ರಾಯ್ ಅವರು ಟಿಎಂಸಿಗೆ ಮರಳಿರುವುದರಿಂದ, ಬಿಜೆಪಿಯು ಯಾರೊಬ್ಬರನ್ನೂ ಶಾಂತಿಯುತವಾಗಿ ಬದುಕಲು ಬಿಡುವುದಿಲ್ಲ. ಪ್ರತಿಯೊಬ್ಬರ ಮೇಲೂ ಒತ್ತಡ ಹೇರುತ್ತದೆ ಎಂಬುದು ಸಾಬೀತಾದಂತಾಗಿದೆ. ರಾಯ್ ಅವರು ಬಿಜೆಪಿಯೊಳಗೆ ಹಿಂಸೆ ಹಾಗೂ ಬೆದರಿಕೆಯನ್ನು ಅನುಭವಿಸಿದ್ದಾರೆ' ಎಂದು ಟಿಎಂಸಿ ಮುಖ್ಯಸ್ಥೆ ಮತ್ತು ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಆರೋಪಿಸಿದ್ದಾರೆ.

ಬಿಜೆಪಿಯ ರಾಷ್ಟ್ರೀಯ ಉಪಾಧ್ಯಕ್ಷರಾಗಿದ್ದ ಮುಕುಲ್ ರಾಯ್ ಹಾಗೂ ಅವರ ಪುತ್ರ ಶುಭ್ರಾಂಶು ಅವರನ್ನು ಮರಳಿ ಟಿಎಂಸಿಗೆ ಬರಮಾಡಿಕೊಂಡ ನಂತರ, ಅವರು ಮಾಧ್ಯಮಗೋಷ್ಠಿಯಲ್ಲಿ ಮಾತನಾಡಿದರು.

ಬಿಜೆಪಿಯಿಂದ ಟಿಎಂಸಿಗೆ ಪಕ್ಷಾಂತರ ಆರಂಭವಾಗಲಿದೆ ಎಂದು ಮಮತಾ ಹೇಳಿದ್ದಾರೆ. ಆದರೆ, ವಿಧಾನಸಭಾ ಚುನಾವಣೆಗೂ ಸ್ವಲ್ಪವೇ ಮುನ್ನ ಪಕ್ಷ ತ್ಯಜಿಸಿ ಬಿಜೆಪಿ ಸೇರಿದ್ದ ಮುಖಂಡರು ಮತ್ತು ಕಾರ್ಯಕರ್ತರನ್ನು ಮರಳಿ ಪಕ್ಷಕ್ಕೆ ಸೇರಿಸುವುದಿಲ್ಲ ಎಂದು ಅವರು ಸ್ಪಷ್ಟಪಡಿಸಿದ್ದಾರೆ.

ಚುನಾವಣೆಗೂ ಮುನ್ನ ಟಿಎಂಸಿ ತೊರೆದು ಬಿಜೆಪಿ ಸೇರಿದ್ದ ದೀಪೇಂದು ಬಿಸ್ವ, ಸೊನಾಲಿ ಗುಹಾ ಮುಂತಾದ ಕೆಲವು ಮುಖಂಡರು ಮಮತಾ ಅವರಿಗೆ ಪತ್ರ ಬರೆದು ಟಿಎಂಸಿಗೆ ಮರಳುವ ಇಚ್ಛೆಯನ್ನು ಈಗಾಗಲೇ ವ್ಯಕ್ತಪಡಿಸಿದ್ದಾರೆ.

ಒಂದು ಕಾಲದಲ್ಲಿ ಟಿಎಂಸಿಯಲ್ಲಿ ಮಮತಾ ಅವರ ನಂತರದ ಸ್ಥಾನದಲ್ಲಿದ್ದ ರಾಯ್ ಅವರನ್ನು ನಾರದ ಮಾರುವೇಷದ ಕಾರ್ಯಾಚರಣೆ ಘಟನೆಯ ನಂತರ, 2015ರ ಫೆಬ್ರುವರಿಯಲ್ಲಿ ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಹುದ್ದೆಯಿಂದ ಕೆಳಗಿಳಿಸಲಾಗಿತ್ತು. 2017ರ ನವೆಂಬರ್ ತಿಂಗಳಲ್ಲಿ ಅವರು ಪಕ್ಷ ತ್ಯಜಿಸಿ ಬಿಜೆಪಿಗೆ ಸೇರ್ಪಡೆಯಾಗಿದ್ದರು.

'ರಾಯ್ ಅವರನ್ನು ಪಕ್ಷಕ್ಕೆ ಮರಳಿ ಕರೆತರುವ ಪ್ರಯತ್ನವನ್ನು ಮಮತಾ ಅವರು ಮಾರ್ಚ್ ತಿಂಗಳ ಕೊನೆಯಲ್ಲಿ ಆರಂಭಿಸಿದ್ದರು. ಪಕ್ಷಾಂತರಿಗಳನ್ನು ಮರಳಿ ಕರೆತಂದರೆ ಪಕ್ಷದೊಳಗೆ ಅಸಮಾಧಾನ ಹೊಗೆಯಾಡಬಹುದೆಂಬ ಕಾರಣಕ್ಕೆ ಉಳಿದ ನಾಯಕರನ್ನು ಕರೆತರುವ ಪ್ರಯತ್ನಗಳನ್ನು ಮಾಡಿರಲಿಲ್ಲ. ರಾಯ್ ಅವರ ಸಂಘಟನಾ ಚಾತುರ್ಯವನ್ನು ಅರಿತಿರುವ ಮಮತಾ, ವಿಶೇಷ ಪ್ರಕರಣವೆಂದು ಅವರನ್ನು ಮರಳಿ ಕರೆತಂದಿದ್ದಾರೆ' ಎಂದು ರಾಜಕೀಯ ವಿಶ್ಲೇಷಕ ರಜತ್ ರಾಯ್ ಹೇಳಿದ್ದಾರೆ.

ಮಮತಾ ಮತ್ತು ಮುಕುಲ್ ರಾಯ್ ಅವರು ಮಾಧ್ಯಮಗೋಷ್ಠಿಯಲ್ಲಿ ಮಾತನಾಡಿದರು ಪಿಟಿಐ ಚಿತ್ರ

ಮಿಶ್ರ ಪ್ರತಿಕ್ರಿಯೆ

ಮುಕುಲ್ ರಾಯ್ ಅವರ ಪಕ್ಷತ್ಯಾಗಕ್ಕೆ ಬಿಜೆಪಿಯೊಳಗೆ ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಗಿದೆ.

'ರಾಯ್ ಅವರ ನಿರ್ಗಮನದಿಂದ ಪಕ್ಷದ ಸಂಘಟನೆಯ ಮೇಲೆ ಯಾವುದೇ ವ್ಯತಿರಿಕ್ತ ಪರಿಣಾಮ ಆಗುವುದಿಲ್ಲ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ದಿಲೀಪ್ ಘೋಷ್ ಹೇಳಿದ್ದಾರೆ. ಆದರೆ 'ಲಾಬಿ ರಾಜಕಾರಣವು ಪಕ್ಷದ ಮೇಲೆ ವ್ಯತಿರಿಕ್ತ ಪರಿಣಾಮ ಬೀರಲಾರಂಭಿಸಿದೆ' ಎಂದು ಮಾಜಿ ಸಂಸದ ಅನುಪಂ ಹಜಾರೆ ಹೇಳಿದ್ದಾರೆ.

'ಮುಕುಲ್ ಬಾಬು ಹಿರಿಯ ಮುಖಂಡ. ಅವರಿಗೆ ಶುಭ ಹಾರೈಸುತ್ತೇವೆ. ಆದರೆ, ಟಿಎಂಸಿ ಸೇರುವುದಕ್ಕೂ ಮುನ್ನ ಅವರು ಬಿಜೆಪಿ ಪ್ರಾಥಮಿಕ ಸದಸ್ಯತ್ವ ಹಾಗೂ ಪಕ್ಷದ ಇತರ ಎಲ್ಲಾ ಹುದ್ದೆಗಳಿಗೆ ರಾಜೀನಾಮೆ ನೀಡಬೇಕಿತ್ತಲ್ಲವೇ? ಬಿಜೆಪಿ ಟಿಕೆಟ್‌ನಿಂದ ಗೆದ್ದಿರುವ ಅವರು ಶಾಸಕ ಸ್ಥಾನಕ್ಕೂ ರಾಜೀನಾಮೆ ನೀಡಬೇಕಿತ್ತಲ್ಲವೇ' ಎಂದು ಬಿಜೆಪಿ ಕಾರ್ಯದರ್ಶಿ ಪ್ರಕಾಶ್ ಮಜುಂದಾರ್ ಪ್ರಶ್ನಿಸಿದ್ದಾರೆ.

ಮುಕುಲ್ ರಾಯ್, ಸವ್ಯಸಾಚಿ ದತ್ತ ಮುಂತಾದ ಹಿರಿಯ ಮುಖಂಡರಿಗೆ ವಿಧಾನಸಭಾ ಚುನಾವಣೆಯ ಸಂದರ್ಭದಲ್ಲಿ ಬಿಜೆಪಿಯಲ್ಲಿ ಸರಿಯಾದ ಸ್ಥಾನಮಾನ, ಗೌರವ ಸಿಕ್ಕಿರಲಿಲ್ಲ. ಬದಲಿಗೆ ಸುವೇಂದು ಅಧಿಕಾರಿ, ನಟ ಮಿಥುನ್ ಚಕ್ರವರ್ತಿಯಂಥವರಿಗೆ ಎಲ್ಲಾ ಹೊಣೆಯನ್ನು ನೀಡಲಾಗಿತ್ತು ಎಂದು ಬಿಜೆಪಿಯೊಳಗಿನ ಕೆಲವು ನಾಯಕರು ಹೇಳಿದ್ದಾರೆ.

> ಎಲ್ಲಾ ಪರಿಚಿತ ಮುಖಗಳನ್ನು ಮತ್ತೆ ನೋಡಲು ತುಂಬಾ ಖುಷಿಯೆನಿಸುತ್ತದೆ
> **ಮುಕುಲ್ ರಾಯ್,** ಬಿಜೆಪಿ ತ್ಯಜಿಸಿ ಟಿಎಂಸಿ ಸೇರಿದ ಮುಖಂಡ

ಮೋದಿ– ಯೋಗಿ ಭೇಟಿ: ಸಂಪುಟ ವಿಸ್ತರಣೆ ಊಹಾಪೋಹ

ನವದೆಹಲಿ (ಪಿಟಿಐ): ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು ಪ್ರಧಾನಿ ನರೇಂದ್ರ ಮೋದಿ ಅವರನ್ನು ಶುಕ್ರವಾರ ಭೇಟಿಮಾಡಿ ಮಾತುಕತೆ ನಡೆಸಿದ್ದಾರೆ. ಮೋದಿ– ಯೋಗಿ ಭೇಟಿಯ ಸಂದರ್ಭದ ಚಿತ್ರವನ್ನು, ಪ್ರಧಾನಿ ಕಚೇರಿಯ ಅಧಿಕೃತ ಟ್ವಿಟರ್ ಖಾತೆಯಲ್ಲಿ ಪ್ರಕಟಿಸಲಾಗಿದೆ.

ಗೃಹ ಸಚಿವ ಅಮಿತ್ ಶಾ ಅವರನ್ನು ಭೇಟಿಮಾಡಿದ ಮರುದಿನವೇ ಯೋಗಿ ಅವರು ಮೋದಿಯನ್ನು ಭೇಟಿ ಮಾಡಿ ಒಂದು ಗಂಟೆಗೂ ಹೆಚ್ಚು ಕಾಲ ಹಾಗೂ ಪಕ್ಷದ ಅಧ್ಯಕ್ಷ ಜೆ.ಪಿ. ನಡ್ಡಾ ಅವರ ಜತೆ ಒಂದೂವರೆ ಗಂಟೆ ಕಾಲ ಚರ್ಚಿಸಿರುವುದು ಕುತೂಹಲಕ್ಕೆ ಕಾರಣವಾಗಿದೆ.

ಸಭೆಯ ನಂತರ ಯಾವ ನಾಯಕರೂ ಮಾಧ್ಯಮ ಪ್ರತಿನಿಧಿಗಳ ಜತೆ ಮಾತನಾಡಿಲ್ಲ. ಆದರೆ ಟ್ವಿಟರ್ ಮೂಲಕ ಪರಸ್ಪರರ ಬಗ್ಗೆ ಮೆಚ್ಚುಗೆಯ ಮಾತುಗಳನ್ನಾಡಿದ್ದಾರೆ. 'ಈ ಭೇಟಿ ಹಾಗೂ ಟ್ವಿಟರ್ ಹೇಳಿಕೆಗಳ ಮೂಲಕ ಉತ್ತರ ಪ್ರದೇಶದಲ್ಲಿ ಮುಂದಿನ ವಿಧಾನಸಭಾ ಚುನಾವಣೆಯನ್ನೂ ಯೋಗಿ ಅವರ ನೇತೃತ್ವದಲ್ಲೇ ಎದುರಿಸಲಾಗುವುದು ಎಂಬ ಸಂದೇಶವನ್ನು ನಾಯಕರು ಭಿನ್ನಮತೀಯರಿಗೆ ನೀಡಿದ್ದಾರೆ' ಎಂದು ಪಕ್ಷದೊಳಗಿನವರು ಹೇಳಿದ್ದಾರೆ.

ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು ಪ್ರಧಾನಿ ನರೇಂದ್ರ ಮೋದಿ ಅವರನ್ನು ಶುಕ್ರವಾರ ಭೇಟಿಮಾಡಿದರು

ಇತ್ತೀಚಿನ ದಿನಗಳಲ್ಲಿ ಬಿಜೆಪಿಯು ಲಖನೌದಲ್ಲಿ ಮೇಲಿಂದ ಮೇಲೆ ಪರಿಶೀಲನಾ ಸಭೆಗಳನ್ನು ನಡೆಸಿತ್ತು. ಈಗ ಚುನಾವಣಾ ಸಿದ್ಧತೆಗಳನ್ನೂ ಆರಂಭಿಸಿದಂತೆ ವ್ಯಕ್ತವಾಗುತ್ತಿದೆ. ಗುರುವಾರ ಸಂಜೆ ಅಮಿತ್ ಶಾ ಅವರು ಅಪ್ನಾ ದಳದ ಮುಖ್ಯಸ್ಥೆ, ಎನ್‌ಡಿಎ–1 ಸರ್ಕಾರದಲ್ಲಿ ಸಚಿವೆಯಾಗಿದ್ದ ಅನುಪ್ರಿಯಾ ಎಸ್. ಪಟೇಲ್ ಅವರನ್ನು ಭೇಟಿಮಾಡಿ ಚರ್ಚಿಸಿದ್ದರು. ಜತೆಗೆ ನಿಷಾದ್ ಪಾರ್ಟಿಯ ಮುಖ್ಯಸ್ಥರನ್ನೂ ಶಾ ಭೇಟಿ ಮಾಡಿದ್ದರು. ಇವರಿಬ್ಬರೂ ರಾಜ್ಯದ ಪ್ರಮುಖ ಸಮುದಾಯಗಳನ್ನು ಪ್ರತಿನಿಧಿಸುತ್ತಾರೆ.

ಗೃಹಸಚಿವ ಅಮಿತ್ ಶಾ ಅವರನ್ನು ಗುರುವಾರ ಭೇಟಿಮಾಡಿದ್ದ ಸಂದರ್ಭದಲ್ಲಿ ಯೋಗಿ ಅವರು 'ವಲಸೆ ಬಿಕ್ಕಟ್ಟಿಗೆ ಪರಿಹಾರ' ಕುರಿತ ವರದಿಯೊಂದನ್ನು ಸಚಿವರಿಗೆ ಹಸ್ತಾಂತರಿಸಿದ್ದಾರೆ. ಇದಾದ ನಂತರ, ಇತ್ತೀಚೆಗಷ್ಟೇ ಬಿಜೆಪಿ ಸೇರ್ಪಡೆಯಾಗಿರುವ ಕಾಂಗ್ರೆಸ್ ಮುಖಂಡ ಜಿತಿನ್ ಪ್ರಸಾದ ಅವರು ದೆಹಲಿಯಲ್ಲಿ ಯೋಗಿ ಅವರನ್ನು ಭೇಟಿಮಾಡಿ ಮಾತುಕತೆ ನಡೆಸಿದ್ದಾರೆ. ಮಾಜಿ ಐಎಎಸ್ ಅಧಿಕಾರಿ, ವಿಧಾನಪರಿಷತ್ ಸದಸ್ಯ ಮತ್ತು ಪ್ರಧಾನಿಯ ಆತ್ಮೀಯ ವಲಯದವರೆಂದು ಗುರುತಿಸಲಾಗಿರುವ ಎ.ಕೆ. ಶರ್ಮಾ ಅವರೂ ಒಂದೆರಡು ದಿನಗಳಿಂದ ದೆಹಲಿಯಲ್ಲಿದ್ದು ಪಕ್ಷದ ಮುಖಂಡರನ್ನು ಭೇಟಿಮಾಡುತ್ತಿದ್ದಾರೆ.

ಉತ್ತರ ಪ್ರದೇಶದಲ್ಲಿ ಸಂಪುಟ ವಿಸ್ತರಣೆ ಅಥವಾ ಪುನರ್‌ರಚನೆಯ ಬಗ್ಗೆ ಪಕ್ಷದಿಂದ ಅಧಿಕೃತವಾಗಿ ಯಾವುದೇ ಹೇಳಿಕೆಗಳು ಬಂದಿಲ್ಲವಾದರೂ, ರಾಜ್ಯದಲ್ಲಿ ಗಮನಾರ್ಹ ಸಂಖ್ಯೆಯಲ್ಲಿರುವ ಬ್ರಾಹ್ಮಣ ಸಮುದಾಯಕ್ಕೆ ಸೇರಿದ ಜಿತಿನ್ ಅವರನ್ನು ಸಂಪುಟಕ್ಕೆ ಸೇರಿಸಿಕೊಳ್ಳುವ ಸಾಧ್ಯತೆ ಇದೆ ಎಂದೂ ಮೂಲಗಳು ತಿಳಿಸಿವೆ.

ಬಿಜೆಪಿಯ ಸಂಘಟನಾ ಕಾರ್ಯದರ್ಶಿ ಬಿ.ಎಲ್. ಸಂತೋಷ್ ಅವರು ಇತ್ತೀಚೆಗೆ ಉತ್ತರ ಪ್ರದೇಶಕ್ಕೆ ಭೇಟಿ ನೀಡಿ, ಮುಂಬರುವ ವಿಧಾನಸಭಾ ಚುನಾವಣೆಗೆ ಪಕ್ಷದ ಸಿದ್ಧತೆಗಳ ಪರಿಶೀಲನೆ ನಡೆಸಿದ್ದರು. ಆ ಸಂದರ್ಭದಲ್ಲಿ ಅವರು ರಾಜ್ಯದ ಪ್ರಮುಖ ನಾಯಕರು ಮತ್ತು ಸಂಘಟನೆಗಳ ಪ್ರತಿನಿಧಿಗಳ ಜತೆ ಮಾತುಕತೆ ನಡೆಸಿದ್ದರು. ಪಕ್ಷದ ರಾಜ್ಯ ಉಸ್ತುವಾರಿ ರಾಧಾಮೋಹನ ಸಿಂಗ್ ಅವರೂ ಉತ್ತರಪ್ರದೇಶಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದರು.

3 ತಿಂಗಳ ನಂತರ ಐಎನ್‌ಐ ಸಿಇಟಿ 'ಸುಪ್ರೀಂ' ಸೂಚನೆ

ನವದೆಹಲಿ (ಪಿಟಿಐ): 'ಐಎನ್‌ಐ ಸಿಇಟಿ'ಯನ್ನು ಜೂನ್ 16ರಂದು ನಿಗದಿ ಮಾಡಿರುವುದಕ್ಕೆ ಅಸಮಾಧಾನ ವ್ಯಕ್ತಪಡಿಸಿರುವ ಸುಪ್ರೀಂ ಕೋರ್ಟ್, ತಿಂಗಳ ನಂತರ ಈ ಪರೀಕ್ಷೆಯನ್ನು ನಡೆಸುವಂತೆ ಅಖಿಲ ಭಾರತ ವೈದ್ಯಕೀಯ ವಿಜ್ಞಾನ ಸಂಸ್ಥೆಗೆ (ಎಐಐಎಂಎಸ್) ಶುಕ್ರವಾರ ನಿರ್ದೇಶನ ನೀಡಿದೆ.

ಜೂನ್ 16ರಂದು ಸಿಇಟಿ ನಡೆಸುವ ಸಂಬಂಧ ಎಐಐಎಂಎಸ್ ಅಧಿಸೂಚನೆ ಹೊರಡಿಸಿದ್ದನ್ನು ಪ್ರಶ್ನಿಸಿ ಕೆಲ ವೈದ್ಯರು ಅರ್ಜಿ ಸಲ್ಲಿಸಿದ್ದರು. ನ್ಯಾಯಮೂರ್ತಿಗಳಾದ ಇಂದಿರಾ ಬ್ಯಾನರ್ಜಿ ಹಾಗೂ ಎಂ.ಆರ್.ಶಾ ಅವರಿರುವ ರಜಾಕಾಲದ ನ್ಯಾಯಪೀಠ ಅರ್ಜಿಯ ವಿಚಾರಣೆ ನಡೆಸಿತು.

'ಕೋವಿಡ್–19 ಪಿಡುಗಿನ ಕಾರಣ ಅನೇಕ ವೈದ್ಯರು ಕರ್ತವ್ಯದ ಮೇಲಿದ್ದಾರೆ. ಇಂಥ ಪರಿಸ್ಥಿತಿಯಲ್ಲಿ ಜೂನ್ 16ರಂದು ಪ್ರವೇಶ ಪರೀಕ್ಷೆ ನಡೆಸಲು ಮುಂದಾಗಿರುವುದು ಸ್ವೇಚ್ಛಾಚಾರದ ಕ್ರಮ ಎನಿಸುತ್ತದೆ' ಎಂದು ನ್ಯಾಯಪೀಠ ಹೇಳಿತು.

ಚೇತರಿಕೆ ಬಳಿಕ ಲಸಿಕೆ ಪಡೆದರೆ ರೋಗನಿರೋಧಕ ಶಕ್ತಿ 10 ಪಟ್ಟು ಹೆಚ್ಚು

ಹೈದರಾಬಾದ್: ಕೊರೊನಾ ವೈರಾಣು ಸೋಂಕಿಗೆ ಒಳಗಾಗದೇ, ಮೊದಲ ಡೋಸ್ ಲಸಿಕೆ ಪಡೆದವರಿಗೆ ಹೋಲಿಸಿದರೆ, ಒಂದು ಬಾರಿ ಕೊರೊನಾ ಸೋಂಕಿಗೆ ಒಳಗಾದ ಬಳಿಕ ಮೊದಲ ಡೋಸ್ ಲಸಿಕೆ ಪಡೆದವರಲ್ಲಿ ರೋಗ ನಿರೋಧಕ ಶಕ್ತಿ ಮತ್ತು ಸ್ಮರಣ ಜೀವಕೋಶಗಳ ಪ್ರತಿಕ್ರಿಯೆ 10 ಪಟ್ಟು ಹೆಚ್ಚಿದೆ. ಒಂದು ವರ್ಷಗಳ ಕಾಲ ಈ ಪ್ರತಿಕಾಯಗಳು ವೈರಾಣು ವಿರುದ್ಧ ಹೋರಾಡುತ್ತವೆ ಎಂದು ಏಷ್ಯನ್ ಇನ್‌ಸ್ಟಿಟ್ಯೂಟ್ ಆಫ್ ಗ್ಯಾಸ್ಟ್ರೊಎಂಟರಾಲಜಿ (ಎಐಜಿ) ನಡೆಸಿದ ಅಧ್ಯಯನದಲ್ಲಿ ತಿಳಿದುಬಂದಿದೆ.

ಹೀಗಾಗಿ, ಕೊರೊನಾ ಸೋಂಕಿಗೆ ಒಳಗಾಗದವರು ಎರಡನೇ ಡೋಸ್ ಲಸಿಕೆಯನ್ನು ಈಗ ಆದ್ಯತೆ ಮೇರೆಗೆ ತೆಗೆದುಕೊಳ್ಳಬೇಕು. ಕೋವಿಡ್‌ನಿಂದ ಚೇತರಿಸಿಕೊಂಡ ಬಳಿಕ ಮೊದಲ ಡೋಸ್ ಪಡೆದುಕೊಂಡವರು ಮುಂದಿನ ವರ್ಷ ಎರಡನೇ ಡೋಸ್ ತೆಗೆದುಕೊಳ್ಳಬಹುದು ಎಂದು ಎಐಜಿ ಹೇಳಿದೆ

ಐಸಿಎಂಆರ್ ಗುರುತಿಸಿರುವ ಕೋವಿಡ್–19 ಆರೈಕೆ ಕೇಂದ್ರಗಳಲ್ಲಿ ಕಾರ್ಯನಿರ್ವಹಿಸಿದ 280 ಆರೋಗ್ಯ ಕಾರ್ಯಕರ್ತರನ್ನು ಪರೀಕ್ಷೆಗೆ ಒಳಪಡಿಸಲಾಗಿತ್ತು. ಅವರೆಲ್ಲರೂ ಜನವರಿಯಿಂದ ಫೆಬ್ರುವರಿ ಒಳಗೆ ಕೋವಿಡ್ ಲಸಿಕೆ ಪಡೆದಿದ್ದರು. ಅವರಲ್ಲಿ 131 ಕಾರ್ಯಕರ್ತರಿಗೆ ಲಸಿಕೆ ಪಡೆಯುವ ಮುನ್ನ ಕೊರೊನಾ ಸೋಂಕು ದೃಢವಾಗಿತ್ತು. ಆ ಕಾರ್ಯಕರ್ತರ ದೇಹದಲ್ಲಿ ಪ್ರತಿಕಾಯಗಳು 10 ಪಟ್ಟು ಹೆಚ್ಚಾಗಿರುವುದು ಕಂಡುಬಂದಿದೆ ಎಂದು ಎಐಜಿ ಸಂಶೋಧಕರು ಮತ್ತು ಆಸ್ಪತ್ರೆ ಅಧ್ಯಕ್ಷ ಡಾ. ನಾಗೇಶ್ವರ್ ರೆಡ್ಡಿ ತಿಳಿಸಿದ್ದಾರೆ. ಈ ಸಂಶೋಧನೆ ಇಂಟರ್‌ನ್ಯಾಷನಲ್ ಜರ್ನಲ್ ಆಫ್ ಇನ್‌ಫೆಕ್ಷಿಯಸ್ ಡಿಸೀಸ್ ನಿಯತಕಾಲಿಕದಲ್ಲಿ ಪ್ರಕಟವಾಗಿದೆ. ದೇಶದಲ್ಲಿ ಕೋವಿಡ್ ಲಸಿಕೆಗಳ ಕೊರತೆ ಇರುವಾಗಲೇ ಈ ಶಿಫಾರಸ್ಸು ಹೊರಬಿದ್ದಿದೆ.

ಮರಣದಂಡನೆ: ಮೇಲ್ಮನವಿಗೆ ಜಾಧವ್‌ಗೆ ಅವಕಾಶ

ಇಸ್ಲಾಮಾಬಾದ್ (ಪಿಟಿಐ): ಮರಣ ದಂಡನೆಗೆ ಗುರಿಯಾಗಿರುವ ಭಾರತದ ನೌಕಾಪಡೆಯ ನಿವೃತ್ತ ಅಧಿಕಾರಿ, ಕುಲಭೂಷಣ್ ಜಾಧವ್‌ಗೆ ಮೇಲ್ಮನವಿ ಸಲ್ಲಿಸಲು ಅವಕಾಶ ನೀಡುವ ಮಸೂದೆಗೆ ಪಾಕಿಸ್ತಾನದ ಸಂಸತ್ ಅನುಮೋದನೆ ನೀಡಿದೆ.

'ಐಸಿಜೆ (ಮರುಪರಿಶೀಲನೆ ಹಾಗೂ ಮರುಪರಿಗಣನೆ) ಮಸೂದೆ, 2020'ಕ್ಕೆ ಸಂಸತ್ ಗುರುವಾರ ಅನುಮೋದನೆ ನೀಡಿದೆ ಎಂದು ಡಾನ್ ಪತ್ರಿಕೆ ವರದಿ ಮಾಡಿದೆ. ಇದರಿಂದಾಗಿ, ಭಾರತದ ಕಾನ್ಸುಲರ್ ಕಚೇರಿಯ ಸಂಪರ್ಕ, ನೆರವು ಪಡೆಯಲು ಜಾಧವ್ ಅವರಿಗೆ ಸಾಧ್ಯವಾಗಲಿದೆ.



ಪಾಕಿಸ್ತಾನದಲ್ಲಿ ಗೂಢಚಾರಿಕೆ ನಡೆಸಿದ, ವಿಧ್ವಂಸಕ ಕೃತ್ಯಕ್ಕೆ ಯತ್ನಿಸಿದ ಆರೋಪದಡಿ ಬಂಧಿತರಾಗಿರುವ 51 ವರ್ಷದ ಜಾಧವ್ ಅವರಿಗೆ ಮಿಲಿಟರಿ ಕೋರ್ಟ್ ಮರಣ ದಂಡನೆ ವಿಧಿಸಿದೆ.

ಈ ತೀರ್ಪನ್ನು ಪ್ರಶ್ನಿಸಿ ಭಾರತವು ಅಂತರರಾಷ್ಟ್ರೀಯ ನ್ಯಾಯಾಲಯದ (ಐಸಿಜೆ) ಮೊರೆ ಹೋಗಿತ್ತು. ಜಾಧವ್ ಅವರಿಗೆ ಕಾನ್ಸುಲರ್ ಕಚೇರಿ ಸಂಪರ್ಕ ಒದಗಿಸಿಲ್ಲ ಎಂದು ವಾದಿಸಿದ್ದ ಭಾರತ, ಮರಣ ದಂಡನೆ ವಿಧಿಸಿರುವುದನ್ನು ಪ್ರಶ್ನಿಸಿತ್ತು.

ಅರ್ಜಿ ವಿಚಾರಣೆ ನಡೆಸಿದ್ದ ಐಸಿಜೆ, ಜಾಧವ್ ಅವರಿಗೆ ಕಾನ್ಸುಲರ್ ಕಚೇರಿಯ ನೆರವು ಒದಗಿಸಬೇಕು, ಶಿಕ್ಷೆಯ ಮರುಪರಿಶೀಲನೆ ನಡೆಸಬೇಕು ಎಂದು 2019ರ ಜುಲೈನಲ್ಲಿ ಆದೇಶಿಸಿತ್ತು.

ತನಗೆ ವಿಧಿಸಲಾಗಿರುವ ಗಲ್ಲು ಶಿಕ್ಷೆಯನ್ನು ಪ್ರಶ್ನಿಸಿ, ಮೇಲ್ಮನವಿ ಸಲ್ಲಿಸಲು ಸಹ ಜಾಧವ್ ಅವರಿಗೆ ಅವಕಾಶವನ್ನು ಒದಗಿಸುವಂತೆಯೂ ಐಸಿಜೆ ಸೂಚಿಸಿತ್ತು.

ಮಸೂದೆಗೆ ಅನುಮೋದನೆ ನೀಡಿರುವ ಕುರಿತು ಪ್ರತಿಕ್ರಿಯಿಸಿರುವ ಪಾಕಿಸ್ತಾನದ ಕಾನೂನು ಸಚಿವ ಫಾರೂಕ್ ನಾಸಿಮ್, 'ಒಂದು ವೇಳೆ ಸಂಸತ್ ಈ ಮಸೂದೆಗೆ ಅನುಮೋದನೆ ನೀಡದೇ ಇದ್ದಿದ್ದರೆ, ಭಾರತ ಈ ವಿಷಯವಾಗಿ ವಿಶ್ವಸಂಸ್ಥೆಯ ಭದ್ರತಾ ಮಂಡಳಿಗೆ ಹೋಗುತ್ತಿತ್ತು. ಐಸಿಜೆಯಲ್ಲಿ ಪಾಕಿಸ್ತಾನದ ವಿರುದ್ಧ ನ್ಯಾಯಾಂಗ ನಿಂದನೆ ಪ್ರಕರಣ ದಾಖಲಿಸುತ್ತಿತ್ತು' ಎಂದು ಹೇಳಿದರು.

ಈ ಮಸೂದೆಗೆ ಅನುಮೋದನೆ ನೀಡಿರುವುದಕ್ಕೆ ಪಾಕಿಸ್ತಾನ ಮುಸ್ಲಿಂ ಲೀಗ್–ನವಾಜ್ (ಪಿಎಂಎಲ್–ಎನ್) ಪಕ್ಷವು ಸರ್ಕಾರವನ್ನು ಟೀಕಿಸಿದೆ. 'ಜಾಧವ್ ಬಿಡುಗಡೆಗೆ ಅನುಕೂಲವಾಗಲು ಸರ್ಕಾರ ಈ ಮಸೂದೆಗೆ ಅನುಮೋದನೆ ನೀಡಿದೆ' ಎಂದು ಪಕ್ಷದ ಸಂಸದ ಅಹಸಾನ್ ಇಕ್ಬಾಲ್ ಟೀಕಿಸಿದ್ದಾರೆ.

ಕೇರಳ: ಈ ವರ್ಷದ ಜನವರಿಯಲ್ಲಿ ಬೆಕ್ಕಿನ ದಾಳಿಗೆ ಒಳಗಾದವರ ಸಂಖ್ಯೆ 28,168

ನಾಯಿಗಿಂತ ಬೆಕ್ಕುಗಳಿಂದ ಕಚ್ಚಿಸಿಕೊಂಡವರೇ ಹೆಚ್ಚು!

ತಿರುವನಂತಪುರ: ನಾಯಿಗಳ ದಾಳಿಗೆ ಒಳಗಾಗಿ ಚಿಕಿತ್ಸೆ ಪಡೆಯುತ್ತಿರುವವರ ಬಗ್ಗೆ ಕೇಳಿರುತ್ತೀರಿ. ಆದರೆ, ಬೆಕ್ಕುಗಳ ದಾಳಿಯಿಂದ ಗಾಯಗೊಂಡು ಚಿಕಿತ್ಸೆ ಪಡೆಯುತ್ತಿರುವವರ ಬಗ್ಗೆ ಕೇಳಿದ್ದೀರಾ?

ನಾಯಿಗಳಿಗಿಂತ ಬೆಕ್ಕುಗಳು ಕಚ್ಚಿದ ಕಾರಣ ಹೆಚ್ಚು ಜನರು ಗಾಯಗೊಂಡು ಚಿಕಿತ್ಸೆ ಪಡೆಯುತ್ತಿರುವಂತಹ ಅಪರೂಪದ ಸಂಗತಿಯೊಂದು ಈಗ ಕೇರಳದಲ್ಲಿ ಬೆಳಕಿಗೆ ಬಂದಿದೆ. ಜನವರಿ ತಿಂಗಳಲ್ಲಿ ಕೇರಳದಲ್ಲಿ ಬೆಕ್ಕುಗಳ ದಾಳಿಗೆ ಒಳಗಾದವರ ಸಂಖ್ಯೆ 28,186. ನಾಯಿಗಳಿಂದ ಕಚ್ಚಿಸಿಕೊಂಡವರ ಸಂಖ್ಯೆ 20,875.

ಮಾಹಿತಿ ಹಕ್ಕಿನಡಿ ಕೇಳಿದ ಪ್ರಶ್ನೆಗೆ ರಾಜ್ಯ ಆರೋಗ್ಯ ಇಲಾಖೆ ನೀಡಿರುವ ದಾಖಲೆಗಳಲ್ಲಿ ಈ ಅಂಕಿ ಅಂಶಗಳಿವೆ.

ರಾಜ್ಯ ಮಟ್ಟದ ಪ್ರಾಣಿ ಸಂರಕ್ಷಣಾ ಸಂಸ್ಥೆಯಾದ 'ಅನಿಮಲ್ ಲೀಗಲ್ ಫೋರ್ಸ್' ಸಲ್ಲಿಸಿದ ಆರ್‌ಟಿಐ ಪ್ರತಿಯಾಗಿ ರಾಜ್ಯ ಆರೋಗ್ಯ ಇಲಾಖೆ ಈ ಅಂಕಿ ಅಂಶಗಳನ್ನೊಳಗೊಂಡ ಮಾಹಿತಿಯನ್ನು ನೀಡಿದೆ.

ಅಂಕಿ ಅಂಶಗಳ ಪ್ರಕಾರ, 2016ರಿಂದಲೂ ಬೆಕ್ಕುಗಳ ದಾಳಿಗೆ ಒಳಗಾಗುವವರ ಸಂಖ್ಯೆಯಲ್ಲಿ ಏರಿಕೆಯಾಗುತ್ತಿದೆ. 2016ರಲ್ಲಿ ಬೆಕ್ಕಿನ ದಾಳಿಗೆ ಒಳಗಾದ 1,60,534 ಮಂದಿ ಚಿಕಿತ್ಸೆ ಪಡೆದಿದ್ದರೆ, ಅದೇ ರೀತಿ 1,35,217 ಮಂದಿ ನಾಯಿಗಳ ದಾಳಿಗೆ ಒಳಗಾಗಿ ಚಿಕಿತ್ಸೆ ಪಡೆದಿದ್ದಾರೆ.

2017ರಲ್ಲಿ 1.60 ಲಕ್ಷ ಜನರು ಬೆಕ್ಕಿನ ದಾಳಿಗೆ ಒಳಗಾಗಿದ್ದಾರೆ. 2018ರಲ್ಲಿ ಈ ಸಂಖ್ಯೆ 1.75 ಲಕ್ಷ ದಾಟಿದೆ. 2019 ಮತ್ತು 2020ರಲ್ಲಿ ಕ್ರಮವಾಗಿ 2.04 ಲಕ್ಷ ಮತ್ತು 2.16 ಲಕ್ಷಕ್ಕೆ ಏರಿಕೆಯಾಗಿದೆ. 2014ರಿಂದ 2020ರವರೆಗೆ ಸರ್ಕಾರದ ಅಂಕಿ ಅಂಶಗಳ ಪ್ರಕಾರ ಬೆಕ್ಕುಗಳ ದಾಳಿಗೊಳಾದವರ ಪ್ರಮಾಣಶೇ 128 ರಷ್ಟು ಹೆಚ್ಚಾಗಿದೆ.

ಬೆಕ್ಕುಗಳು ಸಾಮಾನ್ಯವಾಗಿ ದಾಳಿ ನಡೆಸುವುದಿಲ್ಲ. ಆದರೆ ಅದು ಹಲ್ಲು ಅಥವಾ ಉಗುರಿನಿಂದ ಗೀರಿದರೆ ಸಾಕು. ಇದೇ ಕಾರಣಕ್ಕೆ ಜನರು ಚಿಕಿತ್ಸೆ ಪಡೆಯುತ್ತಾರೆ. ಬೆಕ್ಕು ಈ ರೀತಿ ಗೀರುವುದೇ 'ಕಚ್ಚುವುದು' ಎಂದು ವೈದ್ಯಕೀಯ ದತ್ತಾಂಶಗಳಲ್ಲಿ ದಾಖಲಾಗುತ್ತದೆ.

ಶ್ರೀಲಂಕಾ ಪ್ರವಾಸ ಕೈಗೊಳ್ಳುವ ಶಿಖರ್ ಧವನ್ ಬಳಗದ ಕೋಚ್ ದ್ರಾವಿಡ್ ಅಭಿಪ್ರಾಯ

ಎಲ್ಲ ಆಟಗಾರರಿಗೂ ಅವಕಾಶಕ್ಕೆ ಆದ್ಯತೆ

ನವದೆಹಲಿ (ಪಿಟಿಐ): ಭಾರತ 'ಎ' ಮತ್ತು 19 ವರ್ಷದೊಳಗಿನ ಆಟಗಾರರ ಪ್ರತಿಭೆಗೆ ಸಾಣೆ ಹಿಡಿದು ಯುವಪಡೆಯನ್ನು ಕಟ್ಟುವಲ್ಲಿ ಯಶಸ್ವಿಯಾಗಿರುವ ಮಾಜಿ ಕ್ರಿಕೆಟಿಗ ರಾಹುಲ್ ದ್ರಾವಿಡ್ 'ತಂಡದೊಂದಿಗಿದ್ದ ಎಲ್ಲ ಆಟಗಾರರಿಗೂ ಆಡಲು ಅವಕಾಶ ನೀಡುವುದು ನನ್ನ ಆದ್ಯತೆಯಾಗಿತ್ತು' ಎಂದು ಹೇಳಿದ್ದಾರೆ.

ಮೋಹಕ ಶೈಲಿಯ ಬ್ಯಾಟ್ಸ್‌ಮನ್, 'ಗೋಡೆ' ಖ್ಯಾತಿಯ ರಾಹುಲ್ ದ್ರಾವಿಡ್ ಶ್ರೀಲಂಕಾ ಪ್ರವಾಸ ಕೈಗೊಳ್ಳಲಿರುವ ಶಿಖರ್ ಧವನ್ ನಾಯಕತ್ವದ ಭಾರತ ತಂಡದ ಮುಖ್ಯ ಕೋಚ್ ಆಗಿ ನೇಮಕಗೊಂಡಿದ್ದಾರೆ. ಮುಂದಿನ ತಿಂಗಳು ಪ್ರವಾಸ ಕೈಗೊಳ್ಳುವ ತಂಡ ಶ್ರೀಲಂಕಾದಲ್ಲಿ ಏಕದಿನ ಮತ್ತು ಟಿ20 ಸರಣಿಗಳನ್ನು ಆಡಲಿದೆ.

'ತಂಡದೊಂದಿಗೆ ಪ್ರವಾಸ ಕೈಗೊಂಡು ಒಂದು ಪಂದ್ಯದಲ್ಲೂ ಆಡದೆ ವಾಪಸಾದರೆ ಮನಸ್ಸಿಗಾಗುವ ನೋವು ಹೇಳತೀರದು. ಕ್ರಿಕೆಟ್ ಜೀವನದ ಆರಂಭದ ದಿನಗಳಲ್ಲಿ ನನಗೆ ಇಂಥ ಅನುಭವ ಆಗಿದೆ. ಆದ್ದರಿಂದ ನಾನು ಕೋಚ್ ಆಗಿದ್ದಾಗ ತಂಡದಲ್ಲಿದ್ದ ಪ್ರತಿಯೊಬ್ಬರೂ ಕನಿಷ್ಠ ಒಂದು ಪಂದ್ಯವನ್ನಾದರೂ ಆಡದೆ ವಾಪಸ್ ಬಂದಿಲ್ಲ' ಎಂದು ಇಎಸ್‌ಪಿಎನ್ ಕ್ರಿಕ್‌ಇನ್ಫೊದ 'ದಿ ಕ್ರಿಕೆಟ್ ಮಂತ್ಲಿ' ಕಾರ್ಯಕ್ರಮದಲ್ಲಿ ದ್ರಾವಿಡ್ ಅವರು ಹೇಳಿದ್ದಾರೆ.

ರಾಹುಲ್ ದ್ರಾವಿಡ್ –ಪ್ರಜಾವಾಣಿ ಚಿತ್ರ

'ದೇಶಿ ಮಟ್ಟದಲ್ಲಿ ಉತ್ತಮ ಸಾಧನೆ ಮಾಡಿದ್ದರೂ ವಿದೇಶ ಪ್ರವಾಸದಲ್ಲಿ ಅವಕಾಶ ಸಿಗದೆ ವಾಪಸಾದರೆ ಪ್ರತಿಭೆ ಬೆಳಗಲು ಸಾಧ್ಯವಾಗದ ಬೇಸರ ಕಾಡುತ್ತದೆ. ಆಯ್ಕೆ ಸಮಿತಿಯ ಗಮನ ಸೆಳೆಯಲು ಮತ್ತೊಮ್ಮೆ ದೇಶಿ ಮಟ್ಟದಲ್ಲಿ ಮಿಂಚುವ ಒತ್ತಡ ಉಂಟಾಗುತ್ತದೆ. ಅದು ಸಾಧ್ಯವಾಗಬೇಕೆಂದೇನೂ ಇಲ್ಲ. ಆದ್ದರಿಂದ ಮತ್ತೆ ಅವಕಾಶ ಸಿಗುವ ಸಾಧ್ಯತೆಯೂ ಕಡಿಮೆ ಇರುತ್ತದೆ' ಎಂದು ಅವರು ಅಭಿಪ್ರಾಯಪಟ್ಟರು.

'15 ಮಂದಿ ಆಟಗಾರರನ್ನು ಒಂದು ತಂಡವಾಗಿ ಕಾಣಬೇಕು. 11 ಮಂದಿಗೆ ಸಹಕಾರಿಯಾಗಿ ಇತರ ನಾಲ್ವರು ಇದ್ದಾರೆ ಎಂದು ತಿಳಿಯುವುದು ಸರಿಯಲ್ಲ. ಆದ್ದರಿಂದ ಎಲ್ಲ 11 ಮಂದಿಗೂ ಆಡಲು ಅವಕಾಶ ನೀಡುವುದು ತಂಡದ ದೃಷ್ಟಿಯಿಂದ ಒಳ್ಳೆಯದು' ಎಂದರು.

'ಫಿಟ್‌ನೆಸ್‌ಗೆ ಸಮರ್ಪಕ ಸೌಲಭ್ಯಗಳನ್ನು ಒದಗಿಸದೆ ಆಸ್ಟ್ರೇಲಿಯಾ, ದಕ್ಷಿಣ ಆಫ್ರಿಕಾ ಆಟಗಾರರ ಕಡೆಗೆ ಮತ್ತು ಅವರ ತರಬೇತುದಾರರ ಕಡೆಗೆ ನೋಡುವುದರಿಂದ ಪ್ರಯೋಜನವಿಲ್ಲ. ರಸ್ತೆಯಲ್ಲೋ ಸಮುದ್ರ ಬದಿಯಲ್ಲೋ ಆಡಿದರೆ ಕ್ರಿಕೆಟಿಗನಾಗಲು ಸಾಧ್ಯವಿಲ್ಲ. ಪ್ರತಿಭೆ ತೋರಿಸಲು ಮ್ಯಾಟಿಂಗ್ ಅಥವಾ ಟರ್ಫ್ ವಿಕೆಟ್ ಒದಗಿಸಬೇಕು ಮತ್ತು ಫಿಟ್‌ನೆಸ್ ಬಗ್ಗೆ ಮಾಹಿತಿ ನೀಡಬೇಕು' ಎಂದು ಅವರು ಹೇಳಿದರು.

ಭಾವುಕರಾದ ಋತುರಾಜ್

ಪುಣೆ: ಮೊದಲ ಬಾರಿ ಭಾರತ ತಂಡಕ್ಕೆ ಆಯ್ಕೆಯಾಗಿರುವ ಮಹಾರಾಷ್ಟ್ರದ ಋತುರಾಜ್ ಗಾಯಕವಾಡ್ ಸುದ್ದಿಸಂಸ್ಥೆಯೊಂದಿಗೆ ಮಾತನಾಡಿದಾಗ ಭಾವುಕರಾದರು. ಯಾವುದೇ ಪರಿಸರಕ್ಕೆ ಬೇಗ ಹೊಂದಿಕೊಳ್ಳುವ ಗುಣವಿದ್ದು ಅದರ ಹಿನ್ನೆಲೆಯಲ್ಲಿ ಶ್ರೀಲಂಕಾದಲ್ಲಿ ಉತ್ತಮ ಸಾಮರ್ಥ್ಯ ತೋರುವ ಭರವಸೆ ಇದೆ ಎಂದು ಅವರು ಹೇಳಿದರು.

ಋತುರಾಜ್ ಗಾಯಕವಾಡ್

ಜುಲೈ 13ರಿಂದ 25ರ ವರೆಗೆ ಭಾರತ ತಂಡ ಶ್ರೀಲಂಕಾದಲ್ಲಿ ತಲಾ ಮೂರು ಏಕದಿನ ಮತ್ತು ಟಿ20 ಪಂದ್ಯಗಳನ್ನು ಆಡಲಿದೆ. 20 ಮಂದಿಯ ತಂಡವನ್ನು ಗುರುವಾರ ಪ್ರಕಟಿಸಲಾಗಿದ್ದು ಇವರಲ್ಲಿ ಆರು ಮಂದಿ ಹೊಸಬರು.

ಬಲಗೈ ಬ್ಯಾಟ್ಸ್‌ಮನ್ ಋತುರಾಜ್ 59 ಲಿಸ್ಟ್ 'ಎ' ಪಂದ್ಯಗಳನ್ನು ಆಡಿದ್ದು, 47ರ ಸರಾಸರಿಯಲ್ಲಿ ರನ್ ಗಳಿಸಿದ್ದಾರೆ. ಟಿ20 ಮಾದರಿಯ ಕ್ರಿಕೆಟ್‌ನಲ್ಲಿ 130ಕ್ಕೂ ಅಧಿಕ ಸ್ಟ್ರೈಕ್ ರೇಟ್ ಹೊಂದಿದ್ದಾರೆ. ಐಪಿಎಲ್ ಟೂರ್ನಿಯಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ಪರ ಆಡಿದ್ದಾರೆ. ಮಹೇಂದ್ರ ಸಿಂಗ್ ಧೋನಿ, ಫಫ್ ಡು ಪ್ಲೆಸಿ ಮುಂತಾದವರೊಂದಿಗೆ ತಂಡದ ಡ್ರೆಸಿಂಗ್ ಕೊಠಡಿಯಲ್ಲಿ ಕಳೆದ ದಿನಗಳಲ್ಲಿ ಸಾಕಷ್ಟು ಕಲಿಯಲು ಸಾಧ್ಯವಾಗಿದೆ ಎಂದು ಅವರು ತಿಳಿಸಿದರು.

ಶಿಖರ್ ಸಂತಸ

ದೇಶವನ್ನು ಪ್ರತಿನಿಧಿಸುವ ತಂಡವನ್ನು ಮುನ್ನಡೆಸುವ ಗೌರವವನ್ನು ವಿನಮ್ರವಾಗಿ ಸ್ವೀಕರಿಸಿದ್ದೇನೆ ಎಂದು ಎಡಗೈ ಬ್ಯಾಟ್ಸ್‌ಮನ್ ಶಿಖರ್ ಧವನ್ ಹೇಳಿದ್ದಾರೆ.

ಮುಂದಿನ ತಿಂಗಳು ಶ್ರೀಲಂಕಾ ಪ್ರವಾಸ ಮಾಡಲಿರುವ ಭಾರತ ಸೀಮಿತ ಓವರ್‌ಗಳ ತಂಡಕ್ಕೆ ಧವನ್ ನಾಯಕರಾಗಿ ನೇಮಕವಾಗಿದ್ದಾರೆ.

ಈ ಕುರಿತು ಪ್ರತಿಕ್ರಿಯಿಸಿರುವ ಅವರು, 'ಇದೊಂದು ಉತ್ತಮ ಅವಕಾಶವಾಗಿದೆ. ನಿಮ್ಮೆಲ್ಲರ ಹಾರೈಕೆಗಳಿಗೆ ಧನ್ಯವಾದಗಳು' ಎಂದು ಟ್ವೀಟ್ ಮಾಡಿದ್ದಾರೆ.

ಕಂಡ ಕನಸು ನನಸಾಗಿದೆ: ಗೌತಮ್

ಹಲವು ವರ್ಷಗಳಿಂದ ಕಾಣುತ್ತಿದ್ದ ಕನಸು ನನಸಾಗಿದೆ. ಭಾರತ ತಂಡದಲ್ಲಿ ಆಡುವ ಅವಕಾಶ ಲಭಿಸಿದೆ ಎಂದು ಕರ್ನಾಟಕದ ಆಫ್‌ಸ್ಪಿನ್ನರ್ ಕೆ.ಗೌತಮ್ ಸಂತಸ ವ್ಯಕ್ತಪಡಿಸಿದ್ದಾರೆ.

'ಆರಂಭದ ದಿನಗಳಲ್ಲಿ ಹರಭಜನ್ ಸಿಂಗ್ ಅವರನ್ನು ಅನುಕರಿಸುತ್ತಿದ್ದೆ. ಆದ್ದರಿಂದಲೇ ಸ್ನೇಹಿತರು ನನ್ನನ್ನು ಭಜ್ಜಿ ಎಂದು ಕರೆಯುತ್ತಿದ್ದರು. ನಾನು ಕೇರಂ ಬಾಲ್ ಪ್ರಯೋಗಿಸಬಲ್ಲೆ. ಆದರೆ ದೂಸ್ರಾ ಹಾಕುವುದಿಲ್ಲ' ಎಂದಿದ್ದಾರೆ.

ಫ್ರೆಂಚ್ ಓಪನ್: ಫೈನಲ್‌ಗೆ ಸಿಟ್ಸಿಪಾಸ್

ಪ್ಯಾರಿಸ್ (ಎಪಿ): ಅಮೋಘ ಆಟವಾಡಿದ ಸ್ಟೆಫಾನೊಸ್ ಸಿಟ್ಸಿಪಾಸ್ ಅವರು ಅಲೆಕ್ಸಾಂಡರ್ ಜ್ವೆರೆವ್ ಅವರನ್ನು ಮಣಿಸಿ ಫ್ರೆಂಚ್ ಓಪನ್ ಟೆನಿಸ್ ಟೂರ್ನಿಯ ಫೈನಲ್‌ಗೆ ಲಗ್ಗೆಯಿಟ್ಟಿದ್ದಾರೆ. ಶುಕ್ರವಾರ ನಡೆದ ಪುರುಷರ ಸಿಂಗಲ್ಸ್ ಸೆಮಿಫೈನಲ್ ಪಂದ್ಯದ ಐದು ಸೆಟ್‌ಗಳ ಹೋರಾಟದಲ್ಲಿ ಗೆದ್ದ ಗ್ರೀಸ್ ಆಟಗಾರ, ಮೊದಲ ಬಾರಿ ಗ್ರ್ಯಾನ್ ಸ್ಲಾಮ್‌ವೊಂದರ ಪ್ರಶಸ್ತಿ ಸುತ್ತು ತಲುಪಿದರು.

ಫಿಲಿಪ್ ಚಾಟ್ರಿಯರ್ ಅಂಗಣದಲ್ಲಿ, ಮೂರೂವರೆ ತಾಸು ನಡೆದ ಪಂದ್ಯದಲ್ಲಿ ಐದನೇ ಶ್ರೇಯಾಂಕದ ಸಿಟ್ಸಿಪಾಸ್ 6-3, 6-3, 4-6, 4-6, 6-3ರಿಂದ ಜರ್ಮನಿ ಆಟಗಾರನನ್ನು ಸೋಲಿಸಿದರು. ಭಾನುವಾರ ಫೈನಲ್ ಪಂದ್ಯದಲ್ಲಿ ರಫೆಲ್ ನಡಾಲ್ ಅಥವಾ ಜೊಕೊವಿಚ್ ಅವರನ್ನು ಸಿಟ್ಸಿಪಾಸ್ ಎದುರಿಸುವರು.

ಶನಿವಾರ ನಡೆಯುವ ಮಹಿಳಾ ಸಿಂಗಲ್ಸ್ ಫೈನಲ್‌ನಲ್ಲಿ ರಷ್ಯಾದ ಅನಸ್ತೇಸಿಯಾ ಪೌಲಿಚೆಂಕೋವಾ ಮತ್ತು ಜೆಕ್ ಗಣರಾಜ್ಯದ ಬಾರ್ಬೊರಾ ಕ್ರೆಸಿಕೋವಾ ಸೆಣಸುವರು. ಗುರುವಾರ ನಾಲ್ಕರ ಘಟ್ಟದ ಪಂದ್ಯಗಳಲ್ಲಿ ಅನಸ್ತೇಸಿಯಾ, ಸ್ಲೊವೇನಿಯಾದ ತಮಾರ ಜಿಡಾನ್ಸೆಕ್ ವಿರುದ್ಧ 7-5, 6-3ರಲ್ಲಿ ಜಯ ಗಳಿಸಿದರೆ, ಕ್ರೆಸಿಕೋವಾ, ಗ್ರೀಸ್‌ನ ಮರಿಯಾ ಸಕರಿ ಎದುರು 7-5, 4-6, 9-7ರಿಂದ ಗೆದ್ದಿದ್ದರು.

ಸಿಟ್ಸಿಪಾಸ್– ರಾಯಿಟರ್ಸ್ ಚಿತ್ರ

'ಸಿಎಐಎಮ್‌ಎಸ್'ಗೆ ಚಾಲನೆ ನೀಡಿದ ಸಚಿವ ರಿಜಿಜು

ಅಥ್ಲೀಟ್‌ಗಳಿಗೆ ವಿಶ್ವದರ್ಜೆಯ ಚಿಕಿತ್ಸೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತರಬೇತಿ ಅಥವಾ ಟೂರ್ನಿಗಳಲ್ಲಿ ಗಾಯಗೊಂಡ ಎಲೀಟ್ ಅಥ್ಲೀಟ್‌ಗಳಿಗೆ ವಿಶ್ವದರ್ಜೆಯ ಚಿಕಿತ್ಸೆ ಹಾಗೂ ಪುನಶ್ಚೇತನ ಸೌಲಭ್ಯ ಒದಗಿಸುವ ಮಹತ್ವಾಕಾಂಕ್ಷಿ 'ಗಾಯಗೊಂಡ ಕ್ರೀಡಾಪಟುಗಳಿಗೆ ಕೇಂದ್ರೀಕೃತ ನಿರ್ವಹಣಾ ವ್ಯವಸ್ಥೆ (ಸಿಎಐಎಮ್‌ಎಸ್)' ಕಾರ್ಯಕ್ರಮಕ್ಕೆ ಕೇಂದ್ರ ಕ್ರೀಡಾ ಸಚಿವ ಕಿರಣ್ ರಿಜಿಜು ಶುಕ್ರವಾರ ಚಾಲನೆ ನೀಡಿದರು.

ಕ್ರೀಡಾಪಟುಗಳಿಗೆ ಗಾಯವಾಗದಂತೆ ತಡೆಯುವ ವಿಧಾನ, ಸಕಾಲದಲ್ಲಿ ರೋಗನಿರ್ಣಯ ಮತ್ತು ಉತ್ತಮ ಗುಣಮಟ್ಟದ ಚಿಕಿತ್ಸೆ ಮತ್ತು ಪುನಶ್ಚೇತನ ಕುರಿತು ಒಳನೋಟ ಒದಗಿಸುವ ಉದ್ದೇಶವನ್ನು ಸಿಎಐಎಮ್‌ಎಸ್ ಹೊಂದಿದೆ.

ಕಿರಣ್ ರಿಜಿಜು

ದೇಶದ ಪ್ರಮುಖ ವೈದ್ಯಕೀಯ ತಜ್ಞರ ಸಹಕಾರದೊಂದಿಗೆ ಭಾರತ ಕ್ರೀಡಾ ಪ್ರಾಧಿಕಾರವು (ಸಾಯ್) ಈ ಕಾರ್ಯಕ್ರಮದ ಮೇಲ್ವಿಚಾರಣೆ ನಡೆಸಲಿದೆ. 2024ರ ಪ್ಯಾರಿಸ್ ಒಲಿಂಪಿಕ್ಸ್ ಗಮನದಲ್ಲಿಟ್ಟುಕೊಂಡು ಪ್ರತಿಭಾನ್ವಿತ ಅಥ್ಲೀಟ್‌ಗಳಿಗೆ ಆರಂಭಿಕವಾಗಿ ಈ ಯೋಜನೆ ಅನ್ವಯವಾಗಲಿದೆ. ನಂತರ ಇತರರಿಗೆ ವಿಸ್ತರಿಸಲಾಗುತ್ತದೆ.

'ಸಾಮಾನ್ಯ ಗಾಯಗಳಿಗೂ ಸಕಾಲದಲ್ಲಿ ಸೂಕ್ತ ಚಿಕಿತ್ಸೆ ಸಿಗದೆ ವೃತ್ತಿಜೀವನವನ್ನೇ ಕೊನೆಗೊಳಿಸಿಕೊಂಡ ಅನೇಕ ಕ್ರೀಡಾಪಟುಗಳನ್ನು ಕಂಡಿದ್ದೇನೆ. ಕೆಲವು ಗಾಯಗಳಿಗೆ ನಮ್ಮ ದೇಶದಲ್ಲಿ ಚಿಕಿತ್ಸೆ ಲಭಿಸದ ಸಂದರ್ಭದಲ್ಲಿ ಅಥ್ಲೀಟ್‌ಗಳು ವಿದೇಶಗಳಿಗೆ ತೆರಳಬೇಕಾಗುತ್ತದೆ. ಹೀಗಾಗಿ ಈ ಸಮಸ್ಯೆ ಪರಿಹಾರಕ್ಕೆ ಮುಂದಡಿ ಇಟ್ಟಿದ್ದೇವೆ. ಎಲ್ಲ ಕ್ರೀಡಾಪಟುಗಳು ಈ ವ್ಯವಸ್ಥೆಯನ್ನು ಬಯಸಿದ್ದರು'ಎಂದು ವರ್ಚುವಲ್ ಆಗಿ ನಡೆದ ಸಂವಾದದಲ್ಲಿ ಕಿರಣ್ ರಿಜಿಜು ಅವರು ಹೇಳಿದ್ದಾರೆ.

ಕೇಂದ್ರ ಕ್ರೀಡಾ ಕಾರ್ಯದರ್ಶಿ ರವಿ ಮಿತ್ತಲ್, ಸಾಯ್‌ನ ಪ್ರಧಾನ ನಿರ್ದೇಶಕ ಸಂದೀಪ್ ಪ್ರಧಾನ್, ಐಒಎ ಪ್ರಧಾನ ಕಾರ್ಯದರ್ಶಿ ರಾಜೀವ್ ಮೆಹ್ತಾ ಮತ್ತು ವೈದ್ಯಕೀಯ ತಜ್ಞರು ಸಂವಾದದಲ್ಲಿ ಪಾಲ್ಗೊಂಡಿದ್ದರು.

ಒಲಿಂಪಿಕ್ಸ್: 18 ಸಾವಿರ ಮಂದಿಗೆ ಲಸಿಕೆ

ಟೋಕಿಯೊ (ಎಎಫ್‌ಪಿ): ರೆಫರಿಗಳು ಮತ್ತು ಸ್ವಯಂಸೇವಕರು ಒಳಗೊಂಡಂತೆ ಒಲಿಂಪಿಕ್ಸ್‌ನಲ್ಲಿ ಕಾರ್ಯನಿರ್ವಹಿಸುವ 18 ಸಾವಿರ ಮಂದಿಗೆ ಮುಂದಿನ ವಾರದಿಂದ ಕೋವಿಡ್–19ರ ಲಸಿಕೆ ಹಾಕಿಸಲು ಆಯೋಜಕರು ನಿರ್ಧರಿಸಿದ್ದಾರೆ.

ಒಲಿಂಪಿಕ್ಸ್ ಆರಂಭವಾಗಲು ಆರು ವಾರಗಳು ಬಾಕಿ ಇದ್ದು ಸ್ಥಳೀಯರ ವಿರೋಧದ ನಡುವೆಯೂ ಕೂಟವನ್ನು ನಡೆಸಲು ಆಯೋಜಕರು ಮುಂದಾಗಿದ್ದಾರೆ. ವೈರಸ್ ಹರಡುವ ಆತಂಕವೂ ಅವರನ್ನು ಕಾಡುತ್ತಿದೆ. ಈ ನಡುವೆ ಜಪಾನ್‌ನಲ್ಲಿ ಲಸಿಕೆ ನೀಡುವ ಕಾರ್ಯ ವೇಗ ಪಡೆದಿದೆ. ಆದರೂ ಶೇ. 4ರಷ್ಟು ಮಂದಿಗೆ ಮಾತ್ರ ಎರಡೂ ಡೋಸ್ ನೀಡಲು ಸಾಧ್ಯವಾಗಿದೆ. 13 ಶೇಕಡಾ ಮಂದಿ ಒಂದು ಡೋಸ್ ಪಡೆದಿದ್ದಾರೆ.

ಲುಂಗಿ ಗಿಡಿ ಸಂಭ್ರಮ –ಎಎಫ್‌ಪಿ ಚಿತ್ರ

ಕ್ರಿಕೆಟ್: ಲುಂಗಿ ಗಿಡಿ ಬಿರುಗಾಳಿಗೆ ವಿಂಡೀಸ್ ದೂಳೀಪಟ

ಸೇಂಟ್ ಲೂಸಿಯಾ: ದಕ್ಷಿಣ ಆಫ್ರಿಕಾದ ಲುಂಗಿ ಗಿಡಿ (19ಕ್ಕೆ5) ಬಿರುಗಾಳಿ ವೇಗದ ಬೌಲಿಂಗ್ ಮುಂದೆ ವೆಸ್ಟ್ ಇಂಡೀಸ್ ಬ್ಯಾಟಿಂಗ್ ಪಡೆಯು ದೂಳೀಪಟವಾಯಿತು.

ಗ್ರಾಸ್ ಐಲೆಟ್‌ನ ಡ್ಯಾರೆನ್ ಸಾಮಿ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಟೆಸ್ಟ್‌ನ ಎರಡನೇ ದಿನವಾದ ಶುಕ್ರವಾರ ದಕ್ಷಿಣ ಆಫ್ರಿಕಾ ತಂಡವು ಇನಿಂಗ್ಸ್ ಮುನ್ನಡೆ ಸಾಧಿಸಿತು. ಟಾಸ್ ಗೆದ್ದು ಬ್ಯಾಟಿಂಗ್ ಮಾಡಿದ ಆತಿಥೇಯ ತಂಡವು 40.5 ಓವರ್‌ಗಳಲ್ಲಿ 97 ರನ್ ಗಳಿಸಿ ಆಲೌಟ್ ಆಯಿತು. ಅದಕ್ಕುತ್ತರವಾಗಿ ದಕ್ಷಿಣ ಆಫ್ರಿಕಾ ತಂಡವು ಮೊದಲ ಇನಿಂಗ್ಸ್‌ನಲ್ಲಿ ಕ್ವಿಂಟನ್ ಡಿಕಾಕ್ ಶತಕ (141) 322 ರನ್ ಗಳಿಸಿ ಆಲೌಟ್ ಆಯಿತು.

ಕ್ವಿಂಟನ್ ಡಿಕಾಕ್ 170 ಎಸೆತಗಳಲ್ಲಿ 12 ಬೌಂಡರಿ, 7 ಸಿಕ್ಸರ್‌ಗಳನ್ನು ಸಿಡಿಸಿದರು.

ಸಂಕ್ಷಿಪ್ತ ಸ್ಕೋರ್: ಮೊದಲ ಇನಿಂಗ್ಸ್: ವೆಸ್ಟ್ ಇಂಡೀಸ್: 40.5 ಓವರ್‌ಗಳಲ್ಲಿ 97 (ಕ್ರೇಗ್ ಬ್ರಾಥ್‌ವೇಟ್ 15, ಶಾಯ್ ಹೋಪ್ 15, ಜೇಸನ್ ಹೋಲ್ಡರ್ 20, ಲುಂಗಿ ಗಿಡಿ 19ಕ್ಕೆ5, ಎನ್ರಿಚ್ ನೋಕಿಯ 35ಕ್ಕೆ4). ದಕ್ಷಿಣ ಆಫ್ರಿಕಾ: 96.5 ಓವರ್‌ಗಳಲ್ಲಿ 322(ಏಡನ್ ಮರ್ಕರಂ 60, ಕ್ವಿಂಟನ್ ಡಿಕಾಕ್ ಔಟಾಗದೆ 141, ರಸ್ಸಿ ವ್ಯಾನ್‌ಡರ್ ಡಸೆ 46, ಜೇಡನ್ ಸೀಲ್ಸ್ 75ಕ್ಕೆ3, ಜೇಸನ್ ಹೋಲ್ಡರ್ 50ಕ್ಕೆ 2 (ವಿವರ ಅಪೂರ್ಣ).

ಕುಸ್ತಿ: ವಿನೇಶಾಗೆ ಚಿನ್ನ

ವಾರ್ಸಾ (ಪಿಟಿಐ): ಅಮೋಘ ಸಾಮರ್ಥ್ಯ ತೋರಿದ ಭಾರತದ ವಿನೇಶಾ ಫೋಗಟ್ ಅವರು ಪೋಲೆಂಡ್ ಓಪನ್ ಕುಸ್ತಿ ಟೂರ್ನಿಯಲ್ಲಿ ಚಿನ್ನದ ಪದಕ ಗೆದ್ದುಕೊಂಡಿದ್ದಾರೆ. ಮಹಿಳೆಯರ 53 ಕೆಜಿ ವಿಭಾಗದಲ್ಲಿ ಫೈನಲ್‌ನಲ್ಲಿ ಶುಕ್ರವಾರ ಅವರು ಉಕ್ರೇನ್‌ನ ಕ್ರಿಸ್ಟಿಯಾನಾ ಬೆರೆಜಾ ಎದುರು 8-0ಯಿಂದ ಜಯ ಸಾಧಿಸಿದರು.

ಇಲ್ಲಿ ಗೆಲ್ಲುವುದರೊಂದಿಗೆ 26 ವರ್ಷದ ವಿನೇಶಾ ಅವರು ಈ ಋತುವಿನಲ್ಲಿ ಮೂರನೇ ಚಿನ್ನದ ಪದಕ ಜಯಿಸಿದಂತಾಗಿದೆ. ಮಾರ್ಚ್‌ನಲ್ಲಿ ನಡೆದ ಮಟ್ಟೆಯೊ ಪೆಲಿಕೊನ್ ಹಾಗೂ ಏಪ್ರಿಲ್‌ನಲ್ಲಿ ನಡೆದ ಏಷ್ಯನ್ ಚಾಂಪಿಯನ್‌ಷಿಪ್‌ನಲ್ಲಿ ಅವರು ಅಗ್ರಸ್ಥಾನ ಗಳಿಸಿದ್ದರು.

ಮೊದಲ ಬೌಟ್‌ನಲ್ಲಿ ವಿನೇಶಾ, 2019ರ ವಿಶ್ವಕಪ್ ಕಂಚಿನ ಪದಕ ವಿಜೇತೆ ರಷ್ಯಾದ ಏಕಟೆರಿನಾ ಪೋಲೆಶ್ಚುಕ್ ಅವರನ್ನು 6-2ರಿಂದ ಮಣಿಸಿದ್ದರು. ಬಳಿಕ ಅಮೆರಿಕದ ಆ್ಯಮಿ ಆ್ಯನ್ ಫರ್ನ್‌ಸೈಡ್ ಎದುರು ಸುಲಭ ಜಯ ಸಂಪಾದಿಸಿದರು.

ವಿನೇಶಾ ಫೋಗಟ್– ಪಿಟಿಐ ಚಿತ್ರ

ಹಿಂದೆ ಸರಿದ ಅನ್ಶು ಮಲಿಕ್: ಇದೇ ಟೂರ್ನಿಯ 57 ಕೆಜಿ ವಿಭಾಗದಲ್ಲಿ ಸ್ಪರ್ಧಿಸಬೇಕಿದ್ದ ಅನ್ಶು ಮಲಿಕ್ ಅವರು ಜ್ವರದ ಕಾರಣ ಹಿಂದೆ ಸರಿದರು. ಒಲಿಂಪಿಕ್ಸ್‌ಗೆ ಅರ್ಹತೆ ಗಳಿಸಿರುವ ಅನ್ಶು ಅವರಿಗೆ ಕೋವಿಡ್ ಪರೀಕ್ಷೆ ಮಾಡಲಾಗಿದ್ದು, ವರದಿಗಾಗಿ ಕಾಯಲಾಗುತ್ತಿದೆ.

ಗ್ರೀಕೊ ರೋಮನ್ ಕುಸ್ತಿ ಕೋಚ್ ವಜಾ

ನವದೆಹಲಿ (ಪಿಟಿಐ): ನಿರೀಕ್ಷಿತ ಫಲಿತಾಂಶ ತಂದುಕೊಡಲು ಸಾಧ್ಯವಾಗದ ಕಾರಣ ಗ್ರೀಕೊ ರೋಮನ್ ಕುಸ್ತಿ ಕೋಚ್ ತೆಮೊ ಕಜರಶಿವಿಲಿ ಅವರನ್ನು ಭಾರತ ಕ್ರೀಡಾ ಪ್ರಾಧಿಕಾರ (ಸಾಯ್) ಶುಕ್ರವಾರ ವಜಾ ಮಾಡಿದೆ. ಈ ಬಾರಿ ಒಲಿಂಪಿಕ್ಸ್‌ಗೆ ಭಾರತದ ಗ್ರೀಕೊ ರೋಮ್ ಕುಸ್ತಿಪಟುಗಳ ಪೈಕಿ ಯಾರಿಗೂ ಅವಕಾಶ ಸಿಗಲಿಲ್ಲ.

ಒಲಿಂಪಿಕ್ಸ್ ವರೆಗೂ ಗ್ರೀಕೊ ರೋಮನ್ ಕುಸ್ತಿಪಟುಗಳಿಗೆ ತರಬೇತಿ ನೀಡಲು ಜಾರ್ಜಿಯಾದ ಕಜರಶಿವಿಲಿ ಅವರೊಂದಿಗೆ 2019ರಲ್ಲಿ ಒಪ್ಪಂದ ಮಾಡಿಕೊಳ್ಳಲಾಗಿತ್ತು. ಸೋನೆಪತ್‌ನಲ್ಲಿ ನಡೆದ ರಾಷ್ಟ್ರೀಯ ಶಿಬಿರದಲ್ಲಿ ಅಭ್ಯಾಸ ನಡೆಯುತ್ತಿತ್ತು. ಫ್ರೀಸ್ಟೈಲ್ ಕುಸ್ತಿಪಟುಗಳ ಪೈಕಿ ತಲಾ ನಾಲ್ವರು ಪುರುಷರು ಮತ್ತು ಮಹಿಳೆಯರು ಟೋಕಿಯೊ ಟಿಕೆಟ್ ಗಿಟ್ಟಿಸಿಕೊಂಡಿದ್ದಾರೆ. ಭಾರತ ಕುಸ್ತಿ ಫೆಡರೇಷನ್‌ನ ಶಿಫಾರಸಿನ ಮೇರೆಗೆ ಕೋಚ್ ಜೊತೆಗಿನ ಒಪ್ಪಂದವನ್ನು ಮುಕ್ತಾಯಗೊಳಿಸಲಾಗಿದೆ ಎಂದು ಸಾಯ್ ತಿಳಿಸಿದೆ.

'ಅವರನ್ನು ಒಲಿಂಪಿಕ್ಸ್‌ಗಾಗಿಯೇ ನೇಮಕ ಮಾಡಲಾಗಿತ್ತು. ಆದರೆ ಫಲಿತಾಂಶ ಶೂನ್ಯ. ಅವರೊಂದಿಗಿನ ಒಪ್ಪಂದ ಈ ವರ್ಷದ ಆಗಸ್ಟ್ ವರೆಗೆ ಇತ್ತು. ಆದರೆ ಒಲಿಂಪಿಕ್ಸ್‌ಗೆ ಮುನ್ನ ಇನ್ನು ರಾಷ್ಟ್ರೀಯ ಶಿಬಿರ ಇಲ್ಲದ ಕಾರಣ ಈಗಲೇ ಅವರನ್ನು ಸೇವೆಯಿಂದ ಬಿಡುಗಡೆ ಮಾಡಲು ಸಾಯ್‌ಗೆ ಶಿಫಾರಸು ಮಾಡಲಾಗಿತ್ತು' ಎಂದು ಕುಸ್ತಿ ಫೆಡರೇಷನ್‌ನ ಸಹಾಯಕ ಕಾರ್ಯದರ್ಶಿ ವಿನೋದ್ ತೋಮರ್ ತಿಳಿಸಿದ್ದಾರೆ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	15,737
ಇಂದಿನ ಅಂತ್ಯ	15,799
▲	61
ದಿನದ ಗರಿಷ್ಠ	15,835

ವಿನಿಮಯ ದರ

$ ಡಾಲರ್	73.07
£ ಪೌಂಡ್	103.37
€ ಯುರೊ	88.8
¥ ಯೆನ್ (100ಕ್ಕೆ)	66.72

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹550
12 ಮೊಟ್ಟೆಗೆ	₹72
ಮೈಸೂರು	
100 ಮೊಟ್ಟೆಗೆ	₹550

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1470 (1490)
ಸೋಯಾ (ರಿಫೈನ್ಡ್)	₹1360 (1395)
ಸೂರ್ಯಕಾಂತಿ (ರಿಫೈನ್ಡ್)	₹1480 (1500)
ಪಾಮೋಲಿನ್	₹1180 (1225)

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಅಡಿಕೆ
ಬಂಟ್ವಾಳ
ಕೋಕ 10000-22500
ಹೊಸತು 23500-40000
ಹಳತು 42500-50000
ಕಾರ್ಕಳ
ಹೊಸತು 36000-40000
ಪುತ್ತೂರು
ಹೊಸತು 28000-40000
ಕೋಕ 9500-24000
ಕುಂದಾಪುರ
ಹೊಸ ಚಾಲಿ 35000-40000
ಮಂಗಳೂರು
ಕೋಕ 20000-23500

ಏಲಕ್ಕಿ ಧಾರಣೆ
ಸಕಲೇಶಪುರ
ಕೂಳೆ 700- 800
ನಡುಗೋಲು 850-900

ರಾಶಿ 950-1000
ರಾಶಿ ಉತ್ತಮ 1000-1050
ಜರಡಿ 1150 -1200
ಹೆರಕಿದ್ದು 1500-1600
ಹಸಿರು ಸಾಧಾರಣ 900- 1000
ಹಸಿರು ಉತ್ತಮ 1100- 1200
ಹಸಿರು ಅತಿ ಉತ್ತಮ 1400-1500
ಕಾಳು ಮೆಣಸು 395
ರೇಷ್ಮೆಗೂಡು
ರಾಮನಗರ
ಮಿಶ್ರ ತಳಿ (ಸಿ.ಬಿ) 281-451
ದ್ವಿತಳಿ (ಬಿ.ವಿ) 379-512

ಕಾಫಿ ಧಾರಣೆ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	11,075	10,800	10,750	158.70
ಎಸಿ	4,705	4,300	4,150	
ಆರ್‌ಪಿ	5,250	5,100	5,250	ಲಂಡನ್ (ಡಾಲರ್)
ಆರ್‌ಸಿ	3,125	3,100	3,120	1585

'ಮಾಲ್ ಸ್ಥಗಿತ: 1 ಲಕ್ಷ ಉದ್ಯೋಗ ನಷ್ಟ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾಲ್‌ಗಳಲ್ಲಿ ವ್ಯಾಪಾರ ಚಟುವಟಿಕೆ ಸ್ಥಗಿತಗೊಂಡಿರುವ ಕಾರಣ ರಾಜ್ಯದಲ್ಲಿ ನೇರವಾಗಿ ಹಾಗೂ ಪರೋಕ್ಷವಾಗಿ ಒಟ್ಟು ಒಂದು ಲಕ್ಷ ಉದ್ಯೋಗ ನಷ್ಟವಾಗಿದೆ ಎಂದು ಭಾರತೀಯ ಶಾಪಿಂಗ್ ಸೆಂಟರ್‌ಗಳ ಒಕ್ಕೂಟ (ಎಸ್‌ಸಿಎಐ) ಹೇಳಿದೆ.

ಶುಕ್ರವಾರ ವರ್ಚುವಲ್ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಒಕ್ಕೂಟದ ಅಧ್ಯಕ್ಷ ಮುಕೇಶ್ ಕುಮಾರ್, 'ರಾಜ್ಯದಲ್ಲಿ ಮಾಲ್‌ಗಳ ಬಾಗಿಲು ಮುಚ್ಚಿರುವುದರ ಪರಿಣಾಮವಾಗಿ ಸರ್ಕಾರಕ್ಕೆ ಪ್ರತಿ ತಿಂಗಳು ₹ 360 ಕೋಟಿ ಆದಾಯ ನಷ್ಟವಾಗುತ್ತಿದೆ' ಎಂದು ತಿಳಿಸಿದರು.

ರಾಜ್ಯದ ಶೇಕಡ 50ಕ್ಕಿಂತ ಹೆಚ್ಚಿನ ಮಾಲ್‌ಗಳು ಸ್ಥಗಿತಗೊಳ್ಳುವ ಭೀತಿ ಎದುರಿಸುತ್ತಿವೆ. ಸರ್ಕಾರದ ಕಟ್ಟಡಗಳಲ್ಲಿ ಇರುವ ಮಾಲ್‌ಗಳ ಬಾಡಿಗೆ ಮನ್ನಾ ಮಾಡಬೇಕು, 2022ರ ಜನವರಿವರೆಗೆ ಆಸ್ತಿ ತೆರಿಗೆ ಹಾಗೂ ನಿಗದಿತ ವಿದ್ಯುತ್ ಶುಲ್ಕ ಪಾವತಿಗೆ ವಿನಾಯಿತಿ ಕೊಡಬೇಕು ಮುಕೇಶ್ ಅವರು ಮನವಿ ಮಾಡಿದರು. ಮೊದಲ ಹಂತದ ಅನ್‌ಲಾಕ್ ಪ್ರಕ್ರಿಯೆಯಲ್ಲಿಯೇ ಮಾಲ್‌ಗಳಿಗೂ ತೆರೆಯಲು ಅವಕಾಶ ಕಲ್ಪಿಸಬೇಕು ಎಂದು ಕೂಡ ಅವರು ಸರ್ಕಾರನ್ನು ಕೋರಿದರು.

ದೇಶದಲ್ಲಿ ಮಾಲ್‌ಗಳು, ಅಲ್ಲಿನ ಮಳಿಗೆಗಳು ಬಹಳ ಸಂಕಷ್ಟದಲ್ಲಿವೆ. ಹಿಂದಿನ ವರ್ಷದ ಲಾಕ್‌ಡೌನ್ ಸಂದರ್ಭದಲ್ಲಿ ಸಾಲದ ಕಂತುಗಳ ಮರುಪಾವತಿಗೆ ವಿನಾಯಿತಿ ಸಿಕ್ಕಿತ್ತು. ಆದರೆ, ಈ ಬಾರಿ ಅಂತಹ ಸೌಲಭ್ಯ ಇಲ್ಲ. ಈಗ ಮಾಲ್‌ಗಳಿಗೆ, ಮಳಿಗೆಗಳಿಗೆ ಆದಾಯವೇ ಇಲ್ಲದಂತೆ ಆಗಿದೆ ಎಂದು ಅವರು ಹೇಳಿದರು.

ಮಾಲ್‌ಗಳು ಸುರಕ್ಷಿತವಾಗಿವೆ, ಅಲ್ಲಿ ಸ್ಯಾನಿಟೈಸ್ ಮಾಡಲಾಗುತ್ತದೆ. ಕೆಲವು ರಾಜ್ಯಗಳಲ್ಲಿ ಮಾಲ್‌ಗಳನ್ನು ತೆರೆಯಲು ಅವಕಾಶ ಕಲ್ಪಿಸಲಾಗಿದ್ದು, ಅಲ್ಲಿಗೆ ಬರುತ್ತಿರುವ ಗ್ರಾಹಕರು ಹೆಚ್ಚು ಜವಾಬ್ದಾರಿಯಿಂದ ವರ್ತಿಸುತ್ತಿದ್ದಾರೆ ಎಂದು ಒಕ್ಕೂಟ ಹೇಳಿದೆ.

ತೈಲ ಬೆಲೆ ಹೆಚ್ಚಳ

ನವದೆಹಲಿ (ಪಿಟಿಐ): ಪೆಟ್ರೋಲ್ ಬೆಲೆಯು ₹ 100ರ ಗಡಿ ದಾಟಿದ ನಂತರ ರಾಜಸ್ಥಾನದಲ್ಲಿ ಈಗ ಡೀಸೆಲ್ ಬೆಲೆಯು ಲೀಟರಿಗೆ ₹ 100ರ ಗಡಿಯನ್ನು ಸಮೀಪಿಸಿದೆ. ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಗಳು ಶುಕ್ರವಾರ ಪೆಟ್ರೋಲ್ ಬೆಲೆಯನ್ನು 29 ಪೈಸೆ ಹಾಗೂ ಡೀಸೆಲ್ ಬೆಲೆಯನ್ನು 28 ಪೈಸೆ ಹೆಚ್ಚಿಸಿವೆ.

ರಾಜಸ್ಥಾನದ ಶ್ರೀಗಂಗಾನಗರ ಜಿಲ್ಲೆಯಲ್ಲಿ ಡೀಸೆಲ್ ಬೆಲೆಯು ₹ 99.80ಕ್ಕೆ ತಲುಪಿದೆ. ಬೆಂಗಳೂರಿನಲ್ಲಿ ಪೆಟ್ರೋಲ್ ಬೆಲೆ ₹ 99.11, ಡೀಸೆಲ್ ಬೆಲೆ ₹ 92.03 ಆಗಿದೆ.

ಸಿಂಡಿಕೇಟ್ ಬ್ಯಾಂಕ್ ಐಎಫ್‌ಎಸ್‌ಸಿ ಕೋಡ್ ಬದಲು

ಬೆಂಗಳೂರು: ಹಿಂದಿನ ಸಿಂಡಿಕೇಟ್ ಬ್ಯಾಂಕ್‌ನ ಶಾಖೆಗಳ ಐಎಫ್‌ಎಸ್‌ಸಿ ಕೋಡ್ ಜುಲೈ 1ರಿಂದ ಬದಲಾಗಲಿದೆ. ಸಿಂಡಿಕೇಟ್ ಬ್ಯಾಂಕ್, ಕೆನರಾ ಬ್ಯಾಂಕ್ ಜೊತೆ ಈಗಾಗಲೇ ವಿಲೀನ ಆಗಿದ್ದು, ಎನ್‌ಇಎಫ್‌ಟಿ, ಆರ್‌ಟಿಜಿಎಸ್, ಐಎಂಪಿಎಸ್ ವ್ಯವಸ್ಥೆಗಳ ಮೂಲಕ ಹಣ ವರ್ಗಾವಣೆ ಮಾಡುವವರು ಕೆನರಾ ಬ್ಯಾಂಕ್ ನೀಡುವ ಹೊಸ ಐಎಫ್‌ಎಸ್‌ಸಿ ಕೋಡ್ ಬಳಕೆ ಮಾಡಬೇಕಿದೆ.

ಹಿಂದೆ ಸಿಂಡಿಕೇಟ್ ಬ್ಯಾಂಕ್ ಶಾಖೆಗಳಾಗಿದ್ದ, ಈಗ ಕೆನರಾ ಬ್ಯಾಂಕ್‌ನ ಶಾಖೆಗಳಾಗಿ ಪರಿವರ್ತನೆ ಕಂಡಿರುವ ಶಾಖೆಗಳ ಐಎಫ್‌ಎಸ್‌ಸಿ ಕೋಡ್ ಯಾವುದು ಎಂಬುದನ್ನು canarabank.com/IFSC.html ವಿಳಾಸಕ್ಕೆ ಭೇಟಿ ನೀಡಿ ಕಂಡುಕೊಳ್ಳಬಹುದು ಎಂದು ಕೆನರಾ ಬ್ಯಾಂಕ್ ಪ್ರಕಟಣೆ ತಿಳಿಸಿದೆ. ಅಲ್ಲದೆ, ಕೆನರಾ ಬ್ಯಾಂಕ್‌ನ ಯಾವುದೇ ಶಾಖೆಗೆ ಭೇಟಿ ನೀಡಿ ಹೊಸ ಐಎಫ್‌ಎಸ್‌ಸಿ ಕೋಡ್ ತಿಳಿದುಕೊಳ್ಳಬಹುದು.

ಸಿಂಡಿಕೇಟ್ ಬ್ಯಾಂಕ್‌ನ ಗ್ರಾಹಕರಾಗಿದ್ದವರು ಬದಲಾಗಿರುವ ಐಎಫ್‌ಎಸ್‌ಸಿ ಹಾಗೂ ಎಂಐಸಿಆರ್ ಕೋಡ್ ಇರುವ ಹೊಸ ಚೆಕ್ ಪುಸ್ತಕವನ್ನು ಪಡೆದುಕೊಳ್ಳಬೇಕು.

ವಿದೇಶಿ ವಿನಿಮಯ ವಹಿವಾಟುಗಳಲ್ಲಿ ಬಳಕೆ ಮಾಡುವ ಸ್ವಿಫ್ಟ್ ಕೋಡ್ ಸಹ ಜುಲೈ 1ರಿಂದ ಬದಲಾಗಲಿದೆ. ವಿದೇಶಿ ವಿನಿಮಯ ವಹಿವಾಟುಗಳಲ್ಲಿ ಗ್ರಾಹಕರು CNRBINBBFD ಕೋಡ್‌ಅನ್ನು ಬಳಕೆ ಮಾಡಬೇಕು ಎಂದು ಪ್ರಕಟಣೆಯಲ್ಲಿ ಹೇಳಲಾಗಿದೆ.

ಪ್ರಯಾಣಿಕ ವಾಹನ ಸಗಟು ಮಾರಾಟ ಶೇ 66ರಷ್ಟು ಇಳಿಕೆ

ನವದೆಹಲಿ (ಪಿಟಿಐ): ಪ್ರಯಾಣಿಕ ವಾಹನಗಳ ಸಗಟು ಮಾರಾಟವು ಏಪ್ರಿಲ್ ತಿಂಗಳಿಗೆ ಹೋಲಿಸಿದರೆ ಮೇ ತಿಂಗಳಿನಲ್ಲಿ ಶೇಕಡ 66ರಷ್ಟು ಇಳಿಕೆ ಕಂಡಿದೆ ಎಂದು ಭಾರತೀಯ ಆಟೊಮೊಬೈಲ್ ತಯಾರಕರ ಸಂಘ (ಎಸ್‌ಐಎಎಂ) ಹೇಳಿದೆ. ಮೇ ತಿಂಗಳಿನಲ್ಲಿ ಲಾಕ್‌ಡೌನ್ ಜಾರಿಯಲ್ಲಿ ಇದ್ದ ಕಾರಣದಿಂದಾಗಿ ಡೀಲರ್‌ಗಳಿಗೆ ವಾಹನಗಳನ್ನು ಕಳುಹಿಸುವುದಕ್ಕೆ ಅಡ್ಡಿ ಆಯಿತು ಎಂದು ಅದು ಹೇಳಿದೆ.

ಏಪ್ರಿಲ್‌ನಲ್ಲಿ ಪ್ರಯಾಣಿಕ ವಾಹನಗಳ ಸಗಟು ಮಾರಾಟವು 2.61 ಲಕ್ಷ ಆಗಿತ್ತು. ಆದರೆ ಮೇ ತಿಂಗಳಿನಲ್ಲಿ 88 ಸಾವಿರ ವಾಹನಗಳನ್ನು ಮಾತ್ರ ಮಾರಾಟ ಮಾಡಲು ಸಾಧ್ಯವಾಗಿದೆ.

ದ್ವಿಚಕ್ರ ವಾಹನಗಳ ಸಗಟು ಮಾರಾಟವು ಶೇ 65ರಷ್ಟು ಹಾಗೂ ತ್ರಿಚಕ್ರ ವಾಹನಗಳ ಮಾರಾಟ ಶೇ 91ರಷ್ಟು ಇಳಿಕೆ ಕಂಡಿದೆ. 'ಮೇನಲ್ಲಿ ಹಲವು ರಾಜ್ಯಗಳು ಲಾಕ್‌ಡೌನ್ ಜಾರಿಗೆ ತಂದಿದ್ದವು. ಇದರಿಂದಾಗಿ ಮಾರಾಟ ಹಾಗೂ ವಾಹನ ತಯಾರಿಕೆ ಮೇಲೆ ಪರಿಣಾಮ ಉಂಟಾಗಿದೆ' ಎಂದು ಎಸ್‌ಐಎಎಂ ಮಹಾನಿರ್ದೇಶಕ ರಾಜೇಶ್ ಮೆನನ್ ಹೇಳಿದರು.

ಬೆಂಗಳೂರು ಈರುಳ್ಳಿ ಧಾರಣೆ

	ಕ್ವಿಂಟಲ್‌ಗೆ
ದೊಡ್ಡ	₹1600-2000
ಮಧ್ಯಮ	₹1200-1600
ಸಣ್ಣ	₹800-1200

ಮುಂಬೈ ಧಾರಣೆ

ಶೇಂಗಾ

11-06-2021

ಜಾವಾ 70/80(ಹೊಸ)	10050-10100
ಜಾವಾ 80/90(ಹೊಸ)	9250-9300
ದಪ್ಪ ಮಧ್ಯಪ್ರದೇಶ(ಹೊಸ)	10400-10500
ದಪ್ಪ ಗುಜರಾತ್(ಹೊಸ)	9600-9700

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1480 (1500)
ಒಂದು ವಾರದ ಡೆಲಿವರಿ	1475 (1495)
ಸೋಯಾ ಕಚ್ಚಾ	1320 (1357)
ಪಾಮ್ ವಾರದ ಡೆಲಿವರಿ	1178 (1223)
ಸೂರ್ಯಕಾಂತಿ ಎಣ್ಣೆ ಕಚ್ಚಾ	1430 (1450)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10 ಗ್ರಾಂ
48,700 (48,700)
ಬೆಳ್ಳಿ ಕೆ.ಜಿ
72,100 (71,200)

ಆವರಣದಲ್ಲಿ ಹಿಂದಿನ ದಿನದ ಧಾರಣೆ

Karnataka S.S.: Rakesh Enterprises (Banglore) : 23579251, Shree Rama sales (Yellapur) : 9449138897, 8495044717, Bagalkot : 9448227557, 8354224860, 9448227557, 8892691166, 9743831913, 9449624037, Bangalore : 9845474878, 26617033, 40933079, 9739106157, 26710008, 9449723416, 9448081790, 22257385, 26677013, 9844140253, 22874575, 9482220974, 9449647135, 9242253210, 22264329, 22241647, 22235533, 9036021900, 9845350230, 8025523763, 9448219410, 8147573584, 8022870983, 8694021912, 8050741006, 9845725339, 9902706395, 9845257154, 22876452, Belgaum : 9481747964, 4206784, 4203187, 9686551066, 2462656, 9243219520, 4205691, 9845817152, 9845817152, 9902564635, 9620891375, 9242804049, 9902713070, 9916313433, Bellary : 9448072810, 272810, 7204572834, 274640, 9902877330, 9844059284, 227195, Bidar : 230200, 84822302, 9902237421, 9448350146, Bijapur : 9343234482, 9972087727, 9036542764, 9448013005, 9448652451, 7795193422, 9035107399, Chikkaballapura : 9845616394, 9980420024, 9845366649, 9845623253, 9880241465, Chikmagalur : 9242899048, Chitradurga : 8150073566, 9880031266, Dakshina Kannada : 9480842900, 2496963, 9844077991, 9480842900, 9448452134, 9845225521, 9845142812, 2453353, 9739641159, 9448123933, 8971222132, Davanagere : 295021, 272600, 2272685, 9880708064, 235741, 9902999359, 9449814423, 9845035121, 9844285033, Dharwad : 2221201, 9880212686, 2221331, 4258371, 2221292, 2221344, 8362360870, 9844770060, 9900430413, Gadag : 9343938893, Gulbarga : 9845808570, 9845808570, 9343834519, 9242239281, 7899958055, 9739699688, 8088175001, 9880801434, 9449618981, Hassan : 231048, 9480375846, 325058 9980842664, 9448957465, 9448885697, Haveri : 9844323973, 8147498820, 9448232120, 9739144449, 9900071761, Hubli : 9945093823, Kolar : 224583, Koppal : 220713, Mandya : 223951, Mysore : 8214000156, 242799, 9980615431, 9243580210, 9845445430, 8050655443, Raichur : 227756, 9886945550, 9900932939, 9880336111, 9983661742, Ramanagara : 9686815278, Shimoga : 9242312949, 222642, 270738, 8951733781, 271692, 228944, 9480473867, Tumkur : 4011453, 4014475, 9632446447, 9341151010, Udupi : 802535188, 9483153633, 9844292250, 9483153633, 9880143804, Uttara Kannada : 9916250217, 9980872214, Vijayapura : 8352258886